ಅಚ್ಚಾಳು ವೀರಭದ್ರ

ಸೂರ್ಯ ಸಿಂಹಾಸನಾಧೀಶ್ವರ
ಶ್ರೀ ಜ.ಚ.ನಿ.



ಪ್ರಕಾಶಕರು :
ಶ್ರೀಶೈಲ ಜಗದ್ಗುರು ನಿಡುಮಾಮಿಡಿ ಪುಸ್ತಕ ಭಂಡಾರ
ನಂ. ೪೯, ಕೆ.ಜಿ. ಸಮಾಜ ರಸ್ತೆ, ಬೆಂಗಳೂರು-೫೬೦ ೦೦೪

ಪರಿಚಯ

ಈ ಕೃತಿಗೆ ಸಂತೋಷದಿಂದ ಸೇವೆ ಸಲ್ಲಿಸಿದವರು ಬೆಂಗಳೂರು ಜಿಲ್ಲೆಯ ವಿಜಯಪುರದ ಭಕ್ತರು ಕೆಳಗಿನಂತಿರುವರು:

೧. ಶ್ರೀ ವೀರಭದ್ರಸ್ವಾಮಿಯ ವಿಚಾರಗೋಷ್ಠಿಯವರು

೨. ಶ್ರೀ ಅಕ್ಕನ ಬಳಗದವರು

೩. ಶ್ರೀ ಎ.ವಿ. ಅಪ್ಪಯ್ಯಣ್ಣನವರು

೪. ಶ್ರೀ ಹೆಚ್.ಆರ್.ಚ. ಧರ್ಮಪತ್ನಿ ಮುನಿರುದ್ರಮ್ಮನವರು

೫. ಶ್ರೀ ಜಿ.ವಿ. ಗುರಪ್ಪನವರು

೬. ಶ್ರೀ ಎಂ. ಮುನಿರುದ್ರಪ್ಪನವರು

೭. ಶ್ರೀ ಸಿ.ಎಂ. ವೀರಣ್ಣನವರು

೮. ಶ್ರೀ ಎಂ. ರುದ್ರಪ್ಪನವರು ಅಸಿಸ್ಟೆಂಟ್ ಕಮರ್ಷಿಯಲ್ ಟ್ಯಾಕ್ಸ್ ಆಫೀಸರು.

ಇವರೆಲ್ಲರೂ ಸೇರಿ ಸು. ೬೦೦/- (ಆರುನೂರು ರೂಪಾಯಿ)ಗಳನ್ನು ಸಲ್ಲಿಸಿದ್ದಾರೆ. ಉಳಿದ ೫೦೦/- (ಐದು ನೂರು ರೂಪಾಯಿ)ಗಳನ್ನು ಶ್ರೀ ಕೆ. ನಂಜುಂಡಪ್ಪನವರು ಉರ್ಫ್ ಪುಟ್ಟಯ್ಯನವರು. ಶ್ರೀ ವೀರಭದ್ರಸ್ವಾಮಿ ವಿದ್ಯಾರ್ಥಿ ನಿಲಯದ ಅಧ್ಯಕ್ಷರು ಸಲ್ಲಿಸಿದ್ದಾರೆ. ಇವರು ಸು. ೨೦ ವರುಷಗಳಿಂದ ವಿದ್ಯಾರ್ಥಿ ನಿಲಯವನ್ನು ನಿರ್ವಿಘ್ನವಾಗಿ ನಡೆಸಿಕೊಂಡು ಬಂದಿರುತ್ತಾರೆ. ಅಲ್ಲದೆ ಇವರ ಮನೆಯಲ್ಲಿಯೆ ಸು. ೧೮ ವರುಷಗಳಿಂದ ಸದ್ಗ್ರಂಥ ಶ್ರವಣ ಸಾಗಿ ಬರುತ್ತಿದೆ. ಇವರೆಲ್ಲರಿಗೂ ಈ ಪೀಠದ ಸಾಹಿತ್ಯದ ಮೇಲೆ ಹೆಚ್ಚಿನ ಆದರ. ನಿತ್ಯ ವ್ಯಾಸಂಗ ಮಾಡುತ್ತಾರೆ. ಈ ಪೀಠದಲ್ಲಿಯೆ ಸಂಸ್ಕಾರ ಪಡೆದಿದ್ದಾರೆ.

ಶ್ರೀ ಕೆ. ನಂಜುಂಡಪ್ಪನವರು ಆಚಾರ ನಿಷ್ಠರು; ವಿಚಾರವಂತರು. ಪೂಜಾ ಪ್ರೇಮಿಗಳು. ಪ್ರಾಸಾದಿಕ ಮನೋಭಾವವುಳ್ಳವರು. ಏನನ್ನೆ ಮಾಡಲಿ ಶ್ರದ್ಧೆಯಿಂದ ಮಾಡುತ್ತಾರೆ. ಈಚೆಗೆ ಇವರೆ ಪ್ರವಚನವನ್ನು ನಡೆಸುತ್ತಾರೆ. ನುಡಿದಂತೆ ನಡೆಯತಕ್ಕವರು.

ಇವರೆಲ್ಲರಿಂದ ಈ ವೀರಭದ್ರಸ್ವಾಮಿಯ ಸಚ್ಚಾರಿತ್ರ್ಯ ಕೃತಿಯ ಸೇವೆ ಸಾಗಿ ಬಂದುದರಲ್ಲಿ ತುಂಬಾ ಔಚಿತ್ಯವಿದೆ. ಇವರೆಲ್ಲರಿಗೂ ಸ್ವಾಮಿಯ ಸತ್ಕೃಪೆ ಉಂಟಾಗಲೆಂದು ಹೃದಯಾರೆ ಹಾರೈಸೋಣವಾಗಿದೆ.

– ಗ್ರಂಥಕರ್ತರು

ಪರಿವಿಡಿ

ಎಸಳೆರಡು

ಮುಮ್ಮಾತು

ಭಗವಾನ್ ಬುದ್ಧನ ಬಾಳಿಗೆ ಬುದ್ಧನ ಕ್ರಾಂತಿಗೆ ಬೆಳಕನ್ನು ಕೊಟ್ಟ ವೀರಭದ್ರನ ಚಾರಿತ್ರಕ ಹಳಮೆಯನ್ನು ಸಾಂಸ್ಕೃತಿಕ ಹಿರಿಮೆಯನ್ನು ನಾಡಿಗರು ಸರಿಯಾಗಿ ಗಮನಿಸಿಲ್ಲ; ಇತಿಹಾಸಜ್ಞರು ಈ ದಿಸೆಯಲ್ಲಿ ವಿವೇಚಿಸಿ ವಿಶೋಧಿಸಿ ಪ್ರಕಟಿಸಿಲ್ಲ. ಮರದ ಹಣ್ಣು ದೊರೆತಾಗ ಮರದ ಬೇರನ್ನು ಬೆವಕುವವರಾರು?

ವೀರಭದ್ರನಿಗೆ ವಿರೂಪಾಕ್ಷನ ಮೇಲೆ ಪರಮ ಪ್ರೇಮ, ಸಾತಿಶಯ ಶ್ರದ್ಧೆ; ನಿರತಿಶಯ ನಿಷ್ಠೆ, ಶಿವಕಾರ್ಯದಲ್ಲಿ ವೀರಭದ್ರ ಯಾವಾಗಲೂ ಸನ್ನದ್ಧ; ಸಂತಸದಿಂದ ಸಿದ್ಧ. ಅದಕ್ಕಾಗಿ ಆತನ ಜೀವನವೇ ಮುಡಿಪು. ಅದಕ್ಕಾಗಿ ಆತನು ಅದೆಂದಿಗೂ ಉತ್ಸಾಹಿತ; ಉತ್ತೇಜಿತ. ಅದಕ್ಕಾಗಿ ಅವನಲ್ಲಿ ಯಾವ ವಚನೆಯಿಲ್ಲ. ಯಾವ ಚಾಂಚಲ್ಯವಿಲ್ಲ.

ಆತನು ಅಂದು ಆ ದಕ್ಷಾದಿಗಳ ದರ್ಪವನ್ನು ದಮನ ಮಾಡದಿದ್ದರೆ ಲೋಕದ ಚರಿತ್ರೆಯೆ ಬೇರೆಯಾಗುತ್ತಿತ್ತು. ದುಷ್ಟತನ ದುರ್ಭರವಾಗುತ್ತಿತ್ತು. ಶಿವನ ಅನುಗ್ರಹ ಪಡೆದ ವೀರಭದ್ರನು ವಿಶಿಷ್ಟ ಬಲ ಸಂಪನ್ನನಾಗಿ, ದೇವಲೋಕವನ್ನೇ ಕೆಡುಕಿಗೆ ಎಳೆದ ದಕ್ಷಯಾಗವನ್ನು ಧ್ವಂಸ ಮಾಡಿದನು. ಅದರಲ್ಲಿ ಭಾಗವಹಿಸಿದವರನ್ನೆಲ್ಲ ದಂಡಿಸಿದನು. ಪ್ರಾಣಿವಧೆಯನ್ನು ಪರಿಹರಿಸಿದನು. ಪಡಿಪದಾರ್ಥದ ನಾಶವನ್ನು ನಿಲ್ಲಿಸಿದನು. ನ್ಯಾಯ ನೀತಿಗಳನ್ನು ಭಯ ಭಕ್ತಿಗಳನ್ನು ವಿನಯ ವಿಶ್ವಾಸಗಳನ್ನು ನೆಲೆ ನಿಲ್ಲಿಸಿದನು. ತನ್ನ ಮೊರೆ ಹೊಕ್ಕವರಲ್ಲಿ ತನ್ನ ದಿವ್ಯ ಕರುಣೆಯ ಪ್ರವಾಹವನ್ನೇ ಹರಿಸಿದನು. ಆರಾಧನೆಯ ನೆಪದಲ್ಲಿ ವಿರೋಧವನ್ನು ಅಪಮಾನವನ್ನು ಮಾಡಲೆಳಸಬಾರದೆಂಬುದನ್ನು ಜಗತ್ತಿಗೆ ಸಾರಿ ಹೇಳಿದನು.

ವೀರಭದ್ರನು ವೀರರ ಬಾಳಿಗೊಂದು ಹೊಸ ಬೆಳಕು. ಮಂಗಳಾಪೇಕ್ಷಿಗಳಿಗೊಂದು ಹೊಸ ಮೆಲುಕು. ಆತನ ನಿಲವು ನಿಟ್ಟಿಸುವವರಿಗೊಂದು ಚಲು ನೋಟ; ಚಲು ಮಾಟ.

ವೀರಭದ್ರನ ವೀರಕಥೆಯ ಹಿನ್ನೆಲೆಯನ್ನು ಹೃದಯಾರೆ ಅರಿಯಬೇಕು. ಅವನ ಆ ವೀರಚರಿತ್ರೆ ಎಷ್ಟು ಕರಾಳವಿದೆಯೋ ಅದಕ್ಕೂ ಹೆಚ್ಚು ಕರಾಳವಿದೆ. ಕ್ರಮ ತಪ್ಪಿ ನಡೆದ ದಕ್ಷಾದಿಗಳ ದರ್ಪ ಚರಿತ್ರೆ; ದಾರಿ ತಪ್ಪಿದ ಚರಿತ್ರೆ, ದಧೀಚಿ ದಾಕ್ಷಾಯಣಿ ಮೊದಲಾಗಿ ಯಾರು ಎಷ್ಟೇ ಬಗೆಯಲ್ಲಿ ಬುದ್ಧಿವಾದ ಹೇಳಿದರೂ ಕೇಳದ ಮೊಂಡತನ ಆತನದು; ದುರಭಿಮಾನ ಆತನದು. ಅದಕ್ಕೆ ತಾನೊಬ್ಬನೇ ಈಡಾಗದೆ ತನ್ನ ದುರಾಲೋಚನೆಯ ದುರ್ಮಾರ್ಗಕ್ಕೆ ದೇವಾನು ದೇವತೆಗಳನ್ನೆಲ್ಲ ಸೆಳೆದ ದುಷ್ಟಶಕ್ತಿಯದು; ದುರಂತಕ್ಕೀಡಾಗುವ ದುರ್ಬುದ್ಧಿಯದು. ಅದಕ್ಕೆ ಅದೇ ತಕ್ಕ ಶಿಕ್ಷೆ. 'ಶಠೇ ಶಾಠ್ಯಂ ಸಮಾಚರೇತ್' ಅದೂ ಆತನಿಗೆ ಕಿಂಚಿತ್. ತನ್ನ ಮಗಳನ್ನೇ ಆಹುತಿ ತೆಗೆದುಕೊಂಡ ಆತನಿಗೆ ಅದು ಹೆಚ್ಚಿನದೇನಲ್ಲ. ದಕ್ಷನನ್ನು ಉಳಿಸಿದ್ದಾನೆ ಕರುಣಾಳು ವೀರಭದ್ರಸ್ವಾಮಿ! ದಾಕ್ಷಾಯಣಿಯನ್ನು ದಕ್ಷನು ಉಳಿಸಿದನೇನು? ಮಹಾನುಭಾವನಾದ ವೀರೇಶನ ಕೋಪ ದಕ್ಷನ ಅವಗುಣಕ್ಕಾಗಿ ಇತ್ತಲ್ಲದೆ ಪ್ರಾಣಕ್ಕಾಗಿ ಇರಲಿಲ್ಲ. ದಕ್ಷಬ್ರಹ್ಮನ ಕೋಪ ಪ್ರಾಣಹರಣಕ್ಕಾಗಿಯೇ ಮೀಸಲಾಯಿತೆಂಬುದನ್ನು ಓದುಗರು ಮರೆಯದಿರಬೇಕು. ವೀರೇಶನು ದ್ವೇಷ ಕ್ರೋಧಗಳ ವಶನಲ್ಲ. "ಪ್ರಣೀಪಾತಃ ಪ್ರತೀಕಾರಃ ಸಂರಂಭೋ ಹಿ ಮಹಾತ್ಮ ನಾಂ" ಕವಿಕಾಳಿದಾಸ ವಾಣಿಯು ವೀರಭದ್ರ ದೇವನ ವಿಷಯದಲ್ಲಿ ಸತ್ಯಕ್ಕೆ ಸತ್ಯ; ಮತ್ತು ಅರ್ಥಪೂರ್ಣ. ವೀರೇಶನ ಭದ್ರತ್ವದ ಭದ್ರಲಕ್ಷಣವಿದು; ಮಹಾತ್ಮತೆಯ ಕುರುಹಿದು.

ದಕ್ಷನು ಮಾಡಿದಂತಹ ಯಜ್ಞದಿಂದ ಲೋಕಕ್ಕೆ ಯಾವ ಹಿತ? ಯಾರಿಗೆ ಹಿತ? ಅದರಿಂದ ಕಲಿಯತಕ್ಕ ಪಾಠವೇನಾದರೂ ಉಂಟೆ? ಉಳಿಯತಕ್ಕ ಸಾಹಿತ್ಯವೇನಾದರೂ ಉಂಟೆ? ಅದನ್ನು ಉತ್ಪಾದಿಸಿದವನ ಉದ್ದೇಶ ಉಚಿತವಾದುದೆ? ಆ ಉದ್ದೇಶಕ್ಕೆ ಉತ್ತೇಜನ ಕೊಟ್ಟವರು ಉತ್ತಮರೆ? ಅದಕ್ಕೇಕೆ ಅವರೆಲ್ಲ ಬರಬೇಕಾಗಿತ್ತು? ಬಂದು ನೆರವೇರಿಸಬೇಕಾಗಿತ್ತು? ಅದೇನು ಜ್ಞಾನ ಯಜ್ಞವೆ? ಗುಣ ಯಜ್ಞವೆ? ಕ್ರಿಯಾಚರಣ ಯಜ್ಞವೆ? ದಕ್ಷನಾಗಿ ದಕ್ಷತೆಯನ್ನೇ ಕಳೆದುಕೊಂಡರೆ ಹೇಗೆ? ಧರ್ಮವನ್ನು ಕೈಬಿಟ್ಟರೆ ಗತಿಯೇನು? ಅರ್ಥಮದ ಅಭಿಮಾನ ಅರ್ಥವಿಲ್ಲದ ಮತ್ಸರಗಳಿಂದ ಮುಂದುಗಾಣದೆ ಮುನ್ನಡೆದರೆ ಮುಗ್ಗರಿಸದಿರಲು ಸಾಧ್ಯವೆ? ಮುಖ ಮುರಿಯದಿರುವುದೆ? ಅಂಥವರ ಬೆಂಬಲಕ್ಕೆ ನಿಂತವರು ಎಂಥವರೇ ಆಗಲಿ ಅವರು ಬಾಳಬಲ್ಲರೆ ಬದುಕಬಲ್ಲರೆ?

ಒಬ್ಬರಿಗೆ ಇನ್ನೊಬ್ಬರು ಕೇಡು ಬಯಸಬೇಕೆ? ಅವರಾರು? ತಾವಾರು? ಈ ವಿವೇಚನೆ ಆ ದಕ್ಷಯಜ್ಞದಲ್ಲಿ ಭಾಗವಹಿಸಿದವರ ಬುದ್ಧಿಗೆ ಬಾರದಾಯಿತೇನೋ? ಅಭೇದ ಭಾವಕ್ಕೆ ಅವರಲ್ಲಿ ಇಂಬಿಲ್ಲವಾಯಿತಲ್ಲವೆ? ಇಂದು ಶಿವನಿಗಾದದ್ದು ನಾಳೆ ನಮಗೆ ಆಗದೆ ಹೋಗದೆಂಬುದು ಹೊಳೆಯದಾಯಿತೇನೊ?

ಸ್ವಯಂಪ್ರತಿಷ್ಠೆಯ ಅಹಂಮನ್ಯತೆಯ ಬುದ್ಧಿಯೇ ಅಂತಹದೇನೊ? ಅವು ಇರುವಲ್ಲಿ ತಿಳಿಬೆಳಗು–ಒಮ್ಮತ ಸವಿ ಓಗರಗಳಿರವು.

ಯಜ್ಞ ಒಳ್ಳೆಯದಾದರೂ ಯಜ್ಞಾಧಿಕಾರಿಯ ಉದ್ದೇಶ ಒಳ್ಳೆಯದಲ್ಲ. ಸಾಲದ್ದಕ್ಕೆ ಯಜ್ಞ ವಿಧಾನವೂ ವಿಹಿತವಾದುದಾಗಿರಲಿಲ್ಲ. ಯಜ್ಞ ತನ್ನ ಪೂರ್ವದ ಪಾವಿತ್ರತೆಯನ್ನು ಕಳೆದುಕೊಂಡಿದ್ದಿತು. ಮಾಡಿಸುವವರಿಗೆ ಜಿಹ್ವಾ ಲಂಪಟವನ್ನು ಜಡಭಾವವನ್ನು ಹೆಚ್ಚಿಸಿದ್ದಿತು. ಮೂಕ ಪ್ರಾಣಿಗಳ ವಧೆ, ಲೋಕ ಹಿತಕ್ಕಾಗಿರುವ ಪಡಿ ಪದಾರ್ಥಗಳ ಸಂಹಾರ, ದುಷ್ಪಕ್ರಮ ವಿಧಾನ ಹೆಚ್ಚಿ ಹೋಗಿದ್ದವು. ಇದರಿಂದಾಗಿ ಯಜ್ಞ ಜಡಕರ್ಮವಾಗಿ ಪರಿಣಮಿಸಿತ್ತು. ಜಾಡ್ಯವಾಗಿ ಹರಡಹತ್ತಿತ್ತು. ಶಿವವಿಲ್ಲದ ಯಜ್ಞ ಶೋಭಿಸುವುದೆಂತು?

ವೀರಭದ್ರನ ವೀರಚರಿತ್ರೆಗೆ ಇಮ್ಮೊಗಗಳಿವೆ. ಆತನ ವೀರತನ ದೈಹಿಕ ಮಾತ್ರವಲ್ಲ, ಭೌತಿಕ ಮಾತ್ರವಲ್ಲ; ಆತ್ಮಿಕವೂ ಆಗಿತ್ತು. ಉಭಯ ಕಲಿತನವುಳ್ಳವನಾಗಿದ್ದನು. ಶಿಕ್ಷಿಸುವ ಶಕ್ತಿಯಿದ್ದಂತೆ, ರಕ್ಷಿಸುವ ಶಕ್ತಿಯೂ ಅವನಲ್ಲಿದ್ದಿತು. ರಕ್ಷಣೆಯೆಂದರೆ ಸಾಮಾನ್ಯ ರಕ್ಷಣೆಯಲ್ಲ. ಸಾಯಿಸಿದವರನ್ನೂ ಬದುಕಿಸುವ ರಕ್ಷಣ ಶಕ್ತಿ ಅವನಲ್ಲಿದ್ದಿತು. ಅದುವೇ ಆತನ ಅಗಾಧ ಶಕ್ತಿ; ಅನುಗ್ರಹ ಶಕ್ತಿ. ಇದರಿಂದಾಗಿ ಆತನ 'ವೀರಭದ್ರ' ನಾಮ ಸಾರ್ಥಕ; ಉಭಯಾರ್ಥ ಪ್ರತೀಕ.

ದಕ್ಷ ಬ್ರಹ್ಮನ ಮನಸ್ಸು ಅಶಿವಕ್ಕೆ ಅಧೀನ; ವೀರಭದ್ರನ ಮನಸ್ಸು ಶಿವಕ್ಕೆ ಅಧೀನ. ವೀರಭದ್ರನ ಕಾರ್ಯಕಾರಣಗಳಿಗೆ ಶಿವನೇ ಸೂತ್ರದಾರಿ; ಶಿವಭಾವವೇ ಜೀವಾಳ, ಆತನು ಮಾಡಿದ ಕಾರ್ಯ ಶಿವನದು. ದಕ್ಷನ ಯಜ್ಞವಾದರೋ ಸ್ವಾರ್ಥಪೂರಿತ; ದ್ವೇಷೈಕಭರಿತ; ದೋಷದೂಷಿತ. ಶಿವಾಧೀನ ಮನಸ್ಸುಳ್ಳವನೇ ಮೈಯುಳ್ಳವನೇ ನಿಜವಾದ ವೀರ; ಅಚಲವಾದ ಭದ್ರ. ಅಮಲವಾದ ಭದ್ರ. ವೀರಭದ್ರನು ಸಂಯತಾತ್ಮನು; ಸಂವಿಧಾನ ಕೃತ್ಯನು. ದಕ್ಷನಿಗೆ ಇವೆರಡೂ ಇಲ್ಲ. ನಾಮದಲ್ಲಿ ದಕ್ಷ; ನೇಮದಲ್ಲಿ ಅದಕ್ಷ.

ವೀರಭದ್ರನಾದರೋ ಶಿವನಿಗೆ ಭೃತ್ಯ. ತನ್ನ ಈ ಮಣಿಹದಿಂದ ಭೃತ್ಯಾಚಾರವನ್ನು ಶಿವದ್ರೋಹಿಯಾದ ದಕ್ಷನನ್ನು ಶಿಕ್ಷಿಸಿ ಗಣಾಚಾರವನ್ನು ಸರ್ವರಿಗೂ ಕೊನೆಗೆ ಶಿವವನ್ನೇ ಮಾಡಿ ಶಿವಾಚಾರವನ್ನು, ನಿತ್ಯ ಲಿಂಗಾರ್ಚನರತನಾಗಿ ಲಿಂಗಾಚಾರವನ್ನು ಸದಾ ಭದ್ರನಾಗಿ ಸದಾಚಾರವನ್ನು ಆಚರಿಸಿ ಪಂಚಶೀಲಗಳನ್ನು ಪ್ರಪಂಚಕ್ಕೆ ಅನುಗ್ರಹಿಸಿದವನು.

ದಕ್ಷನಲ್ಲಿ ಮಾನವೀಯ ಆಚಾರವಿರಲಿಲ್ಲ; ವಿಚಾರವಿರಲಿಲ್ಲ. ಪಾಶವೀಯ ಆಚಾರ ವಿಚಾರಗಳಿಂದಾಗಿ ಆತನು ಕೊನೆಯಲ್ಲಿ ಅರ್ಧಪಶುವಾಗಬೇಕಾಯಿತು.

ಆತನಿಗೆ ಮಾನವೀಯ ಶಿರಸ್ಸು ಇಲ್ಲೆಂಬುದಕ್ಕೆ ಇದೊಂದು ಅಂದರೆ ಆತನ ಆ ಕುರಿದಲೆ ಒಂದು ಕುರುಹು. ಕುರಿಯಂತೆ ಆತ ಸ್ವಾರ್ಥಿ; ಸಂಕುಚಿತ ಸ್ವಭಾವಿ. ಸಣ್ಣ ಮನಸ್ಸಿನವರು ಸಣ್ಣವರೇ ಆಗುವರೆಂಬುದಕ್ಕೆ ಇದೊಂದು ಉತ್ತಮ ಉದಾಹರಣೆ; ನಿಜವಾದ ನಿರೂಪಣೆ.

ದಕ್ಷಬ್ರಹ್ಮನ ಮನಸ್ಸು ಮದಮತ್ಸರವೆಂಬ ಮಹಾ ಪ್ರವಾಹದಲ್ಲಿ ಕೊಚ್ಚಿ ಹೋಗಿತ್ತು; ದ್ವೇಷಾಸೂಯೆಯೆಂಬ ದುಳ್ಳುರಿಯಲ್ಲಿ ಸುಟ್ಟುರಿದು ಹೋಗಿತ್ತು. ಅದಕ್ಕೆ ಸ್ತಿಮಿತತೆಯಿರಲಿಲ್ಲ; ಅದರದೇ ಅಸ್ತಿತ್ವವೂ ಇರಲಿಲ್ಲ. ಇದರಿಂದಾಗಿ ಅದು ಶಿವಾತ್ಮಚಿಂತನದಲ್ಲಿ ಅಸಮರ್ಥವಾಯಿತು. ಅನ್ಯಾಯ ಚಿಂತನಕ್ಕೀಡಾಯಿತು. ಶಿವನೆಡೆಯಲ್ಲಿ ಸನ್ಮಾನವೆಂದರೇನು? ಅವಮಾನವೆಂದರೇನು? ಆತನಿಗೆ ಅಳಿಯನೆಂಬ ಭಾವ ಅಳಿಯದಾಯಿತು. ಅಭವನೆಂಬ ಭಾವ ಹೊಳೆಯದಾಯಿತು. ತನ್ನ ಹಿರಿಮೆಯನ್ನು ತಾನೇ ನೆನೆಯುವುದು ಯಾವ ನ್ಯಾಯ? ಸ್ಥಾನವಲ್ಲದಲ್ಲಿ ಮಾನವನ್ನು ಬಯಸುವುದು ಯಾವ ಬುದ್ಧಿವಂತಿಕೆ? ಮುಂದಾಗಿ ತಿಳುಹಿಸದೆ ಆಕಸ್ಮಿಕವಾಗಿ ಅನಿರೀಕ್ಷಿತವಾಗಿ ತುಂಬಿದೋಲಗದೊಳಗೆ ಬರುವುದೆಂದರೇನು? ಮಾನಧನರು ಹಾಗೆಂದಿಗೂ ಬಾರರು. ಅಲ್ಲದೆ ಮೂಲೋಕದೊಡೆಯನ ಮುಂದೆ ಮಾನವಂತಿಕೆಯೆಂದರೇನು? ಒಂದು ವೇಳೆ ಮಾನ ಹೋಯಿತೆಂದು ಭಾವಿಸಿದರೂ ಹೋದ ಮಾನವನ್ನು ಬರಮಾಡಿಕೊಳ್ಳುವ ಮಾರ್ಗ ಇದಾಗಿರಲಿಲ್ಲ. ಮಗಳನ್ನೇ ಆಹುತಿಯಾಗಿ ತೆಗೆದುಕೊಳ್ಳುವುದು ಮಾನವೀಯ ಧರ್ಮವಲ್ಲ; ಅಲ್ಲದೆ ತಂದೆಯಾದವನ ಹೃದಯವೂ ಅಲ್ಲ.

ಚಿತ್ತ ಚಪಲ, ಬುದ್ಧಿಭ್ರಮೆ, ಅಹಂಕಾರ, ಮನದ ವಿಕಲ್ಪ ದಕ್ಷ ಬ್ರಹ್ಮನಲ್ಲಿ ಈ ನಾಲ್ಕೂ ಸೇರಿದ್ದವು. ಇದರಿಂದಾಗಿ ಮಾರ್ಗಾಮಾರ್ಗ, ಕಾರ್ಯಾಕಾರ್ಯವಿವೇಕ ಆತನಿಗಿರಲಿಲ್ಲ. ನಿಶ್ಚಲತೆ ನಿರಹಂಕಾರಗಳು ಇರಲಿಲ್ಲ. ಶಿವಕಲ್ಪನೆ ಆತನಿಗಿರಲಿಲ್ಲ. ಮಗಳ ಕಲ್ಪನೆಯೂ ಇರಲಿಲ್ಲ. ಅದರಿಂದಾಗಿ ಆತನು ಕಲ್ಯಾಣ ಪಥದಲ್ಲಿ ಕಾಲಿಡಲಿಲ್ಲ; ಶಿವಪಥದಲ್ಲಿ ಸಾಗಲಿಲ್ಲ.

ದಕ್ಷನು ವೃಕ್ಷಕ್ಕಿಂತ ಕಡೆಯಾದ; ಕೀಳಾದ. ಮರ ತನ್ನ ಬಳಿಗೆ ಬಂದವನು ದುಷ್ಟನೇ ಇರಲಿ ಶಿಷ್ಟನೇ ಇರಲಿ ನೆರಳು ಕೊಡುತ್ತದೆ; ಬಿಟ್ಟಿದ್ದರೆ ಹೂವು ಕೊಡುತ್ತದೆ; ಹಣ್ಣು ಕೊಡುತ್ತದೆ. ಮನೆಗೆ ಬಂದ ಮಗಳಿಗೆ ದಕ್ಷನು ಏನನ್ನು ಕೊಟ್ಟ? ಏನೂ ಕೊಡದೆ ಕೆಟ್ಟ!

ವೀರಭದ್ರ ಸ್ವಾಮಿಯು ವೈದ್ಯನಾಗಿ ಬಂದು ದಕ್ಷನಿಗೆ ಚಿಕಿತ್ಸೆಯನ್ನು ಮಾಡಿದನು; ರೋಗವನ್ನು ನಿವಾರಿಸಿದನು. ಆರೋಗ್ಯವನ್ನು ಅನುಗ್ರಹಿಸಿದನು.

ಅಂತೆಯೇ ಅಖಿಲ ದೇವತೆಗಳಿಗೂ ಮನು ಮುನಿಗಳಿಗೂ ಮಾಡಿದನು, ಎಲ್ಲರೂ ಜಡಜನ್ಮಗಳನ್ನು ನೀಗಿದರು. ಜಾಗ್ರತ ಜನ್ಮಗಳನ್ನು ತಳೆದರು.

ದೇವನಲ್ಲಿ ಗುರುವಿನಲ್ಲಿ ದೋಷಗಳನ್ನು ಎಣಿಸಬಾರದು. ಇದರಿಂದ ವಾಙ್ಮನಗಳು ಕಲುಷಿತವಾಗುತ್ತವೆ. ಕಪ್ಪು ಮುಟ್ಟಿದ ಕೈ ಕಪ್ಪಾಗುವಂತೆ ಕಪ್ಪಾಗುತ್ತವೆ, ಅದೇ ಗುಣಗ್ರಹಣದಿಂದ ಶುಭ್ರವಾಗುತ್ತವೆ, ಹೀಗಿರುವಾಗ ಇಲ್ಲದುದನ್ನು ಕಲ್ಪಿಸುವುದು ಒಳ್ಳೆಯದನ್ನು ಕೆಟ್ಟದನ್ನಾಗಿ ಭಾವಿಸುವುದು ತೀರ ತುಚ್ಛವಾದುದು.

ದ್ವೇಷಾಸೂಯೆಗಳು ಯಾವಾಗಲೂ ದೂಷ್ಯಗಳು; ಯಾರಲ್ಲಿಯೂ ದೂಷ್ಯಗಳು. ಅವು ವಿನಾಶಕಾರಿಗಳೇ ಹೊರತು ವಿಹಿತಕಾರಿಗಳಲ್ಲ. ಕೈಂಕರ್ಯ ತಾಳ್ಮೆ ಹಿರಿಯತನಕ್ಕೆ ಒರೆಗಲ್ಲು; ಹರುಷವೀವ ನೆಲೆ, ಜತೆಗೆ ಪವಿತ್ರ ಪ್ರೇಮವೊಂದಿದ್ದರೆ ಸುವರ್ಣಕ್ಕೆ ಸುವಾಸನೆಯನ್ನು ಸೇರಿಸಿದಂತಾಗುತ್ತದೆ. ಪ್ರೇಮ ಯಾವಾಗಲೂ ಅಧಿಕಾರ ಅಭಿಮಾನಿಗಳಿಗೆ ಹೆಣಗುವುದಿಲ್ಲ. ಅಹಂಕಾರಕ್ಕೆ ಒಳಗಾಗಿಸುವುದಿಲ್ಲ. ಸಹನೆ ಸೇವೆ ತ್ಯಾಗ ಅದರ ಸ್ವಾಭಾವಿಕ ಸುಗುಣಗಳು. ಸಿಟ್ಟು ಸೇಡು ತೀರಿಸಿಕೊಳ್ಳುವಿಕೆಗಳು ಅದರ ಬಳಿ ಸುಳಿಯಲಾರವು. ಪ್ರೇಮದಿಂದ ಸಾಧಿಸುವುದನ್ನು ದ್ವೇಷದಿಂದ ಸಾಧಿಸಲಾಗದು. ದುರಭಿಮಾನದಿಂದ ಸಾಧಿಸಲಾಗದು. ಪ್ರೇಮ ಪರಾಶಕ್ತಿ.

ಪ್ರೇಮದಿಂದ ಅಂದರೆ ಭಕ್ತಿಯಿಂದ ಬಣ್ಣಿಸಿದ ಬಾಣನ ಬಾಗಿಲ ಕಾಯ್ದ ಭಗವಂತನಾದ ಶಿವನು ಚೋಳಗೆ ಹೊನ್ನ ಮಳೆಯನ್ನು ಸುರಿಸಿದನು. ಅದೇ ಗರ್ವಿಯಾದ ಬ್ರಹ್ಮನ ಶಿರವನ್ನು ಚಿವುಟಿ ಹಾಕಿದನು. ತನ್ನ ಭಕ್ತನ ಮೇಲೆ ಬಿದ್ದ ಸಾವಿಗೆ ಸಾವನ್ನು ತಂದನು. ತನ್ನ ಪ್ರೇಮಕ್ಕಾಗಿ ತಂದೆಯನ್ನು ಕೊಂದ ಚಂಡೇಶನನ್ನು ಮುದ್ದಿಸಿ ಮುಂಡಾಡಿದನು. ಒಲವುಳ್ಳ ಒಳ್ಳೆಯ ದೃಷ್ಟಿ ಒಳ್ಳೆಯ ಮನ ಇರಬೇಕು. ಚಲುವಿನ ಒಳ್ಳೆಯ ಮನದಿಂದ ಏನೇ ಮಾಡಿದರೂ ಅದು ಒಪ್ಪು; ಅದಕಿಲ್ಲ ತಪ್ಪು. ಒಲವಿಲ್ಲದೆ ಒಳ್ಳೆಯ ಉದ್ದೇಶವಿಲ್ಲದೆ ಒಳ್ಳೆಯದನ್ನೇ ಮಾಡಿದರೂ ಅದು ತಪ್ಪು. ಅದಕಿಲ್ಲ ಅನುಗ್ರಹದ ಒಪ್ಪು. ನಿಂದಿಸಿ ಬಾಳಿದವರಿಲ್ಲ; ವಂದಿಸಿ ಹಾಳಾದವರಿಲ್ಲ, 'ಶಿವ' ಎಂದರೆ ಕೇಡಿಲ್ಲ; 'ಅಶಿವ' ಎಂದರೆ ಲೇಸಿಲ್ಲ.

ಶಿವನು ಜಗದೀಶನು. ಜಗತ್ತಿನ ತಂದೆ. ಆತನೇ ಶಂಕರನು. ಸರ್ವರಿಗೆ ಸುಖವನ್ನು ಕೊಡುವವನು. ಅನುಪಮ ದಾನಿಯೆಂದೆನಿಸಿದ್ದಾನೆ. ಅವನನ್ನು ಗೌರವಿಸಬೇಕಲ್ಲದೆ ಎದುರಿಸಿ ಅಗೌರವಿಸಬಾರದು. ಆದರಿಸುವುದು ದೈವೀ ಗುಣ, ಅನಾದರಿಸುವುದು ದಾನವ ಗುಣ.

ಮದ ಮತ್ಸರಗಳು ಮನಸ್ಸನ್ನು ಆವರಿಸಿದರೆ ವಾಸ್ತವತೆಯು ಮುಚ್ಚಿ ಹೋಗುತ್ತದೆ. ಮಂಗಳತೆಯನ್ನು ಆಕರ್ಷಿಸುವ ಶಕ್ತಿಯನ್ನು ಮನಸ್ಸು ಕಳೆದುಕೊಳ್ಳುತ್ತದೆ. ಅದರಿಂದಾಗಿ ದಕ್ಷನಂತವನೂ ದಾರಿ ತಪ್ಪಬೇಕಾಯಿತು. ದುರವಸ್ಥೆಗೆ ಈಡಾಗಬೇಕಾಯಿತು.

ದಕ್ಷನ ಯಜ್ಞ ವೈಯಕ್ತಿಕ ಮತ್ಸರದಿಂದ ಮೊದಲಾಯಿತು. ಆದರೆ ಅದರ ದುಷ್ಪರಿಣಾಮ ದೇವತೆಗಳಿಗೆಲ್ಲ ಉಂಟಾಯಿತು. ಅಷ್ಟೇ ಅಲ್ಲ ಮರ್ತ್ಯಲೋಕಕ್ಕೂ ಉಂಟಾಯಿತು. ಮಾನವರು ಉಂಡು ತಣಿಯುವ ಪಡಿ ಪದಾರ್ಥಗಳು ಅಗ್ನಿಕುಂಡಕ್ಕೆ ಆಹುತಿಯಾಗಹತ್ತಿದವು. ಮೂಕಪ್ರಾಣಿಗಳ ಬಲಿದಾನ ನಡೆಯಿತು. ಆಹಾರ ಅಭಾವವಾಗಿ ಹಾಹಾಕಾರ ಹಬ್ಬಿತು.

ವೀರಭದ್ರನು ಸೇವ್ಯನಾದ ಶಿವನಿಗೆ ಸಂಪೂರ್ಣ ಸಹಾಯಕನಾಗಿರುವ ಅನನ್ಯ ವ್ಯಕ್ತಿ. ಜತೆಗೆ ಜಗತ್ತಿಗೂ ಸಂಪೂರ್ಣವಾಗಿ ಆಶ್ರಯವಾದ ಮಹಾಶಕ್ತಿ; ಮಹಾವ್ಯಕ್ತಿ. ಆತನ ಆ ಕ್ರಾಂತಿ ಕಿಡಿ ಹಾರದಿದ್ದರೆ ಪದಾರ್ಥ ವಿಧ್ವಂಸಕ ಪ್ರಾಣಿನಾಶಕ ಯಜ್ಞ ಯಾಗಗಳು ಹೆಚ್ಚುತ್ತಿದ್ದವು, ಶೈವಭಾವವು ಸಂಪೂರ್ಣ ನಾಶವಾಗುತ್ತಿದ್ದಿತು. ಯಜ್ಞಯಾಗಾದಿಗಳ ನೆಪದಲ್ಲಿ ಕೆಲವರೇ ಸುಖ ಜೀವಿಗಳಾಗುತ್ತಿದ್ದರು. ಸರ್ವಸಾಮಾನ್ಯರ ಜೀವನ ನಿರ್ವಹಣ ನಿರ್ಭರವಾಗುತ್ತಿದ್ದಿತು. ಅಸುರ ವೃತ್ತಿಗಳು ಅತ್ಯಧಿಕವಾಗುತ್ತಿದ್ದವು.

ವೀರಭದ್ರನು ಸ್ವಾರ್ಥಿಯಲ್ಲ; ಸ್ವಾಮ್ಯಾರ್ಥಿಯಲ್ಲ. ಯಾವ ಅಧಿಕಾರ ಲಾಲಸೆ ಅವನಿಗಿರಲಿಲ್ಲ. ಯಾವ ಲೋಕದ ಅಧಿಪತ್ಯವನ್ನು ಆಸಿಸಿದವನಲ್ಲ. ಪಡೆಯಬೇಕೆಂದಿದ್ದರೆ ಅವನಿಗೇನು ಹೆಚ್ಚಿನದಾಗಿರಲಿಲ್ಲ; ಹೊರತಾಗಿರಲಿಲ್ಲ. ಅವನ ನಿಸ್ವಾರ್ಥ ಸೇವೆ ನಿಜಕ್ಕೂ ಆದರ್ಶವಾಗಿದೆ. ಸ್ವಾಮಿಯ ಕಾರ್ಯವೇ ಆತನ ಕಾರ್ಯ. ಸರ್ವರ ಹಿತವೇ ಅವನ ಹಿತ. ಹನುಮಂತನು ಶ್ರೀರಾಮನ ನಚ್ಚಿನ ಬಂಟನಾಗಿದ್ದಂತೆ ವೀರಭದ್ರನು ವಿರೂಪಾಕ್ಷನ ಆಪ್ತ ಶಿಷ್ಯನಾಗಿದ್ದನು. ಕರುಣೆಯ ಕಂದನಾಗಿದ್ದನು ಜನಗಣಾನುರಾಗದಿಂದ ಕಿರೀಟವಿಲ್ಲದ ಪ್ರಭುವಾಗಿದ್ದನು; ಆಗಿರುವನು. ಆತನಿಗೆ ಕುಲಛಲಗಳಿರಲಿಲ್ಲ. ಅಂತೆಯೇ ಆತನಿಗೆ ಎಲ್ಲ ಕುಲದವರೂ ಭಕ್ತರಾಗಿದ್ದಾರೆ. ಭಕ್ತರ ಹೃದಯದಲ್ಲಿ ಆತನಿದ್ದಾನೆ; ಇರುತ್ತಾನೆ. ಅಂತೆಯೇ ಆತನು ಭದ್ರನೆನಿಸಿದ್ದಾನೆ, ಆತನು ಆತ್ಮವೀರನೂ ಅಹುದು; ಆತ್ಮೀಯತೆಯಲ್ಲಿ ವೀರನೂ ಅಹುದು.

ವೀರಭದ್ರನ ಈ ವಿಶಿಷ್ಟ ಆದರ್ಶವನ್ನು ಇಂದಿನ ಅಧಿಕಾರ ಲಾಲಸಿಗಳು ಅಂಗೀಕರಿಸಿದರೆ ನಿಜವಾಗಿಯೂ ನಮ್ಮ ಭಾರತದ ಸ್ವಾತಂತ್ರ್ಯ ಭದ್ರವಾಗಿ ಬಾನೆತ್ತರಕ್ಕೆ ಭುವನ ಬಿತ್ತರಕ್ಕೆ ಬೆಳಗೀತು.

ಭಾರತೀಯ ಪ್ರಾಂತಗಳಲ್ಲಿ ದಕ್ಷನಂಥವರು ಬಹಳ ಜನರಿದ್ದಾರೆ, ಪ್ರಭುತ್ವಕ್ಕಾಗಿ ದಕ್ಷ ಯಜ್ಞದಂತಹ ಸತ್ಯಾಗ್ರಹಗಳನ್ನು ಹೂಡುತ್ತಾರೆ. ದಕ್ಷನು ಯಜ್ಞದಲ್ಲಿ ಪ್ರಾಣಿ ವಧೆಯನ್ನು ಮಾಡಿದರೆ ಇವರು ಮಾನವರ ವಧೆಯನ್ನೇ ಮಾಡುತ್ತಾರೆ. ಯಜ್ಞಾಗ್ನಿಯಂತೆ ಅಗ್ನಿಯನ್ನಿಟ್ಟು ಮನೆ ಮಠಗಳನ್ನು ಸುಡುತ್ತಾರೆ. ಪಡಿ ಪದಾರ್ಥಗಳನ್ನು ಸುಡುತ್ತಾರೆ. ಪಕ್ಷಗಳಿಂದ ಹೊರಬಂದು ದಕ್ಷನಂತಾಗುತ್ತಾರೆ. ನಾಗರಿಕತೆಯನ್ನು ನಾಶಪಡಿಸುತ್ತಾರೆ. ನಷ್ಟ ಕಷ್ಟಗಳನ್ನು ತಂದೊಡ್ಡುತ್ತಾರೆ. ವಿನಾಶಕ ಪಥದಲ್ಲಿ ಅಸತ್ಯಾಗ್ರಹದಲ್ಲಿ ಮುಂದುವರಿಯುತ್ತಿದ್ದಾರೆ. ಆಧುನಿಕ ದಕ್ಷರಾಗುತ್ತಿದ್ದಾರೆ.

ಭಾರತೀಯರು ಅದರಲ್ಲಿಯೂ ಕನ್ನಡಿಗರು ವೀರಭದ್ರನಂತಹ ಕೆಚ್ಚೆದೆಯ ಕಟ್ಟಾಳುಗಳಾಗಬೇಕು. ಧೈರ್ಯಶಾಲಿಯ ಧುರೀಣರಾಗಬೇಕು. ಕರ್ತವ್ಯ ಧುರಂಧರರಾಗಬೇಕು. ನಿಸ್ವಾರ್ಥ ನಿಶ್ಚಲ ಧೃತಿಯುಳ್ಳವರಾಗಬೇಕು. ಧೀರೋದಾತ್ತ ಧೋರಣವುಳ್ಳವರಾಗಬೇಕು. ಯಾವ ದಿಸೆಯಲ್ಲಿಯೂ ಯಾವ ಕ್ಷೇತ್ರದಲ್ಲಿಯೂ ದೈನ್ಯತೆಗೆ ದುರ್ಬಲತೆಗೆ ದುರವಸ್ಥೆಗೆ ತುತ್ತಾಗಬಾರದು. ವೀರಭದ್ರನು ರುದ್ರಗಣರನ್ನು ಹುರಿಗೂಡಿಸಿ ಕ್ರಾಂತಿದಳವೊಂದನ್ನು ರಚಿಸಿಕೊಂಡಿದ್ದಂತೆ ಕನ್ನಡಿಗರು ತಂತಮ್ಮ ಹೃದಯಗಳನ್ನು ಎರಕ ಹೊಯ್ದುಕೊಂಡು ಒಂದಾಗಬೇಕು; ಒಗ್ಗಟ್ಟಿನಿಂದಿರಬೇಕು. ನಾಡಿನ ಸಮಗ್ರತೆಯನ್ನು ಸಂಪಾದಿಸಿಕೊಳ್ಳಬೇಕು; ಸಂಪಾದಿಸಿದುದನ್ನು ಸಂರಕ್ಷಿಸಿಕೊಳ್ಳಬೇಕು. ಒಡಕು ಮನೋಭಾವ ಓಡಿಹೋಗಬೇಕು. ಇಲ್ಲವಾದರೆ ನಾಡಿನ ಉನ್ನತಿ, ನಾಡಿನ ಸಾಂಸ್ಕೃತಿಕ ಉನ್ನತಿ ಕನಸಿನ ಕತೆಯಾದೀತು! ಭಾವೈಕ್ಯತೆ ಬಾರದಿದ್ದರೆ ಸರ್ವರ ಪ್ರಗತಿ ಸಾಧ್ಯವಿಲ್ಲವಾದೀತು! ಹಿಂದುಳಿದ ಹೀನ ಮನೋವೃತ್ತಿ ಸೋಮಾರಿತನದ ಪ್ರವೃತ್ತಿ ಅಂಧ ಶ್ರದ್ಧೆಯ ಪದ್ಧತಿ ಜಾತೀಯತೆಯ ದುರಭಿಮಾನ ಲಂಚ ಲೋಭ ಸಂಕುಚಿತ ಸ್ವಭಾವಗಳು ತೊಲಗಬೇಕು. ಇಲ್ಲವಾದರೆ ನಾಡಪ್ರಗತಿ ಇವುಗಳ ನಡು ನೀರಿನಲ್ಲಿ ಮುಳುಗಿ ಹೋಗುತ್ತದೆ.

ವೀರಭದ್ರನು ಭಾರತೀಯನು; ಮಿಗಿಲಾಗಿ ಕನ್ನಡಿಗನು. ಇದನ್ನು ಮತ್ತೊಂದು ಪ್ರಕರಣದಲ್ಲಿ ಪ್ರತಿಪಾದಿಸಿದ್ದೇವೆ. ಕಾರಣ ಭಾರತೀಯರು ಹೆಚ್ಚಾಗಿ ಕನ್ನಡಿಗರು ವೀರಭದ್ರನಂತೆ ವಿಧಾಯಕ ವೀರತನದಲ್ಲಿ ಮುಂದುವರಿದು ಭದ್ರಪಟ್ಟರಾಗಬೇಕು. ಭಯರಹಿತರಾಗಬೇಕು. ಧೈರ್ಯ ಸ್ಥೈರ್ಯವುಳ್ಳವರಾಗಬೇಕು. ಸ್ಥಿರಬುದ್ಧಿಯುಳ್ಳವರಾಗಿ ಸರ್ವಾಂಗೀಣ ವೃದ್ಧಿಯನ್ನು ಸಾಧಿಸಬೇಕು; ಸಮೃದ್ಧಿಯನ್ನು ಸಾಧಿಸಬೇಕು. ದ್ವೇಷ ಮತ್ಸರಗಳನ್ನು ಬೆಳೆಸಲು ಅವಕಾಶವನ್ನು ಮಾಡಿಕೊಡಬಾರದು. ಧಾನ್ಯ ದವಸಗಳನ್ನು ಸಮೃದ್ಧಿಗೊಳಿಸಬೇಕು; ಅನ್ಯಾಯಕ್ಕೆ ವಿನಿಯೋಗವಾಗಬಾರದು. ವೀರಭದ್ರನಂತೆ ವೀರಭಟರಾಗಿ ದುಡಿಯಬೇಕು; ಅಧಿಕಾರ ವ್ಯಾಮೋಹಕ್ಕೆ ಬೀಳಬಾರದು. ಅಧಿಕಾರಗಳಿಗಾಗಿ ಅಲ್ಪತನಕ್ಕಿಳಿದು ಕಚ್ಚಾಡಬಾರದು. ವೀರಭದ್ರನು ಎಂದಿಗೂ ಯಾವ ಅಧಿಕಾರಕ್ಕೂ ಆಸೆಪಟ್ಟವನಲ್ಲ. ಅರ್ಥ ಸಂಪಾದನೆಗೆ ಅಪೇಕ್ಷಿಸಿದವನಲ್ಲ. ಆತನ ಆದರ್ಶ ಇಂದು ನಾಡಿನವರಿಗೆ ತೀರ ಅಗತ್ಯ. ಅಂದು ದಕ್ಷ ಶಿವನಿಗೆ ಯಜ್ಞದಲ್ಲಿ ಅಧಿಕಾರವಿರಬಾರದೆಂದು ಅವಮಾನವಾಗಬೇಕೆಂದು ಪ್ರಯತ್ನಿಸಿದಂತೆ ಇಂದೂ ಈ ವಿಜ್ಞಾನ ಯುಗದಲ್ಲಿದ್ದೂ ವಿಶಾಲ ವಿಚಾರವಾದಿಗಳೆನಿಸಿಕೊಂಡೂ ಪ್ರಯತ್ನಿಸಿದರೆ ಪ್ರತ್ಯೇಕ ಮನೋಭಾವವುಳ್ಳವರಾದರೆ ಮತ್ತೆ ಹೊಸ ಅಂಧಕಾರಯುಗ ಆರಂಭವಾದಂತಾಗುತ್ತದೆ. ದಕ್ಷನಂತೆ ಪಾಶವೀಯತೆಯಲ್ಲಿ ಬಾಳಬೇಕಾಗುತ್ತದೆ. ದೇವತ್ವವೊಂದೆಡೆಗಿರಲಿ ಮಾನವತ್ವಕ್ಕೆ ವಂಚಿತರಾಗಬೇಕಾಗುತ್ತದೆ. ಅಸಮತೆ ಅಸಮಾಧಾನಗಳು ತಾಂಡವವಾಡುತ್ತವೆ. ಅಖಂಡತೆ ಅನನ್ಯತೆ ಹಾಳಾಗುತ್ತವೆ. ನಡೆನುಡಿಗಳು ಒಂದಾಗಿ ಬಾಳಬೇಕು; ಅಂತೆಯೇ ಮನೆ ಮನಗಳು ಒಂದಾಗಿ ಬದುಕಬೇಕು. ನಾಡು ನಾಡಿಗರೂ ಒಂದಾಗಿ ಮುಂದುವರಿಯಬೇಕು. ಇಲ್ಲವಾದರೆ ಪಕ್ಕದ ಪ್ರದೇಶಗಳಿಂದ ಬರುವ ಕಿತ್ತಾಟದ ಒತ್ತಡಗಳನ್ನು ಅಂಗಾಂಗಗಳನ್ನು ಅಂಚು ನೆಲೆಗಳನ್ನು ಒಡೆದೊಯ್ಯುವ, ಹೋಮಗಳನ್ನು ತಡೆಯುವ ತೋಳ ಕಸುವು ಇಲ್ಲದಾಗಿ ಇಲ್ಲದ ಸಲ್ಲದ ಅಧೋಗತಿಗಿಳಿಯಬೇಕಾಗುತ್ತದೆ. ಜಾತೀಯತೆಯ ಚೌಕಟ್ಟಿನಲ್ಲಿ ಚಿಕ್ಕವರಾಗಬಯಸುವುದು ಚಿಕ್ಕ ನಾಡನ್ನಾಗಿಸುವುದು ಸಣ್ಣತನವಾದೀತು! ಹೆಚ್ಚಿನ ಅಭಿವೃದ್ಧಿಗೆ ಮುಂದು ಮುಂದಕ್ಕೆ ಅವಕಾಶವಿಲ್ಲವಾದೀತು! ಹಳೆ-ಹೊಸ ಎಂಬ ಒಡಕು ನುಡಿ ಭಿನ್ನಭಾವಗಳು ಅಳಿಯಬೇಕು. ಪ್ರಾದೇಶಿಕ ಸಮತೆ ಸಮೈಕ್ಯತೆಗಳು ಪ್ರಾಂತದ ಪ್ರಗತಿಗೆ ಭದ್ರವಾದ ಅಡಿಗಲ್ಲೆಂಬುದನ್ನು ಅರಿತಷ್ಟು ಲೇಸು.

ನಾಡಿಗರ ಭಾರತೀಯರ ಮತ್ತು ವಿಶ್ವದ ಮಾನವರ ಶಕ್ತಿ ಸಂವರ್ಧಿಸಬೇಕು. ಆದರೆ ಆ ಶಕ್ತಿ ನೈತಿಕವಾಗಿ ಚಾರಿತ್ರಿಕವಾಗಿ ವಿಕಾಸವಾಗಿ ಭದ್ರವಾಗಬೇಕು. ಇದೇ ನಿಜವಾದ ವೀರಭದ್ರ ದೇವನ ಜೀವನದ ಆದರ್ಶ ದರ್ಶನ.

ವೀರೇಶನ ಜೀವನ ಕೇವಲ ಒಂದು ಶಕ್ತಿ ನಿರ್ಮಾಣ ಸೂಚಕವಲ್ಲ; ಜತೆಗೆ ಸಂಘಟಿತ ಸಮಾಜ ನಿರ್ಮಾಣವೂ ಅದರ ಗುರಿಯಾಗಿದ್ದಿತು. ಅಂತೆಯೇ ಅದರಿಂದ ಅಸಂಖ್ಯವಾದ ಒಂದು ರುದ್ರ ಗಣ ನಿರ್ಮಾಣವಾಯಿತು. ಆ ರುದ್ರ ಗಣದ ಗುರಿಯಾದರೂ ಒಂದು ಬ್ರಹದ್ಭೂಮಿಕೆಯುಳ್ಳುದಾಗಿದ್ದಿತು. ಶಾಂತಿ ಸಮಾಧಾನಗಳಿಗೆ ಕಾರಣವಾದ ಶಿವತ್ವ ಸಂಸ್ಥಾಪನ ಧ್ಯೇಯವುಳ್ಳುದಾಗಿದ್ದಿತು. ಆ ರುದ್ರಗಣರಲ್ಲಿ ಯಾವ ಭೇದಭಾವಕ್ಕೆ ಅವಕಾಶವಿರಲಿಲ್ಲ. ಐಕ್ಯೈಕ ನಿಯಮ್ಯವಾಗಿತ್ತು.

ಸಮಾಜವನ್ನು ಶೋಷಿಸುವುದು ವೀರವ್ರತಕ್ಕೆ ಭಂಗ. ಅಂತೆಯೇ ಸ್ವಾರ್ಥಕ್ಕಾಗಿ ಸಂಗ್ರಹ ಮಾಡುವುದೂ ಸಹ ಆ ವೀರಭದ್ರನ ವೀರವ್ರತಕ್ಕೆ ಭದ್ರ

ಚಾರಿತ್ರಕ್ಕೆ ಒಪ್ಪತಕ್ಕವುಗಳಾಗಿರಲಿಲ್ಲ. ಅಧಿಕಾರ, ಅಹಂಕಾರಗಳ ಆಸೆಯಂತೂ ಆತನ ಬಳಿ ಸುಳಿಯುವಂತಿಲ್ಲ. ವೀರನಾದಷ್ಟೂ ವಿನಯಶಾಲಿಯಾಗಿದ್ದನು. ವಿಚಾರಪರನಾಗಿದ್ದನು. ಪ್ರಾಮಾಣಿಕನಾಗಿದ್ದನು. ಈ ಗುಣಗಳನ್ನೇ ತನ್ನ ರುದ್ರ ಗಣರಿಗೆ ಬೋಧಿಸಿ ಒಪ್ಪಿಸಿದ್ದನು. ಪರಸ್ಪರ ಮೈತ್ರಿ, ಶಾಂತಿ ಸಮಾಧಾನ, ಸ್ವಾತಂತ್ರ್ಯ ಜೀವನ ಇವು ಅವರೆಲ್ಲರ ಎದೆಯ ಉಸಿರಾಗಿದ್ದವು. ಸದಾಚಾರ ಶಿವಾಚಾರ ಗಣಾಚಾರ ಭ್ರತ್ಯಾಚಾರಗಳ ಆಧಾರದ ಮೇಲೆ ವೀರವ್ರತವನ್ನಾಚರಿಸಿ ಭದ್ರತೆಯನ್ನು ಅವರು ಪ್ರತಿಷ್ಠಾಪಿಸುತ್ತಿದ್ದರು. ವೀರತ್ವವನ್ನು ಭದ್ರತೆಯ ಮುಖದಲ್ಲಿ ನಿರ್ದೇಶಿಸುತ್ತಿದ್ದರು. ಸಹಜೀವನದಲ್ಲಿ ಅವರಿಗೆ ನಂಬಿಕೆಯಿದ್ದಿತು. ಅಂತೆಯೇ ಶಿವಜೀವನದಲ್ಲಿಯೂ ಶ್ರದ್ಧೆಯಿದ್ದಿತು.

ರುದ್ರ-ವೀರಭದ್ರಾದಿಗಳ ನೈತಿಕ ಧಾರ್ಮಿಕ ಚಿಕಿತ್ಸೆ ವೈದ್ಯರಂತಹದು. ಅದು ನೋಡಲು ಭೀಕರವಾಗಿದ್ದರೂ ಪರಿಣಾಮ ಪ್ರಶಾಂತಮಯವಾದುದು. ಶಸ್ತ್ರಚಿಕಿತ್ಸೆಯಿಲ್ಲದೆ ರೋಗ ವಾಸಿಯಾಗುವುದಿಲ್ಲೆಂದು ಕಂಡುಬಂದರೆ ಶಸ್ತ್ರಚಿಕಿತ್ಸೆಯನ್ನು ತಪ್ಪದೆ ಮಾಡಿಯೇ ತೀರತಕ್ಕವರು. ಪ್ರಭುತ್ವ ಪ್ರಾಣಗಳ ಅಪಹರಣಕ್ಕಾಗಿ ಅವರೆಂದಿಗೂ ಗಣಾಚಾರವನ್ನು ಬಳಸಿಕೊಂಡವರಲ್ಲ ಧರ್ಮ ಸ್ಥಾಪನೆಗಾಗಿ ಲೋಕಕಲ್ಯಾಣಕ್ಕಾಗಿ ಗಣಾಚಾರನಿರತರು. ಆದರೆ ವಾಸ್ತವವಾಗಿ ಅವರು ಭ್ರತ್ಯಾಚಾರ ಭರಿತರು. ಶಿವಾಚಾರ ನಿರತರು.

ವೀರಭದ್ರನು ರುದ್ರಗಣರಿಗೆ ಅಧ್ಯಕ್ಷನಾಗಿ ನೈತಿಕ ಆಂದೋಲನವನ್ನು ಮಾಡಿದನು. ಅವರೆಲ್ಲರ ಮನಸ್ಸಿನಲ್ಲಿ ನೈತಿಕತೆಯ ವಿಚಾರವಾಗಿ ಶ್ರದ್ಧೆಯನ್ನು ಹುಟ್ಟಿಸಿದ್ದನು. ಅಂತೆಯೆ ನೈತಿಕ ಚಾರಿತ್ರ್ಯವುಳ್ಳವರನ್ನು ಸಂಘಟಿಸುತ್ತಿದ್ದನು. ಅದರಿಂದಾಗಿ ಸಂಯಮಶೀಲರಾದ ರುದ್ರಗಣರು ತಯಾರಾದರು; ವೀರರಾದರು. ತೇಜಸ್ವಿಗಳಾದರು. ಭೀತರಹಿತರಾಗಿ ಧೃತಿವಂತರಾದರು.

ವೀರಭದ್ರನದು ವೀರವ್ರತ. ಅದು ಜಡವ್ರತವಲ್ಲ; ಚೇತನಾತ್ಮಕವಾದುದು. ಅದು ಸ್ವಾರ್ಥದ್ದಲ್ಲ; ಪರಾರ್ಥದ್ದಾಗಿತ್ತು. ಅದು ಕೇವಲ ಸೈದ್ಧಾಂತಿಕವಾಗಿರದೆ ವ್ಯಾಹಕಾರಿಕವಾಗಿತ್ತು; ವೈಚಾರಿಕ ಮಾತ್ರವಾಗಿರದೆ ಸಕ್ರಿಯಾತ್ಮಕವಾಗಿತ್ತು; ವೈಯಕ್ತಿಕವಾಗಿರದೆ ಸಾಮೂಹಿಕವಾಗಿತ್ತು. ನೈತಿಕವಾಗಿತ್ತು. ವಿನಯ ಅವಧಾನ ನಿಷ್ಠೆಗಳಿಗೆ ಬದ್ಧವಾಗಿತ್ತು. ಅಗ್ರಹ-ಅನುಗ್ರಹ ಪಥದಲ್ಲಿ ನ್ಯಾಯವನ್ನು ಸಂಪಾದಿಸುವದಾಗಿದ್ದಿತು. ಶೈವೀಮಯವಾಗಿದ್ದಿತು. ಆತನ ಆ ಸಮರ್ಥತೆ ಶಾಂತಿ ಭವನದ ಅಡಿಗಲ್ಲಾಗಿದ್ದಿತು.

ದೈವೀ ಭಾವೈಕ್ಯತೆಯನ್ನುಂಟು ಮಾಡಿದವನು ವೀರಭದ್ರನು. ಈ ದೆಸೆಯಲ್ಲಿ ಈತನೇ ಮುಮ್ಮೊದಲಿಗನೆಂದು ನಿಸ್ಸಂದೇಹವಾಗಿ ನಿರೂಪಿಸಬಹುದು. ದಕ್ಷಾದಿಗಳು ಕೋಮು ಗುಂಪುಗಳನ್ನು ಕಟ್ಟಲು ಶಿವಗಣರಿಗೆ ದೇವಗಣರಿಗೆ ಭಿನ್ನಭಾವವನ್ನು ಬೆಳೆಸಲು ಪ್ರಯತ್ನಿಸಿದರು. ದೇವಗಣವನ್ನು ಪ್ರತ್ಯೇಕಿಸಿ ದೇವತಾಗಣಕ್ಕೆ ನಾಯಕನಾಗಲು ಹಂಬಲಿಸಿದನು ಹರಿಯು. ಈ ಪ್ರತ್ಯೇಕತಾ ಭೂತವನ್ನು ಉಚ್ಚಾಟನಗೊಳಿಸಿದನು ವೀರೇಶನು.

ವೀರಭದ್ರನು ಏಕೈಕ ವೀರ; ಏಕೈಕ ಭದ್ರ, ಲೋಕ ಭದ್ರತೆಯನ್ನು ಉಳಿಸುವ ಬೆಳೆಸುವ ಅಧಿಕಾರ ಆತನದು. ಸೃಷ್ಟಿಯ ವಿಧಾನದಲ್ಲಿಯೇ ಆಗಲಿ ಪಾಲನ ಪರಿಸ್ಥಿತಿಯಲ್ಲಿಯೆ ಆಗಲಿ ಹದ ತಪ್ಪಿದ ಹರಿವಿರಿಂಚಿಗಳನ್ನು ದಾರಿಗೆ ತರಬಲ್ಲ ವ್ಯಕ್ತಿ ವೀರಭದ್ರ. ಇಷ್ಟೇ ಅಲ್ಲ ಸೃಷ್ಟಿಯಲ್ಲಿ ಎಲ್ಲಿಯೆ ಆಗಲಿ ಯಾವ ಮೂಲೆಯಲ್ಲಿಯೆ ಆಗಲಿ ಅಮಂಗಳಾಚಾರ ವಿಚಾರಗಳಿಗೆ ಅವಕಾಶವಿರದಂತೆ ನೋಡಿಕೊಳ್ಳುವ ಹೊಣೆ ವೀರಭದ್ರನದು. ರುದ್ರರೆಲ್ಲ ವೀರಭದ್ರಾನು ವರ್ತಿಗಳು. ಈ ಅನುವರ್ತನೆಯು ಕೈಂಕರ್ಯಲಕ್ಷಿತನಲ್ಲ; ವಿಶ್ವಕಲ್ಯಾಣೈಕ ಲಕ್ಷಿತ. ಅದಕ್ಕಾಗಿ ವೀರಭದ್ರನು ಪ್ರೇರಕನು ಮಾತ್ರ, ನಿಯತಿ ನಿಯಾಮಕನು ಮಾತ್ರ, ಆತನ ಆ ವೀರಲೀಲೆ ಒಂದು ಹೊಸ ಹಾದಿಯನ್ನು ಹಾಕಿಕೊಟ್ಟಿತು. ಉದ್ಧಟತನದಿಂದ ಉದ್ಧರಿಸಿತು. ಸೃಷ್ಟಿಗೆ ಶಾಂತಿಯನ್ನುಂಟುಮಾಡಿತು. ಹೊಸ ಶಕ್ತಿಯನ್ನು ಹೊಸ ಉತ್ಸಾಹವನ್ನು ಪ್ರಸಾದಿಸಿತು.

ವೀರಭದ್ರನು ಯಜ್ಞನಿರೋಧದ ಜತೆಗೆ ಪಾನನಿರೋಧ್‌ವನ್ನೂ ಜಾರಿಗೆ ತಂದನು. ಯಜ್ಞದಲ್ಲಿ ಮಾಡುವ ಪ್ರಾಣಿ ಹಿಂಸೆ ಎಷ್ಟು ನಿಂದ್ಯವೋ ಅಷ್ಟೇ ಏಕೆ ಅದಕ್ಕೂ ಹೆಚ್ಚು ಪಾನ ನಿಂದ್ಯ. ಸೋಮ ಪಾನವೆಂಬ ಹೆಸರಿನಲ್ಲಿ ಕುಡಿತ ಹೆಚ್ಚಿ ಹೋಗಿದ್ದಿತು ಅಂದಿನ ಕಾಲದಲ್ಲಿ! ಇಂದ್ರಾದಿ ದೇವತೆಗಳೆಲ್ಲ ಮಿತಿಮೀರಿ ಕುಡಿಯುತ್ತಿದ್ದರು. ಕುಡಿತದಿಂದಾಗಿ ಅವರ ಕಲಿತನ ದೇವತನಗಳು ಹಾಳಾಗುತ್ತ ಬಂದವು. ಆಗಾಗ ಸೋಲುಗಳನ್ನು ಅನುಭವಿಸುವ ಪದವಿಗಳನ್ನು ಕಳೆದುಕೊಳ್ಳುವ ಪ್ರಸಂಗಗಳುಂಟಾಗುತ್ತಿದ್ದವು. ದಕ್ಷಯಾಗದಲ್ಲಿ ಪರಪೀಡನ ಪ್ರಾಣಿ ಪೀಡನ-ಸೋಮಪಾನ ಎರಡೂ ಜರುಗುತ್ತಿದ್ದವು. ಯಜ್ಞ ಯಾಗಾದಿಗಳ ನೆಪದಲ್ಲಿ ಅಭಕ್ಷ ಭಕ್ಷಣ, ಅಪಾನ ಪಾನ, ಅಕೃತ್ಯಕರಣಗಳು ನಡೆಯುತ್ತಿದ್ದವು. ಇವನ್ನೆಲ್ಲ ನಿಲ್ಲಿಸುವುದೇ ವೀರಭದ್ರನ ವೀರ ಕ್ರಾಂತಿಯ ಪರಮ ಗುರಿಯಾಗಿದ್ದಿತು. ಅದಕ್ಕಿಂತ ಬೇರೆ ಆತನ ಜೀವನ ಉದ್ದೇಶವಿರಲಿಲ್ಲ.

ಯಜ್ಞವಿರೋಧ ಬರೀ ಅಂದಿನ ಮಾತಲ್ಲ. ಇಂದೂ ಸಹ ವಿರೋಧ ಇದ್ದೇ ಇದೆ. ಇದಕ್ಕೆ ನಿದರ್ಶನವಾಗಿ ೨೯.೦೬.೯೮ರ "ಕನ್ನಡ ಪ್ರಭ" ದೈನಂದಿನ ಪತ್ರಿಕೆಯ ಈ ಎರಡು ಪ್ರಕಟಣೆಗಳನ್ನು ಇಲ್ಲಿ ಎತ್ತಿ ಉದ್ಧರಿಸೋಣವಾಗಿದೆ.

"ಕೋಟಿ ಚಂಡಿಯಜ್ಞಕ್ಕೆ ಕೇಂದ್ರ ಸರ್ಕಾರದ ವಿರೋಧ" ಈ ತಲೆಕಟ್ಟಿನಲ್ಲಿ ಹೀಗೆ ಪ್ರಕಟವಾಗಿದೆ; ಏನೆಂದರೆ ಗುಜರಾತಿನ ರಾಜಕೋಟೆಯಲ್ಲಿ ನಡೆಯಲಿರುವ ಕೋಟಿ ಚಂಡಿಯಜ್ಞಕ್ಕೆ ಕೇಂದ್ರಸರ್ಕಾರ ವಿರೋಧವಾಗಿದೆ ಎಂದು ಗೊತ್ತಾಗಿದೆ. ಗುಜರಾತಿಗೆ ಹೊರ ರಾಜ್ಯಗಳಿಂದ ಧಾನ್ಯ ಸಾಗಣೆಯನ್ನು ಕೇಂದ್ರ ಸರ್ಕಾರ ಈ ಉದ್ದೇಶದಿಂದ ನಿಷೇಧಿಸಲಿದೆ. ಭಾರಿ ಪ್ರಮಾಣದಲ್ಲಿ ಆಹಾರ ಧಾನ್ಯ ವ್ಯರ್ಥವಾಗುವುದೇ ಸರ್ಕಾರದ ವಿರೋಧಕ್ಕೆ ಕಾರಣವೆಂದು ಹೇಳಲಾಗಿದೆ. ಈ ರೀತಿ ವ್ಯರ್ಥವಾಗುವುದನ್ನು ತಡೆಯಲು ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಗುಜರಾತ್ ಸರಕಾರ ಪರಿಶೀಲಿಸುತ್ತಿದೆ.

ಅದೇ ಸಂಚಿಕೆಯಲ್ಲಿ ಶ್ರೀ ವಿಜಯಕುಮಾರ್ ಮಂಜೇಶ್ವರ ಎಂಬವರು ಹೀಗೆ ಬರೆದಿದ್ದಾರೆ; ಮಾನ್ಯರೆ, ಈ ವರ್ಷಾಂತ್ಯದಲ್ಲಿ ರಾಜಕೋಟೆಯ ಸಮೀಪದಲ್ಲಿ ಹಿಂದೂ ಧಾರ್ಮಿಕ ನಾಯಕರಲ್ಲೊಬ್ಬರಾದ ಲಕ್ಷ್ಮಣ ಚೈತನ್ಯ ಬ್ರಹ್ಮಚಾರಿಜಿ ಮಹಾರಾಜರ ನೇತೃತ್ವದಲ್ಲಿ ಹನ್ನೆರಡು ಕೋಟಿ ರೂ. ವೆಚ್ಚದಲ್ಲಿ ಕೋಟಿ ಚಂಡಿಯಜ್ಞವು ಜರುಗಲಿರುವುದು ವಿಷಾದಕರ. ಈ ಮೊದಲು ನಲವತ್ತು ಲಕ್ಷ ರೂ. ವೆಚ್ಚ ಮಾಡಿ ಭಾವನಗರದ ಸಿಹೋಕ್ ಎಂಬಲ್ಲಿ "ಲಕ್ಷ ಚಂಡಿ ಯಜ್ಞ" ನಡೆಸಿದುದನ್ನು ಇಲ್ಲಿ ಸ್ಮರಿಸಬಹುದು. ಭಾರತದಂತಹ ಬಡದೇಶದಲ್ಲಿ ವಿಶ್ವ ಶಾಂತಿಯ ನೆಪದಲ್ಲಿ ಹನ್ನೆರಡು ಕೋಟಿ ರೂಪಾಯಿಯನ್ನು ಅಗ್ನಿಗಾಹುತಿ ಮಾಡುವುದು ಬೇಸರದ ವಿಷಯ.

ಹಿಂದೆ ಘಜನಿ ಮಹಮ್ಮದನು ಭಾರತವನ್ನು ಆಕ್ರಮಿಸಿದಾಗ ಮೂಢ ಜನರು ಅವನೊಂದಿಗೆ ಸರಿಯಾಗಿ ಹೋರಾಡುವ ಬದಲು ಸೋಮನಾಥನ ಹೆಸರಿನಲ್ಲಿ ಯಜ್ಞ-ಯಾಗಗಳನ್ನು ಮಾಡಿದರು. ಯಜ್ಞದ ಫಲದಿಂದ ಜನರನ್ನು ರಕ್ಷಿಸಬೇಕಾಗಿದ್ದ ಸೋಮನಾಥನಿಗೆ ಅವನ ತಲೆಯನ್ನೇ ಉಳಿಸಿಕೊಳ್ಳಲಾಗಲಿಲ್ಲ.

ಭಾರತದ ಧರ್ಮಗುರುಗಳಿಂದ ಹಾಗೂ ಹಲವು ರಾಜಕೀಯ ಪಕ್ಷಗಳ ಬೆಂಬಲದಿಂದ ಜರುಗಲಿರುವ ಈ ಯಜ್ಞಕ್ಕೆ ಜನರು ಪ್ರೋತ್ಸಾಹ ಕೊಡುವ ಬದಲು ಸಮಾಜ ಕಲ್ಯಾಣಕ್ಕಾಗಿ ಅವಿಶ್ರಾಂತವಾಗಿ ದುಡಿಯುತ್ತಿರುವ "ರಾಮಕೃಷ್ಣ ಮಿಷನ್"ಗಳಂತಹ ಸಂಸ್ಥೆಗಳಿಗೆ ಸಹಕಾರ ಕೊಡಲಿ. ಸರಕಾರವು "ಈ ಕೋಟಿ ಚಂಡಿಯಜ್ಞದ ವಿರುದ್ಧ ಕ್ರಮ ಕೈಗೊಳ್ಳುವುದೆಂದು ನಂಬಲೆ?" -ಈ ಮಾತುಗಳು ವೀರಭದ್ರನ ತತ್ತ್ವಗಳನ್ನೇ ಘೋಷಿಸುತ್ತವೆ. ಇಂದಿನ ಸರಕಾರ ಮತ್ತು ಸಾರ್ವಜನಿಕರು ವೀರಭದ್ರನ ತತ್ತ್ವಪಥದಲ್ಲಿ ಸಾಗಬಯಸಿದ್ದಾರೆ.

ರುದ್ರ-ವೀರಭದ್ರ

ಇವರು ಆಕಾಶದ ದೇವತೆಗಳಲ್ಲ; ಈ ಲೋಕದವರೂ ಅಹುದು. ಇಲ್ಲಿಯೇ ಬೆಳೆದು ಬಾಳಿ ಬದುಕಿದವರು; ಬದುಕಿ ಬೆಳಗಿದವರು. ಇವರಿಗೂ ಒಂದು ಚಾರಿತ್ರವಿದೆ; ಇತಿಹಾಸವಿದೆ. ಇವರುಗಳು ಹಿಂದೊಂದು ಕಾಲದಲ್ಲಿದ್ದವರು, ಸಂಸ್ಕೃತಿಗಾಗಿ ಕ್ರಾಂತಿಗೈದವರು. ಪ್ರಗತಿಪಥದಲ್ಲಿ ಮುಂದುವರಿದವರು. ರುದ್ರಗಣರಲ್ಲಿ ಗಣ್ಯರು; ಪುಣ್ಯಪುರುಷರು. ಮಾನವೀಯ ರೀತಿ ನೀತಿಗಳನ್ನು ಆಚಾರ-ವಿಚಾರಗಳನ್ನು ರಕ್ಷಿಸಿದವರು, ಪಾಶವೀಯ ಜೀವನವನ್ನು ಪ್ರತಿಭಟಿಸಿದವರು, ಜೀವ ದಯಾಪಾರಿಗಳು, ಮಾನವ ಶೋಷಣ ಮಾರ್ಗದಲ್ಲಿರುವವರನ್ನು ಕಂಡರೆ ಇವರಿಗಾಗದು. ಹೋಮದ ನೆಪದಲ್ಲಿ ನಡೆವ ಪ್ರಾಣಿ ವಧೆಯನ್ನು ಸಹಿಸದವರು. ಚತುರ್ವೇದಿಯಾದರೂ ಚರಿತ್ರಹೀನನಾದರೆ ಅವನನ್ನು ಸಹಿಸರು. ಪಾಕಭೇದ ಪಂತಿ ಭೇದಗಳನ್ನು ಮಾಡುವುದು ಅವರಿಗೆ ಸಮ್ಮತವಲ್ಲ. ಅನ್ಯಾಯವೆಂದರೆ ಆಗದು. ನುಡಿದಂತೆ ನಡೆಯದಿದ್ದರೆ ಲಾಂಛನಕ್ಕೆ ತಕ್ಕ ಆಚಾರವಿಲ್ಲದಿದ್ದರೆ ವಂಚಿಸುತ್ತಿದ್ದರೆ ಮಂತ್ರ ತಂತ್ರಕ್ಕಿಳಿದರೆ ಜಾತಿ ವಾದವನ್ನೆಬ್ಬಿಸಿದರೆ ವಿಭೂತಿ ರುದ್ರಾಕ್ಷಿ ಲಿಂಗಗಳನ್ನು ಧರಿಸದಿದ್ದರೆ ಲಿಂಗಾರ್ಚನೆಯನ್ನು ಮಾಡದಿದ್ದರೆ ಮುನಿಯುತ್ತಿದ್ದರು. ಶಿವಮತ ಪ್ರೇಮಿಗಳು; ಶಿವಪಥಗಾಮಿಗಳು, ಸೃಷ್ಟಿಯಲ್ಲಿ ಶ್ರೇಷ್ಠ ವ್ಯಕ್ತಿತ್ವವುಳ್ಳವರು.

"ವಿಶ್ವಾಧಿಕೋ ಋಷೀ ರುದ್ರೋ ಮಹಾನ್" ರುದ್ರದೇವನು ಜನ್ಮರಹಿತನು. ನಿತ್ಯನು. ಜ್ಞಾನಾತ್ಮಕನು. ಸಕಲ ಸಂಪೂಜ್ಯನು. ಸಕಲ ಸೃಷ್ಟಿಕರ್ತನು. ಬ್ರಹ್ಮಾದಿಗಳನ್ನೂ ಹುಟ್ಟಿಸಿದವನೂ ಆತನೆ! ಪರಮ ಪುರುಷ ವಾಚ್ಯನು ಆತನೆ!

"ತ್ರಿಪಾದೂರ್ಧ್ವ ಉದೈತ್ಪುರುಷಃ ಪರಮೋ
ರುದ್ರೋದೇವದೇವೋತ್ತಮೋತ್ತಮ ।
ಪುರುಷೋ ವೈ ರುದ್ರ ಏವ
ಶ್ರುತಿರೇಷಾ ಯತೋ ಮತಾ ॥"

-ಶಿವರಹಸ್ಯ

ಮೂರು ಚರಣವುಳ್ಳ ಮಹಾ ಪುರುಷನು ರುದ್ರದೇವನು. ದೇವ ದೇವೋತ್ತಮನು. ಇದರಿಂದಾಗಿ ಪುರುಷ ಪದ ಆತನಿಗೇ ಸಲ್ಲತಕ್ಕುದು. ಅಲ್ಲದೆ ವ್ಯಷ್ಟಿ ಸಮಷ್ಟಿ ಸೃಷ್ಟಿಯನ್ನೆಲ್ಲ ವ್ಯಾಪಿಸಿರುವನು.

"ಯೋ ರುದ್ರೋಽಗ್ನಾವಪ್ಸು ರುದ್ರೋಯೋರುದ್ರ ಸ್ತ್ವೋಷಧೀಷ್ವಪಿ ।
ಯೋ ವಿಶ್ವಾ ಭುವನಾನ್ಯೇಕೋ ಏವೇಶ ಸ ಪರಾತ್ಪರಃ ॥
ವಿಶ್ವಂ ಭೂತಂಚ ಭವನಂ ಚಿತ್ರಂಚ ಬಹುಧಾಚ ಯತ್ ।
ತಜ್ಜಾತಂ ಜಾಯಮಾನಂಚ ಶ್ರೀ ರುದ್ರಾತ್ಮಕಂ ವಿದುಃ ॥
ಋಚೋ ಯಜೂಂಷಿ ಸಾಮಾನಿ ರುದ್ರಾದೇವ ಹಿ ಜಜ್ಞಿರೇ
ಛಂದಾಂಸಿ ಜಜ್ಞಿರೇ ರುದ್ರಾಜ್ಜಜ್ಞಿರೇ ವಿವಿಧಾಃ ಪ್ರಜಾಃ ॥"

ಅಗ್ಗಿ ಅಗ್ಗವಣಿ ಔಷಧಿಗಳಲ್ಲಿ ರುದ್ರನು ನೆಲಸಿರುವನು. ವಿಶ್ವನ್ನೆಲ್ಲ ವ್ಯಾಪಿಸಿರುವನು. ತ್ರಿಕಾಲಗಳಲ್ಲಿಯೂ ತ್ರಿಭುವನಗಳು ರುದ್ರ ಸ್ವರೂಪವಾಗಿಯೆ ಇರುವವು. ಋಗ್ವೇದ ಯಜುರ್ವೇದ ಸಾಮವೇದಗಳು ರುದ್ರದೇವನಿಂದಲೇ ಹುಟ್ಟಿವೆ. ಎಲ್ಲ ಛಂದಸ್ಸುಗಳು ಎಲ್ಲ ಪ್ರಜರೂ ಆತನಿಂದಲೇ ಹುಟ್ಟಿವೆ. ಈ ನೆಲ ಮುಗಿಲುಗಳನ್ನು ದ್ವಾದಶಾದಿತ್ಯರನ್ನು ಅಷ್ಟ ವಸ್ತುಗಳನ್ನು ಅರವತ್ತು ನಾಲ್ಕು ಕಲೆಗಳನ್ನು, ಇಂದ್ರ ಯಮ ವರುಣ ವಿಷ್ಣು ಬ್ರಹ್ಮರನ್ನು ಹುಟ್ಟಿಸಿದವನು ಶ್ರೀ ರುದ್ರದೇವನು. ರುದ್ರನು ಬರೀ ಭೀಕರನಲ್ಲ, ಉಗ್ರನಲ್ಲ. ಶಾಂತನೂ ಕಾಂತನೂ ಆಗಿದ್ದನು. ಪ್ರಳಯದಲ್ಲಿ ಎಲ್ಲರನ್ನು ಪ್ರಳಾಪಿಸುವನು ಎಂದು ಹೇಳುವುದೇ ರುದ್ರ ಪದದರ್ಥವಲ್ಲ. ದುಃಖವನ್ನು ದೂರ ಮಾಡತಕ್ಕವನು. ಅಜ್ಞಾನಾಂಧಕಾರವನ್ನು ಅಳಿಸತಕ್ಕವನು. ಸುಜ್ಞಾನವನ್ನು ಅನುಗ್ರಹಿಸತಕ್ಕವನು. ಉಪನಿಷದ್ಗಮ್ಯನು, ಉಪಾಸಕರಮ್ಯನು, ಉತ್ತಮ ಪ್ರಕಾಶಕನು. ರುದ್ರನು ಸಂಹಾರಕರ್ತನೂ ಅಹುದು; ಸೃಷ್ಟಿಕರ್ತನೂ ಅಹುದು. ರುದ್ರನು ಸಂಹಾಕರ್ತನಾದರೂ ಯಮನಲ್ಲ. ಸೃಷ್ಟಿಕರ್ತನಾದರೂ ಚತುರ್ಮುಖ ಬ್ರಹ್ಮನಲ್ಲ. ಅವರನ್ನೂ ಹುಟ್ಟಿಸುವಾತನು; ಸಂಹರಿಸುವಾತನು; ಆದರೂ ಶಾಂತನು, ಸನ್ಮಂಗಳನು, ಶುದ್ಧನು.

"ವೀರಭದ್ರೋ ಮಹಾತೇಜಾ ಹಿಮಕುಂದೇಂದು ಸನ್ನಿಭಃ ।
ಭದ್ರಕಾಳೀಪ್ರಿಯೋ ನಿತ್ಯಂ ಮಾತೄಣಾಭಿರಕ್ಷಕಃ ।
ರುದ್ರಸ್ಯ ತನಯೋರೌದ್ರಶ್ಶೂಲಾಸಕ್ತಮಹಾಕರಃ ।
ಸಹಸ್ರಬಾಹು ಸ್ಸರ್ವಜ್ಞ ಸ್ಸರ್ವಾಯುಧ ಧರಸ್ಸ್ವಯಂ ।
ತ್ರೇತಾಗ್ನಿನಾಶಕೋ ದೇವಸ್ತ್ರೈಲೋಕ್ಯಾಭಯದಃ ಪ್ರಭುಃ ।
ತ್ರೈಲೋಕ್ಯನಮಿತಃ ಶ್ರೀಮಾನ್ ಶಿವಪಾದಾರ್ಚನೇ ರತಃ ।
ಗಣೇಶ್ವರೋ ಯಸ್ಸೇನಾನೀಸ್ಸಮೇ ಪಾಪಂ ವ್ಯಪೋಹತು ॥"

–ಲಿಂಗಪುರಾಣ

ವೀರಭದ್ರನು ಮಹಾತೇಜಸ್ವಿ; ಮಂಜಿನಂತೆ ಮಲ್ಲಿಗೆಯಂತೆ ಚಂದಿರನಂತೆ ಪರಿಶುಭ್ರನು. ಭದ್ರಕಾಳೀ ಪ್ರಿಯನು, ನಿತ್ಯ ಮಾತೃಕಾಶಕ್ತಿಯರ ರಕ್ಷಕನು, ರುದ್ರನ ಮಗನು. ರೌದ್ರನಾಯಕನು, ಶೂಲಧರನು, ಸಾಸಿರ ಕೈಯುಳ್ಳವನು, ಸರ್ವಜ್ಞನು, ಸರ್ವಾಯುಧಧರನು, ಯಜ್ಞ–ಯಜ್ಞಾಗ್ನಿ ಧ್ವಂಸಕನು. ದೇವನು, ಮೂಲೋಕಕ್ಕೆ ಅಭಯಪ್ರದನು, ಪ್ರಭುವು, ಮೂಲೋಕವಂದ್ಯನು, ಶ್ರೀಮಂತನು, ಶಿವಾರ್ಚಕನು, ಗಣರಿಗೆ ಗಣ್ಯನು ಸೇನಾನಿಯು.

ಕಾಲ–ಮೂಲ

ರುದ್ರ–ವೀರಭದ್ರರು ತೀರ ಹಳಬರು. ಬಹುಜನಪ್ರಿಯರು, ಅಂತೆಯೆ ಅವರ ಉಪಾಸನ ಪುರಾತನದ್ದು; ಪ್ರಚುರವಾದದ್ದು. ಕನ್ನಡ ನಾಡಿನ ರುದ್ರ–ವೀರಭದ್ರರ ದೇವಾಲಯಗಳನ್ನು ಗುರುತಿಸಿ ಗಮನಿಸಿದರೆ ಅವರ ಉಪಾಸನೆಯ ವ್ಯಾಪ್ತಿ ಎಷ್ಟೆಂಬುದು ಅರ್ಥವಾಗುತ್ತದೆ. ಕನ್ನಡ ನಾಡು ಆದಿಕಾಲದಿಂದಲೂ ಅವರನ್ನೇ ಆರಾಧ್ಯ ದೇವತೆಗಳನ್ನಾಗಿ ಅಂಗೀಕರಿಸಿದೆ. ಅದರಲ್ಲಿಯೂ ವೀರಭದ್ರನನ್ನು ಏಕೈಕ ದೇವನನ್ನಾಗಿ ಏಕನಿಷ್ಠೆಯಿಂದ ಉಪಾಸಿಸಿದೆ.

ಅವರಿಬ್ಬರು ರುದ್ರಗಣಕ್ಕೆ ಸೇರಿದವರು. ರುದ್ರಗಣವು ಪ್ರಮಥ ಗಣಕ್ಕಿಂತ ಮೊದಲಿನದು. ಎರಡನೆಯದೆಂದು ಹೇಳುವ ವಾದ ಸಲ್ಲದು, ಮಲ್ಲಿಕಾರ್ಜುನ ಪಂಡಿತಾರಾಧ್ಯನು ತನ್ನ ಗಣಸಹಸ್ರನಾಮದಲ್ಲಿ ಮೊದಲು ಪ್ರಮಥಗಣರನ್ನು ಉಲ್ಲೇಖಿಸಿರುವುದು ಉಚಿತವಲ್ಲ; ಅಂಗೀಕಾರಾರ್ಹವಲ್ಲ. ಶಿವಶರಣರು ತಮ್ಮ ವಚನಗಳಲ್ಲಿ ರುದ್ರಗಣರನ್ನೇ ಪ್ರಥಮವಾಗಿ ವಚಿಸಿದ್ದಾರೆ. ಲೋಕದಲ್ಲಿ ರುದ್ರಲೋಕ, ಗಣರಲ್ಲಿ ರುದ್ರಗಣ ಪುರಾತನದವು.

"ರುದ್ರಾಣಾಮಪರಃ ಪಕ್ಷಃ ಸಾಧ್ಯಾನಾಂ ಮರುತಾಂ ತಥಾ ।
ವಸೂನಾಂ ಭಾರ್ಗವಂ ವಿದ್ಯಾದ್ವಿಶ್ವದೇವಾಂಸ್ತಥೈವಚ ॥" –ಮಹಾಭಾರತ

ಗಣರ ಗುಂಪು ಆರು, ರುದ್ರಗಣ, ಸಾಧ್ಯಗಣ, ಮರುದ್ಗಣ, ವಸುಗಣ ಭಾರ್ಗವಗಣ, ವಿಶ್ವೇದೇವಗಣ. ಈ ಆರು ಗಣ ಗುಂಪುಗಳಲ್ಲಿ ರುದ್ರಗಣರೇ ಅಪರರು, ಅಂದರೆ ಶ್ರೇಷ್ಠರು–ಪ್ರಥಮದವರು.

"ಮರ್ತ್ಯಲೋಕದ ಮಹಾಮನೆ ಹಾಳಾಗಿ ಹೋಗಬಾರದೆಂದು ಕರ್ತನಟ್ಟಿದನಯ್ಯಾ ಒಬ್ಬ ಶಿವಶರಣನ. ಆ ಶರಣ ಬಂದು ಕಲ್ಯಾಣವೆಂಬ ಶಿವಪುರವ ಕೈಲಾಸವ ಮಾಡಿ, ರುದ್ರಗಣ ಪ್ರಮಥಗಣಂಗಳೆಲ್ಲರ ಹಿಡಿತಂದು ಅಸಂಖ್ಯಾತರೆಂದು ಹೆಸರಿಟ್ಟು ಕರೆದು...."

ನರರು ಸುರರು ಕಿನ್ನರರು ಮೊದಲಾದವರೆಲ್ಲರು ಪಿಂಡವೆಂಬ ಭಾಂಡದಲ್ಲಿ ಅಡಗಿಹರಾಗಿ ನಾನವರ ರೂಪಿಸಬಲ್ಲೆನೆ ಅಯ್ಯಾ?

ಎಂದು ಶಿವಶರಣರಿಗೆಲ್ಲ ಹಿರಿಯನಾದ ಅಲ್ಲಮಾಪ್ರಭುದೇವನೇ ರುದ್ರ ಗಣ ಮೊದಲಿನದೆಂಬುದಕ್ಕೆ ಸತ್ಯ ಸಾಕ್ಷಿಯಾಗಿದ್ದಾನೆ.

ಇನ್ನು ಗಣರು ಎಂಟು ಬಗೆಯೆಂದು ಹೇಳಿ ಅವರಲ್ಲಿ ರುದ್ರಗಣ– ಪ್ರಮಥಗಣರು ಲೌಕಿಕ ವ್ಯಕ್ತಿಗಳಲ್ಲ; ಅವರು ಶಿವಲೋಕದ ಶಿವಗಣಕ್ಕೆ ಸೇರಿದವರು. ಇನ್ನುಳಿದ ವೃಷಭಗಣ, ತ್ರಿಷಷ್ಠಿಪುರಾತನಗಣ, ಶೋಡಶಗಣ, ತೇರಸಗಣ, ದಶಗಣ, ಬಸವಾದಿ ಅಸಂಖ್ಯಾತಗಣ –ಎಂಬ ಆರು ಬಗೆಯ ಗಣಂಗಳು ಚಾರಿತ್ರಿಕ ವ್ಯಕ್ತಿಗಳು. ಈ ಲೋಕದವರು –ಎಂದು ಉಲ್ಲೇಖಿಸುವರು. ಇದೂ ಸಹ ಸರಿಯಾದುದಲ್ಲ. "ಯಕ್ಷಾಮಹೇ ಸೌಮನಸಾಯ ರುದ್ರಂ ನಮೋಭಿರ್ದೇವಂ ಅಸುರಂ ದುವಸ್ಯ" ಎಂದು ಶ್ರುತಿ ನುತಿಸಿದೆ. ಇದರಲ್ಲಿನ 'ಅಸುರ' ಪದ ಗಮನೀಯ, ಸ್ವರ್ಗದ ಸುರನಲ್ಲವೆಂದೇ ಅದಕ್ಕೆ ಅರ್ಥ. ಈ ಲೋಕದಲ್ಲಿದ್ದು ದೇವ ಪದಕ್ಕೆ ಏರಿದಾತನೆಂದು 'ದೇವ' ಪದ ಸೂಚಿಸುತ್ತದೆ.

"ಸಹಸ್ರಾಣಿ ಸಹಸ್ರಶೋ ಯೇ ರುದ್ರಾ ಅಧಿ ಭೂಮ್ಯಾಂ" ಎಂದು ಯಜುರ್ವೇದ ಉಗ್ಗಡಿಸಿ ಈ ಭೂಮಿಯಲ್ಲಿ ರುದ್ರರು ಅವತರಿಸರೆಂದು ಡಂಗುರ ಸಾರಿದೆ. 'ಯೇ ರುದ್ರಲೋಕಾದವತೀರ್ಯ ರುದ್ರಾ ಮಾನುಷ್ಯ ಮಾಶ್ರಿತ್ಯ ಜಗದ್ಧಿತಾರ್ಥಂ। ಚರಂತಿ ನಾನಾವಿಧ ಚಾರುಚೇಷ್ಟಾಸ್ತೇಭ್ಯೋ ನಮಸ್ತ್ರ್ಯಂಬಕಪೂಜಕೇಭ್ಯಃ॥' ರುದ್ರ ಲೋಕದಿಂದ ಈ ಲೋಕಕ್ಕೆ ರುದ್ರರು ಅವತರಿಸಿದರೆಂದು ಪ್ರಸಿದ್ಧವಾಗಿದೆ. ಹೀಗಿರುವಾಗ ಈ ಲೋಕದ ವ್ಯಕ್ತಿಗಳಲ್ಲವೆಂದು ಹೇಳುವುದು ಹೇಗೆ? ಹೇಳಿದರೆ ಒಪ್ಪುವುದಾದರೂ ಹೇಗೆ?

ಅನಾದಿ ರುದ್ರ, ಆದಿರುದ್ರ, ವೀರಭದ್ರ, ರುದ್ರಗಣರು ಹೀಗೆ ಈ ಸಂಪ್ರದಾಯವಿದೆ. ಅನಾದಿರುದ್ರನನ್ನೆ ಮಹಾರುದ್ರನೆಂದು ಆದಿರುದ್ರನನ್ನೆ ಹನ್ನೊಂದು ಜನ ರುದ್ರರಿಗೆ ಪ್ರಮುಖನೆಂದು ವೀರಭದ್ರನನ್ನೆ ಅಸಂಖ್ಯಾತ ರುದ್ರಗಣರಿಗೆ ಸೇನಾನಿಯೆಂದು ಹೇಳುವುದುಂಟು. ಮಹಾರುದ್ರನಿಗೆ ರೌದ್ರಿ, ರುದ್ರನಿಗೆ ಕಾಳಿ, ವೀರಭದ್ರನಿಗೆ ಭದ್ರಕಾಳಿ ಪತ್ನಿಯರಾಗಿರುವರು.

ಮಹಾರುದ್ರನ ಮಗ ರುದ್ರ, ರುದ್ರನ ಮಗ ವೀರಭದ್ರ. ಮಹಾರುದ್ರನ ಚರಿತ್ರೆ ಸಿಕ್ಕುವುದಿಲ್ಲ. ರುದ್ರನನ್ನು ಕುರಿತು ಋಗ್ವೇದದಲ್ಲಿ ಋಕ್ಕುಗಳು ಅಥವಾ ಸೂಕ್ತಗಳಿವೆಯಾದರೂ ಹೆಚ್ಚಿಗಿಲ್ಲ. ರುದ್ರನ ಹೆಸರು ಮಾತ್ರ ಹೆಚ್ಚು ಸಲ ಬರುತ್ತದೆ.

ರುದ್ರನು ದೃಢಾಂಗನು. ಸುಂದರನು, ಕಂದು ಬಣ್ಣದವನು, ಕಣ್ಣು ಕೋರೈಸುವ ಕಳೆಯುಳ್ಳವನು. ಸೂರ್ಯನಂತೆ ಸುವರ್ಣದಂತೆ ಶೋಭಿಸುವವನು. ಸುವರ್ಣಾಭರಣವುಳ್ಳವನು. ಕಂಠಹಾರವನ್ನು ಧರಿಸಿದವನು. ಹೆಣೆದ ಕೂದಲುಳ್ಳವನು. ರಥಾರೂಢನು. ನೀಲಲೋಹಿತನು. ಆತನ ಹೊಟ್ಟೆ ಕಪ್ಪು, ಬೆನ್ನು ಕೆಂಪು, ಕೊರಳು ನೀಲಿ, ಮುಖ ತಾಮ್ರ ವರ್ಣವೆಂದು ವರ್ಣಿಸುವರು. ರುದ್ರನು ದಿಗಂಬರನು; ಶಿವನು ಚರ್ಮಾಂಬರನು. ರುದ್ರ ಬೇರೆ, ಶಿವ ಬೇರೆ. ರುದ್ರನು ಅದ್ರಿವಾಸಿ, ಧನುರ್ಧಾರಿ; ಬಲಿಷ್ಠನು, ಬಾಣಗಳನ್ನು ವೇಗವಾಗಿ ವ್ಯಾಪಕವಾಗಿ ಬಿಡಬಲ್ಲನು. ವಜ್ರಾಯುಧವುಳ್ಳವನು.

ರುದ್ರಗಣ-ಮರಂದ್ಗಣರಿಗೆ ರುದ್ರನೇ ತಂದೆ, ಅಷ್ಟವಸುಗಳಿಗೆ ಇಂದ್ರನು ಹೇಗೋ ರುದ್ರಗಣರಿಗೆ ರುದ್ರನು ಹಾಗೆ ಒಡೆಯನು. ತ್ರ್ಯಂಬಕನು. ತೇಜೋ ರೂಪನು, ಪಶುಪತಿ, ಗಾಥಪತಿ, ಮೇಧಪತಿ, ಮಹಾದೇವ, ಅಪ್ರತಿಹತ, ಆತನನ್ನು ಪರಾಕ್ರಮದಲ್ಲಿ ಮೀರಿದವರಿಲ್ಲ. ವೇಗಶಾಲಿ; ಅತ್ಯಂತ ಚುರುಕು. ಆತನಿಗೆ ಮುಪ್ಪಿಲ್ಲ. ಆತನು ಆತ್ಮ ವಿಖ್ಯಾತ; ವೀರರನ್ನು ಧೀರರನ್ನು ಆಳುವಾತ. ನಿತ್ಯ ನಿಯಮ ವಿಧಾತ, ಜಗಜ್ಜನಕ, ಜಗನ್ನಾಯಕ. ಸರ್ವಕರ್ತ, ಸರ್ವಜ್ಞ, ಅತ್ಯಂತ ಉದಾರಿ, ಅನುಪಮ ದಾನಿ; ಸರ್ವಸ್ತುತ್ಯ; ಕೃತಕೃತ್ಯ. ಮಂಗಳಕರ; ಮಹಾ ಮಂದಾರ, ಅಭಯ ಪ್ರದ. ಶುಭಪ್ರದ. ಔಷಧಜ್ಞ, ಸಿದ್ಧಹಸ್ತ. ಚಿಕಿತ್ಸಾವಿಧಾನವಿಚಕ್ಷಣ. ಆಯುರಾರೋಗ್ಯಪ್ರದ.

ಈ ರುದ್ರನು ವೀರಭದ್ರನಿಗೆ ಮೂಲ ಪುರುಷನು. ಜನಕನೂ ಅಹುದು. ರುದ್ರನೇ ಶಿವನೆಂದು ಭಾವಿಸುವರು ಶಿವನ ಕಿಡಿಗಣ್ಣಿನಿಂದ ವೀರಭದ್ರನು ಜನಿಸಿದನೆಂದು ಹೇಳುವರು, ಇದು ಸರಿಯಲ್ಲ. ಶಿವನು ಶಾಂತಿ ಪ್ರಿಯನು, ಶಾಂತಿ ಕಲಾತ್ಮಕನು. ಶಿವನಿಗೆ ಕೋಪವೆಂಬುದೇ ಇಲ್ಲ. ಕಾಳೆಗವನ್ನಂತೂ ಶಿವನು ತನ್ನ ಜನ್ಮದಲ್ಲಿ ಮಾಡಿದವನೇ ಅಲ್ಲ. ತ್ರಿಪುರರನ್ನು ಸಂಹರಿಸಿದವನು ಬ್ರಹ್ಮನ ಶಿರವನ್ನು ಚಿವುಟಿದವನು ರುದ್ರನು. ರುದ್ರನು ಅಗ್ನಿ ತತ್ತ್ವದವನು. ಶಿವನು ಜಲ-ನೆಲಗಳ ತತ್ತ್ವದವನು. ರುದ್ರನು ಸಂಹಾರಕರ್ತ. ತ್ರಿಪುರರಂತೆ ಕಾಮ, ಕಾಲ, ಜಲಂಧರರನ್ನು ಸಂಹರಿಸಿದವನು ರುದ್ರದೇವನು. ಇಪ್ಪತ್ತೈದು ಲೀಲೆಗಳಲ್ಲಿ ಮೊದಲಿನ ಹನ್ನೊಂದು ರುದ್ರ ದೇವನ ಲೀಲೆಗಳು. ಹನ್ನೆರಡು ಹದಿಮೂರು ಈ ಎರಡು ಲೀಲೆ (ವೀರಭದ್ರ ಲೀಲೆ-ಶರಭಲೀಲೆ)ಗಳು ವೀರಭದ್ರನವು. ಮುಂದಿನ ಅರ್ಧನಾರೀಶ್ವರಾದಿ ಹನ್ನೆರಡು ಲೀಲೆಗಳು ಶಿವನವು. ಇದರಿಂದಾಗಿ ರುದ್ರನ ಮತ್ತೊಂದು ಅವತಾರ ಶಿವನಲ್ಲದೆ ರುದ್ರನೇ ಶಿವನಲ್ಲ. ರುದ್ರನ ಔರಸಪುತ್ರ ವೀರಭದ್ರ. ವೀರಭದ್ರನು-ಶಿವನು ಸಮಕಾಲೀನರು. ಯಜುರ್ವೇದ ಕಾಲೀನರು. ರುದ್ರನು ಋಗ್ವೇದ ಕಾಲೀನನು.

ಋಗ್ವೇದ ಸ್ತವನ ಪರವಾಗಿದೆ. ಯಜುರ್ವೇದ ಯಜನ ಪರವಾಗಿದೆ. "ಋಚಂತಿ ಸ್ತುವಂತಿ ವರ್ಣಯಂತಿ ವಾಸತ್ತತ್ತ್ವಮಿತಿ ರುಚಃ-ಸ ಏವ ಋಗ್ವೇದಃ" ವರ್ಣಿಸಿದ ತತ್ತ್ವವನ್ನು ಸಾಕ್ಷಾತ್ಕರಿಸಿಕೊಳ್ಳಲು ಪ್ರೇರಣೆಯಾಗಿ ಕೈಕೊಂಡ ಯಜನ ಮಾರ್ಗವನ್ನು ದರ್ಶಿಸುವುದೇ ಯಜುರ್ವೇದ. ಜ್ಞಾನಪರ ಋಗ್ವೇದ; ಕರ್ಮಪರ ಯಜುರ್ವೇದ.

ಯಜುರ್ವೇದ ಕಾಲದಲ್ಲಿ ಅಧ್ವರಕರ್ಮಗಳು ಹೆಚ್ಚಿದವು. ನೂರಾರು ಯಜ್ಞಭೇದಗಳು ಹುಟ್ಟಿದವು. ಆರಾಧನೆಯ ಮಾರ್ಗ ಅಪಾಮಾರ್ಗಕ್ಕೆ ತಿರುಗಿತು. ಜಡಕರ್ಮಗಳು ಜೋರಾದವು. ಆರಾಧನೆ ವಿರೋಧದತ್ತ ತಿರುಗಿತು. ಪಶುಮೇಧ ನರಮೇಧಗಳು ಮೊದಲಾದವು. ಆರೋಗಿಸುವ ಆಹಾರ ಅಗ್ನಿಗೆ ಆಹುತಿಯಾಗಹತ್ತಿತು. ಋಗ್ವೇದ ಕಾಲದ ಸಾತ್ವಿಕಾರಾಧನೆ ರಾಜಸತಾಮಸಾರಾಧನೆಯ ಹಂತಕ್ಕಿಳಿಯಿತು. ಇದನ್ನು ಸಹಿಸದ ಶಿವನು ತನ್ನ ಸೇನಾನಿಯಾದ ವೀರಭದ್ರನಿಗೆ ಯಜ್ಞಧ್ವಂಸ ಕ್ರಾಂತಿಗೆ ಪ್ರಚೋದಿಸದೆ ವಿಧಿಯಿಲ್ಲದಾಯಿತು.

ಹೀಗೆ ಶಿವನಿಗೆ ಸಹಾಯಕನಾದ ವೀರಭದ್ರನು ರುದ್ರದೇವನಿಂದ ಕಾಳಿದೇವಿಯಲ್ಲಿ ಜನಿಸಿದವನು. ಕಾಳಿಯ ಮಗಳ ಮಗಳಾದ ಅಂದರೆ ಮೊಮ್ಮಗಳಾದ ಭದ್ರಕಾಳಿಯನ್ನು ಮದುವೆ ಮಾಡಿಕೊಂಡವನು.

"ಅಖರ್ವಗರ್ವೋದ್ಧತ ದಕ್ಷ ಶಿಕ್ಷಾ
ಕರೋಗ್ರರುದ್ರೋದ್ಭವ ವೀರಭದ್ರಃ"

ಎಂಬುದಾಗಿ ಶಿವರಹಸ್ಯದಲ್ಲಿ ಉಕ್ತವಾಗಿದೆ. ಅಲ್ಲದೆ ಅದೇ ಕೃತಿಯಲ್ಲಿ "ಅಯಂ ರುದ್ರಗಣಶ್ರೇಷ್ಠೋ ವೀರಭದ್ರೋಽರಿ ಮರ್ದನಃ । ರುದ್ರ ಕ್ರೋಧಾಗ್ನಿ ಸಂಭೂತಃ" ಎಂದು ನಿರೂಪಿತವಾಗಿದೆ.

"ವೀರಭದ್ರೋ ಮಹಾ ಶೂರೋ ರೌದ್ರೋ ರುದ್ರಾವತಾರಕಃ ।
ಶ್ಯಾಮಾಂಗಶ್ಚೋಗ್ರದಂಷ್ಟ್ರಸ್ಸ್ಯಾತ್ ಭೀಮನೇತ್ರೋ ಜಿತೇಂದ್ರಿಯಃ ।
ಭದ್ರಕಾಳೀ ಪತಿರ್ಭದ್ರೋ ಭದ್ರಾಕ್ಷಾ ಭರಣಾನ್ವಿತಃ ।
ಭಕ್ತೈಕರಕ್ಷೋ ಬಲವಾನ್ ಭಸ್ಮೋದ್ಧೂಳಿತ ವಿಗ್ರಹಃ ।
ಯಜ್ಞ ಪೂರುಷಶೀರ್ಷಘ್ನೋ ಯಜ್ಞಾರಣ್ಯದವಾನಲಃ ।
ಸರ್ವಸಿದ್ಧಿ ಕರೋದಾಂತೋ ಸಕಲಾಗಮ ಶೋಭಿತಃ ।
ಭುಕ್ತಿ ಮುಕ್ತಿ ಪ್ರದೋ ದೇವ ಸರ್ವವ್ಯಾಧಿ ನಿವಾರಕಃ ।
ಅಕಾಲಮೃತ್ಯು ಸಂಹರ್ತಾ ಕಾಲಮೃತ್ಯು ಭಯಂಕರಃ ।" -ವಾಯುಪುರಾಣ

"ರುದ್ರಸ್ಯ ತನಯೋ ರೌದ್ರಶ್ಶೂಲಾಸಕ್ತ ಮಹಾಕರಃ
ಗಣೇಶ್ವರೋ ಯಸ್ಸೇನಾನೀಸ್ಸಮೇಪಾಪಂ ವ್ಯಪೋಹತು ।" –ಲಿಂಗಪುರಾಣ

ಇವೇ ಮೊದಲಾದ ಸೂಕ್ತಿಗಳಿಂದ ಸೂಕ್ತಿಗಳಿಂದ ವೀರಭದ್ರನ ಮೂಲ ಮನದಟ್ಟಾಗುತ್ತದೆ. ಮಹಾ ವ್ಯಕ್ತಿತ್ವ ವ್ಯಕ್ತವಾಗುತ್ತದೆ.

ವೀರಭದ್ರ ರುದ್ರತನಯ. ವೀರಭದ್ರನ ಮೂಲ ಹೆಸರು ರೌದ್ರ, ಉಪನಾಮ ವೀರಭದ್ರ. ತಂದೆಯಾದ ರುದ್ರದೇವನ ವೀರಗುಣವೂ ತನ್ನ ಗುರುವಾದ ಶಿವನ ಭದ್ರಗುಣವೂ ಇರುವುದರಿಂದ 'ವೀರಭದ್ರ' ಎಂದು ಹೆಸರಾಯಿತು. ಒಬ್ಬ ಲೌಕಿಕ ತಂದೆ; ಇನ್ನೊಬ್ಬ ಪರಮಾರ್ಥ ತಂದೆ. ರುದ್ರ-ಶಿವ ಇಬ್ಬರನ್ನೂ ಪ್ರತಿನಿಧಿಸುವ ಸಮನ್ವಯ ನಾಮ ವೀರಭದ್ರ; ಸಮನ್ವಯ ವ್ಯಕ್ತಿ ವೀರಭದ್ರ.

ವೀರಭದ್ರನು ಶಿವನ ಕರಕಂಜಾತನಲ್ಲದೆ ಉದರ ಸಂಜಾತನಲ್ಲ. ಪಾರ್ವತಿಯ ಮಗನಲ್ಲ. ಪಾರ್ವತಿಯ ಪರಿಣಯಕ್ಕೆ ಮೊದಲೆ ವೀರಭದ್ರನಿದ್ದನು. ಇನ್ನು ದಾಕ್ಷಾಯಣಿಯ ಮಗನೂ ಅಲ್ಲ. ದಾಕ್ಷಾಯಣಿಯ ಮಗನಾಗಿದ್ದರೆ ಶಿವನ ಹಣೆಗಣ್ಣಿನಲ್ಲಿ ಹುಟ್ಟಿದನೆಂದು ಹೇಳುತ್ತಿರಲಿಲ್ಲ. ಅಲ್ಲದೆ ದಾಕ್ಷಾಯಣಿಗೆ ಮಕ್ಕಳೇ ಆಗಿರಲಿಲ್ಲ; ಆಗುವಷ್ಟು ಕಾಲ ಅವಳು ಬದುಕಿರುವ ಯೋಗವಿರಲಿಲ್ಲ. ಇನ್ನು ಹಣೆಗಣ್ಣಿನಲ್ಲಿ ಹುಟ್ಟಿದನೆಂಬ ಮಾತು ಒಪ್ಪತಕ್ಕುದಲ್ಲ. 'ಕರ್ಣದಲ್ಲಿ ಜನಿಸಿದವರುಂಟೆ?' ಎಂಬ ಶರಣವಾಣಿಯಂತೆ ಫಾಲಜನನಕ್ಕೂ ಅದೇ ಪ್ರಶ್ನೆ ಇಲ್ಲದಿಲ್ಲ. ಗುರುವಿನಲ್ಲಿ ಸಂಸ್ಕಾರ ಪಡೆದವರಿಗೆ 'ಕರಕಂಜಾತ' ಎಂದು ಹೇಳುವಂತೆ 'ನೇತ್ರಸಂಜಾತ' ಎಂದು ಹೇಳುವ ರೂಢಿ ಆಗ ಇದ್ದಿರಬೇಕು. ಅದರಲ್ಲಿ ವೀರಭದ್ರನು ವೀರನೂ ಉಗ್ರನೂ ತೇಜಸ್ವಿಯೂ ಇರುವುದರಿಂದ ಅಗ್ನಿನೇತ್ರ ಸಂಭೂತನೆಂದು ರೂಪಕವಾಗಿ ಶ್ಲೇಷೋಕ್ತಿಯಲ್ಲಿ ಹೇಳಿರಬೇಕು. ಇವೆಲ್ಲ ಕಾರಣಗಳಿಂದ ವೀರಭದ್ರನು ರುದ್ರ ಜನ್ಯನೇ ಹೊರತು ಶಿವಜನ್ಯನಲ್ಲ; ಶಿವಪುತ್ರನಲ್ಲ.

ರುದ್ರ-ಶಿವರಿಬ್ಬರು ತಾತ್ತ್ವಿಕವಾಗಿ ಒಬ್ಬರಲ್ಲದೆ ವ್ಯಕ್ತಿತ್ವದಲ್ಲಿ ಒಬ್ಬರಲ್ಲ; ಇಬ್ಬರು. ರುದ್ರನು ಕೆಂಪು. ಶಿವನು ಶುಭ್ರನು. ರುದ್ರನು ದಿಗಂಬರನು ಶಿವನು ಚರ್ಮಾಂಬರನು. ರುದ್ರನು ಅಗ್ನಿತತ್ತದವನು; ಉಗ್ರನು. ಶಿವನು ಜಲತತ್ತ್ವದವನು; ಶಾಂತನು. ರುದ್ರನು ಋಗ್ವೇದಸ್ತುತ್ಯ. ಶಿವನು ಯಜುರ್ವೇದಾರಾಧ್ಯ. ರುದ್ರನು ಕಾಳೀಪತಿ, ಶಿವನು ಪಾರ್ವತೀ ಪತಿ. ರುದ್ರನು ರುದ್ರಗಣಾಧ್ಯಕ್ಷನು. ಶಿವನು ಶಿವಗಣ ಅಥವಾ ಪ್ರಮಥ ಗಣರಿಗೆ ಅಧ್ಯಕ್ಷನು. ಇವರಿಬ್ಬರ ಪ್ರತಿನಿಧಿ ವೀರಭದ್ರನು.

"ಸ ವೀರೋ ದಕ್ಷಸಾದನೋ ವಿಯತ್ಸಂಭರೋಧಸಿ ।
ದಕ್ಷಸಾದನಸ್ಸ ವೀರೋ ರಕ್ಷತ್ ।" –ಯಜುರ್ವೇದ

ಎಂದಿದೆ ಯಜುರ್ವೇದ ಶ್ರುತಿ. ಇದರಿಂದ ವೀರಭದ್ರನ ಕಾಲ ಯಜುರ್ವೇದ ಕಾಲವೆಂದು ಹೇಳಬಹುದಾಗಿದೆ.

"ಮಹಾಬಲೈರ್ನೃಸಿಂಹಂ ಸಂಜಘನವೀರಃ"

ಎಂದು ಪಿಪ್ಪಲಾದೋಪನಿಷತ್ತು ಶರಭಾವತಾರದ ವೀರನನ್ನು ವರ್ಣಿಸಿದೆ. ಅಲ್ಲದೆ "ಅಪಾವೃಣೋ ಶರಭಾಯ ಋಷಿಬಂಧನೇ" ಎಂದು ಋಗ್ವೇದ ಸ್ತುತಿಸಿದೆ.

ವೀರಭದ್ರನು ಮನುಯುಗದವನು ನವಮ ಮನ್ವಂತರದವನು ಎಂದು ತಿಳಿಯುತ್ತದೆ. ಮನುವಿನ ಮಗಳು ಪ್ರಸೂತಿ. ಪ್ರಸೂತಿಯ ಮಗಳೇ ಸತೀದೇವಿ. ಈ ಸತೀದೇವಿಯೇ ಶಿವನ ಪ್ರಥಮ ಸತಿ, ಇವಳೇ ದಾಕ್ಷಾಯಣಿ. ದಕ್ಷಯಜ್ಞಾಗ್ನಿಗೆ ಆಹುತಿಯಾದವಳು. ಇದರಿಂದ ವೀರಭದ್ರನ ಕಾಲ ಮನು ಯುಗವೆಂಬುದು ಸ್ಪಷ್ಟವಾಗುತ್ತದೆ.

ವೀರಭದ್ರನ ಹೆಸರಿನ ಪ್ರಭಾವ ರಾಮಾಯಣ ಕಾಲದ ಪ್ರಧಾನ ವ್ಯಕ್ತಿಗಳ ಮೇಲೆ ಉಂಟಾಗಿದೆಯೆಂಬುದಕ್ಕೆ ರಾಮಭದ್ರ, ಬಲಭದ್ರ ಮೊದಲಾದ ಹೆಸರುಗಳು ಸತ್ಯಸಾಕ್ಷಿಯಾಗಿವೆ.

ರುದ್ರತನಯನಾದ ವೀರಭದ್ರನು ರುದ್ರನಿಗೆ ಸಮನಾದ ಯಶಸ್ಸನ್ನು ಗಳಿಸುವನು. ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಉಜ್ಜಯನಿಯ ಮಹಾಕಾಲ ಲಿಂಗವು ರುದ್ರದೇವನ ಪ್ರತೀಕವಾದರೆ, ಶ್ರೀಶೈಲದ ಮಲ್ಲಯ್ಯನು ವೀರಭದ್ರನ ಪ್ರತೀಕವಾಗಿದೆ. ಕೆಂಪಯ್ಯ ಕೆಂಪಣ್ಣ ಇವು ರುದ್ರ ಪದದ ಕನ್ನಡ ಹೆಸರುಗಳು. ರುದ್ರೋಪಾಸಕರು ಈ ಹೆಸರುಗಳನ್ನಿಡುತ್ತಾರೆ. ಅಂತೆಯೇ ವೀರಭದ್ರನಿಗೆ ಕನ್ನಡದಲ್ಲಿ ಮಲ್ಲ, ರಾಚ ಎಂದು ಹೇಳುತ್ತಾರೆ. ಮಲ್ಲಯ್ಯ, ರಾಚಯ್ಯ ಎಂದು ವೀರಭದ್ರೋಪಾಸಕರು ತಮ್ಮ ಮಕ್ಕಳಿಗೆ ಹೆಸರುಗಳನ್ನಿಡುತ್ತಾರೆ. "ಮಲ್ಲ" ಎಂದರೆ ವೀರನೆಂದರ್ಥ. "ರಾಚ" ಎಂದರೆ ಭದ್ರ ಎಂದರ್ಥ. ವೀರಭದ್ರನನ್ನು ಕೇವಲ ವೀರನೆಂದೂ ಭದ್ರನೆಂದೂ ಬಿಡಿಬಿಡಿಯಾಗಿ ಕರೆಯುವುದುಂಟು.

"ರುದ್ರನೆಂಬಾತನೊಬ್ಬ ಗಣೇಶ್ವರನು;
ಭದ್ರನೆಂಬಾತನೊಬ್ಬ ಗಣೇಶ್ವರನು;
ಶಂಕರನೆಂಬಾತನೊಬ್ಬ ಗಣೇಶ್ವರನು;
ಶಶಿಧರನೆಂಬಾತನೊಬ್ಬ ಗಣೇಶ್ವರನು.
ಪೃಥ್ವಿಯೇ ಪೀಠ, ಆಕಾಶವೇ ಲಿಂಗ ಅಂತಹನೊಬ್ಬ ಗಣೇಶ್ವರನು.
ಬಲ್ಲಾಳನ ವಧುವ ಬೇಡಿದಾತನೊಬ್ಬ ಗಣೇಶ್ವರನು.

ಸಿರಿಯಾಳನ ಮಗನ ಭಿಕ್ಷವ ಬೇಡಿದಾತನೊಬ್ಬ ಗಣೇಶ್ವರನು.
ಬ್ರಹ್ಮಕಪಾಲ, ವಿಷ್ಣು ಕಂಕಾಳವನ್ನಿಕ್ಕಿ ಆಡುವಲ್ಲಿ
ನೀಲಕಂಠನೆಂಬಾತನೊಬ್ಬ ಗಣೇಶ್ವರನು.
ಇವರೆಲ್ಲರೂ ನಮ್ಮ ಗೊಗ್ಗೇಶ್ವರನ ಲಿಂಗದಲ್ಲಿ ಅಡಗಿಪ್ಪರು."

–ಪ್ರಭುದೇವರ ವಚನ

ರುದ್ರ ದೇವನ ಆದಿತ್ವ ಇಲ್ಲಿ ಅಭಿವ್ಯಕ್ತವಾಗಿದೆ. ರುದ್ರನ ಬಳಿಕ ಅಂಕಿತನಾಗಿದ್ದಾನೆ ಭದ್ರ. ಇದು ವೀರಭದ್ರನನ್ನೇ ಸೂಚಿಸುತ್ತದೆ. ರುದ್ರನ ಅಪರಾವತಾರಿ ವೀರಭದ್ರ. ಆ ಬಳಿಕ ಶಂಕರ, ಶಶಿಧರಾದಿಗಳು ಬರುತ್ತಾರೆ. ಈ ವಚನದಲ್ಲಿ ಉಕ್ತವಾದ ಕ್ರಮ ಗಮನಾರ್ಹವಾಗಿದೆ. ರುದ್ರ–ಶಂಕರರು ಭಿನ್ನರೆಂಬುದು ಸ್ಫುಟವಾಗುತ್ತದೆ, ಅಂತೆಯೇ ರುದ್ರನ ಬಳಿವಿಡಿದು ಬಂದಿರುವವನು ವೀರಭದ್ರನೆಂಬುದೂ ವೆಗ್ಗಳವಾಗುತ್ತದೆ.

"ನೆಲ್ಲು ಗದ್ದೆಗೆ ನೀರು ಚೆಲ್ಲಿದಂಗಿರಬೇಕು;
ಮಲ್ಲಯ್ಯನ ಮಗ ಕಲಿವೀರ ಈರಭದ್ರ । ಸೋ
ಚಲ್ಲಯ್ಯ ಮನಕೆ ಮತಿಗಳ । ಸೋ ।"

ಶ್ರೀ ಕ.ರಾ.ಕೃ. ಸಂಪಾದಿತ "ಕಾಳಿಂಗರಾಯ" ಎಂಬ ಜಾನಪದ ಕಥನಗೀತ ಗ್ರಂಥದಲ್ಲಿ ಹೀಗೆ ಉಕ್ತವಾಗಿದೆ. ಇದರಲ್ಲಿ ವೀರಭದ್ರನು ಮಲ್ಲಯ್ಯನ ಮಗ ಎಂದು ನಿರೂಪಿತವಾಗಿದೆ. ಇದು ಸರಿಯಲ್ಲ. ಮಲ್ಲಯ್ಯನೇ ವೀರಭದ್ರನೆಂದಿರಬೇಕಾಗಿತ್ತು. ಹೇಗಾದರಿರಲಿ; ಮಲ್ಲಯ್ಯನಿಗೂ ವೀರಭದ್ರನಿಗೂ ಸಂಬಂಧವಿರುವುದು ಮಾತ್ರ ಇದರಿಂದ ಸುಸ್ಪಷ್ಟವಾಗುತ್ತದೆ.

ಶ್ರೀಶೈಲ ಮಲ್ಲಯ್ಯನು ಮಾತ್ರವಲ್ಲ, ತಿರುಪತಿಯ ತಿಮ್ಮಪ್ಪನೂ ವೀರಭದ್ರನೇ! ಮೊದಲು ವೀರಭದ್ರ ವಿಗ್ರಹವಿದ್ದು ಕಾಲಾಂತರದಲ್ಲಿ ವೆಂಕಟೇಶ್ವರನನ್ನಾಗಿ ಮಾರ್ಪಡಿಸಿದ್ದಾರೆಂಬುದು ಶ್ರೀಕರಭಾಷ್ಯದಿಂದಲೂ ಸಾರ್ವಜನಿಕರ ಹೇಳಿಕೆಯಿಂದಲೂ ತಿಳಿದುಬರುತ್ತದೆ. ಮತ್ತು ಗದಗಿನ ವೀರ ನಾರಾಯಣನೂ ಸಹ ವೀರಭದ್ರ ವಿಗ್ರಹದಿಂದ ಮಾರ್ಪಟ್ಟ ಮೂರ್ತಿಯೆಂಬುದನ್ನು ಓದುಗರು ನೆನೆಯಬೇಕು. ಇದರಿಂದ ವೀರಭದ್ರನ ವ್ಯಾಪ್ತಿ ಜನಪ್ರಿಯತೆ ಜನ ಜನಿತವಾಗುತ್ತದೆ ಮತ್ತು ಪುರಾತನತೆ ವ್ಯಕ್ತವಾಗುತ್ತದೆ.

"ಯೋ ದೇವಾನಾಂ ಪ್ರಥಮಂ ಪುರಸ್ತಾತ್
ವಿಶ್ವಾಧಿಕೋ ರುದ್ರೋ ಮಹರ್ಷಿಃ ।"

–ತೈತ್ತಿರೀಯ ಮತ್ತು ಮಹೋಪನಿಷತ್ತುಗಳು

ಮೂವತ್ತು ಮೂರು ಕೋಟಿ ದೇವತೆಗಳಿಗಿಂತ ಮೊದಲಿನವನು ರುದ್ರ ದೇವನು. ವಿಶ್ವಕ್ಕೆಲ್ಲ ಅಧಿಕನು; ಋಷಿಗಳಿಗೆಲ್ಲ ಹಿರಿಯನು. ಋಗ್ವೇದದ ಇಂದ್ರನಿಗಿಂತಲೂ ಹಿಂದಿನವನು ರುದ್ರನು. ದ್ವಾದಶಾದಿತ್ಯರಿಗಿಂತ ಪೂರ್ವದವರು ಏಕಾದಶ ರುದ್ರರು. ಆ ಏಕಾದಶರುದ್ರರಿಗಿಂತ ಪೂರ್ವದವನು ರುದ್ರನು.

"ಅಭಿನೋ ವೀರೋ ಅರ್ವತಿ ಕ್ಷಮೇತ
ಪ್ರಜಾಯೇ ಮಹಿ ರುದ್ರ ಪ್ರಜಾಭಿಃ ।"

ಈ ವೇದ ಮಂತ್ರದಲ್ಲಿ ವೀರ–ರುದ್ರ ಪದಗಳನ್ನು ಕಾಣುತ್ತೇವೆ. ಮತ್ತು ಈ ಪ್ರಪಂಚದ ಈ ಪ್ರಜೆರೊಡನೆ ಇರುವ ಸಂಬಂಧವನ್ನೂ ಕಾಣುತ್ತೇವೆ.

"ಶ್ರೇಷ್ಠೋ ಜಾತಸ್ಯ ರುದ್ರ ಶ್ರಿಯಾ
ಸಿತವಸ್ತಮಸ್ತವಸಾಂ ವಜ್ರಬಾಹೋ ।"

"ನೇತ್ರ ತ್ರಯಾಯ ರುದ್ರಾಯ ನಮೋ ಲೋಕಹಿತಾರ್ಥಿನೇ ।"

ಇವುಗಳಿಂದ ರುದ್ರ ದೇವನ ಶ್ರೇಷ್ಠತೆ, ಶೂರತೆ, ಲೋಕ ಹಿತಾರ್ಥತೆಗಳು ಅಭಿವ್ಯಕ್ತವಾಗುತ್ತವೆ.

"ಯೋ ಬ್ರಹ್ಮಾಣಂ ವಿಧದಾತಿ ಪೂರ್ವಂ
ಯೋವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ ।
ತಂ ಹ ರುದ್ರಮಾತ್ಮ ಬುದ್ಧಿ ಪ್ರಕಾಶಂ
ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ ॥"

ಎಂದು ಅಥರ್ವಶ್ರುತಿಯು ರುದ್ರದೇವನು ವೇದಗಳಿಗಿಂತ ವೈದಿಕನಾದ ಬ್ರಹ್ಮನಿಗಿಂತ ಪೂರ್ವದವನೆಂದು ಪ್ರತಿಪಾದಿಸಿದೆ; ಪ್ರಾಥಿ

"ದಕ್ಷಿಣ ದೇಶದಲ್ಲಿ ಆರ್ಯರ ಆಗಮನಕ್ಕೆ ಮುಂಚಿನಿಂದ ಒಂದು ಬಗೆಯ ಪ್ರಾಚೀನ ಶೈವ ಧರ್ಮ ಪ್ರಚಲಿತವಾಗಿದ್ದಿತೆಂಬುದು ನಿರ್ವಿವಾದ. ವೇದಗಳ ಮರುದ್ಗಣ ಪತಿಯಾದ ರುದ್ರ ಈ ದ್ರಾವಿಡ ದೇವತೆಯೊಂದಿಗೆ ಸಮ್ಮಿಳಿತನಾದುದು ಕಾಲಕ್ರಮದಲ್ಲಿ...." ***ಪ್ರೊ. ಎಸ್.ಕೆ. ರಾಮಚಂದ್ರರಾವ್, ಪ್ರಜಾವಾಣಿ, ೦೬.೧೨.೬೩***

ಸ್ವರ್ಗೀಯ ಸುರರು ಮಹಾಭಾರತವು ಹೇಳುವಂತೆ ಸ್ವರ್ಗದಿಂದ ಭೂಲೋಕಕ್ಕೆ ಬಂದು ಲೋಕ ಕಲ್ಯಾಣಕ್ಕಾಗಿ ಬ್ರಹ್ಮರ್ಷಿಗಳ ರಾಜರ್ಷಿಗಳ ವಂಶದಲ್ಲಿ ಉದಯಿಸುವರು. ಅದರಂತೆ ರುದ್ರಗಣರು ಸಹ ಜಗದ ಉದ್ಧಾರಕ್ಕಾಗಿ ಶಿವಾಚಾರ್ಯರ ಶಿವಶರಣರ ವಂಶಗಳಲ್ಲಿ ಉದಯಿಸುವರು.

ಈ ಲೋಕಕ್ಕೆ ಬಂದ ದೇವತೆಗಳೆಂಬವರಲ್ಲಿ ಯಜ್ಞ ಯಾಗಗಳನ್ನು ಮಾಡುವುದು ರಾಜರ್ಷಿ ಪುತ್ರರ ಕರ್ತವ್ಯವಾದರೆ ದಾನವರನ್ನು ರಾಕ್ಷಸರನ್ನು ಗಂಧರ್ವರನ್ನು ನಾಗರನ್ನು ಕೊಲ್ಲುವ ಕೆಲಸ ರಾಜರ್ಷಿಗಳದಾಯಿತು. ಇವರ ಈ ಕೃತ್ಯಗಳನ್ನು ನಿಲ್ಲಿಸುವುದು ಭೂಲೋಕಕ್ಕೆ ಬಂದ ವೀರಭದ್ರಾದಿ ರುದ್ರಗಣರ ಮಣಿಹವಾಯಿತು.

ಸುರರೆಂಬ ದರ್ಪ. ಶ್ರೇಷ್ಠರೆಂಬ ಗರ್ವ. ನಮಗೆಲ್ಲರೂ ಬಾಗುವವರೆ ಎಂಬ ಬಿಮ್ಮು. ನಮಗಾರು ಸರಿಸಾಟಿಯೆಂಬ ಹಮ್ಮು. ಇದರಿಂದಾಗಿ ಉನ್ಮತ್ತರಾಗಿದ್ದರು. ವಿರೋಧ ಸಾಧನೆಗೆ ಯಜ್ಞಯಾಗಗಳನ್ನು ಆರಂಭಿಸುತ್ತಿದ್ದರು. ಕೊಂದು ತಿಂದು ಕುಡಿದು ಸುರರೆ ಅಸುರರಾಗಿ ವರ್ತಿಸುತ್ತಿದ್ದರು.

ಕೆಡುಕಿನ ಕ್ರತುವನ್ನು ಕ್ರತುಕರ್ತರನ್ನು ವೀರಭದ್ರನು ರುದ್ರಗಣರು ಸದೆ ಬಡಿದು ಹುಡಿಗೂಡಿಸುತ್ತಿದ್ದರು. ಪ್ರಾಣಿ ವಧೆಯನ್ನು ನಿಲ್ಲಿಸಿ ಯಜ್ಞ ಪಶುಗಳನ್ನು ವಧೆಯಿಂದ ತಪ್ಪಿಸುತ್ತಿದ್ದರು. ಮರುದ್ಗಣರಾಗಿ ತಮ್ಮ ಅಪಾರ ಕರುಣಾರಸವನ್ನು ಮೇಘಗಳ ಗರ್ಭವಲ್ಲಿರಿಸಿ ಮಳೆಯ ರೂಪದಲ್ಲಿ ಇಳೆಗೆ ಸುರಿಸಿ ಬೆಳೆಗಳಿಂದ ಲೋಕದ ಜನರನ್ನು ಉದ್ಧರಿಸುತ್ತಿದ್ದರು; ಅನ್ನ ಸಮೃದ್ಧಿಯನ್ನು ಅನುಗ್ರಹಿಸುತ್ತಿದ್ದರು. ಮರುದ್ಗಣರಿಗೂ ರುದ್ರಗಣರಿಗೂ ಭೇದವಿಲ್ಲ. ಇವರಿಲ್ಲದಿದ್ದರೆ ಇಂದ್ರನ ಆಟ ಏನೂ ನಡೆಯದು. ಲೋಕ ಜೀವನ ನಿರ್ವಹಣವಾಗದು. ಇವರೆಲ್ಲ ಇಂದ್ರನಿಗೆ ಎಂದೆಂದಿಗೂ ಬೆಂಬಲಿಗರಾಗಿರುವರು. ಬಸವಣ್ಣನಿಗೆ ಮಾಚಿ ದೇವನು, ರಾಮನಿಗೆ ಆಂಜನೇಯನು ಶಿವನಿಗೆ ವೀರಭದ್ರನು ಸಹಾಯಕವಾಗಿರುವಂತೆ ಇರುತ್ತಿದ್ದರು. ರುದ್ರ-ವೀರಭದ್ರರ ತೇಜೋವಂತ ಕಿರಣಗಳು ಮರುದ್ಗಣರು.

ರುದ್ರ-ವೀರಭದ್ರರು ತೇಜಸ್ವಿಗಳು, ಅಹಂಕಾರದ ಮೇಲೆ ಅವರಿಗೆ ಅಸದೃಶ ಆಧಿಪತ್ಯ. ಸತ್ವವೇ ಅವರ ಸಾಮ್ರಾಜ್ಯ. ಉಜ್ಜೀವನವೆ ಅವರ ಅಸಾಮಾನ್ಯ ಸಾಮರ್ಥ್ಯ. ಉದ್ಗಮನವೇ ಅವರ ಶತಕ್ರತುಶಕ್ತಿ. ಅದರಿಂದಾಗಿ ಅವರ ಊರ್ಧ್ವಪಥದ ಪ್ರತ್ಯವಾಯುಗಳನ್ನು ಅವರು ಲೀಲಾಜಾಲವಾಗಿ ಪರಿಹರಿಸಿಕೊಳ್ಳುತ್ತಿದ್ದರು.

ರುದ್ರ ಎಲ್ಲ ಜ್ಯೋತಿಗಳ ಎಲ್ಲ ಶಕ್ತಿಗಳ ಮೂಲಸ್ಥಾನ, ವೀರಭದ್ರ, ಆಂಜನೇಯ, ಮಡಿವಾಳ ಮಾಚಿತಂದೆ, ರುದ್ರಗಣ, ಮರುದ್ಗಣ ರುದ್ರದೇವನ ಅಭಿವ್ಯಕ್ತಿಗಳು. ಸಂಹಾರ ಶೀಲನಾದ ಶ್ರೀರುದ್ರನು ಹಳೆಯದೆಲ್ಲವನ್ನು ಸಂಹರಿಸಿ ಹೊಸತುತನಕ್ಕೆ ಹಾದಿಯನ್ನು ಹಾಕುವವನು. ದುಃಖಿಗಳನ್ನು ಸುಖಿಗಳನ್ನಾಗಿಸುವವನು. ಆತನ ಆ ಮಹಾಜ್ಯೋತಿ ಜಗತ್ತನ್ನು ಬೆಳಗಬಲ್ಲುದು. ಆತನ ಆ ಮಹಾಶಕ್ತಿ ಜಗತ್ತನ್ನು ಸಂಹರಿಸಿ ಸೃಷ್ಟಿಸಬಲ್ಲುದು. ಶ್ರೀರುದ್ರನು ತನ್ನ ಸಾಂಕೇತಿಕ ಶಕ್ತಿಯಾದ ಕಾಳಿಯೊಡನೆ ತನ್ನ ಶಾಂತಿ ಕಾರ್ಯ ಪ್ರಪಂಚದ ಪರಿಚಯವನ್ನುಂಟು ಮಾಡಿಕೊಡುತ್ತಾನೆ. ಆ ಕಾಳಿ ಒಂದು ಅಸದೃಶವಾದ ಜ್ಯೋತಿ, ಅಪಾರವಾದ ಶಕ್ತಿ; ಅಖಂಡವಾದ ಶಾಂತಿ, ಅಂತಹ ಆ ಶ್ರೀರುದ್ರ-ಶ್ರೀಕಾಳಿಯರ ಸಂಯುಕ್ತ ಸಾಮರ್ಥ್ಯ ಸ್ವರೂಪ ಶ್ರೀ ವೀರಭದ್ರ.

ವೀರಭದ್ರನ ವ್ಯಕ್ತಿತ್ವ

ಸೃಷ್ಟಿಗೆ ಕಾಮಬೀಜ, ಕಾಮವಿಲ್ಲದೆ ಸೃಷ್ಟಿಯಿಲ್ಲ. ಕಾಮ ಅದೊಂದು ಸೃಜನ ಶಕ್ತಿ; ಪ್ರಾಕೃತಿಕ ಶಕ್ತಿ. ಪ್ರಕೃತಿಯ ವನದಲ್ಲಿ ವಿಕಸಿತ ಪ್ರಾಯ ಪುಷ್ಪ. ವಾಸನಾಯುಕ್ತ ಪುಷ್ಪ. ಅದು ಸೃಜನ ಫಲೋನ್ಮುಖಿ. ಕಾಮ ಅದೊಂದು ಕಾಯಗುಣ. ಕಾಯದ ಬೆಳವಣಿಗೆಯಲ್ಲಿ ಅದು ಕಾಣಿಸಿಕೊಳ್ಳುತ್ತದೆ. ಬೇಕೆಂಬುದೇ ಕಾಮ. ಇದು ಕಾಯವಿಡಿದು ಬಂದಿದೆ. ಕಾಯವಿಡಿದು ಬೆಳೆಯುತ್ತದೆ. ಕಾಯದೊಡನೆ ಕಡೆಗಾಣುತ್ತದೆ.

ಕಾಮವ ತೊರೆದೆವೆಂಬ ಗಾವಿಲ ಮನುಜರು ನೀವು ಕೇಳಿರೆ:

"ಕಾಮವಳವಟ್ಟಿತ್ತಯ್ಯ ಬಸವಣ್ಣಂಗೆ,
ಕಂಗಳ ಕಾಮಿಯಯ್ಯ ಪ್ರಭುದೇವರು;
ಸರ್ವಾಂಗ ಕಾಮಿಯಯ್ಯ ಮಡಿವಾಳಯ್ಯನು.
ಈ ಮೂವರೂ ಕಾಮಸನ್ನಿಹಿತರು ಕಾಣಾ,
ಕೂಡಲ ಚನ್ನಸಂಗಮ ದೇವಾ!"

ಚನ್ನಬಸವಣ್ಣನವರ ಕಾಮ ನಿರೂಪಣವಿದು. ಮುಂದುವರಿದು–

"....ಶಿವಭಕ್ತಿಯುಳ್ಳವರಿಗೆ ಕಾಮ ಬೇಕು, ಕ್ರೋಧಬೇಕು;
....ಕಾಮ ಬೇಕು ಲಿಂಗದಲ್ಲಿ; ಕ್ರೋಧ ಬೇಕು ಕರಣಂಗಳಲ್ಲಿ...."

ಕಾಮ–ಕ್ರೋಧಗಳ ಅವಶ್ಯಕತೆಯನ್ನು ವಿವರಿಸಿದ್ದಾರೆ.

ಸೃಷ್ಟಿ ಬೀಜ ಕಾಮವಾದರೆ ಸಂಹಾರ ಬೀಜ ಕ್ರೋಧ. ಬೇಕೆನ್ನುತ್ತದೆ ಕಾಮ; ಬೇಡೆನ್ನುತ್ತದೆ ಕ್ರೋಧ. ಚೇತನಾತ್ಮಕ ಜೀವನ ಯಾರಿಗೆ ಬೇಡ? ಜಡಜೀವನ ಜಾಡ್ಯಜೀವನ ಯಾರಿಗೆ ಬೇಕು? ಕರಣೇಂದ್ರಿಯ ವಿಕಾರ ದುರಾಚಾರ ದರ್ಪ ದುರಭಿಮಾನ ಯಾತಕ್ಕೆ ಬೇಕು? ಯಾವ ಸುಖಕ್ಕಾಗಿ ಬೇಕು?

ಮನಸಿನ ಧರ್ಮಗಳು ಕಾಮ ಕ್ರೋಧಗಳು. ವಿಧಾಯಕ ಕಾಮ ಎಲೆಯಂತಿದ್ದರೆ ವಿಧಾಯಕ ಕ್ರೋಧ ಹೂವಿನಂತಿರುತ್ತದೆ. ಜೀವನದ ಅಥವಾ ಮಾನಸದ ವಿಕಾಸ ಸೂಚಕಗಳಾಗಿ ಏರ್ಪಡುತ್ತವೆ. ದುಷ್ಟಶಕ್ತಿಗಳನ್ನು ವ್ಯಕ್ತಿಗಳನ್ನು ದಮನಿಸುವ–ದಂಡಿಸುವ ಕ್ರೋಧ ಅದೆಂದಿಗೂ ಅನಿವಾರ್ಯ; ಅವಧಾರ್ಯ. ಅದು ಜಡ ಕೋಪವಲ್ಲ. ಹೇಯ ಕೋಪವಲ್ಲ.

ಈ ದಿಸೆಯಲ್ಲಿ ವೀರಭದ್ರನ ಉತ್ಪತ್ತಿ ವಿಲಕ್ಷಣವಾಗಿದೆ; ವಿಕಾಸ ಸೂಚಕವಾಗಿದೆ. ಕಾಮ ಬೀಜ ಹಿನ್ನೆಲೆಯಾಗಿ ಕ್ರೋಧ ಬೀಜ ಪ್ರಮುಖವಾಗಿ ಆತನ ಜನನ. ಆ ಕ್ರೋಧ ವಿನಾಶಕ ಕ್ರೋಧವಲ್ಲ; ವಿಶೋಧಕ ಕ್ರೋಧ. ಅದು ಹಣೆಗಣ್ಣ ಮುನಿಸಾದ್ದರಿಂದ ವಿಜ್ಞಾನಾತ್ಮಕ ಕ್ರೋಧ. ಪವಿತ್ರಕಾಮ ಭಕ್ತಿಯೆನಿಸಿಕೊಳ್ಳುವಂತೆ; ವಿಜಿತೇಂದ್ರಿಯನಾದ ವೀರನ ಕ್ರೋಧ ಭದ್ರವೆನಿಸಿಕೊಳ್ಳುತ್ತದೆ; ಭದ್ರತೆಯನ್ನು ತರುತ್ತದೆ. ವೀರಭದ್ರನ ಕ್ರೋಧೋತ್ಪತ್ತಿ ಲೋಕೋತ್ತರ, ಲೋಕ ಮಂದಾರ. ಲೋಕದ ಕೊಳೆಯ ಕಳೆಯ ಬಂದ ತೇಜಸ್ಸು. ಕತ್ತಲೆಯನ್ನು ಕಳೆಯಬಹುದು; ಕುಗುಣ ಕೊಳೆಯ ಕಳೆವುದು ಕಠಿಣ. ಆ ತೇಜವೇ ಬೇರೆ. ವೀರಭದ್ರನದು ಅಂತಹದು.

ವೀರಭದ್ರನ ಉತ್ಪತ್ತಿಯ ಉದ್ದೇಶ ಬೆಳೆಯನ್ನು ಉಳಿಸಿ ಬೆಳೆಯೊಳಗಿನ ಕಳೆಯನ್ನು ಕೀಳುವುದು. ಕಳೆಯನ್ನು ಅಂದರೆ ಕಸವನ್ನು ಕೀಳದಿದ್ದರೆ ಬೆಳೆ ಹುಲುಸಾಗಿ ಬೆಳೆಯದು. ದಾರಿ ತಪ್ಪಿದವರನ್ನು ದಾರಿಗೆ ತರುವುದೇ ಆತನ ಉದಯದ ಉದ್ದೇಶ. ಆತನ ಉದಯ ಉತ್ಕ್ರಾಂತಿ ಜೀವನ ಸಂದೇಶ; ನಿಜ ಶಾಂತಿಯ ಕೋಶ. ಆತನು ವೀರಭದ್ರನೂ ಅಹುದು; ಭದ್ರವೀರನೂ ಅಹುದು. ಆತನು ವೀರತನದಲ್ಲಿ ಗಟ್ಟಿಗನಾಗಿದ್ದಂತೆ ಶುಭ ಚರಿತ್ರದಲ್ಲಿಯೂ ಕಲಿಯಾಗಿದ್ದನು. ಕಲಿತನದಲ್ಲಿ ಅವನನ್ನು ಅಲ್ಲಾಡಿಸುವವರಿರಲಿಲ್ಲ. ಒಳಿತಿನಲ್ಲಿ ಆತನನ್ನು ಮೀರಿದವರಿರಲಿಲ್ಲ; ಗೆಲುವವರಿರಲಿಲ್ಲ. ಆತನು ಹುಟ್ಟುವಾಗಲೇ ಮಹಾ ಸತ್ವನಾಗಿ ಮಹಾ ಸಾತ್ವಿಕನಾಗಿ ಹುಟ್ಟಿದನು. ಶಿವಭಕ್ತಿಹೀನರನ್ನು ಶಿವನಿಂದಕರನ್ನು ಶಿಕ್ಷಿಸಲು ಶಿಷ್ಟರನ್ನು ರಕ್ಷಿಸಲು ಜನಿಸಿದನು.

ವೀರಭದ್ರನು ಹುಟ್ಟುವಾಗಲೇ ತೊಟ್ಟ ರೂಹಿದು: "ವೀರಭದ್ರ ದೇವರು ಹುಟ್ಟಿದಾಗಲೆ ಹೂವಿನ ಕಾಶಿ, ವಿಷ್ಣು ಕಾಶಿ, ಬ್ರಹ್ಮ ಕಾಶಿ ಮೆಟ್ಟುವ ಹೊನ್ನಿನ ಹಾವುಗೆ, ಸಾವಿರ ಶಿರಸ್ಸು, ಮೂರು ಸಾವಿರ ಕಣ್ಣು ಎರಡು ಸಾವಿರ ಕೈ, ಶೇಖರಿಸಿದ ಮಂಡೆಯ ಜುಂಜು, ಮುಂಗಲಿ ಗುಟಾ–ಉರಲು ಸೆಡಕಿನ ಹಗ್ಗ; ಗಜದಾಂಡು, ಗಜಾಂಕುಶ, ಚಪ್ಪಕೊಡಲಿ–ಚನವೀರಭದ್ರ ಬತ್ತಿಸ ಆಯುಧ ಪಿಡಿದು

ಕರಗಸದ ಬಾಣ, ಕುಂಜರದ ಬಾಕು, ಜುಂಜು ಬಿರಿ ಗಣ್ಣು, ಬಿಲ್ಲು ಬಿದರಿನ ಹೆಗ್ಗಾಳಿ ಪಿಡಿಯ ಗಂಡುಗತ್ತರಿ, ಕೈಯಂಬು, ಕಠಾರಿ ಈಟಿ ರೆಣಚೂರಿ ರೌದ್ರಾಕಾರ ಹೂಂಕಾರ...."

ಹೀಗೆಂದು ಶ್ರೀ ವೀರಭದ್ರ ದೇವರ ವಡಬು ಹೊತ್ತಗೆಯಲ್ಲಿ ಹೇಳಲಾಗಿದೆ. ಸ್ಕಂದ ಪುರಾಣದ ಶಿವ ರಹಸ್ಯ ಪ್ರಕರಣದ ದಕ್ಷಕಾಂಡದಲ್ಲಿ ಹೀಗೆ ಹೇಳಿದೆ:

"ಶೃಂಗ ನಿಭ ಸಹಸ್ರ ಶಿರ್ಷ, ತಟಿತ್ಸದೃಶ ಜಟಾಪಟಲ ಮಟಿತ ಚಟುಲ ಹಟಕಮಣಿ ಕಿರೀಟ, ಭಯಂಕರ ದುಷ್ಟ್ರ. ಜಲೋಜ್ವಲನೋಜ್ವಲ ಸಹಸ್ರ ತ್ರಿತಯನಯನ, ಖಡ್ಗಖೇಟಗದಾಚಕ್ರಕಾರ್ಮುಕಪ್ರಮುಖ ನಿಖಿಲಾಯುಧಕಲಿತಾತಿಧೀರ್ಘಪ್ರಶಸ್ತದ್ವಿಸಹಸ್ರಹಸ್ತ, ಹರಿಬ್ರಹ್ಮೇಂದ್ರಾದ್ಯ ಮರ ಜಾಲ ಕಪಾಲಾಸ್ಥಿ ಮಾಲಿಕಾ ಸಮುದಯೋದೀರ್ಣ ಮಹೋರಸ್ಕ, ರಣನ್ಮಣಿ ನೂಪುರ ಕಿಂಕಿಣಿ ಸಂಕಲಿತ ಪರಿವಿನ್ಯಾಸ ಭಾಸಮಾನ, ಶತ್ರುಚಯ ಭಯಂಕರೋದಾತ್ತ ಚೈತ್ರನಾದ ಮೇದುರ ಘಂಟಾ ಘಣಂಘಣಿತಕರ, ಶಿಖಿಶಿಖಾಭಾಸುರ, ನಾಸಾನುಷಿರೋಜ್ಝಿತ ದೀರ್ಘ ನಿಶ್ವಾಸ, ರಕ್ತ ಗಾತ್ರ, ಭಯಂಕರಾಕಾರ, ಅಟ್ಟಹಾಸ...."

ಈ ರೂಪು ರೂಪಕವೇ ಹೊರತು ವೀರಭದ್ರಸ್ವಾಮಿಯ ಮೂಲ ನಿಸರ್ಗ ರೂಪವಲ್ಲ; ಪೂರ್ಣ ರೂಪವಲ್ಲ, ಆತನ ವೀರಶ್ರೀಗೆ ಕೊಟ್ಟ ರೂಪಕವಿದು. "ಸಾವಿರ ತಲೆ, ಮೂರು ಸಾವಿರ ಕಣ್ಣು, ಎರಡು ಸಾವಿರ ಕೈ" ಎಂದು ಕೊಟ್ಟ ರೂಪಕ ಸುಂದರವಾಗಿದೆ, ಶೂರತನ ಸ್ತೂಚಕವಾಗಿದೆ. ತಲೆಗೆ ಮೂರು ಕಣ್ಣುಗಳಂತೆ ಸಾವಿರ ತಲೆಗೆ ಮೂರು ಸಾವಿರ ಕಣ್ಣಿರುವುದು, ತಲೆಗೆ ಎರಡು ಕೈಗಳಂತೆ ಸಾವಿರ ತಲೆಗೆ ಎರಡು ಸಾವಿರ ಕೈಗಳಿರುವುದು ಸೂಕ್ತ, ಸಾವಿರ ತಲೆ ಹೇಗೆ ಸಹಜ? "ಸಹಸ್ರ ಶೀರ್ಷಾಃಪುರುಷಃ" ಎಂಬ ಯಜುರ್ವೇದದ ಉಕ್ತಿಯನ್ನೆ ಒಡಬು-ಪುರಾಣಗಳು ಅನುವಾದಿಸಿವೆ. ಆ ವೇದದ ಮುಂದಿನ "ಸಹಸ್ರಾಕ್ಷಃ ಸಹಸ್ರ ಪಾತ್" ಎಂಬುದು ಮುಕ್ಕಣ್ಣತನದ ರೂಪಕಕ್ಕೆ ಸರಿಯಿಲ್ಲೆಂದು ಬಗೆದು ಮಾರ್ಪಡಿಸಿಕೊಂಡಿವೆ. ಇದು ಹೇಗಾದರೂ ಇರಲಿ, ಸಾಸಿರ ತಲೆಯ ಕಣ್ಣುಕೈಗಳ ಮಾತಿನಲ್ಲಿ ಅಂಕೆ ಸಂಖ್ಯೆಗಳಿಗೆ ಮುಖ್ಯವಲ್ಲ; ಸಾಸಿರ ತಲೆಗಳಿಗಿರುವ ಬಲಕೆಚ್ಚು ವೀರಭದ್ರಸ್ವಾಮಿಗಿದ್ದಿತೆಂಬುದೇ ಮುಖ್ಯ. ವೀರತ್ವಕ್ಕೆ ಉಚಿತವಾದ ರೂಪಕವೇನೋ ಸರಿ. ಆದರೆ ಭದ್ರತೆಗೆ ಸರಿಯಾದ ರೂಪಕವನ್ನು ಜೋಡಿಸಲಿಲ್ಲ. ಇದರಿಂದಾಗಿ ಇದು ಪೂರ್ಣ ರೂಪಲ್ಲ-ರೂಪಕವಲ್ಲ ಎಂದು ಹೇಳಿದುದು.

ತಾತ್ತ್ವಿಕವಾಗಿ ಅವರವರಿಗೆ ತಕ್ಕ ಬಲ ಇದ್ದೇ ಇರುತ್ತದೆ. ಆದರೆ ಇದ್ದ ಬಲ ಸದ್ವಿನಿಯೋಗವಾಗಬೇಕು; ಭದ್ರತೆಗೆ ನೆರವಾಗಬೇಕು. ಬಲ ಶಾರೀರಬಲವೊಂದೇ ಅಲ್ಲ; ಜತೆಗೆ ಬುದ್ಧಿ ಬಲ, ಆತ್ಮ ಬಲಗಳನ್ನೂ ಗಳಿಸಬೇಕು-ಭದ್ರತೆಗಾಗಿ! ಬಾಳನ್ನು ದೇವತ್ವಕ್ಕೆ ಒಯ್ಯುವ ಶಕ್ತಿಯೇ ವೀರಭದ್ರತೆ!

ಬಾಳನ್ನು ಬೀಳಾಗಿಸುವುದು ಭಯ. ಯಾವ ಭಯವಿಲ್ಲದೆ ಬಾಳುವುದಕ್ಕಿಂತ ಬೇರಿಲ್ಲ ಸ್ವರ್ಗ; ಬೇರಿಲ್ಲ ಕೈಲಾಸ. ಅಂಜಿಕೆ ಅಳುಕುಗಳೇ ನೋವಿಗೆ ಅಡಿಗಲ್ಲು, ದುರ್ಬಲನು ಹೆಜ್ಜೆ ಹೆಜ್ಜೆಗೆ ಅಂಜುವನು ಅಳುಕುವನು. ಶಕ್ತಿ ಗುಂದಿದವನು ಶೋಕಕ್ಕೆ ಈಡಾಗುವನು. ಶಕ್ತಿವಂತನು ಭಕ್ತಿವಂತನು ಸುಖಿಯಾಗುವನು; ಶಾಂತಿಯಿಂದಿರುವನು. ಶರೀರದಲ್ಲಿ ಬುದ್ಧಿಯಲ್ಲಿ ಆತ್ಮನಲ್ಲಿ ವೀರತ್ವ ಬರಬೇಕಾದರೆ ಭದ್ರತ್ವ ಬಲಗೊಳ್ಳಬೇಕಾದರೆ ಜೀವನ ಪಥವನ್ನು ಹೇಗೆ ರೂಪಿಸಿಕೊಳ್ಳಬೇಕೆಂಬುದನ್ನು ನೆನೆಯದಿದ್ದರಾಗದು. ಸರ್ವೇಂದ್ರಿಯಗಳಲ್ಲಿ ಸತ್ತೇಜಸ್ಸು ತುಂಬಿ ಬರಬೇಕು.

"ಶ್ರೇಯಶ್ಚ ಪ್ರೇಯಶ್ಚ ಮನುಷ್ಯಮೇತ-
ಸ್ತೌಸಂಪರೀತ್ಯ ವಿವಿನಕ್ತಿ ಧೀರಃ ।
ಶ್ರೇಯೋ ಹೀ ಧೀರೋऽಭಿಪ್ರೇಯಸೋ ವೃಣೀತೇ
ಪ್ರೇಯೋ ಮಂದೋ ಯೋಗಕ್ಷೇಮಾದ್ವೃಣೀತೇ ॥" -ಕಠೋಪನಿಷತ್

ನಿಜವಾದ ವೀರತ್ವದ ವಿವರಣೆ ಇಲ್ಲಿದೆ. ಶ್ರೇಯಸ್ಸು ಪ್ರೇಯಸ್ಸು ಮನುಷ್ಯನನ್ನು ಬಳಸಿಕೊಂಡಿವೆ. ಇವೆರಡರಲ್ಲಿ ಬಾಳಿಗೆ ಲೇಸು ಯಾವುದೆಂಬುದನ್ನು ವಿವೇಚಿಸಿ ತಿಳಿಯುತ್ತಾನೆ ಧೀರನು. ತಿಳಿದು ಶ್ರೇಯಸ್ಸನ್ನೇ ಸ್ವೀಕರಿಸುತ್ತಾನೆ-ಧೀರನು. ಮೂರ್ಖನು ತನ್ನ ಯೋಗಕ್ಷೇಮಕ್ಕಾಗಿ ಪ್ರೇಯಸ್ಸನ್ನೇ ತಬ್ಬಿಕೊಳ್ಳುತ್ತಾನೆ....

ಈ ದೃಷ್ಟಿಯಲ್ಲಿ ವೀರಭದ್ರನು ನಿಜವಾಗಿಯೂ ಧೀರನು; ಧೀಮಂತನು. ಆತನಿಗೆ ಎಲ್ಲರ ಶ್ರೇಯಸ್ಸೆ ಸವಿಯಾದುದು. ಅದನ್ನೇ ಆರಿಸಿಕೊಂಡನು. ಅದಕ್ಕಾಗಿಯೇ ಹುಟ್ಟಿದನು, ಬೆಳೆದನು, ಬದುಕಿದನು, ದಕ್ಷನಂತೆ. ಪ್ರೇಯಸ್ಸಿಗಾಗಿ ಸ್ವಾರ್ಥ ಯೋಗ ಕ್ಷೇಮಕ್ಕಾಗಿ ಬಾಯ್ನೀರು ಬಿಟ್ಟವನಲ್ಲ. ಇದರಿಂದಾಗಿ ಆತನು ಭದ್ರ ವೀರನೂ ಅಹುದು. ಭದ್ರ ಬಾಳಿನ ವೀರನಾಗಿ ಬದುಕಿದನು; ಬದುಕುವನು. ಸುಖ-ದುಃಖ, ಮಾನ-ಅಪಮಾನ, ಸೋಲು-ಗೆಲುವುಗಳನ್ನು ಸಮಗಂಡವನು.

"ಅಧ್ಯಾತ್ಮಯೋಗಾಧಿ ಗಮೇನ ದೇವಂ ।
ಮತ್ವಾ ಧೀರೋ ಹರ್ಷಶೋಕೌ ಜಹಾತಿ ॥"

ಪರಶಿವನು ಸುಲಭವಾಗಿ ಕಾಣುವವನಲ್ಲ. ಅವನು ಅತ್ಯಂತ ಗೂಢನಾಗಿದ್ದಾನೆ. ಸೂಕ್ಷ್ಮನಾಗಿದ್ದಾನೆ, ಗುಹಾ ವಾಸಿಯಾಗಿದ್ದಾನೆ, ಪುರಾತನನಾಗಿದ್ದಾನೆ. ಅಂತಹ ದೇವನನ್ನು ಅಧ್ಯಾತ್ಮಯೋಗದಿಂದ ಅರಿತುಕೊಂಡ ಧೀರನು ಹರ್ಷ ಶೋಕಗಳನ್ನು ಬಿಡುತ್ತಾನೆ.

ವೀರಭದ್ರನು ಅಂತಹ ಶಿವನನ್ನು ದೇವನನ್ನು ಅರಿತಿದ್ದನು. ಶಿವನಲ್ಲಿ ಶಿಷ್ಯತ್ವವನ್ನು ವಹಿಸಿದ್ದನು. ಶಿವನಿಗೆ ನಚ್ಚಿನ ಬಂಟನಾಗಿ ವರ್ತಿಸುತ್ತಿದ್ದನು. ಶಿವಸೇವೆಯಲ್ಲಿ ನಿರತನಾಗಿದ್ದನು. ನೋವು-ನಲಿವುಗಳನ್ನು ಲೆಕ್ಕಿಸುತ್ತಿರಲಿಲ್ಲ. ಇದರಿಂದಾಗಿ ಧೀರನೂ ವೀರನೂ ಆಗಿದ್ದನು. ಭದ್ರಭಾವಿಯೂ ಭದ್ರ ಜೀವಿಯೂ ಆಗಿದ್ದನು. ಸತ್ವ ಮತ್ತು ಸತ್ತೆಗಳ ಪ್ರತೀಕವಾಗಿದ್ದನು.

ದಕ್ಷನಾದರೋ ಇದಕ್ಕೆ ವಿರುದ್ಧನಾಗಿದ್ದನು. ತನ್ನೊಳಗೂ ಹೊರಗೂ ಇರುವ ಪರಮಾತ್ಮನನ್ನು ಅರಿಯದಾದನು. ಮಾನಾಪಮಾನಗಳನ್ನು ಸುಖ-ದುಃಖಗಳನ್ನು ಜಯಿಸದಾದನು. ಅಧ್ಯಾತ್ಮಯೋಗದ ಗಂಧವೇ ಅವನಲ್ಲಿರಲಿಲ್ಲ. ಅದರಿಂದಾಗಿ ಹೊರಗೂ ಸೋತನು. ಅಧ್ಯಾತ್ಮ ಸಾಧನೆಯಲ್ಲಿ ಗೆದ್ದು ವೀರನಾದವನು ಅಖಂಡ ವಿಶ್ವವನ್ನೇ ಜಯಿಸಬಲ್ಲನು ಎಂಬುದಕ್ಕೆ ವೀರಭದ್ರನು ಪರಮ ಪ್ರಮಾಣನಾಗಿದ್ದಾನೆ, ಆತನ ಚರಿತ್ರೆ ಅದನ್ನು ಚೆನ್ನಾಗಿ ಸಾಟುತ್ತದೆ. ವೀರಭದ್ರನು ಕಂಡುಕೊಂಡ ದೇವತ್ವ ಧರ್ಮಾಧರ್ಮಗಳಿಗೆ ಕಾರ್ಯಾಕಾರ್ಯಗಳಿಗೆ ಭೂತ ಭವಿಷ್ಯಗಳಿಗೆ ಭಿನ್ನವಾದುದು; ಅತೀತವಾದುದು.

ದಕ್ಷನಾದರೋ ಮಾಡಬಾರದ್ದನ್ನು ಮಾಡಿದನು. ಆಡಬಾರದ್ದನ್ನು ಆಡಿದನು. ಅಂತೆಯೇ ಆಗಬಾರದ್ದು ಆಗಿಹೋಯಿತು. ಆತನು ಆ ಶಿವಶಕ್ತಿಯರನ್ನು ಅರಿತು ಆರಾಧಿಸಿ ಏನೇ ಮಾಡಿದ್ದರೂ ಲೇಸಾಗಿದ್ದಿತು. ಅಕಾರ್ಯ ಅಧರ್ಮ ದೋಷ ದೂಷಿತನಾಗುತ್ತಿರಲಿಲ್ಲ. ಕಾಲವಶನಾಗುತ್ತಿರಲಿಲ್ಲ. ದೇವತ್ವವೊಂದೆಡೆಗಿರಲಿ, ಮಾನವತ್ವವನ್ನು ಹಾಳುಮಾಡಿಕೊಳ್ಳುತ್ತಿರಲಿಲ್ಲ. ನಾನೇ ದೊಡ್ಡವನೆಂಬ ದಡ್ಡತನದ ಹಮ್ಮಿಗೆ ಒಳಗಾಗಿ ಶಿಕ್ಷೆಗೆ ಗುರಿಯಾಗಿ ಕುರಿದಲೆಯಿಂದ ಅರ್ಧ ಪಶುವಾಗಬೇಕಾಯಿತು. ಅಕ್ಷರವಸ್ತುವನ್ನು ಅಲ್ಲಗಳೆದು ಕ್ಷರಕ್ಕೆ ಕರವನ್ನು ನೀಡಿದರೆ ಅಕ್ಷಯತ್ವ ಅಳವಡುವುದೆ?

ಆ ಅಕ್ಷರಾತ್ಮನಾದ ಪರಮಾತ್ಮನ ಆಲಂಬನ ಅದೆಂಥವರಿಗೂ ಬೇಕು. ವೀರಭದ್ರನು ಆ ಅಕ್ಷರನಾದ ಪರಶಿವನ ಆಲಂಬನದಲ್ಲಿದ್ದನು. ಅದರಿಂದಾಗಿ ಆತನು ಮಹಿಮಾಶಾಲಿಯಾದನು.

"ಏತದಾಲಂಬನಂ ಶ್ರೇಷ್ಠ ಮೇತದಾಲಂಬನಂ ಪರಮ್ ।
ಏತದಾಲಂಬನಂ ಜ್ಞಾತ್ವಾ ಬ್ರಹ್ಮಲೋಕೇ ಮಹೀಯತೇ ॥"

ವೀರಭದ್ರನು ಈ ಅಭಿಪ್ರಾಯಕ್ಕೆ ಚಾಚೂ ತಪ್ಪದಂತಿದ್ದನು. ಈ ಕಠ ಶ್ರುತಿಯನ್ನು ತನ್ನ ಕಂಠ ಶ್ರುತಿಯನ್ನಾಗಿ ಜೀವನ ಶ್ರುತಿಯನ್ನಾಗಿ ಮಾಡಿಕೊಂಡಿದ್ದನು. ಆ ಅಕ್ಷರನಾದ ಪರಮಾತ್ಮನಿಗಿಂತ ಹಿರಿದಾದ ಆಧಾರ ಬೇರೊಂದಿಲ್ಲ. ಅದೇ ಪರವಾದುದು; ಎಂಬುದನ್ನು ಅರಿತು ಅದರಂತೆ ಆಚರಿಸುತ್ತಿದ್ದನು. ಅದರಿಂದ ಆತನಿಗೆ ವೀರಭದ್ರತ್ವ ಪ್ರಾಪ್ತವಾಗಿತ್ತು.

ದಕ್ಷನಿಗೆ ಪರಮಾತ್ಮನ ಆಲಂಬನವಿಲ್ಲದಾಯಿತು. ಪ್ರತಿಯಾಗಿ ವಿರೋಧಿಸಿ ನಿಂತನು. ಕನಿಷ್ಠ ಆಧಾರವನ್ನು ನಂಬಿದನು. ಕರೆದು ಮನ್ನಿಸ ತೊಡಗಿದನು. ಅದರಿಂದ ಸ್ಥಾನಮಾನಗಳನ್ನು ಕಳೆದುಕೊಂಡನು. ಶಿರಸ್ಸನ್ನು ಕಳೆದುಕೊಂಡನು. ಚಿರಂತನ ಶೋಕಿಸಿದನು. ಇದಕ್ಕೆಲ್ಲ ಕಾರಣವೆಂದರೆ ಶಿವನನ್ನು ಸಣ್ಣವನನ್ನಾಗಿ ತನ್ನನ್ನು ದೊಡ್ಡವನನ್ನಾಗಿ ಭಾವಿಸಿದ್ದೇ ಕಾರಣ. ಭಾವಿಸಿದಂತೆ ಕಾರ್ಯಪ್ರವೃತ್ತನಾದುದೇ ಕಾರಣ.

"ಅಣೋರಣೀಯಾನ್ ಮಹತೋ ಮಹೀಯಾನ್
ಆತ್ಮಾಽಸ್ಯ ಜಂತೋರ್ನಿಹಿತೋ ಗುಹಾಯಾಮ್ ।
ತಮಕ್ರತುಃ ಪಶ್ಯತಿ ವೀತಶೋಕೋ
ಧಾತು ಪ್ರಸಾದಾನ್ಮಹಿಮಾನ ಮಾತ್ಮನಃ ॥
ಅಶರೀರಂ ಶರೀವೇಷ್ವನವಸ್ಥೇಷ್ವವಸ್ಥಿತಮ್ ।
ಮಹಾಂತಂ ವಿಭುಮಾತ್ಮಾನಂ ಮತ್ವಾಧೀರೋನ ಶೋಚತಿ ॥"

ಈ ಮಾತುಗಳು ಮಂತ್ರಗಳು ವೀರಭದ್ರನ ವೀರವ್ಯಕ್ತಿತ್ವವನ್ನು ನಿರೂಪಿಸುವಂತೆ ದಕ್ಷನ ದುರ್ಭಾವತ್ವಕ್ಕೂ ನಿದರ್ಶನಗಳಾಗಿವೆ. ಉಭಯ ವ್ಯಕ್ತಿತ್ವಗಳಿಗೆ ಒಪ್ಪಾದ ಒರೆಗಲ್ಲಾಗಿವೆ. ಇದರಿಂದಾಗಿ ಇವನ್ನು ಎತ್ತಿ ಉದ್ಧರಿಸುತ್ತಿರೋಣವಾಗಿದೆ.

ಪರಮಾತ್ಮನನ್ನು ಕೇವಲ ಅಣುವೆಂದು ಭಾವಿಸಿ ಕೆಟ್ಟ ದಕ್ಷ. ಅಣುವಾಗಿದ್ದಂತೆ ಮಹತೋ ಮಹಂತನೂ ಆಗಿರುವನೆಂದು ಅರಿದು ಆದರಿಸಿ ವೀರನೂ ವೀತ ಶೋಕನೂ ಆದನು ವೀರಭದ್ರ. ಪರಮಾತ್ಮನು ತನ್ನ ಹೃದಯದಲ್ಲಿಯೂ ಇರುವನೆಂಬುದನ್ನು ಅರಿಯದಾದ. ತನ್ನಲ್ಲಿಯೂ ತೆರೆಯ ಎಲ್ಲ ಪ್ರಾಣಿಗಳಲ್ಲಿಯೂ ತುಂಬಿರುವನೆಂದು ತಿಳಿದು ತನ್ನನ್ನು ಅಕರ್ತನನ್ನಾಗಿ

ಭಾವಿಸಿ ಧಾತು ಪ್ರಸನ್ನತೆಯನ್ನು ಪಡೆದನು; ದೇವನ ಮಹಿಮೆಯನ್ನು ಮನಗಂಡನು.

ಆತ್ಮವಿಜ್ಞಾನದಲ್ಲಿ ದಕ್ಷನು ದಟ್ಟಾದ ಕತ್ತಲಲ್ಲಿದ್ದನು; ವೀರಭದ್ರನು ದಿವ್ಯ ದೀಪ್ತಿಯಲ್ಲಿದ್ದನು. ಇದರಿಂದಾಗಿ ದಕ್ಷನು ದುರ್ಬಲನಾದನು; ದುಃಖಿಯಾದನು; ದುಷ್ಕೀರ್ತಿವಂತನಾದನು. ದುರಹಂಕಾರಿಯಾದನು. ವೀರಭದ್ರನು ಪರಮಜ್ಞಾನಿಯಾಗಿ ಪರಮಾವಲಂಬಿಯಾಗಿ ಪರಮ ವೀರನೆನಿಸಿದನು. ಪರಮನಲ್ಲಿ ಶರಣನಾಗಿಯೇ ಬಾಳಿದನು. ವೀರನಾಗಿಯೂ ವೀರನೆಂಬ ಹೆಮ್ಮೆಯಿರಲಿಲ್ಲ. ಭದ್ರನಾಗಿಯೂ ಭಗವಂತನೆಂಬ ಬಿಮ್ಮಿರಲಿಲ್ಲ. "ಯಮೇವೈಷ ವೃಣತೇ ತೇನ ಲಭ್ಯಃ। ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಂ ॥" ಎಂಬ ಶ್ರುತಿಮಾತು ವೀರಭದ್ರನ ವಿಷಯದಲ್ಲಿ ಸತ್ಯಕ್ಕೆ ಸತ್ಯವಾಗಿದೆ. ವೀರಭದ್ರನು ಶಿವಾನುಯಾಯಿಯಾಗಿ ಶಿವನೇ ಆದನು.

ದುಷ್ಟ ಚಿತ್ತನೂ ದುಶ್ಚರಿತ್ರನೂ ಆದ ದಕ್ಷನು ಶಿವತ್ವವನ್ನು ಪಡೆಯದಾದನು. ಶಾಂತಿಯನ್ನು ಪಡೆಯದಾದನು. ಅಹುದು, ಪಡೆಯುವದಾದರೂ ಹೇಗೆ?

"ನಾವಿರತೋ ದುಶ್ಚರಿತಾನ್ನಾಶಾಂತೋ ನಾಸಮಾಹಿತಃ ॥
ನಾಶಾಂತ ಮನಸೋವಾಽಪಿ ಪ್ರಜ್ಞಾನೇನ್ವೆನ ಮಾಪ್ನುಯಾತ್॥"

ಎಂದು ಕಠಶ್ರುತಿಯು ದಿಟವನ್ನೇ ಸಾರಿದೆ. ಪರಮಾತ್ಮನನ್ನು ಪಡೆಯಲು ಪರಮ ಶಕ್ತಿಯನ್ನು ಸಂಪಾದಿಸಲು ಪ್ರಜ್ಞಾನವೊಂದೇ ಎಂದೂ ಸಾಧನವಾಗುವುದಿಲ್ಲ. ಜತೆಗೆ ಸದಾಚಾರಜನ್ಯ ಸಚ್ಚರಿತ್ರವೂ ಬೇಕು. ಶಾಂತಿ ಸಮಾಧಾನಗಳೂ ಬೇಕು. ಇವು ಯಾವು ಇಲ್ಲದ ದಕ್ಷನು ಅಸಹನೆಯುಳ್ಳ ದಕ್ಷನು ಆತ್ಮದರ್ಶಿಯಾಗಲಾರನು; ಆಗಲಿಲ್ಲ.

ಶಿವಾಚಾರ ವೀರಭದ್ರನ ಉಸಿರು. ಶಿವಪ್ರಜ್ಞೆ ಆತನ ಜೀವಾಳ. ಶಿವನ ಪ್ರಜ್ಞಾಚಕ್ಷುವಿನಿಂದ ಜನ್ಮ ಸಂಸ್ಕಾರವನ್ನು ಪಡೆದ ಅವನಲ್ಲಿ ಅದನ್ನು ಬೆದಕಬೇಕಿಲ್ಲ. ಸಚ್ಚರಿತ್ರನಾದ ವೀರಭದ್ರನು ಶಾಂತನೂ ಸಮಾಧಾನ ಚಿತ್ತನೂ ಆಗಿದ್ದನು ಸ್ವಾಭಾವಿಕವಾಗಿ! ಸೂಕ್ಷ್ಮದರ್ಶಿಯೂ ಆಗಿದ್ದನು ಶಿವಜ್ಞಾನಿಯಾಗಿ!

ಸರ್ವಶಕ್ತನಾಗಿ ಆತ ವೀರ; ಸದಾ ಸತ್ಯನಾಗಿ ಆತ ಭದ್ರ. ಈ ಎರಡು ಪದಗಳೂ ಆತನ ಗಂಭೀರವಾದ ಸತ್ಯವಾದ ವ್ಯಕ್ತಿತ್ವ ಪ್ರತೀಕಗಳು, ಭದ್ರನಾಗಿ ಆತನಿಗೆ ಕಾಲಭಯವಿಲ್ಲ. ಅಂತೆಯೇ ವೀರನಾಗಿಯೂ ಇಲ್ಲ. "ಅನಾದ್ಯನಂತಂ ಮಹತಃ ಪರಂಧ್ರುವಂ ನಿಚಾಯ್ಯ ತನ್ಮೃತ್ಯು ಮುಖಾತ್ ಪ್ರಮುಚ್ಯತೇ" ಎಂಬ ಕಠಶ್ರುತಿಯ ಮಾತು ವೀರಭದ್ರನ ಮುಖಾಂತರ ತನ್ನ ಧ್ರುವತ್ವವನ್ನು ಉಳಿಸಿಕೊಂಡಿದೆ. ವೀರಭದ್ರನು ನಿಜಕ್ಕೂ ಆ ಧ್ರುವವನ್ನು ಅರಿತು ಧ್ರುವನಾದನು.

ವೀರಭದ್ರನು ಅಂತರ್ದರ್ಶಿಯಾಗಿದ್ದನು. ಆತನಿಗೆ ಬಾಹ್ಯ ಭಾಗ್ಯಗಳ ಆಸೆಯಿರಲಿಲ್ಲ. ರಾಜ್ಯ ಸಾಮ್ರಾಜ್ಯಗಳ ಆಶೆಯಿರಲಿಲ್ಲ. ಆತ್ಮ ವೀರನಾಗಿ ಅಮೃತತ್ವವನ್ನು ಪಡೆಯಬೇಕೆಂದಿರುವಾಗ ಪಡೆದಿರುವಾಗ ಇವುಗಳ ಹಂಗ ಆತನಿಗಿರಲಿಲ್ಲ. "ಕಶ್ಚಿದ್ಧೀರಃ ಪ್ರತ್ಯಗಾತ್ಮಾನಮೈ ಕ್ಷದಾವೃತ್ತ ಚಕ್ಷುರಮೃತತ್ವ ಮಿಚ್ಛನ್।" ಆತನು ಆತ್ಮಧೀರನಾಗಿದ್ದನು. ಪ್ರತ್ಯಗಾತ್ಮನನ್ನು ಕಂಡಿದ್ದನು. ಆ ವೃತ್ತನೇತ್ರನಾಗಿದ್ದನು. ಅಮೃತತ್ವವನ್ನು ಅಳವಡಿಸಿಕೊಂಡಿದ್ದನು.

ಪರಾಚಃ ಕಾಮಾನ್ ಅನಯಂತಿ ಬಾಲಾಃ
ತೇ ಮೃತ್ಯೋರ್ಯಂತಿ ವಿತತಸ್ಯ ಪಾಶಮ್ ।
ಅಥ ಧೀರಾ ಅಮೃತತ್ವಂ ವಿದಿತ್ವಾ
ಧ್ರುವಮಧ್ರು ವೇಷ್ವಿಹ ನ ಪ್ರಾರ್ಥಯಂತೇ ॥ —ಕಠಶ್ರುತಿ

ಈ ಮಂತ್ರ ಇಬ್ಬರ ವ್ಯಕ್ತಿತ್ವವನ್ನು ವೆಗ್ಗಳಿಸಿದಂತಿದೆ. ಈ ಮಂತ್ರಾಭಿಪ್ರಾಯದಂತೆ ದಕ್ಷಬ್ರಹ್ಮನು ಬಾಲಿಶನು. ಬಾಹ್ಯ ಕಾಮನೆಗಳನ್ನು ಬಯಸಿದನು. ಮೃತ್ಯು ಪಾಶಕ್ಕೆ ಒಳಗಾದನು. ಅದೇ ಧೀರನಾದ ವೀರನಾದ ವೀರಭದ್ರನು. ಅಧ್ರುವಗಳಲ್ಲಿ ಧ್ರುವವನ್ನೂ ಅಮೃತತ್ವವನ್ನು ಕಂಡು ಬಾಹ್ಯದಲ್ಲಿ ಏನನ್ನೂ ಬಯಸಲಿಲ್ಲ, ಆಡಂಬರ ಅಧಿಕಾರಗಳಿಗೆ ಬಾಯ್ನೀರು ಬಿಡಲಿಲ್ಲ. ದಕ್ಷನಿಗೆ ಶಿಕ್ಷೆಯನ್ನು ಮಾಡಿಸಿದವನು ಶಿವನು; ಮಾಡಿದವನು ಶಿವನು. ಮಾಡಿದೆನೆಂಬ ಭಾವ ವೀರಭದ್ರನಿಗಿರಲಿಲ್ಲ. ವೀರಭದ್ರನು ಶಿವನನ್ನು ಭಿನ್ನವಾಗಿ ಭಾವಿಸಲಿಲ್ಲ. ತನ್ನೊಳಗಿರುವ ಪರಮವಸ್ತುವನ್ನಾಗಿ ಪ್ರತಿಭಾವಿಸಿದ್ದನು. ಪ್ರಭುಕಾರ್ಯ ಪ್ರಜಾಕಾರ್ಯಗಳೇ ಆತನ ಜೀವನ ಗುರಿಯಾಗಿದ್ದಿತು.

ಉಭಯಾಂಗ ವೀರನಾಗುವುದು ಧ್ರುವನಾಗುವುದು ಹಗುರಾದ ಬದುಕೇನಲ್ಲ. ನಿಸರ್ಗವಾಗಿ ಮಾನವ ಮೊದಲು ದುರ್ಬಲ. ಬೆಳೆದಂತೆ ಬಲ ಮೈಗೂಡಿ ಬರುತ್ತದೆ. ಆದರೆ ಮನೋಬಲ ಮೈಗೂಡಿಬಾರದು. ಅದನ್ನು ಸತ್ಸಾಧನದಿಂದ ಸಂವರ್ಧಿಸಿಕೊಳ್ಳಬೇಕು. ಅಂತೆಯೇ ಬುದ್ಧಿ ಬಲವನ್ನು ಚಿತ್ಸಾಧನೆಯಿಂದ ಹೆಚ್ಚಿಸಿಕೊಳ್ಳಬೇಕು. ಆತ್ಮಬಲವನ್ನು ಆನಂದದಿಂದ ಅನುಭಾವದಿಂದ ಅಭಿವೃದ್ಧಿಸಿಕೊಳ್ಳಬೇಕು. ಸಾಂಸ್ಕಾರಿಕ ವಿಕಾಸದಿಂದ ಒಡಮೂಡಿದ ಒಂದು ಹಿರಿಯ ಶಕ್ತಿಯದು. ದೇವರೆಂದಾಕ್ಷಣ ಎಲ್ಲರಿಗೂ ಆ ಮಹಾಶಕ್ತಿ ಆ ಮಂಗಳ ಸ್ವರೂಪ ಇರುತ್ತದೆಂದು ಹೇಳಲಾಗದು; ಇರದು. ಇದ್ದರೂ

ಅವನ್ನು ಸಾರ್ವಜನಿಕರ ಸದುಪಯೋಗಕ್ಕಾಗಿ ಬಳಸುವರೆಂದು ಹೇಳಲಾಗದು. ದಿವ್ಯಧೃತಿ ಎಲ್ಲರ ಸೊತ್ತಲ್ಲ. ಆ ಧೃತಿಯೇ ಧರ್ಮದ ಮೂಲ. ಧಾರಣ ರಕ್ಷಣಗಳಿಗೆ ಮೂಲ. ವೀರಭದ್ರ ದೇವನ ಧೃತಿ ಧರ್ಮವಾಗಿ ಧಾರಣವಾಗಿ ರಕ್ಷಣ ಬಲವಾಗಿ ಆತನಲ್ಲಿ ದೇದೀಪ್ಯಮಾನವಾಗಿತ್ತು. ಅದರಿಂದ ಒಂದು ಸಾಮಾಜಿಕ ಗಣವೆ ರೂಪಿತವಾಯಿತು. ಸಾಂಸ್ಕೃತಿಕ ಸಂಪ್ರದಾಯವೇ ಆಗಿ ಬೆಳಗಿತದು. ವೀರಭದ್ರನ ಆ ಧೃತಿ ಸಂಸ್ಕೃತಿಯು ತಲೆಮಾರಿನಿಂದ ತಲೆಮಾರಿಗೂ ಯುಗದಿಂದ ಯುಗಕ್ಕೂ ಹರಿದು ಬಂದಿದೆ. ವೀರಶೈವತ್ವವನ್ನು ರೂಪಿಸಿದೆ. ಗಣಾಚಾರವಾಗಿ ಶಿವಾಚಾರವಾಗಿ ಬೆಳೆದುಬಂದಿದೆ.

ಧೃತಿಯೆ ಕ್ರಿಯಾಶಕ್ತಿಯಾಗಿ ಜ್ಞಾನಶಕ್ತಿಯಾಗಿ ಇಚ್ಛಾಶಕ್ತಿಯಾಗಿ ಆದಿ ಮತ್ತು ಪರಾಶಕ್ತಿಯಾಗಿ ಚಿಚ್ಛಕ್ತಿಯಾಗಿ ಆ ಆ ಅಂಗ-ಲಿಂಗಗಳಲ್ಲಿ ರೂಪುಗೊಳ್ಳುತ್ತದೆ. ಷಟ್ ಶಕ್ತಿಯರಿಗೆಲ್ಲ ಧೃತಿಯೇ ಮೂಲ ಗಂಗೋತ್ರಿ. ಧೃತಿಯೆ ನಾದವಾಗಿ ಬಿಂದುವಾಗಿ ಕಳೆಯಾಗಿ ನೆಲಸಿದೆ. ಅಂತಹ ಆ ಧೃತಿಗೆ ಮೂಲ ಕೇಂದ್ರ ವೀರಭದ್ರ.

ಭಾವಪುಷ್ಟಿ, ಬುದ್ಧಿಶಕ್ತಿ, ಚಿತ್ತಸ್ಥೈರ್ಯ, ಕಾಯ ಬಲ, ಆತ್ಮ ಧೃತಿ -ಇವನ್ನು ನೆನೆದಾಗ ವೀರತೆಯು ಎಲ್ಲೆಲ್ಲಿಯೂ ಎಲ್ಲ ಕರಣೇಂದ್ರಿಯ ಕಾಯಗಳಲ್ಲಿಯೂ ಇದ್ದಾಗಬೇಕೆಂಬುದು ಮನವರಿಕೆಯಾಗುತ್ತದೆ. ಈ ವೀರತನವೆ ಒಂದು ಪುರುಷಾಕಾರವಾಗಿ ವೀರಭದ್ರನಾದಂತಿದೆ. ವೀರಭದ್ರನಲ್ಲಿ ಇವೆಲ್ಲವೂ ಪೂರ್ಣ ರೂಪದಲ್ಲಿದ್ದವು. ಅದರಿಂದಾಗಿ ಅವನು ಪೂರ್ಣ ವೀರನು; ಅಪ್ರತಿಮ ವೀರನು, ಯಾವ ದೈನ್ಯತೆಯೂ ಅವನಲ್ಲಿರಲಿಲ್ಲ. ಅವನು ಪರಮ ಧೀರೋದಾತ್ತ. ಕರ್ತವ್ಯದ ಭಾರ ಹೊತ್ತ, ಕ್ರಾಂತಿಯ ಹೊಣೆ ಹೊತ್ತ ಧುರಂಧರ. ರುದ್ರಗಣ ಧುರೀಣ ಸರ್ವಸಮರ್ಥ.

ವೀರಭದ್ರ ಅಮೃತತ್ವವನ್ನು ಪಡೆದ ಧೀರ. ಯಾವ ಅಂಜಿಕೆಯಿಲ್ಲದ ದಿಟ್ಟ. ಅಂದರೆ ಧೈರ್ಯಶಾಲಿ; ಕೆಚ್ಚೆದೆಯ ಕಟ್ಟಾಳು. ಆತನು ಸ್ಥಿರ ಬುದ್ಧಿಯುಳ್ಳವನು; ಬುದ್ಧಿವಂತನೂ ಅಹುದು. ನಿಶ್ಚಲ ಚಿತ್ತನಾಗಿ ಧೃತಿವಂತನೂ ಅಹುದು. ಆತನು ಕೇವಲ ವೀರನಲ್ಲ, ಕಲಿವೀರ ಎಂದು ಹೆಸರನ್ನು ಪಡೆದಿದ್ದಾನೆ.

"ನೆಲ್ಲು ಗದ್ದೆಗೆ ನೀರು ಚಲಿದಂಗಿರಬೇಕು.
ಹುಚ್ಚಯ್ಯನ ಮಗ ಕಲಿವೀರ "ಈರಭದ್ರ" ಸೋ
ಬಿಚ್ಚಯ್ಯ ವನಕೆ ಮತಿಗಳ ಸೋ ॥"

ಎಂದು ಶ್ರೀ ಕ.ರಾ.ಕೃ. ಸಂಪಾದಿತ 'ಕಾಳಿಂಗರಾಯ' ಎಂಬ ಜಾನಪದ ಕಥನಗೀತದಲ್ಲಿ ಉಕ್ತವಾಗಿದೆ. ಇಲ್ಲಿ ಬಳಸಿದ 'ಕಲಿವೀರ' ವಿಶೇಷಣ ಗಮನಾರ್ಹ. ಅಲ್ಲದೆ ಶಿವಶರಣನಾದ ಮಾಚಿದೇವನು ತನ್ನ ವಚನಗಳಿಗೆ ಮುದ್ರಾಂಕಿತವಾಗಿ 'ಕಲಿದೇವರ ದೇವ' ಎಂದು ಹೇಳುವುದನ್ನೂ ಇಲ್ಲಿ ನೆನೆಯಬೇಕು. ವೀರಭದ್ರನ ಯಾವ ಅಂಗದಲ್ಲಿಯೂ ದೈನ್ಯತೆಯಿರಲಿಲ್ಲ; ದುರ್ಬಲತೆಯಿರಲಿಲ್ಲ.

ಜೀವನಕ್ಕೆ ಶಕ್ತಿ ಅಗತ್ಯ. ಶಕ್ತಿಗೆ ಅನೇಕ ಮುಖಗಳಿವೆ. ಅವುಗಳಲ್ಲಿ ಮಾನವನಿಗೆ ಮಾನವೀ ಶಕ್ತಿ ದೈವೀ ಶಕ್ತಿ ಮುಖ್ಯವಾಗಿವೆ. ಶಕ್ತಿ ಜೀವನದ ಜೀವಾಳ. ಮಾನವೀಯ ಶಕ್ತಿಗಳಲ್ಲಿ ಶಾರೀರಿಕ ಮಾನಸಿಕ ಬೌದ್ಧಿಕ ಶಕ್ತಿಗಳು ಮುಖ್ಯ. ಈ ಮೂರಕ್ಕೂ ಮೂಲವಾದುದು ಆತ್ಮಶಕ್ತಿ. ಅದನ್ನೇ ದೈವೀ ಶಕ್ತಿಯೆಂದು ಹೇಳುತ್ತಾರೆ. ಯಾವ ಶಕ್ತಿಯೇ ಆಗಲಿ, ಅದು ಯುಕ್ತವೂ ಶುದ್ಧವೂ ಆಗಿರಬೇಕು. ಶ್ರುತಿಗಳಲ್ಲಿ ಧೀರ ಪದ ಪದೇ ಪದೇ ಬರುತ್ತದೆ. ಅದು ಬುದ್ಧಿಶಕ್ತಿಯ ಪ್ರತೀಕವಾಗಿದೆ. ಒಮ್ಮೊಮ್ಮೆ ಆತ್ಮಶಕ್ತಿಯ ಸೂಚಕವೂ ಆಗಿರುತ್ತದೆ.

ಶಾರೀರಿಕ ಶಕ್ತಿ ಕ್ರಿಯೆಗೆ, ಮಾನಸಿಕ ಶಕ್ತಿ ನಿಶ್ಚಲತೆಗೆ ನಿರೀಚ್ಛೆಗೆ ಬೌದ್ಧಿಕ ಶಕ್ತಿ ಜ್ಞಾನವೃದ್ಧಿಗೆ ಸಾಧನವಾಗುತ್ತವೆ. ಅಂತೆಯೇ ಆತ್ಮಶಕ್ತಿ ಅನುಭವಾನಂದಗಳಿಗೆ ಸಾಧನವಾಗುತ್ತದೆ. ಈ ಎಲ್ಲ ಪಟುತ್ವವೂ ವೀರಭದ್ರನಲ್ಲಿದ್ದವು.

ಕೇವಲ ಶಾರೀರಿಕ ಶಕ್ತಿ ನೈಜಶಕ್ತಿಯಲ್ಲ ಮತ್ತು ಪರಿಮಿತ. ಅದೊಂದರಿಂದ ಅಗಾಧ ಕಾರ್ಯಗಳಾಗಲಾರವು. ವ್ಯಾಪಕತೆಯುಂಟಾಗದು. ಶಾಶ್ವತತೆಯನ್ನು ತಾರದು. ಸತ್ಯವನ್ನು ಕಾರಣವನ್ನು ಧರ್ಮವನ್ನು ಮೂಲ್ಯವನ್ನು ನೀತಿ ನಿಯತಿಯನ್ನು ಗುರುತಿಸದು. ವೀರಭದ್ರನಲ್ಲಿ ಕೇವಲ ಶಾರೀರಿಕ ಶಕ್ತಿಯಿರಲಿಲ್ಲ. ಅಂತಃಕರಣ ಶಕ್ತಿಯೂ ಇದ್ದಿತು.

ಕರುಣ ಅಂತಃಕರಣ ಶಕ್ತಿ, ಅಂತೆಯೇ ವಿವೇಕವೂ ಅಹುದು. ನಿಶ್ಚಲತೆ ನಿರಹಂಕಾರಗಳೂ ಸಹಿಷ್ಣುತೆ ಸಹಕಾರಗಳೂ ಅಹುದು. ಇವೆಲ್ಲವೂ ಆ ವೀರಭದ್ರ ದೇವನಲ್ಲಿದ್ದವು. ಅದರಿಂದಾಗಿ ಆತನ ಆ ವೀರತ್ವಕ್ಕೆ ಭದ್ರತೆ ಬಂದಿತ್ತು, ಬಂದಿದೆ; ಬರುತ್ತದೆ.

ಆತನದು ಕೋಣನ ಹೋರಾಟವಲ್ಲ; ಜಾಣನ ಹೋರಾಟ, ಕೋತಿಯ ಹಾರಾಟವಲ್ಲ; ರೀತಿಯ ಹಾರಾಟ. ಆತನ ಆ ಶಕ್ತಿ ವಿತರಣ ಶ್ರೀಯಂತೆ ವಿನಿಯೋಗವಾಗುತ್ತಿತ್ತು. ವಿನೂತನ ಮಾರ್ಗದರ್ಶಿಯಾಗಿರುತ್ತಿತ್ತು. ಅರ್ಥವಿಲ್ಲದ ಚಾಪಲ್ಯವನ್ನು ನೀಗಿಸುತ್ತಿತ್ತು. ನಿಜದ ಅರಿವನ್ನು ಉಂಟುಮಾಡಿಕೊಡುತ್ತಿತ್ತು. ಕೆಡಕು

ಬುದ್ಧಿಯನ್ನು ಕಳೆಯುತ್ತಿತ್ತು. ಹಿತಾಹಿತ, ಸತ್ಯಾಸತ್ಯಗಳನ್ನು ತೂಗಿ ನೋಡುವ ಶಕ್ತಿಯನ್ನು ಕೂಡುತ್ತಿತ್ತು. ಮೂಲ ಮರ್ಮವನ್ನು ತಿಳಿಸುತ್ತಿತ್ತು. ತಾರತಮ್ಯವನ್ನು ತಿಳುಹಿಸುತ್ತಿತ್ತು. ಆಡಿದ್ದೇ ಸತ್ಯ ಮಾಡಿದ್ದೇ ಪಥ್ಯ ಎಂದುಕೊಂಡಿರುವ ಮೂರ್ಖತನವನ್ನು ಬಿಡಿಸುತ್ತಿತ್ತು. 'ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು' ಎಂಬ ಪಾಠವನ್ನು ಹೇಳಿಕೊಡುತ್ತಿತ್ತು.

ಸಾರಾ ಸಾರ ವಿಚಾರ ಅಗತ್ಯ. ಅದನ್ನೆ ಎಚ್ಚರ ಅಥವಾ ಎಚ್ಚರಿಕೆ ಎನ್ನುತ್ತೇವೆ. ದಕ್ಷತೆಯೂ ಎಂದು ಹೇಳುತ್ತೇವೆ. ಇದನ್ನು ಕಳೆದುಕೊಂಡವನು ಹೆಸರಿಗೆ ಮಾತ್ರ "ದಕ್ಷ"ನಾಗಿದ್ದರೇನು? ಪ್ರಜಾಪತಿಯಾಗಿದ್ದರೇನು? ದಂಡನೆಗೆ ಗುರಿಯಾಗದೆ ತಪ್ಪುವಂತಿರಲಿಲ್ಲ ತಾನೆ? ವಿಚಾರ ದೌರ್ಬಲ್ಯವೂ ಒಂದು ಬಂಧನ; ಒಂದು ವಿಕಾರ. ಅದೇ ಅಂತಃಕರಣ ಜಾಡ್ಯ. ಅಂಥವನು ತನ್ನ ಬಲವನ್ನೇ ತಾನು ತಿಳಿಯದೆ ಇನ್ನೊಬ್ಬರ ಮೇಲೆ ಬಲಾತ್ಕಾರ ಮಾಡಲು ಹೆಣಗುತ್ತಾನೆ. ತನ್ನ ಅಸ್ತಿತ್ವಕ್ಕೇನೆ ಭಂಗವನ್ನು ತಂದುಕೊಳ್ಳುತ್ತಾನೆ. ಸ್ವಯಂ ಪ್ರತಿಷ್ಠೆ ತಲೆಯೆತ್ತಿದರೆ ಜೀವನವೇ ತಲೆಕೆಳಗಾಗುತ್ತದೆ. ಪ್ರಿಯ ಅಪ್ರಿಯವಾಗಿ ಸತ್ಯ ಅಸತ್ಯವಾಗಿ ನ್ಯಾಯ ಅನ್ಯಾಯವಾಗಿ ಸ್ವಾರ್ಥವೇ ಪರಮಾರ್ಥವಾಗಿ ದುರ್ಮಾರ್ಗವೇ ಸನ್ಮಾರ್ಗವಾಗಿ ಕಂಡುಬರುತ್ತವೆ. ಅಂತೆಯೇ ಮುನ್ನಡೆಯಿಸಿ ಮುಗ್ಗರಿಸ ಹಚ್ಚುತ್ತವೆ. ಇದಕ್ಕೆ ದಕ್ಷ ಚರಿತ್ರ ಪ್ರತ್ಯಕ್ಷ ಪ್ರಮಾಣ.

ವೀರಭದ್ರನ ವ್ಯಕ್ತಿತ್ವ ಸಾಮಾಜಿಕ ನ್ಯಾಯುವನ್ನು ಸಾರ್ವಜನಿಕ ಸಹಕಾರವನ್ನು ಯಾಜಕರಲ್ಲಿ ಋಜುತನವನ್ನು ತರುವದಾಗಿದ್ದಿತು. ಮತ್ಸರ ಬುದ್ಧಿಯಿಂದ ಹಿರಿಯರ ಹಿರಿಯತನವನ್ನು ಮೇಧ ಪತಿತ್ವವನ್ನು ಕಿತ್ತುಕೊಳ್ಳಲೆತ್ನಿಸುವುದು, ಯತ್ನ ಯತ್ನಕಾರ್ಯ ಅಕ್ರಮ ಪಥದಲ್ಲಿ ಸಾಗುವುದು ಆತನಿಗೆ ಅಭಿಮತವಾಗಿರಲಿಲ್ಲ. ಅಕ್ರಮ ಹೋಮಕ್ಕೆ ಅಂತಹ ಹೋಮ ಕರ್ತೃವಿಗೆ ಬೆಂಬಲವೀಯುವುದು ಆತನ ನ್ಯಾಯಬದ್ಧವಾದ ಬಗೆಗೆ ಒಪ್ಪಿತವಾಗಿರಲಿಲ್ಲ. ಆರಾಧನೆ ನಿಸ್ವಾರ್ಥದ್ದಾಗಿರಬೇಕು; ನಿರ್ಮತ್ಸರದ್ದಾಗಿರಬೇಕೆಂಬುದೇ ವೀರಭದ್ರನ ಅಭಿಮತ. ಅದಕ್ಕಾಗಿ ಆತನ ಕ್ರಾಂತಿ. ಆತನು ಆ ಪ್ರಗತಿಪರ ಕ್ರಾಂತಿಯ ಉತ್ಪಾದಕ; ಸಂಚಾಲಕ. ಅಂತಹ ಆ ವೀರಭದ್ರನನ್ನು ಬಸವಣ್ಣನು ಸಾಕ್ಷಾತ್ ಕೂಡಲಸಂಗಮ ಸ್ವರೂಪವನ್ನಾಗಿ ಕಂಡಿದ್ದಾನೆ; ಕೊಂಡಾಡಿದ್ದಾನೆ. "....ಕೂಡಲಸಂಗಮದೇವನು, ದಕ್ಷನ ಯಜ್ಞವ ಕೆಡಿಸಿದುದ ಮರೆದಿರಲ್ಲಾ!" ಎಂದೆನ್ನುತ್ತಾನೆ.

ಯುಗ ಪ್ರವರ್ತಕ ವೀರಭದ್ರ

ಅದೊಂದು ಚಾಕ್ಷುಷ ಮನ್ವಂತರ. ಮನ್ವಂತರ ಚಾಕ್ಷುಷದ್ದಾದರೂ ಮಾನವರಿಗೆ ದೇವತೆಗಳೆನಿಸಿಕೊಂಡವರಿಗೆ ಚಕ್ಷುಗಳಿರಲಿಲ್ಲ. ಮದಮತ್ಸರಗಳಿಂದ ಮೋಹಾಂಧಕಾರದಿಂದ ಮಾನದ ಶನಿಯಿಂದ ಕಣ್ಣುಗಳು ಮುಚ್ಚಿ ಹೋಗಿದ್ದವು. ನ್ಯಾಯ ನೀತಿಗಳಿಗೆ ಅವಕಾಶವಿರಲಿಲ್ಲ. ಜಡಕರ್ಮದ ಜಂಭ ಆಡಂಬರದ ಯಜ್ಞಯಾಗಗಳ ಕಾಲವಾಗಿತ್ತು. ದೇವತೆಗಳೆಲ್ಲ ದಕ್ಷನ ಗರ್ವಪೂರ್ಣ ಯಜ್ಞದ ಕಪಿಮುಷ್ಠಿಯಲ್ಲಿ ಸಿಕ್ಕಿಬಿದ್ದಿದ್ದರು. ಮನು ಮುನಿಗಳು ಮುಂಗಾಣದಾಗಿದ್ದರು. ಮಾನವೀಯ ಮೌಲ್ಯಗಳಿಗೆ ದೈವೀಗುಣಗಳಿಗೆ ಅವಕಾಶವಿರಲಿಲ್ಲ. ಶಿವಭಾವಕ್ಕೆ ತಿಲಾಂಜಲಿ ಬಿದ್ದಿತ್ತು. ಇವನ್ನೆಲ್ಲ ಎತ್ತಿ ಹಿಡಿಯಲು ಅಚ್ಚಾಳು ವೀರಭದ್ರನು ಖಡ್ಗವನ್ನೆತ್ತಿ ಹಿಡಿದನು. ಶೈವಯುಗ ಪ್ರವರ್ತಕನಾದನು; ವೀರಯುಗ ಪ್ರವರ್ತಕನಾದನು. ವೀರಶಿವನೆಂದೆನಿಸಿದನು.

ಆತನ ಆ ವೀರಶಿವತ್ವವು ಯುಗ ಪ್ರವರ್ತನೆಯ ಒಂದು ಪ್ರತೀಕ. ವೀರತ್ವವಿರುವಲ್ಲಿ ಶಿವತ್ವವಿರುವುದು ನಿಜಕ್ಕೂ ಯುಗಪುರುಷನಿಗಿರುವ ವಿಶಿಷ್ಟ ಲಕ್ಷಣ. ಪರಿಣಾಮಕಾರಕ ಪ್ರಮಾಣ. ತನ್ನ ವೀರಶಿವತ್ವವನ್ನು ವಿಶ್ವಕ್ಕೆ ಎತ್ತಿತೋರಿರುವನು. ಎಲ್ಲೆಲ್ಲಿಯೂ ಬಿತ್ತಿ ಬೆಳೆದನು. ಇತ್ತು ಬದುಕಿಸಿದನು. ಅದರ ಫಲವಾಗಿ ಅವನಿಂದಲೇ ವೀರಶೈವವು ಆರಂಭವಾಯಿತು. ಸರ್ವ ಸಮನ್ವಯ ಸಿದ್ಧಾಂತಕ್ಕೆ ಅಡಿಗಲ್ಲನ್ನಿಟ್ಟನು. ವೀರಮತ ಪ್ರವರ್ತಕನಾದನು.

ರುದ್ರದೇವನು ಸ್ಕಂದನಿಗೆ ವೀರಶೈವವನ್ನು ಬೋಧಿಸಿದರೆ, ವೀರಭದ್ರನು ನಂದಿಗೆ ವೀರಶೈವವನ್ನು ಬೋಧಿಸುವನು.

"ರುದ್ರೇಣ ದೀಕ್ಷಿತೋ ಭೂತ್ವಾ ಸ್ಕಂಧಃ ಶಿವಸಮೋ ಭವೇತ್ ।"

ಎಂದು ಆದಿತ್ಯ ಪುರಾಣದಲ್ಲಿ ಉಕ್ತವಾಗಿರುವುದನ್ನು ಚನ್ನಬಸವಣ್ಣನು ಅಂಗೀಕರಿಸಿ ತನ್ನ ವಚನದಲ್ಲಿ ಉದ್ಧರಿಸಿದ್ದಾನೆ.

ಆತನಿಂದ ಬಂದ ವೀರಶೈವ ಅದೊಂದು ವಿಶಿಷ್ಟವಾದ ಕ್ರಾಂತಿಕಾರಕ ಶಾಂತಿದಾಯಕ ವಿಚಾರಧಾರೆ; ಶಿವಾಚಾರಧಾರೆ. ಅದೊಂದು ಸತ್ವಶಾಲಿಯಾದ ಸರ್ವಸಮನ್ವಯ ಸಿದ್ಧಾಂತ; ಸರ್ವ ಸಮ್ಮತ. ದ್ವೈತ ಬೇರೆ ಅದ್ವೈತ ಬೇರೆ ಸಾಂಖ್ಯಯೋಗ ವೈಶೇಷಿಕಾದಿಗಳು ಬೇರೆ ಎಂಬ ಭೇದ ಭಾವವನ್ನು ಕಿತ್ತುಹಾಕಿದ ಸಮನ್ವಯ ಪ್ರಜ್ಞೆ ವೀರಭದ್ರನದು. ಎಲ್ಲ ದರ್ಶನಗಳನ್ನು ವೀರಶೈವನಲ್ಲಿ ಸಮನ್ವಯಗೊಳಿಸಿ ವೀರಭದ್ರನು ಯುಗಪುರುಷನಾದನು; ಯುಗ ಪ್ರವರ್ತಕನಾದನು.

ವೀರಭದ್ರನು ಶಿವಭಕ್ತಿಯಲ್ಲಿಯೂ ವೀರನಾಗಿದ್ದನು. ಭಕ್ತಿ ಪಂಥವನ್ನು ಬೆಳಸಿದನು. ಭಕ್ತಿಯಲ್ಲಿ ಕುಲಜಾತಿಗಳ ಭೇದವಿಲ್ಲೆಂದು ಬೋಧಿಸಿದನು. ಧರ್ಮೋದ್ಧಾರ ಕಾರ್ಯದಲ್ಲಿ ಸ್ತ್ರೀಪುರುಷ ಭೇದವಿಲ್ಲೆಂದು ಸಾರಿದನು. ತನ್ನ ಧರ್ಮಪತ್ನಿಯಾದ ಭದ್ರಕಾಳಿಯನ್ನು ಮುಮ್ಮೊದಲು ಧರ್ಮಕ್ರಾಂತಿ ಪಥಕ್ಕೆ ಕರೆತಂದನು.

ಯಜ್ಞ ಪುರುಷ-ಯಜ್ಞೇಶ್ವರ ಯಥಾರ್ಥವಾಗಿ ರುದ್ರ ಮತ್ತು ಶಿವ ಇವರಾಗಿದ್ದರು. ಹೀಗಿದ್ದರೂ ಯಜ್ಞಾಚಾರ್ಯ ಪಟ್ಟವನ್ನು ಬೇರೊಬ್ಬರಿಗೆ ಕಟ್ಟಬೇಕೆಂದು ಬಗೆದು ದಕ್ಷನು ಯದ್ಯಚ್ಛೆಯಂತೆ ಯಜ್ಞವೊಂದನ್ನು ಆರಂಭಿಸಿ ಸನಾತನ ಧರ್ಮಕ್ಕೆ ಧಕ್ಕೆಯನ್ನು ತಂದೊಡ್ಡಿದ್ದನು. ಅಂಥ ಸಮಯದಲ್ಲಿ ವೀರಭದ್ರನು ತನ್ನ ಸರ್ವಶಕ್ತಿಯನ್ನು ಧಾರೆಯೆರೆದು ಧರ್ಮವನ್ನು ಎತ್ತಿಹಿಡಿದನು. ಅಂದು ಅವನಿಂದ ಭಾರತೀಯಧರ್ಮದ ಪುನರುತ್ಥಾನವಾಯಿತು. ಧರ್ಮಕ್ಕೆ ಪುನಶ್ಚೇತನ ಬಂದಿತು.

ಶೈವ ಧರ್ಮದ ಸ್ವಾತಂತ್ರ್ಯಾಪಹರಣದ ಪ್ರತೀಕ ದಕ್ಷಯಜ್ಞ, ಶಿವ ಸ್ವಾತಂತ್ರ್ಯಾಪಹರಣ ಕರಣವೂ ಅಹುದು. ರುದ್ರಾಗ್ನಿಗೆ ರುದ್ರಮೂರ್ತಿಗೆ ಶಿವನೆಂಬ ಶಾಂತಿ ಜಲಕ್ಕೆ ಅಲ್ಲಿ ಸ್ಥಾನವಿರಲಿಲ್ಲ. ಮತ್ತು ಮುತ್ತುಗ. ಅರಳೆ, ಬನ್ನಿ, ಬಿಲ್ವ, ಔದಲ, ಅಡಸಲ, ನೆಲ್ಲಿ, ಅರೆ, ತಾರೆ ಮೊದಲಾದ ಸಮಿತ್ತುಗಳಿಂದ ಋತುಧರ್ಮವನ್ನು ಋತುಕಾಲವನ್ನು ಅನುಸರಿಸಿ ಮಾಡಬೇಕಾದ ವಾಸ್ತವಯಜ್ಞವಾಗಿರಲಿಲ್ಲ. ರುದ್ರಶಕ್ತಗಳಿಗಿಂಬಿರಲಿಲ್ಲ.

ವೇದ, ವೇದಾಂಗ, ಆಗಮ, ಸ್ಮೃತಿ ಮುಂತಾದ ಧರ್ಮಗ್ರಂಥಗಳ ಅಧ್ಯಯನವೆ ಬ್ರಹ್ಮಯಜ್ಞ, ಅಗ್ನಿಹೋತ್ರ, ಶಿವಸಮರ್ಚನಾದಿಗಳೆ ದೇವಯಜ್ಞ, ಅತಿಥಿ ಅಭ್ಯಾಗತರ ಆದರಣೆಯೇ ಮನುಷ್ಯಯಜ್ಞ, ಈ ತ್ರಿವಿಧ ಯಜ್ಞಗಳು ಪರಮ ಪವಿತ್ರವಾದವು. ಇವುಗಳಿಗೆ ಮಾತ್ರ ಮಾನ್ಯತೆಯಿದ್ದಿತು ರುದ್ರಯುಗದಲ್ಲಿ. ದಕ್ಷನು ಪಿತೃಯಜ್ಞ, ಭೂತಯಜ್ಞಗಳನ್ನು ಪ್ರಾರಂಭಿಸಿ, ಪಿತೃಯಜ್ಞದಲ್ಲಿ ಅರಳು-ಯಳ್ಳು-ಅನ್ನ-ಹಾಲು-ತುಪ್ಪ-ಅಕ್ಕಿ-ಹಿಟ್ಟು ಮುಂತಾದ ಪಡಿ ಪದಾರ್ಥಗಳನ್ನು ಹವನ ಮಾಡತೊಡಗಿದನು. ಭೂತಯಜ್ಞದಲ್ಲಿ ಕುರಿ, ಕೋಣ, ಹಸು ಮುಂತಾದ ಪ್ರಾಣಿಗಳನ್ನು ವಧಿಸತೊಡಗಿದನು. ಇದರಿಂದಾಗಿ ಇಂತಹ ಯಜ್ಞಗಳೇ ಬೇಡೆಂದು ವೀರಭದ್ರನು ವೀರಕ್ರಾಂತಿಯನ್ನು ಮಾಡಿದನು. ಇದಲ್ಲದೆ ತತ್ತ್ವ, ತನ್ಮಾತ್ರ, ಪ್ರಕೃತಿ, ಪುರುಷ, ವಿದ್ಯೆ, ಕಲೆ, ಕಾಲ, ಮಾಯೆ ಮುಂತಾದವುಗಳ ಮೇಲೆಯು ಕ್ರಾಂತಿಯನ್ನು ಮಾಡಿ ಹೊಸ ಬೆಳಕನ್ನು ಬೀರಿದ್ದಾನೆ. ವೀರಭದ್ರಯುಗವನ್ನೇ ಸ್ಥಾಪಿಸಿದ್ದಾನೆ.

ದಕ್ಷಬ್ರಹ್ಮನ ಹಿಂದಿನ ಕಾಲದಲ್ಲಿ ರುದ್ರ ಯುಗದಲ್ಲಿ ಋಗ್ವೇದ ಸಮಯದಲ್ಲಿ ಯಜ್ಞದ ಸ್ವರೂಪ ಬೇರೆಯೇ ಆಗಿದ್ದಿತು. ಭಾವಪೂರ್ಣವಾಗಿದ್ದಿತು. ಇದಕ್ಕೆ ಸಾಕ್ಷಿಯನ್ನು ಸೊಲ್ಲುತ್ತದೆ ಅದೇ ಋಗ್ವೇದದ ಹತ್ತನೆಯ ಮಂಡಲದ ಹತ್ತನೆಯ ಸೂಕ್ತವಾದ ಪುರುಷ ಸೂಕ್ತ.

"ದೇವಾ ಯಜ್ಞಮತನ್ವತ; ವಸಂತೋ ಅಸ್ಯಾಸೀದಾಜ್ಯಂ
ಗ್ರೀಷ್ಮ ಇಧ್ಮಃ ಶರದ್ಧವಿಃ ಸಪ್ತಾಸ್ಯಾಸನ್ ಪರಿಧಯಃ
ತ್ರಿಸಪ್ತ ಸಮಿಧಃ ಕೃತಾಃ ।...."

ಋಗ್ವೇದ ಕಾಲಕ್ಕೋ ಅದಕ್ಕೆ ಹಿಂದೆಯೋ ದೇವತೆಗಳು ಯಜ್ಞವನ್ನು ನೆರವೇರಿಸಿದರು. ಅದು ಹೀಗಿದ್ದಿತು. ಅದಕ್ಕೆ ವಸಂತ ಋತುವೆ ಆಜ್ಯ. ಗ್ರೀಷ್ಮಋತುವೆ ಸಮಿತ್ತು. ಶರದೃತುವೆ ಹವಿಸ್ಸಾಗಿದ್ದಿತು. ಏಳು ಛಂದಸ್ಸುಗಳೆ ಸಂಧಿಗಳಾದವು. ಇಪ್ಪತ್ತೊಂದು ತತ್ತ್ವಗಳೇ ಸಮಿತ್ತುಗಳಾದವು ಎಂದು ಮುಂತಾಗಿ ನಿಸರ್ಗ ಯಜ್ಞವನ್ನು ಸುಂದರವಾಗಿ ಸ್ವಾರಸ್ಯವಾಗಿ ಪ್ರತಿಪಾದಿಸಿದೆ ಪುರುಷ ಸೂಕ್ತ.

ಯಜ್ಞದ ಈ ವಿಮಲವೂ ವಿಶಾಲವೂ ಆದ ಭಾವನೆಯೆತ್ತ? ದಕ್ಷ ಬ್ರಹ್ಮನ ಅರ್ಥವಿಲ್ಲದ ಸ್ವಾರ್ಥಸಾಧನೆಯ ಯಜ್ಞವೆತ್ತ? ನಿಸರ್ಗಕ್ಕೆ ನಿರಹಂಕಾರಕ್ಕೆ ದೂರಾದ ಕಳಂಕಸಹಿತವಾದ ಯಜ್ಞಗಳ ನಿರೋಧವೇ ವೀರಭದ್ರನ ಮುಖ್ಯ ಕರ್ತವ್ಯವಾಗಿದ್ದಿತು. ಜೀವನ ಧ್ಯೇಯವಾಗಿದ್ದಿತು. "ಹಿಂಸಾತ್ಮಕ ಯಜ್ಞ ಯಾಗಗಳಾಗಬಾರದೆಂಬ ಭಾವನೆಯು ಪ್ರಗತಿಪರರಲ್ಲಿ ಹುಟ್ಟಿ, ಯಜ್ಞಾಚರಣೆಯನ್ನು ವಿರೋಧಿಸಿದ ಪ್ರಮಥಗಣವರ ವೀರಭದ್ರನು ಯಜ್ಞವನ್ನು ಧ್ವಂಸಮಾಡಿದಾಗ ಅವನ ಹಿಂಬಾಲಕರ ದೈವವಾದ ಶಿವನು "ಕ್ರತು ಧ್ವಂಸಿ"ಯೆಂಬ ಹೆಸರನ್ನು ಪಡೆದನು" ಎಂದು ಶ್ರೀ ಟಿ.ಎನ್. ಮಲ್ಲಪ್ಪನವರು ತಮ್ಮ 'ಸಾಯಣಭಾಷ್ಯೋಪೇತ ಪುರುಷಸೂಕ್ತ' ಎಂಬ ಪುಸ್ತಿಕೆಯಲ್ಲಿ ಪ್ರತಿಪಾದಿಸಿದ್ದಾರೆ. ಇದರಿಂದಲೂ ವೀರಭದ್ರ-ವಿರೂಪಾಕ್ಷರು ಯುಗಪುರುಷರೆಂದು ವಿದಿತವಾಗುತ್ತದೆ.

ತಂದೆಯಾದವನು ತನ್ನ ಮಕ್ಕಳನ್ನು ಕೊಲ್ಲುವುದು ಹೇಗೆ ಅಕ್ರಮವೋ, ಹೇಗೆ ಅಧರ್ಮವೋ ಹಾಗೆ ಯಜ್ಞದಲ್ಲಿ ಪ್ರಾಣಿಗಳನ್ನು ಕೊಲ್ಲುವುದು ಅಕ್ರಮ ಅಧರ್ಮ; ಎಂಬುದನ್ನು ಮೊದಲು ಹೇಳ ಹೊರಟವನು ವೀರಭದ್ರನು. ಯಜ್ಞ ಅದೊಂದು ಮಾನವೀಯ ಧರ್ಮ; ದೈವೀ ಭಾವ. ದೇವತೆಗಳ ಪ್ರಥಮ ಧರ್ಮವೂ ಆಗಿದೆ. ಧರ್ಮದಲ್ಲಿ ಅಧರ್ಮವು ತಲೆಯಿಕ್ಕಬಾರದು. ದೈವಸ್ವರೂಪದಲ್ಲಿ ದೈತ್ಯತೆ ತಾಂಡವವಾಡಬಾರದು. ಯಜ್ಞಸಾಧ್ಯವಸ್ತುವಾಗಬೇಕಲ್ಲದೆ ಸಾಧನವಾಗಬಾರದು; ಎಂಬುದೇ ವೀರಭದ್ರನ ವಿಚಾರ ಕ್ರಾಂತಿಯ ಮೂಲ ಉದ್ದೇಶ; ಮಹತ್ವದ ಅಂಶ.

"ನಾಯಮಾತ್ಮಾ ಬಲಹೀನೇನ ಲಭ್ಯತೆ" ಎಂಬುದನ್ನು ಪ್ರಯೋಗದಲ್ಲಿ ತಂದವನು ವೀರಭದ್ರನು. ಜೀವನದಲ್ಲಿ ಅಳವಡಿಸಿಕೊಂಡವನು ಆತನು. ಋತ ಧೃತಿಯಲ್ಲಿ ಆತನನ್ನು ಬಿಟ್ಟರಿಲ್ಲ. ಸತ್ಯಶೂರನಾಗಿ ಶೌರ್ಯ ಶಿವವಾಗಿ ಬಾಳಿಬೆಳಗಿದನು. ಶೌರ್ಯೋದ್ಭವನೂ ಶೌರ್ಯ ಸಮೃದ್ಧನೂ ಆಗಿದ್ದನು. ದುಷ್ಟ ರುದ್ರನೂ ಶಿಷ್ಟಭದ್ರನೂ ಆಗಿದ್ದನು. ಶಿವನ ದೃಷ್ಟಿ ದೀಪ್ತಿ ಆತನಲ್ಲಿ ದಿವ್ಯವಾಗಿದ್ದಿತು. ಅದರಿಂದಾಗಿ ಯುಗ ಪುರುಷನಾಗಲು ಸರ್ವ ಸಮರ್ಥನಾದನು.

ವೀರಭದ್ರ-ಭದ್ರಕಾಳಿ

ಇವರಿಬ್ಬರು ದಂಪತಿಗಳು. ಆದರ್ಶ ದಂಪತಿಗಳು. ನಾಮ ರೂಪು ಕ್ರಿಯೆಗಳಲ್ಲಿ ಆದರ್ಶರಾಗಿದ್ದರು. ಪತಿ ಹೇಗೆ ವೀರತನದಲ್ಲಿ ವೀರರಲ್ಲಿ ಭದ್ರನೋ ಹಾಗೆ ಸತಿ. ಭದ್ರತನದಲ್ಲಿ ಭದ್ರರಲ್ಲಿ ಕಾಳಿ; ಅಂದರೆ ಕಳೆಯುಳ್ಳವಳು. ಕಾಳಿ ಒಂದು ತೇಜಸ್ಸು; ಒಂದು ಶ್ರೇಷ್ಠ ಶಕ್ತಿ. ಹೀಗೆ ನಾಮ-ರೂಪಗಳಿಂದ ಇಬ್ಬರು ಸದೃಶರಾಗಿರುವಂತೆ ಕ್ರಿಯೆಯಲ್ಲಿಯೂ ಸಮಸಮರಾಗಿದ್ದರು.

ವೀರಭದ್ರ ದೇವನು ಲೋಕ ಹಿತಕ್ಕಾಗಿ ತನ್ನ ಜೀವನವನ್ನೆ ಮುಡಿಪಾಗಿರಿಸಿದ್ದಂತೆ ಭದ್ರಕಾಳಿಯೂ ಇರಿಸಿದ್ದಳು. ಭದ್ರಕಾಳಿ ಭಾರತದ ಪ್ರಪ್ರಥಮ ಆದರ್ಶ ಮಹಿಳೆ. ವೀರಭದ್ರನೊಡನೆ ಕ್ರಾಂತದರ್ಶಿನಿಯಾಗಿದ್ದಳು. ಯಜ್ಞ ಕ್ರಾಂತಿಯ ಪಥದಲ್ಲಿ ಸಹಭಾಗಿನಿಯಾಗಿದ್ದಳು. ದಕ್ಷನ ಯಜ್ಞ ನಿರೋಧ ಕ್ರಾಂತಿಗೆ ತನ್ನ ಅಮೌಘವಾದ ಸೇವೆಯನ್ನು ಸಲ್ಲಿಸಿರುವಳಲ್ಲದೆ ಸ್ತ್ರೀಯರದೇ ಒಂದು ಪಡೆಯನ್ನು ರಚಿಸಿ ಅದಕ್ಕೆ ಅಧ್ಯಕ್ಷಿಣಿಯಾಗಿದ್ದಳು. ಆ ಸ್ತ್ರೀ ಪಡೆಯನ್ನು ಕ್ರಾಂತಿಗೆ ಅನುವಾಗಿಸಿದ್ದಳು. ಲೋಕಕ್ಕೆ ಒದಗಿದ ಕಂಕಟವನ್ನು ನಿವಾರಿಸುವುದೆ ಅವರಿಬ್ಬರ ಮಣಿಹವಾಗಿದ್ದಿತು.

ವೀರಭದ್ರನ ವ್ಯಕ್ತಿಚಿತ್ರವನ್ನು ನಿಜಗುಣರು ತಮ್ಮ ವಿವೇಕ ಚಿಂತಾಮಣಿಯಲ್ಲಿ ಹೀಗೆ ಹೇಳಿದ್ದಾರೆ:

"ಶತರುದ್ರಪತಿ ವೀರಭದ್ರ: ಕಾಲಾಂಜನ ನೀಲವರ್ಣಮಯ ಶರೀರದಿಂ, ಜಟಾಮಕುಟದಿಂ ಏಕಮುಖ ತ್ರಿನೇತ್ರ ದೀಪ್ತ ದುಷ್ಟ್ರಗಳಿಂ, ಖಡ್ಗ, ಫಲಕ, ಚಾಪ, ಬಾಣಂಗಳನಾಂತ ವಾಮ ದಕ್ಷಿಣಕರ ಚತುಷ್ಟಯದಿಂ, ವಸ್ತ್ರ ಮಾಲ್ಯಾ ಭರಣಾದಿಗಳಿಂದಲಂಕೃತನಾಗಿ, ಭದ್ರಕಾಳೀ ಸಾಹಚರ್ಯದಿಂ, ದುಷ್ಟ ನಿಗ್ರಹ ಶಿಷ್ಟ ಪರಿಪಾಲನ ಪ್ರಭುವೆನಿಸಿ, ಪೃಥಿವ್ಯಾದಿ ಸೂಕ್ಷ್ಮಭೂತ ವರ್ಗದಲ್ಲಿರ್ದು ವೀರಮಾಹೇಶ್ವರ ಪ್ರವರನಾಗಿ ವಂದ್ಯನೆನಿಸಿರ್ಕುಂ."

"ಶತರುದ್ರಪತಿ, ಭದ್ರಕಾಳೀ ಸಾಹಚರ್ಯದಿಂ ದುಷ್ಟನಿಗ್ರಹ ಶಿಷ್ಟ ಪರಿಪಾಲನ ಪ್ರಭುವೆನಿಸಿ, ಪೃಥಿವ್ಯಾದಿ ಸೂಕ್ಷ್ಮ ಭೂತವರ್ಗದಲ್ಲಿರ್ದು ವೀರ ಮಾಹೇಶ್ವರ ಪ್ರವರನಾಗಿ ವಂದ್ಯನೆನಿಸಿರ್ಕುಂ"

ಎಂಬೀ ವಾಸ್ತವಪೂರ್ಣವಾದ ಮಾತುಗಳು ಗಮನಾರ್ಹವಾಗಿವೆ. ನಮ್ಮ ಅಭಿಪ್ರಾಯಗಳನ್ನು ಪೋಷಿಸುವಂಥವುಗಳಾಗಿವೆ. ವೀರಭದ್ರನು ನೂರು ಜನ ರುದ್ರಗಣಾಧ್ಯಕ್ಷನು. ಆತನ ದುಷ್ಟ ನಿಗ್ರಹ ಶಿಷ್ಟಾನುಗ್ರಹ ಕಾರ್ಯದಲ್ಲಿ ಭದ್ರಕಾಳಿಯ ಸಹಕಾರ ಅನಿವಾರ್ಯವಾಗಿತ್ತು. ಅವಳ ಆ ಸಾಹಚರ್ಯದಿಂದ ಸಮರ್ಥನೂ ಪ್ರಭುವೂ ಅನಿಸಿದ್ದನು. ಇಲ್ಲಿಯೂ ಇದ್ದನು. ಮಿಗಿಲಾಗಿ ವೀರಮಾಹೇಶ್ವರ ಶ್ರೇಷ್ಠನೂ ಗರಿಷ್ಠನೂ ಆಗಿದ್ದನು.

"ಸಾಹಚರ್ಯ" ಪದ ಭದ್ರಕಾಳಿಯ ಸಾರ್ವಜನೀನ ಜೀವನವನ್ನು ಎತ್ತಿ ತೋರುವ ಸರ್ವ ಸಮರ್ಥ ಪದ. ಎಲ್ಲದರಲ್ಲಿಯೂ ಪತಿಯೊಡನೆ ಒಂದಾಗಿ ಬಾಳಿದುದನ್ನು ಹೇಳುವ ಪದ. ಅಂತೆಯೇ "ವೀರಮಾಹೇಶ್ವರ ಪ್ರವರ" ಎಂಬುದೂ ವಿಚಾರಣೀಯ ವಿಷಯ. ವೀರಭದ್ರನೂ ಒಂದು ಕಾಲದ ವೀರ ಮಾಹೇಶ್ವರನಾಗಿ ವಿಖ್ಯಾತನಾಗಿರಬೇಕೆನಿಸುತ್ತದೆ. ವೀರಶೈವದ ಮೂಲ ಪುರುಷನೂ ಆಗಿರಬೇಕು. (ಈ ವಿಚಾರವಾಗಿ "ವೀರಶೈವ-ವೀರಭದ್ರ" ಎಂಬ ಒಂದು ಪ್ರಕರಣವನ್ನೇ ರೂಪಿಸಲಾಗಿದೆ.) ಈ ವಿಷಯದಲ್ಲಿ "ವಿದ್ಯಾಲಂಕಾರ" ಬಿರುದಾಂಕಿತರಾದ ಶ್ರೀ ಎಸ್.ಕೆ. ರಾಮಚಂದ್ರರಾವ್ ಅವರು "ಗೂಳೂರಿನಲ್ಲಿ ಶ್ರೀಶೈಲ ಸನ್ನಿಧಿ, ವಿಶಿಷ್ಟ ಶಿಲ್ಪ ಸಂಪತ್ತು; ಶೈವ ಧರ್ಮದ ಮುನ್ನೋಟ" ಎಂಬ ತಮ್ಮ ಬರಹದಲ್ಲಿ ಹೀಗೆ ಹೇಳಿದ್ದಾರೆ.

"....ಈ ಮೂರ್ತಿ ಯಾರು? ಈ ಜಿಜ್ಞಾಸೆಯಿಂದ ವೀರಭದ್ರನೆಂಬುವನು ಪ್ರಾಚೀನವಾದ ವೀರಶೈವ ಮತ ಪ್ರವರ್ತಕ ಗುರುವಾಗಿರಬಹುದೆಂಬ ಊಹೆ ಬಲವಾಗುತ್ತದೆ. ಇದಕ್ಕೆ ಗೂಳೂರಿನ ಶಿಲ್ಪ ನೆರವಾಗುತ್ತದೆ."

....ಪ್ರಖ್ಯಾತ ಪಂಡಿತರಾದ ಸುರೇಂದ್ರನಾಥ ದಾಸಗುಪ್ತರು ಅವಲೋಕಿಸಿ ಉಲ್ಲೇಖಿಸಿದ ಹಸ್ತಲಿಖಿತ ಗ್ರಂಥವೊಂದರಲ್ಲಿ ವೀರಶೈವ ಗುರುಪರಂಪರೆಯನ್ನು ಹೀಗೆ ನಿರೂಪಿಸಿದ್ದಾರೆ:

ವಿಶ್ವೇಶ್ವರಗುರು, ಏಕೋರಾಮ, ವೀರೇಶಾರಾಧ್ಯ, ವೀರಭದ್ರ, ವೀರಣಾರಾಧ್ಯ ಮಾಣಿಕ್ಯಾರಾಧ್ಯ, ಬುಚ್ಚಯಾರಾಧ್ಯ, ವೀರಮಲ್ಲೇಶಾರಾಧ್ಯ, ದೇಶಿಕಾರಾಧ್ಯ, ವೃಷಭ, ಅಕ್ಷಕ, ಮುಖಲಿಂಗೇಶ್ವರ ಈ ಪರಂಪರೆಯಲ್ಲಿ ವೀರಭದ್ರನ ಹೆಸರಿರುವುದು ಗಮನಾರ್ಹ. ವೀರಭದ್ರನು ಪ್ರಾಚೀನ ಆಚಾರ್ಯರಲ್ಲಿ ಒಬ್ಬನೆಂದು ಪ್ರತೀತಿಯೂ ಇದೆ. – ಶ್ರೀಶೈಲಪೀಠದರ್ಶನ

ಇದು ಆ ವೀರಭದ್ರನ ವೀರಮಾಹೇಶ್ವರತ್ವಕ್ಕೆ ಮತ್ತೊಂದು ನಿದರ್ಶನ.

ಕಾಳಿ, ಕರಾಲಿ, ಮನೋಜವೆ, ಸುಲೋಹಿತೆ, ಸುಧೂಮ್ರವರ್ಣೆ, ಸ್ಫುಲಿಂಗಿನಿ, ವಿಶ್ವರುಚಿ ಎಂದು ಏಳು ತೇಜಸ್ಸುಗಳು. ಇವನ್ನು ಅಗ್ನಿಯ ನಾಲಗೆಗಳೆಂದು ಹೇಳುವುದುಂಟು. ಕಾಳಿ ಕಪ್ಪುಬಣ್ಣ, ಕರಾಲಿ ಕೆಂಪುಬಣ್ಣ, ಮನೋಜವೆ ಪಚ್ಚೆಬಣ್ಣ, ಸುಲೋಹಿತೆ ಕಾವಿಬಣ್ಣ, ಸುಧೂಮ್ರ ವರ್ಣೆ ನೇರಳೆಯ ಬಣ್ಣ, ಸ್ಫುಲಿಂಗಿನಿ ಅರಸಿನ ಬಣ್ಣ, ವಿಶ್ವರುಚಿ ಬಿಳಿಯ ಬಣ್ಣ, ಇವುಗಳಲ್ಲಿ ಕಾಳಿಗೆ ಪ್ರಥಮ ಸ್ಥಾನ ಮೀಸಲಾಗಿದೆ.

ಭದ್ರಕಾಳಿಯು ರುದ್ರಕನ್ನೆಯರಲ್ಲಿ ಒಬ್ಬಳು. ರುದ್ರಕನ್ನೆಯೆಂದರೆ ರುದ್ರದೇವನ ಮಗಳಲ್ಲ; ಮಗಳ ಮಗಳು. ವೀರಭದ್ರನೊಡನೆ ಮದುವೆಯಾದ ಬಳಿಕ ಭದ್ರಕಾಳಿಗೆ "ವೀರಭದ್ರೆ" ಎಂದುದಾಗಿ ಹೆಸರು ಬಂದಿದೆ. ಮಾತೃಕಾಯೋಗಿನಿ ಶಕ್ತಿಗಳಲ್ಲಿ ಮತ್ತು ಅರವತ್ತು ನಾಲ್ಕು ಯೋಗಿನಿಯರಲ್ಲಿ ಭದ್ರಕಾಳಿಗೆ ಸ್ಥಾನಮಾನಗಳಿವೆ. ಅಗ್ನಿಕನ್ಯೆಯರು ಏಳು ಜನ, ರುದ್ರ ಕನ್ಯೆಯರು ಅಯ್ವತ್ತೇಳು ಜನ ಸೇರಿ ಅರವತ್ತು ನಾಲ್ಕು ಯೋಗಿನಿಯರೆನಿಸಿದ್ದಾರೆ. ಇವರಲ್ಲಿ ವೀರಭದ್ರೆಯೂ ಒಬ್ಬಳು. ಇವಳನ್ನು ಪ್ರೇಮಕ್ಕಾಗಿ 'ಭದ್ರೆ' ಎಂದೂ ಕರೆಯುವುದುಂಟು. ಭದ್ರಾವತಿ, ಭದ್ರಾನದಿ, ಭದ್ರಾಶ್ವವರುಷ –ಇವು ಆ ವೀರಭದ್ರೆಯನ್ನು ನೆನವಿಗೆ ತರುವ ಕುರುಹಗಳಾಗಿವೆ. ಒಂದು ಊರು, ಇನ್ನೊಂದು ತೊರೆ, ಮತ್ತೊಂದು ಪ್ರದೇಶ, ಊರು ಕರ್ನಾಟಕದಲ್ಲಿದೆ; ತೊರೆ ಗಂಧ ಮಾಧನ ಪರ್ವತದಲ್ಲಿದೆ. ಭದ್ರಾನದಿಯ ತೀರದಲ್ಲಿ 'ಅಘೋರ' ಹೆಸರಿನ ಲಿಂಗಕ್ಷೇತ್ರವಿದೆ. ಇನ್ನು ಮೂರನೆಯದಾದ 'ಭದ್ರಾಶ್ವ ವರುಷ'ವು ಮೇರುವಿನ ಮೂಡಲ ಭಾಗದಲ್ಲಿರುವುದಂತೆ! ಮಾಲ್ಯವಂತಗಿರಿಯಿಂದ ಪೂರ್ವಲವಣ ಸಮುದ್ರದವರೆಗೆ ಭದ್ರಾಶ್ವ ಪ್ರದೇಶ ಹಬ್ಬಿದೆಯಂತೆ! ಅಲ್ಲಿರುವ ಭೂಮಿಯು ಚಂದ್ರಕಾಂತ ವರ್ಣವುಳ್ಳುದಾಗಿದೆಯಂತೆ! ಸಪ್ತಕುಲ ಪರ್ವತಗಳಲ್ಲಿ ಹುಟ್ಟಿದ ಪುಣ್ಯನದಿಗಳಿಂದ ಆ ಪ್ರದೇಶ ಪಾವನವಾಗಿದೆಯಂತೆ! ಅಲ್ಲಿರುವ ಜನರು ಶಶಿಕಾಂತಿಯುಳ್ಳವರಾಗಿ ನೀಲಾಬ್ಜವೆಂಬ ಕಲ್ಪಲತೆಯ ಪ್ರಭಾವದಿಂದ ಹತ್ತುಸಾವಿರ ವರುಷ ಬಾಳುವರಂತೆ! ಅವರು ಮಹಾದೇವ ಲಿಂಗವನ್ನು ಪೂಜಿಸುತ್ತ ದುಃಖವರ್ಜಿತರಾಗಿರುವಂತೆ!

ವೀರಪುರುಷ, ಯುಗಪುರುಷ–ವೀರಭದ್ರ. ಆತನಿಗೂ ಒಂದು ಚಾರಿತ್ರಿಕ ಹಿನ್ನೆಲೆಯಿದೆ. ಭಾರತದ ಪುರಾತನ ಸಾಹಸವಂತ. ಯಜ್ಞಕ್ರಾಂತಿಯಲ್ಲಿ ಆತನಿಗೆ ಅಗ್ರಸ್ಥಾನವಿದೆ. ದಂಪತಿಗಳೊಂದಾಗಿ ದುಡಿದ ಆದ್ಯ ಆದರ್ಶತೆಯಿದೆ. ವೀರಭದ್ರ ಭದ್ರಕಾಳಿಯರದು ಕೊನೆಯಿಲ್ಲದ ವಿಶಿಷ್ಟ ಚೈತನ್ಯ ಎಂಥವರನ್ನೂ ಬೆರಗುಗೊಳಿಸುವ ಪೌರುಷ. ವೀರಭದ್ರ ಗಣಾಗ್ರಗಣ್ಯ, ಪ್ರಮಥರಲ್ಲಿ ಪ್ರತಿಭಾವಂತ ಪರಶಿವನಲ್ಲಿ ನಿರತಿಶಯ ನಿಷ್ಠಾವಂತ. ಆದ್ದರಿಂದ ಅವನು ಅಚ್ಚಾಳು ವೀರಭದ್ರ. ವೀರಭದ್ರನ ಬಾಲ್ಯಚರಿತ್ರೆ ಲಭಿಸುವುದಿಲ್ಲ. ಒಮ್ಮೆಗೆ ಆತನ ವೀರಚಾರಿತ್ರ್ಯಕ್ಕೆ ಆರಂಭವಾಗುತ್ತದೆ ಹಳೆಯ ಸಾಹಿತ್ಯ. ದಕ್ಷಯಜ್ಞ ವೀರಭದ್ರನನ್ನು ರೂಪಿಸುತ್ತದೆ. ದೇವಲೋಕದಲ್ಲಿ ವೀರಭದ್ರನಿಂದ ಹೊಸ ಯುಗವೊಂದು ಆರಂಭವಾಗುತ್ತದೆ. ದಕ್ಷಯಜ್ಞದಿಂದ ಆತನಿಗೆ ಕೀರ್ತಿ ಲಾಭವಾಗುತ್ತದೆ.

ಭದ್ರಕಾಳಿಯಲ್ಲಿ ಮತ್ತೊಂದು ಮಹಾವೈಶಿಷ್ಟ್ಯವಿದೆ; ಮಹತ್ವಪೂರ್ಣ ಚಾರಿತ್ರ್ಯವಿದೆ. ಅದೆಂದರೆ, ಸೀತೆ ದ್ರೌಪದಿಯರಿಗಾಗಿ ಯುದ್ಧಗಳಾದವು. ಬಹುಜನ ಭಾರತೀಯರು ಗತಪ್ರಾಣರಾದರು. ಭದ್ರಕಾಳಿದೇವಿಗಾಗಿ ಯಾವ ಯುದ್ಧವಿಲ್ಲ. ಪ್ರತಿಯಾಗಿ ಸತೀದೇವಿಯ ಸಾವಿಗಾಗಿ ತಾನೇ ಕೆಚ್ಚೆದೆಯಿಂದ ಕಾದಿದ್ದಾಳೆ. ವೀರಪತ್ನಿಯಾಗಿ ಗಂಭೀರ ಚಾರಿತ್ರ್ಯವುಳ್ಳವಳಾಗಿ ಬಾಳಿ ಹೋಗಿದ್ದಾಳೆ. ಶಾಂತ ಧೀರಳಾಗಿದ್ದಾಳೆ.

ದಂಪತಿಗಳಿಬ್ಬರೂ ವೀರರಾಗಿದ್ದರೂ ಯಾವ ರಾಜ್ಯವನ್ನು ಕಟ್ಟಲಿಲ್ಲ. ಯಾವ ವನಸದನಗಳನ್ನು ನಿರ್ಮಿಸಲಿಲ್ಲ. ಇಡೀ ಭಾರತವೇ ಅವರ ಭವನವಾಯಿತು. ಇಡೀ ಭಾರತೀಯರೆ ಅವರ ಆರಾಧಕರಾದರು ಅಂದಿಗೂ ಇಂದೂ ಮುಂದಕ್ಕೂ ಅಚ್ಚಳಿಯದೆ ಉಳಿಯುವ ಚಾರಿತ್ರವನ್ನು ಮಾತ್ರ ಉಳಿಸಿದ್ದಾರೆ. ವಿಶ್ವಕ್ಕಾಗಿ ವಿಶ್ರಾಂತಿಯಿಲ್ಲದೆ ದುಡಿದ ಹಿರಿಯ ಜೀವಿಗಳಾಗಿದ್ದಾರೆ. ಪವಿತ್ರ ಚರಿತ್ರರಾಗಿದ್ದಾರೆ. ರುದ್ರದೇವನ ಭದ್ರ ಬದುಕನ್ನು ಮುಂದುವರಿಸಿದ ಮಹಾ ವಿಭೂತಿಗಳಾಗಿದ್ದಾರೆ.

ಕ್ರಾಂತಿದಳ ರುದ್ರಗಣ

ಅಚ್ಚಾಳು ವೀರಭದ್ರ ದೇವನ ತಂದೆಯೇ ರುದ್ರ. ಆ ರುದ್ರದೇವನಿಂದ ರುದ್ರಗಣರ ಉದಯ. ರುದ್ರನು ರುದ್ರಗಣರನ್ನು ಹುಟ್ಟಿಸಿ ಮಗನ ನೆರವಿಗೆ ಬಿಡುತ್ತಾನೆ. ರುದ್ರ ಮತ್ತು ಶಿವ ಹಾಗೂ ವೀರಭದ್ರರ ಕ್ರಾಂತಿ ಹೀನಮಟ್ಟಕ್ಕಿಳಿದ ಸಂಸ್ಕೃತಿ ಶೂನ್ಯವಾದ ಯಜ್ಞ ವಿರೋಧ; ಯಜ್ಞ ನಿರೋಧ ಈ ಕ್ರಾಂತಿಗೆ ಸೇರಿದವರು ರುದ್ರಗಣರು. ಇವರದೇ ಒಂದು ಗುಂಪು. ರುದ್ರ ವೀರಭದ್ರರ ಉದ್ದೇಶವನ್ನು ಉತ್ಕ್ರಾಂತಿಯನ್ನು ಮುಂದುವರಿಸಿಕೊಂಡು ಹೋಗುವುದೇ ಇವರ ಉದ್ದೇಶ.

ಇವರ ಉತ್ಪತ್ತಿಯನ್ನು ಕುರಿತು ಶಿವಪುರಾಣದ ರುದ್ರಸಂಹಿತೆಯಲ್ಲಿ ಸೃಷ್ಟಿ ಖಂಡದಲ್ಲಿ ಅಧ್ಯಾಯ ಹದಿನಯ್ದರಲ್ಲಿ ಮುಂದಿನಂತೆ ವಿವರ ದೊರೆಯುತ್ತದೆ;

ಅಂದು ರುದ್ರ ಮನ್ವಂತರ. ರುದ್ರನೇ ಸೃಷ್ಟಿಯ ಮೂಲ ಪುರುಷ. ಆತನಿಂದ ಚತುರ್ಮುಖ ಬ್ರಹ್ಮ (ದಕ್ಷನ ತಂದೆ)ನು ಹುಟ್ಟುವನು. ನಿಡುಗಾಲ ತಪಸ್ಸನ್ನು ಮಾಡುವನು. ಆದರೂ ಸೃಜನ ಕಾರ್ಯ ಸುಲಭವಾಗಿ ಆತನ ಆ ಜಡಮತಿಗೆ ತಿಳಿಯದಾಗುವುದು. ಅವಿದ್ಯಾಸ್ಮಿತಾದಿಗಳಿಂದ ತಾಮಸ ಜಗತ್ತನ್ನು ದುಃಖಮಯವಾದ ಸೃಷ್ಟಿಯನ್ನು ಮಾಡಿ ಮರಳಿ ಚಿಂತಿಸುವನು. ರುದ್ರಾನುಗ್ರಹವನ್ನು ಪಡೆಯುವನು. ಶ್ರೀ ರುದ್ರದೇವನ್ನು ಪ್ರಪ್ರಮಥದಲ್ಲಿ ಸತ್ವ ಗುಣವುಳ್ಳ ಸೃಷ್ಟಿಯನ್ನು ಮಾಡುವನು. ಬಳಿಕ ರಜೋಗಣದ ಸೃಷ್ಟಿಯಾಗುವುದು. ಇದಿಷ್ಟು ಜಡಸೃಷ್ಟಿಕ್ರಮ.

ಅಷ್ಟರಲ್ಲಿ ಕೌಮಾರ ಸರ್ಗ ಪ್ರಾಪ್ತವಾಗುವುದು. ಅದು ಒಂಬತ್ತನೆಯದು. ಅದರಲ್ಲಿ ತ್ರಿಮೂರ್ತಿಗಳಲ್ಲಿ ಒಬ್ಬನಾದ ರುದ್ರದೇವನು ಜನಿಸುವನು. ಆತನು ಸರ್ವಜ್ಞನೂ ಸರ್ವಕರ್ತಾರನೂ ನೀಲಲೋಹಿತನೆಂಬ ಹೆಸರುಳ್ಳವನೂ ಆಗಿದ್ದನು. ತುಂಬಾ ತೇಜಸ್ವಿಯಾಗಿದ್ದನು. ದಯಾನಿಧಿಯಾಗಿದ್ದನು. ಪೂರ್ಣ

ರೂಪನಾಗಿದ್ದನು. ಸಕಲೇಶ್ವರನಾಗಿದ್ದನು. ಅರ್ಧನಾರೀಶ್ವರನಾಗಿದ್ದನು. ಅಂಥವನನ್ನು ಬ್ರಹ್ಮನು ನೋಡಿ,

"ದೃಷ್ಟ್ವಾನತ್ವಾಮಹಾಭಕ್ತ್ಯಾಸ್ತುತ್ವಾಽಹಂತು ಪ್ರಹರ್ಷಿತಃ ।
ಅವೋಚಂ ದೇವದೇವೇಶಂ ಸೃಜತ್ವಂ ವಿವಿಧಾಃ ॥ ಪ್ರಜಾಃ ॥
ಶ್ರುತ್ವಾ ಮಮ ವಚಸ್ಸೋಽಥ ದೇವದೇವೋ ಮಹೇಶ್ವರಃ ।
ಸಸರ್ಜ ಸ್ವಾತ್ಮನಸ್ತುಲ್ಯಾನ್ರುದ್ರೋ ರುದ್ರಗಣಾನ್ಬಹೂನ್ ॥"

ಹರುಷಗೊಳ್ಳುವನು, ನಮಿಸಿ ನುತಿಸಿ ಮಹಾ ಭಕ್ತಿಯಿಂದ ಬಗೆ ಬಗೆಯ ಪ್ರಜರನ್ನು ಸೃಷ್ಟಿಸೆಂದು ಹೇಳುವನು. ಅದನ್ನು ಕೇಳಿ ರುದ್ರ ದೇವನು ಅನೇಕ ರುದ್ರಗಣರನ್ನು ಹುಟ್ಟಿಸುವನು.

"ಅವೋಚಂ ಪುನರೇವೇಶಂ ಮಹಾರುದ್ರಂ ಮಹೇಶ್ವರಂ ।
ಜನ್ಮಮೃತ್ಯುಭಯಾವಿಷ್ಟಾಸ್ಸೃಜದೇವ ಪ್ರಜಾ ಇತಿ ॥"

ಬ್ರಹ್ಮನು ಅಷ್ಟಕ್ಕೆ ತೃಪ್ತನಾಗದೆ ಜನನ ಮರಣ ಭಯವುಳ್ಳ ಪ್ರಜರನ್ನು ಹುಟ್ಟಿಸೆಂದು ಮತ್ತೆ ಕೇಳಿಕೊಳ್ಳುವನು. ಆ ಮಾತನ್ನು ಕೇಳಿ ನಕ್ಕು ಕರುಣಾಳುವಾದ ಮಹಾರುದ್ರದೇವನು ಹೀಗೆ ಹೇಳುವನು:

"ಜನ್ಮ ಮೃತ್ಯುಭಯಾವಿಷ್ಟಾ ನಾಽಹಂ ಸ್ರಕ್ಷ್ಯೇ ಪ್ರಜಾವಿಧೇ।
ಅಶೋಭನಾಃ ಕರ್ಮವಶಾ ವಿಮನ್ನಾ ದುಃಖವಾರಿಧೌ ॥"

ಓ ಬ್ರಹ್ಮನೇ, ನಿನ್ನ ಬೇಡಿಕೆಯಂತೆ ಹುಟ್ಟು ಸಾವುಳ್ಳ –ಅಶುಭರಾದ ಕರ್ಮವಶರಾದ ದುಃಖ ಸಮುದ್ರದಲ್ಲಿ ಮುಳುಗಿದ ಪ್ರಜರನ್ನು ಹುಟ್ಟಿಸಲಾರೆನು. ಅದು ನಿನ್ನ ಕೆಲಸ. ನೀ ಮಾಡು, ಬಿಡು; ಅದು ನಿನ್ನಿಚ್ಛೆ.

"ಅಹಂ ದುಃಖೋದಧೌಮಗ್ನಾ ಉದ್ಧರಿಷ್ಯಾಮಿ ಚ ಪ್ರಜಾಃ ।
ಸಮ್ಯಗ್‌ಜ್ಞಾನ ಪ್ರದಾನೇನ ಗುರುಮೂರ್ತಿ ಪರಿಗ್ರಹಃ ॥"

ನೀನು ಅಂತಹ ಜನರನ್ನು ಹುಟ್ಟಿಸಿದರೆ ಆಗ ನಾನು ಗುರುಮೂರ್ತಿಯಾಗಿ ಅವತರಿಸಿ ದುಃಖಸಾಗರದಲ್ಲಿ ಮುಳುಗಿದವರಿಗೆ ಸಮ್ಯಗ್ ಜ್ಞಾನೋಪದೇಶವನ್ನು ಮಾಡಿ ಅವರನ್ನು ಉದ್ಧರಿಸುವೆನು ಎಂದು ಆದರ್ಶವಾದ ಆರ್ದ್ರವಾಣಿಯಿಂದ ಅಪ್ಪಣೆಯನ್ನು ಕೊಡಿಸುವನು. ಇದರಿಂದ ರುದ್ರದೇವನ ಲೋಕಕಲ್ಯಾಣದ ಉದಾತ್ತ ಉದ್ದೇಶ ಅಭಿವ್ಯಕ್ತವಾಗುತ್ತದೆ. ಗುರುಜಂಗಮರು ರುದ್ರ ಸ್ವರೂಪರು ಎಂಬುದೂ ವೆಗ್ಗಳವಾಗುತ್ತದೆ.

"ಪತಿತ್ವಂ ಶತರುದ್ರಸ್ಯ ವೇದ್ವೆಷ್ಚ ಪ್ರತಿಪಾದ್ಯತೇ" ಎಂದು ಶಿವ ರಹಸ್ಯವು ಸಾಟಿದೆ. ಅಂತೆಯೇ ವೇದೋಕ್ತಿಯೂ ಈ ರೀತಿಯಿದೆ:

"ಭದ್ರೋ ರುದ್ರ ಶತೈಸ್ಸು ಪೂಜಿತಪದಮ್" ಎಂದು ಶ್ರುತಿ ಸ್ತುತಿಸಿದೆ. ರುದ್ರಗಣರು ವೀರಭದ್ರನ ತತ್ವಾನುಯಾಯಿಗಳಾಗಿದ್ದು ಆತನ ಕ್ರಾಂತಿದಳಕ್ಕೆ ಸೇರಿ ಕೆಲಸ ಮಾಡುತ್ತಿದ್ದರು. ಕ್ರಾಂತಿಯನ್ನು ಕೈಕೊಂಡಿದ್ದರು.

"ಗಣಾಂಶ್ಚ ಪ್ರೇಷಯಾಮಾಸ ಕೋಟಿಶೋಽಂಬಿಕಯಾಸಹ" –*ಶಿವರಹಸ್ಯ*

ಇದರಿಂದ ಗಣರ ಸಂಖ್ಯೆ ಕೋಟಿಕೋಟಿಯಾಗಿತ್ತೆಂದು ತಿಳಿಯುತ್ತದೆ. 'ಗಂಗೆವಾಳುಕ ಸಮರುದ್ರರು' ಎಂದು ಮೇಲಿಂದ ಮೇಲೆ ಶಿವಶರಣರು ತಂತಮ್ಮ ವಚನಗಳಲ್ಲಿ ವರ್ಣಿಸಿದ್ದಾರೆ.

"ಶಾಂಕರಾಣಾಂ ಪ್ರತಿದ್ವಂದ್ವಂ ನಾಸ್ತಿಲೋಕೇಷು ಸರ್ವಥಾ!
ತೃಣೀಕುರ್ವಂತ್ಯ ಸ್ಮದಾದೀನ ಮರಾಂಭಾಕರಾಯತಃ ॥"

ಶಿವರಹಸ್ಯದಲ್ಲಿ ಶ್ರೀ ವಿಷ್ಣು ಈ ಮಾತನ್ನು ಹೇಳುತ್ತಾನೆ. ರುದ್ರಗಣರು ಶಿವಶಂಕರರಾಗಿ ಹೆಸರಾಗಿದ್ದಾರೆ. ಕ್ರಾಂತಿಯಲ್ಲಿ ಅವರಿಗೆ ಪ್ರತಿಯಾಗಿ ನಿಲ್ಲುವ ವೀರಭಟರು ಯಾವ ಲೋಕಗಳಲ್ಲಿಲ್ಲ. ಆ ಶಿವಭಟರು ನಮ್ಮಂಥವರನ್ನು ಹುಲ್ಲಿಗಿಂತ ಹೀನವಾಗಿ ಕಾಣುತ್ತಾರೆ. ಅವರು ಅನಿವಾರ್ಯ ಬಲವುಳ್ಳವರು; ಅಪ್ರತಿಮ ಶಕ್ತಿಸಂಪನ್ನರು.

"ಕುಪಿತಾ ನ ಭವಂತ್ಯೇವ ಸಹಸಾ ಶಾಙ್ಕರಾ ಧ್ರುವಂ ।
ಕುಪಿತಾಶ್ಚ ತದಾ ಲೋಕಾನ್ ದಹಿಷ್ಯಂತ್ಯೇವ ಶಾಂಕರಾಃ ॥"

ರುದ್ರಗಣರು ಕ್ರಾಂತಿಕಾರರಾದರೂ ಸ್ವಾಭಾವಿಕವಾಗಿ ಶಾಂತರು. ನಿಜವಾಗಿಯೂ ಅವರು ಬೇಗ ಸಿಟ್ಟಿಗೇಳುವುದಿಲ್ಲ. ಸಿಟ್ಟಿಗೆದ್ದರೆ ಅವರು ಜಗತ್ತನ್ನೇ ಸುಟ್ಟುಹಾಕುವರು. ಅಂತಹ ಜ್ಯೋತಿರ್ವಿಜ್ಞಾನಿಗಳವರು; ಜ್ಯೋತಿರ್ಮಯರವರು. ಅವರ ಕ್ರಾಂತಿ ಶಕ್ತಿಗೆ ಕೊನೆಯಿರಲಿಲ್ಲ. ಅವರು ಅಸಂಖ್ಯರು; ಅವರ ಶಕ್ತಿ ಅಜೇಯವು.

"ಶಂಕರಃ ಪ್ರೇಷಯಾಮಾಸ ಶೋಧಾರ್ಥಂ ಕೋಟಿಶೋಗಣಾನ್ ।
ವೀರಭದ್ರಸ್ಯ ಪುರತಃ ಪಶ್ಚಾದಪಿ ಯಯುರ್ಗಣಾಃ ॥"

ಅದೇ ಶಿವರಹಸ್ಯವು ಹೀಗೆ ಹೇಳಿದೆ. ವೀರಭದ್ರನೊಡನೆ ಯಜ್ಞ ಕ್ರಾಂತಿಗಾಗಿ ಹೊರಟ ರುದ್ರಗಣರು ನೂರಲ್ಲ ಸಾವಿರಲ್ಲ ಕೋಟಿ ಜನ.

'ಶೋಧಾರ್ಥಂ' ಎಂಬ ಪದ ಪರಾಮರ್ಶನೀಯವಾದುದು. ಅವರು ಶೂರರಾದರೂ ಶೋಧ ಬುದ್ಧಿಯಿದ್ದಿತು. ಸತ್ಯಾಸತ್ಯವನ್ನು ಶೋಧಿಸುತ್ತಿದ್ದರು. ಅಸತ್ಯವಿದ್ದರೆ ಅದಕ್ಕೆ ಕನಲುತ್ತಿದ್ದರು.

"ಏವಂ ಗಣಾಗಣಂ ತತ್ತ್ವ ದೃಷ್ಟ್ವೇಶಃ ಪುರತಃ ಸ್ಥಿತಂ
ಕೋಟಿತ್ರಯೇಣ ಗುಣಿತಂ ನಾನಾವೇಷೈಕ ಭೂಷಿತಂ ।
ಭೂಷಿತಂ ಭಸಿತೇನೈವ ಘೋಷಮಾಣಂ ಮುಹುರ್ಮುಹುಃ
ತ್ರಿಪುಂಡ್ರಫಾಲಂ ರುದ್ರಾಕ್ಷ ಫಣೀಹಾರ ವಿರಾಜಿತಂ ॥
ಅಸಿ ಕಾರ್ಮುಕ ನಿಸ್ತ್ರಿಂಶ ಖಡ್ಗಖೇಟಧರಂ ತದಾ
ಬಾಣ ಬಾಣೌಸನಧರಂ ಕರವಾಲ ಲಸತ್ಕಟಿಂ ।
ಕುಂತ ಶಾಂತಾರಿ ಮುತ್ಕೃಷ್ಟಂ ಪ್ರಣತಂ ಪುರತಃ ಸ್ಥಿತಂ
ಸಾಸ್ರಾವಿಲಾಕ್ಷಸ್ತ್ಯಕ್ಷ ಸ್ತಾನ್ಮುಹುರೀಕ್ಷನ್ನು ವಾಚ ತಾನ್ ।
ವೀರಭದ್ರಂ ಪುರಸ್ಕೃತ್ಯ ರುದ್ರಕೋಟಿ ಸಮನ್ವಿತಂ
ವೀರಭದ್ರ ಸದಾಭದ್ರಂ ತವಾಸ್ತು ವಿಜಯೋಗಣೈಃ
ತೂರ್ಣಂ ಪ್ರಯಾಹಿ ದಕ್ಷಸ್ಯ ಯಜ್ಞವಾಟಂ ಸುರೈರ್ವೃತಂ ॥"

ವೀರಭದ್ರದೇವನು ದಕ್ಷನ ಯಜ್ಞವಾಟಿಗೆ ಹೊರಡಲು ಸನ್ನದ್ಧನಾಗುವ ವೇಳೆಗೆ ಕ್ರಾಂತಿದಳ ಕೋಟಿಯಿಂದ ಮೂರು ಕೋಟಿಗೆ ಬೆಳೆದು ಬಂದಿರುವುದು. ಅದನ್ನು ನೋಡಿ ಶಿವನು ಸಂತುಷ್ಟನಾಗುವನು. ಕ್ರಾಂತಿದಳ ತಕ್ಕ ವೇಷ ಭೂಷಣಗಳಿಂದ ಒಪ್ಪುತ್ತಿದ್ದರು. ಭಸಿತದಿಂದ ಭೂಷಿತರಾಗಿದ್ದರು. ಮೇಲಿಂದ ಮೇಲೆ ಉದ್ಘೋಷಿಸುತ್ತಿದ್ದರು. ಕ್ರಾಂತಿಘೋಷಣೆಯನ್ನು ಮಾಡುತ್ತಿದ್ದರು. ಎಲ್ಲರೂ ಹಣೆಗಳಲ್ಲಿ ಭಸ್ಮತ್ರಿಪುಂಡ್ರವನ್ನು, ಕೊರಳಲ್ಲಿ ರುದ್ರಾಕ್ಷಗಳನ್ನು ಸರ್ಪಾಭರಣಗಳನ್ನು ಧರಿಸಿದ್ದರು. ಎಲ್ಲರು ಕತ್ತಿ ಬಿಲಲು ಬಾಣ ಕಠಾರಿ ಖಡ್ಗ ಗುರಾಣಿಗಳನ್ನು ಕೈಗಳಲ್ಲಿ ಹಿಡಿದಿದ್ದರು. ಕತ್ತಿಗಳನ್ನು ಸೊಂಟಗಳಿಗೆ ಕಟ್ಟಿದ್ದರು. ಕುಂತಶಾಂತಾರಿ ಆಯುಧಗಳ ಧ್ವನಿಯನ್ನು ಮಾಡುತ್ತಿದ್ದರು. ಶಿವನನ್ನು ನಿರೀಕ್ಷಿಸುತ್ತ ನಮಸ್ಕರಿಸುತ್ತ ದಂಡನಾಯಕನಾದ ವೀರಭದ್ರನೊಡಗೂಡಿ ಶಿವನ ಅಪ್ಪಣೆಯನ್ನೇ ಕಾಯ್ದು ನಿಂತಿದ್ದರು. ಅನೇಕ ರುದ್ರಗಣರು ಅಚ್ಚಾಳು ವೀರಭದ್ರನನ್ನು ಮೆಚ್ಚಿ ಪುರಸ್ಕರಿಸುತ್ತಿದ್ದರು. ಅಂತಹ ಆ ವೀರಭದ್ರನೆ, ನಿನಗೆ ಮಂಗಳವಾಗಲಿ; ಮತ್ತು ವಿಜಯವಾಗಲಿ. ನೀನು ಈಗಲೇ ರುದ್ರಗಣರೊಡನೆ ದಕ್ಷನ ಯಾಗ ಮಂಟಪಕ್ಕೆ ಬೇಗ ಹೊರಡು. ನಿನಗೆ ಯಾವ ಅಡೆಗಡೆಗಳಾಗದಿರಲಿ; ನನಗೆ ಪ್ರಿಯವಾದ ಕ್ರಾಂತಿ ಕಾರ್ಯವನ್ನು ಮಾಡು; ಎಂದು ಹರನು ಹರಸುವನು.

"ಗಣೇಶತಾಮುಪಗತೋ ಏಭಿರ್ಗಣವರ್ಯೈಃ ಸಹ"

ವಿಜಯಿಯಾಗಿ ಹಿಂದಿರುಗಿ ಬಂದ ವೀರಭದ್ರನನ್ನು ಕುರಿತು ವಿರೂಪಾಕ್ಷನು ವಿಶೇಷ ಸಂತುಷ್ಟನಾಗಿ ಗಣರಿಗೆಲ್ಲ ನಾಯಕನಾಗಿರು ಎಂದು ದಂಡನಾಯಕತ್ವವನ್ನು ಅನುಗ್ರಹಿಸುವನು. ಗಾಣಪತ್ಯ ಪದವಿಯನ್ನು ಕೊಡುವನು. ಮತ್ತು ವೀರಭದ್ರ, ಶಂಭು, ಗಿರೀಶ, ಅಜೈಕಪಾತ್, ಅಹಿರ್ಬುಧ್ನ್ಯ, ಪಿನಾಕಿ, ಸ್ಥಾಣು, ಪಶುಪತಿ, ಭವ, ಉಗ್ರತ್ರಿಷ್ಟ್ಪತಿ –ಎಂದು ಹನ್ನೊಂದು ಜನ ರುದ್ರರು. ಇವರಲ್ಲಿ ಮೊದಲನೆಯವನು ವೀರಭದ್ರನು. ಏಕಾದಶರುದ್ರರನ್ನು ಕುರಿತು ಯಜುರ್ವೇದ ಮಂತ್ರಗಳು ಸಾಕಷ್ಟಿವೆ.

ರುದ್ರಗಣರನ್ನು ಕುರಿತು 'ವಿವೇಕ ಚಿಂತಾಮಣಿ'ಯಲ್ಲಿ ನಿಜಗುಣ ಶಿವಯೋಗಿಯು ಸಂಗ್ರಹವಾಗಿ ಹೀಗೆ ಹೇಳಿರುವನು:

"ವಿದಿತಮೆನೆ ಕಮಲ ಜನ್ಮಾಂಡದೊಳುಳ್ಳ ಅಖಿಳ ಪ್ರಪಂಚಮಂ ಪೇಳಿದೆನಿನ್ನು ಅದರ ಬಹಿರ್ಭಾಗದ ಸಂಪದಮಂ ಸಾಲ್ಗೊಂಡು ಸರ್ವರರಿ ವಂತುಸರ್ವಂ",

ಆವಾತನಿಂದಾವಾತನಧಿಕಮಾದ ಜ್ಞಾನ ತೇಜೋಬಲೈಶ್ವರ್ಯಾದಿಗುಣ ವಿಶಿಷ್ಟನಪ್ಪ ನಾವಾತನಿಂದಾವಾತನೂರ್ಧ್ವ ಲೋಕ ವಾಸಿಯೆಂಬಾಗಮ ಪ್ರಮಾಣದಿಂದಿಲ್ಲಿಂದ ಮೇಲೆ ಪೇಳ್ವ ಭುವನ ಪತಿಗಳನುತ್ತರೋತ್ತರ ಸುಖ ಭೋಗಿಗಳೆಂದರಿಯಲ್ತಕ್ಕುದಾಗಿ ಪೂರ್ವೋಕ್ತಪಾಂಚ ಭೌತಿಕ ಬ್ರಹ್ಮಾಂಡವ ನುಳಿದದರ ಬಹಿರ್ಭಾಗದ ಕೇವಲ ಪೃಥ್ವೀತತ್ತ್ವದ ಇಂದ್ರಾದಿ ದಶದಿಕ್ಕಿನೊಳಿರ್ದ ಇಂದ್ರಾದಿಗಳಿಗೆ ನಿಯಂತೃಗಳಾಗಿ ಪರಮೈಶ್ವರ್ಯ ಸಂಪನ್ನತೆಯಿಂ ಮೆರೆದು, ತಮ್ಮೊಡನೆ ವಿಚಿತ್ರ ವೇಷಧಾರಿಗಳಾದ ಮಹಾ ಪರಾಕ್ರಮಿಗಳಪ್ಪ ನಾನಾ ಶಸ್ತ್ರ ಪಾಣಿಗಳಾದ ಗಂಗಾ ವಾಲುಕ ಸಮಾನರೆನಿಪ ರುದ್ರರಿಂದೊಡಗಡಿ ತದ್ಬ್ರಾಂಡರಕ್ಷಕರಾಗಿರುವ

ಕಪಾಲೀಶ, ಅಜ, ಬುದ್ಧ, ವಜ್ರದೇಹ, ಪ್ರವರ್ಧನ, ಪ್ರಭೂತಿ ಅವ್ಯಯ, ಶಾಸ್ತ್ರ, ಪಿನಾಕಿ, ತ್ರಿದಶಾರ್ಚಿತರೆಂಬ ದಶರುದ್ರರೇ ಇಂದ್ರದಿಕ್ಕಿನಲ್ಲಿಹರು.

ಅಗ್ನಿರುದ್ರ, ಹುತಾಶ, ಪಿಂಗಳ, ಬಾಧಕ, ಹರ, ಜ್ವಲನ, ದಹನ, ಬಭ್ರು, ಭಸ್ಮಾಂತಕ, ಕ್ಷಯಾಂತಕರೆಂಬ ದಶರುದ್ರರು ಅಗ್ನಿ ದಿಕ್ಕಿನಲ್ಲಿಹರು.

ಯಾಮ್ಯ, ಮೃತ್ಯುಹರ, ಧಾತೃ, ವಿಧಾತೃ, ಕರ್ತೃ, ಕಾಲ, ಧರ್ಮ, ಅಧರ್ಮ, ಸಂಯುಕ್ತ, ವಿಮುಕ್ತರೆಂಬ ದಶರುದ್ರರೆ ಯಮ ದಿಕ್ಕಿನಲ್ಲಿಹರು.

ನೈರುತ, ಮಾರುತ, ಹಂತೃ, ಕ್ರೂರದೃಷ್ಟಿ, ಭಯಾನಕ, ಊರ್ಧ್ವಕೇಶ, ವಿರೂಪಾಕ್ಷ, ಧೂಮ್ರ, ಲೋಹಿತ, ದಂಷ್ಟ್ರರೆಂಬ ದಶರುದ್ರರೆ ನಿರುತಿ ದಿಕ್ಕಿನಲ್ಲಿಹರು.

ಬಲ, ಅತಿಬಲ, ಪಾಶಹಸ್ತ, ಮಹಾಬಲ, ಶ್ವೇತ, ಜಯಭದ್ರ, ದೀರ್ಘಬಾಹು, ಜಲಾಂತಕ, ಬಡಬಾಮುಖ, ಭೀಮರೆಂಬ ದಶರುದ್ರರು ವರುಣ ದಿಕ್ಕಿನಲ್ಲಿಹರು.

ಶೀಘ್ರ, ಲಘು, ವಾಯುವೇಗ, ಸೂಕ್ಷ್ಮ, ತೀಕ್ಷ್ಣ, ಕ್ಷಯಾಂತಕ, ಪಂಚಾಂತಕ, ಪಂಚಶಿಖಿ, ಕಿಪರ್ದಿ, ಮೇಘವಾಹನರೆಂಬ ದಶರುದ್ರರು ವಾಯು ದಿಕ್ಕಿನಲ್ಲಿಹರು.

ಮಟಾಮಕುಟಧಾರಿ, ನಾನಾರತ್ನಧರ, ನಿಧೀಶ, ರೂಪವಂತ, ಧನ್ಯ, ಸೌಮ್ಯದೇಹ, ಪ್ರಸಾದಕೃತ್, ಪ್ರಕಾಶ, ಲಕ್ಷ್ಮೀವಾನ್, ಕಾಮರೂಪರೆಂಬ ದಶರುದ್ರರು ಕುಬೇರ ದಿಕ್ಕಿನಲ್ಲಿಹರು.

ವಿದ್ಯಾಧರ, ಜ್ಞಾನಧರ, ಸರ್ವಜ್ಞ, ವೇದಪಾರಗ, ಮಾತೃವೃತ್ತ, ವಂಗಾಕ್ಷ, ಭೂತಪಾಲ, ಬಲಪ್ರಿಯ, ಸರ್ವವಿದ್ಯಾವಿಧಾತೃ, ಸುಖದುಃಖದರೆಂಬ ದಶರುದ್ರರು ಈಶಾನ್ಯ ದಿಕ್ಕಿನಲ್ಲಿಹರು.

ಅನಂತ, ಪಾಲಕ, ಧೀರ, ಪಾತಾಳೇಶ, ವೃಷಭಧ್ವಜ, ವೃಷಧರ, ಸುವೀರ್ಯ, ಗ್ರಸನ, ಶುಭ, ರೋಹಿತರೆಂಬ ದಶರುದ್ರರು ಬ್ರಹ್ಮಾಂಡದ ಅಧೋಭಾಗದಲ್ಲಿಹರು.

ಶಂಭು, ವಿಭು, ಗಣಾಧ್ಯಕ್ಷ, ತ್ರ್ಯಕ್ಷ, ತ್ರಿದಶವಂದಿತ, ಸಂವಾರು, ವಿವಹ, ನಭ, ವೀಕ್ಷಕ, ಪ್ರಭುಗಳೆಂಬ ದಶರುದ್ರರು ಬ್ರಹ್ಮಾಂಡದೂರ್ಧ್ವದೇಶದಲ್ಲಿಹರು.

ಬಳಿಕೀ ಪ್ರಕಾರಮಾದ ಶತರುದ್ರರು ಮಿಂದ್ರಾದಿ ಲೋಕಪಾಲಾಷ್ಟಕದಿಂ ಬ್ರಹ್ಮಾಚ್ಯುತರಿಂ ದಶದಿಕ್ಕುಗಳಂ ಪರಿವಿಡಿದು ಪೂಜ್ಯರಾದ ತಮ್ಮ ನಾಮೋಚ್ಚಾರಣಾರಾಧನಗಳಿಂದಿಷ್ಟಾರ್ಥಪ್ರದರಾಗಿ ಸರ್ವಜ್ಞರೆನಿಸಿರ್ಪರಾ ಶತರುದ್ರರಿಗೆ ಕರ್ತೃವಾ ವೀರಭದ್ರನು.

ಶತರುದ್ರಾಧ್ಯಕ್ಷನು ವೀರಭದ್ರನು ಎಂಬುದನ್ನು ವೇದ ಮೊದಲ್ಗೊಂಡು ವಿವೇಕ ಚಿಂತಾಮಣಿಯವರೆಗಿನ ಎಲ್ಲ ಗ್ರಂಥಗಳೂ ಎತ್ತಿದ ಸ್ವರದಲ್ಲಿ ಉದ್ಘಾಟಿಸಿವೆ. ಈ ಶತರುದ್ರರು ಈತನ ಕ್ರಾಂತಿದಳದ ಒಂದು ಹಿರಿಯ ಗುಂಪು. ಈತನ ಮಂತ್ರಿಮಂಡಲ. ಇದಕ್ಕೆಲ್ಲ ಮುಖ್ಯಸ್ಥ ವೀರಭದ್ರ. ಅಲ್ಲದೆ ಪೃಥಿವ್ಯಾದಿ ಶಿವಾಂತವಾದ ಮೂವತ್ತಾರು ತತ್ತ್ವಕ್ರಾಂತಿಗೆ ಮೂಲನಾಗಿ ಈ ಕ್ರಾಂತಿಗಾಗಿ ನಾಲ್ವತ್ತು ಜನ ತತ್ತ್ವಾಭಿಮಾನಿಗಳಾದ ರುದ್ರರನ್ನು ನಿಯಮಿಸಿದ್ದನು. ಇವರು ಸರ್ವಜ್ಞರೂ ಸರ್ವಕರ್ತರೂ ಆಗಿದ್ದು ಭುವನ ಪತಿಗಳಾಗಿದ್ದರು. ಮತ್ತು "ಭೂಲೋಕದೋಳಾಯಾ ನಾಮಧೇಯಂಗಳಂದವತರಿಸಿ ಸಕಲ ಲೋಕಾಭಿಮತ ಫಲಪ್ರದಾಯಕರಾಗಿರ್ಕುಂ" ಎಂದು ನಿಜಗುಣರು ನಿರೂಪಿಸಿದ್ದಾರೆ.

ಪಂಚತನ್ಮಾತ್ರರುದ್ರರೈವರನ್ನು ನಿಯಮಿಸಿದ್ದನು. ಅವರಿವರು: ಗಂಧಾಂಗ, ಜಲೋದರ, ಭಾನುರ್ಮಾ, ಬಲವತ್ತರ, ಸೂಕ್ಷ್ಮನಾದ –ಎಂಬುವರು ಐವರು. ಇವರುಗಳ ಕಾರ್ಯವೆಂದರೆ ಪಂಚತನ್ಮಾತ್ರಗಳಾದ ಗಂಧರಸ ರೂಪ ಸ್ಪರ್ಶಶಬ್ದಗಳನ್ನು ಶೋಧಿಸಿ ಶುದ್ಧಗೊಳಿಸುವುದು. ಇದರಿಂದ ವೀರಭದ್ರನ ಪ್ರಾಕೃತಿಕ ಕ್ರಾಂತಿಯ ದರ್ಶನವಾಗುತ್ತದೆ. ಈ ಮಾತನ್ನು ನಿಜಗುಣರೂ ಒಪ್ಪಿದ್ದಾರೆ.

"ಮತ್ತಮಾ ಪೃಥಿವ್ಯಾದಿ ಪಂಚಮಹಾಭೂತಂಗಳಿಗೆ ಕ್ರಮದಿಂ ಕಾರಣಮಾದ ಗಂಧಾದಿ ತನ್ಮಾತ್ರಂಗಳೆಂಬೈದರಲ್ಲಿ ಪರಿವಿಡಿದು –ಮಂತ್ರರೂಪಿ ಸುಬಾಹು, ಭಾಸುರ, ಸರ್ವವಿಶಿ, ಅಗಜೇಶ್ವರರೆಂಬ ಪಂಚಭುವನಪತಿಗಳೊಡಗೂಡಿ, ಗಂಧಾಂಗ, ಜಲೋದರ, ಭಾನುಮಾನ್, ಬಲವತ್ತರ, ಸೂಕ್ಷ್ಮನಾದರೆಂಬ ರುದ್ರರುಗಳಾಕ್ರಮದಿಂದಿಹರು."

ಈ ಐದು ಜನ ರುದ್ರರ ಹೆಸರುಗಳು ಗಮನಾರ್ಹವಾಗಿವೆ. ತನ್ಮಾತ್ರಗಳಿಗೆ ಅನುಗುಣವಾಗಿವೆ. ಅವರವರ ಹೆಸರುಗಳು ಆ ತನ್ಮಾತ್ರಗಳ ಮೇಲೆ ಅವರಿಗಿರುವ ಸಮರ್ಥತೆಯನ್ನು ಸ್ಫುಟಗೊಳಿಸುತ್ತದೆ.

ಗಣಶಕ್ತಿಯ ಅಥವಾ ಸಂಘಶಕ್ತಿಯ ಹಿರಿಮೆಯನ್ನು ಉಪಯುಕ್ತತೆಯನ್ನು ಅರಿಯದವರಾರು? ಇಂದಿನ ಗಣರಾಜ್ಯಕ್ಕೆ ಬಹು ಪುರಾತನ ಕಾಲದಲ್ಲಿಯೇ ನಾಂದಿಯನ್ನು ಹಾಕಿದೆ –ರುದ್ರಗಣ! ಆ ರುದ್ರಗಣ ತನ್ನ ಸಾಂಘಿಕ ಶಕ್ತಿಯನ್ನು ಸೀಮಾತೀತವಾಗಿ ಸಂಪಾದಿಸಿಕೊಂಡು ಸಾರ್ವಜನಿಕ ಸೇವೆಯನ್ನು ಗಮನಾರ್ಹವಾಗಿ ಸಲ್ಲಿಸಿದ ಪ್ರಪ್ರಥಮ ಗಣ. ಅದು ಲೋಕಕಲ್ಯಾಣಕ್ಕಾಗಿ ರಚಿತವಾಯಿತು; ಸಕ್ರಿಯವಾಗಿ ಸೇವೆ ಸಲ್ಲಿಸಿತು. ಅನ್ಯಾಯ ಅಕಾರ್ಯ ಅದೆಲ್ಲಿಯೇ ನಡೆಯಲಿ ಅಲ್ಲಿಗೆ ನುಗ್ಗಿ ಅವನ್ನು ನಿಲ್ಲಿಸಿ ನ್ಯಾಯ ಸತ್ಕ್ರಿಯೆಗಳನ್ನು ಸ್ಥಾಪಿಸಿ ಸುಖ–ಶಾಂತಿಗಳನ್ನು ನೆಲೆಗೊಳಿಸುತ್ತಿದ್ದಿತು ರುದ್ರಗಣ. ಮಾನವ ಸಮಾಜದ ದೇವತಾ ಸಮೂಹದ ಕಲ್ಯಾಣ ಸಾಧನೆಗಾಗಿ ರಚಿತವಾದ ಪ್ರಪ್ರಥಮ ಸಂಘ ರುದ್ರಗಣ. ಅದು ತನ್ನ ಕರ್ತವ್ಯವನ್ನು ವಿವೇಕಪೂರ್ಣವಾಗಿ ನಿಷ್ಠೆಯಿಂದ ಧೈರ್ಯ ಸ್ಥೈರ್ಯಗಳಿಂದ ನೆರವೇರಿಸುತ್ತಿದ್ದಿತು. ಆ ಗಣವು ತನ್ನದೇ ಆದ ಹಲವು ನಿಯಮಗಳನ್ನು ಅನುಸರಿಸುತ್ತಿದ್ದಿತು. ಶೈವೀ ಶ್ರದ್ಧೆಗೆ ಶಿವಾಚಾರ ಸಂಹಿತೆಗೆ ಎಲ್ಲಿಯೂ ಎಷ್ಟೂ ಲೋಪಬರಬಾರದೆಂಬುದು ಅದರ ನಿತಾಂತ ನಿಷ್ಠೆ. ಈ ನಿಷ್ಠೆ

ಯಾರೂ ಹೇರಿದ ಭಾರವಾಗಿರಲಿಲ್ಲ. ಅವರ ಜೀವನದಲ್ಲಿ ತಾನಾಗಿಯೆ ಸೆಲೆಯೊಡೆದು ನಿಂತ ಮಾತಾಗಿತ್ತು. ಅವರ ಬಾಳಿನಲ್ಲಿ ಅದು ಸಹಜವಾಗಿ ಹಾಸು ಹೊಕ್ಕಾಗಿದ್ದಿತು.

ವೀರವ್ರತವೇ ಅವರ ವ್ರತ. ಅದನ್ನೇ ಅವರು ಶಿರೋವ್ರತವನ್ನಾಗಿ ಧರಿಸಿದ್ದರು. ವೀರಶಿವನಾದ ವೀರಭದ್ರನಿಂದ ಅವರೆಲ್ಲ ಆ ಶಿರೋವ್ರತವನ್ನು ಪಡೆದಿದ್ದರು. ಅದು ಅವರ ಜೀವನವನ್ನು ಉತ್ತಮಗೊಳಿಸುವ ಪರಿಪುಷ್ಟಿಗೊಳಿಸುವ ಉದಾತ್ತ ತತ್ತ್ವವಾಗಿದ್ದಿತು; ವ್ಯಾಪಕ ತತ್ತ್ವವಾಗಿದ್ದಿತು. ಅದರಿಂದ ಅವರೆಲ್ಲ ಶಕ್ತಿಯಲ್ಲಿ ವೀರರಾಗಿದ್ದಂತೆ ಭಕ್ತಿಯಲ್ಲಿಯೂ ವೀರರಾಗಿದ್ದರು. ಅದರಿಂದ ಅವರ ಭಾವ ಸಂಪತ್ತು ಹೆಚ್ಚಿದ್ದಿತು. ಐಕ್ಯತೆ ಹುರಿಗೊಂಡಿದ್ದಿತು. ಅವರಲ್ಲಿ ಅಂತಶ್ಶಕ್ತಿ ಅಪಾರವಾಗಿದ್ದಿತು ಅಪ್ರತಿಹತ ಗತಿಯುಳ್ಳವರಾಗಿದ್ದರು. ಸತ್ವದಲ್ಲಿ ಅವರನ್ನು ಮೀರುವವರಿರಿಲ್ಲ. ಅದು ಅವರಲ್ಲಿ ಅತ್ಯಂತ ವಿಕಾಸವಾಗಿದ್ದಿತು. ಸತ್ವವಿಕಾಸವೆ ದಿವ್ಯ ಜೀವನ ಸಂಕೇತ; ದೈವೀ ಜೀವನ ಪ್ರತೀಕ.

ಹಿಂಸೆ ಅಭಕ್ಷಭಕ್ಷಣ ಅನಾಚಾರ ಅಶಾಂತಿ ದ್ವೇಷ ಭೇದಗಳನ್ನು ದೂರ ಮಾಡುವುದೇ ಅವರ ಧ್ಯೇಯವಾಗಿತ್ತು. ಅದಕ್ಕಾಗಿ ಅವರು ಸಹೋಗವನ್ನು ಆಚರಣೆಯಲ್ಲಿ ತಂದರು. ಸಹಕಾರ ಜೀವನವನ್ನು ಮುಂದುವರಿಸಿದರು. ಸಹಾಯ ಸಂಪತ್ತಿಯನ್ನು ಒದಗಿಸುತ್ತಿದ್ದರು.

ವ್ಯಕ್ತಿ ಗಣದ ಅಂಗ ವ್ಯಕ್ತಿ ಚಾರಿತ್ರ್ಯವೇ ಗಣದ ಚಾರಿತ್ರ್ಯ. ವ್ಯಕ್ತಿಯ ಉನ್ನತಿ ಅವನತಿಗಳೇ ಗಣಸ್ವರೂಪೀ ಸಮಾಜದ ಉನ್ನತಿ ಅವನತಿಗಳು ವ್ಯಕ್ತಿಚರಿತ್ರೆ ಸಮಾಜ ಚರಿತ್ರೆಯ ಒಂದು ಅಳತೆಗೋಲು. ಅಂತೆಯೇ ಹಲವು ಸಾಮಾಜಿಕ ನಿಯಮಗಳೂ ವ್ಯಕ್ತಿತ್ವ ರೂಪಣಕ್ಕೆ ಸಹಾಯಕಗಳು. ಸಾಮಾಜಿಕ ತತ್ತ್ವ ವ್ಯಕ್ತಿತ್ವದ ಮಾನದಂಡವಾಗಬಲ್ಲುದು.

"ನಾಽಯ ಮಾತ್ಮಾ ಬಲಹೀನೇನ ಲಭ್ಯತೇ" ಎಂಬುದೇ, ರುದ್ರಗಣರ ಗಮನಾರ್ಹ ವಿಷಯವಾಗಿದ್ದಿತು. ಬಲವಂತರಾಗಿ ಬಾಳುವುದೇ ಬಾಳೆಂದು ನಿರ್ಧರಿಸಿದ್ದರು. ವೀರತ್ವ ಆಚಾರದ ಅಡಿಗಲ್ಲಾದರೆ ಧೀರತ್ವ ವಿಚಾರದ ಅಡಿಗಲ್ಲೆಂದು ಅವರು ಭಾವಿಸಿದ್ದರು. ವೀರತ್ವ ಕಾಯಬಲ; ಧೀರತ್ವ ಕರಣ ಬಲ, ಇವೆರಡನ್ನೂ ರುದ್ರಗಣರು ಸಂಪಾದಿಸಿಕೊಂಡಿದ್ದರು. ಶಕ್ತಿ ವಿಕಾಸದಿಂದ ವಿಭೂತಿತ್ವವುಂಟಾಗುತ್ತದೆ. ವೀರಪುಷ್ಪದ ಪರಿಮಳ ವಿಕಾಸ.

ಶುಭತ್ವ ಸ್ಥಿರತ್ವಗಳುಂಟಾಗಬೇಕಾದರೆ ವೀರತ್ವ ವಿಕಾಸವಾಗಬೇಕೆಂಬುದೇ ಅವರ ವಿಚಾರ. ಅಂತೆಯೇ ಅದಕ್ಕೆ ತಕ್ಕ ಆಚಾರ, ಆಹಾರ; ವಿಹಾರ. ವೀರ್ಯ ಪ್ರಬಲವಾದಂತೆ ಜೀವನ ಸಫಲವಾಗುತ್ತದೆ; ಸದೃಢವಾಗುತ್ತದೆ. ಸರ್ವಾಂಗ ಶಕ್ತಿ ವಿಕಾಸವೇ ಪರಮಾತ್ಮತೆಯ ಅಂದರೆ ಮಹಾತ್ಮತೆಯ ಕುರುಹು.

ಸರ್ವಾಂಗ ಶಕ್ತಿ ವಿಕಾಸವೇ ರುದ್ರಗಣರ ಪ್ರಥಮ ಕ್ರಾಂತಿ. ಮೊದಲು ವ್ಯಕ್ತಿಯ ಬಳಿಕ ಗಣದ ಶಕ್ತಿ ಸಂಹಿತೆಯೇ ಅವರ ಕ್ರಾಂತಿಕಾರ್ಯ; ಕರ್ತವ್ಯಕ್ರಿಯೆ. ಅದಕ್ಕಾಗಿ ಅವರು ಉಪಯುಕ್ತವಾದ ಹೊಲಬನ್ನು ಹಾಕಿಕೊಂಡಿದ್ದರು. ಏಕೈಕ ಮಾರ್ಗದಲ್ಲಿ ಶಿವೈಕ ನಿಷ್ಠೆಯಲ್ಲಿ ಮುಂದುವರಿಯುತ್ತಿದ್ದರು. ಶಿವವಲ್ಲದ್ದನ್ನು ಅವರು ಏನನ್ನೂ ಮಾಡುತ್ತಿರಲಿಲ್ಲ. ಶಿವನ ಅಪ್ಪಣೆಯನ್ನು ವೀರಭದ್ರನ ಮಾರ್ಗದರ್ಶಿತ್ವವನ್ನು ಮೀರುತ್ತಿರಲಿಲ್ಲ.

ಭಯ ಬೆನ್ನುಬಿದ್ದ ಬೇನೆ. ಅದು ಬೆಳೆದು ನಿಂತರೆ ಬಾಳೆಲ್ಲ ಹಾಳು ಬದುಕೆಲ್ಲ ಬೀಳು. ಭಯ ಬೃಹತ್ತಾದರೆ ಮರಣ ಸಂಭವಿಸುವುದೂ ಉಂಟು. ಭಯ ಒಂದು ಬಿಗಿಯಾದ ಬಂಧನ. ಅದನ್ನು ಬಿಡಿಸಿಕೊಳ್ಳುವ ಉಪಾಯವೇ ಉತ್ತಮವಾದ ಧರ್ಮ. ಆ ಉತ್ತಮ ಉಪಾಯ ರೂಪ ಧರ್ಮವೇ ಬಲ; ಅಥವಾ ಶಕ್ತಿ. ಕಾಯಶಕ್ತಿ ಆತ್ಮಶಕ್ತಿಗಳು ಎಂತಹ ದುರ್ಭರವಾದ ಭಯವೊದಗಿದರೂ ಅದರಿಂದ ಪಾರು ಮಾಡುತ್ತವೆ. ಸಂಕಟಗಳಿಂದ ಸಂರಕ್ಷಿಸುತ್ತವೆ. ಉಮ್ಮಳದಿಂದ ಉದ್ಧರಿಸುತ್ತವೆ.

ಶಕ್ತಿಯಿಲ್ಲದೆ ಏನನ್ನೂ ಮಾಡಲೂ ಸಾಧ್ಯವಿಲ್ಲ. ಶಕ್ತಿಗೆ ಅನೇಕ ಮುಖಗಳಿವೆ. ಅವೆಲ್ಲವನ್ನು ಆದಿಭೌತಿಕ ಶಕ್ತಿ, ಆಧ್ಯಾತ್ಮಿಕ ಶಕ್ತಿ, ಆಧಿದೈವಿಕ ಶಕ್ತಿ ಎಂದು ಒಬ್ಬುಳಿಗೂಡಿಸಿ ಮೂರು ಬಗೆಯಾಗಿ ಹೇಳಬಹುದು. ಈ ತ್ರಿವಿಧ ಶಕ್ತಿಗಳ ಅಭಾವವೇ ಈ ತ್ರಿವಿಧ ತಾಪಕ್ಕೆ ತಳಹದಿಯಾಗುತ್ತದೆ. ಇದನರಿದು ರುದ್ರಗಣರು ಈ ತ್ರಿವಿಧ ಶಕ್ತಿಗಳನ್ನು ಸಂಪಾದಿಸಿಕೊಂಡಿದ್ದರು. ದುರ್ಬಲತೆಯನ್ನು ದೂರ ಮಾಡಿಕೊಂಡಿದ್ದರು. ಭಯದಿಂದ ಪಾರಾಗಿದ್ದರು.

ಒಗ್ಗಟ್ಟು ಒಂದನೆಯ ನಿಯಮ. ಶಿವಭಾವದಿಂದಿರುವುದು ಎರಡನೆಯ ನಿಯಮ. ಶಕ್ತಿ ವಿಕಾಸ ಮೂರನೆಯ ನಿಯಮ. ಭಯರಹಿತರಾಗಿರವುದು ನಾಲ್ಕನೆಯ ನಿಯಮ. ಲೋಕ ಕಲ್ಯಾಣ ಕಾರ್ಯತತ್ಪರರಾಗಿರುವುದು ಐದನೆಯ ನಿಯಮ. ಇವು ರುದ್ರ ಗಣರ ಪಂಚಶೀಲಗಳಾಗಿದ್ದವು.

ಜಾತಿ ಕಲ್ಪನೆ, ಸಮಾ ಶೋಷಣೆ, ಸ್ವಾರ್ಥ ಮನೋಭಾವನೆ, ಸ್ವಾಭಿಮಾನ ವರ್ಧನೆ, ಅಸ್ತಿತ-ಅಭಿನಿವೇಶ-ದ್ವೇಷಾದಿಗಳ ಪೋಷಣೆಗಳೆಂದರೆ ರುದ್ರಗಣರಿಗಾಗುತ್ತಿರಲಿಲ್ಲ. ಇದನ್ನು ನಿರ್ಮೂಲನ ಮಾಡಲು ಕಂಕಣಬದ್ಧರಾದರು. ಕ್ರಾಂತದರ್ಶಿಗಳಾದರು.

ಸರ್ವದರಲ್ಲಿ ಶಿವತ್ವವನ್ನು ಸಮದರ್ಶಿತ್ವವನ್ನು ಕಾಪಾಡುವುದೇ ಅವರ ಕಣ್ಣರಿಕೆಯಾಗಿತ್ತು. ಕೈಗೆಲಸವಾಗಿತ್ತು. ತನ್ನ ಹೊಗಳುವುದು, ತನಗಾಗದವರನ್ನು ತೆಗಳುವುದು ಎಂದಿಗೂ ಯಾರಿಗೂ ಸರಿಯಲ್ಲೆಂಬುದೇ ಅವರ ಅಭಿಪ್ರಾಯ. ಇದಕ್ಕಾಗಿಯೇ ಅವರು ದಕ್ಷಬ್ರಹ್ಮನ ಮೇಲೆ ಕೈಮಾಡಬೇಕಾಯಿತು.

ಎಲ್ಲಕ್ಕೂ ಮಿಗಿಲಾಗಿ ಪ್ರಾಣಿಹಿಂಸೆ ಪದಾರ್ಥನಾಶಗಳಿಗೆ ಕಾರಣವಾದ ಯಜ್ಞ ಯಾಗಗಳು ಎಲ್ಲಿಯೂ ಯಾವ ಲೋಕದಲ್ಲಿಯೂ ಎಂಥವರಿಂದಲೂ ನಡೆಯಬಾರದೆಂಬುದು ಅವರ ವೀರವ್ರತ.

ಈ ವ್ರತಕ್ಕೆ ಈ ವೀರನಿಯಮಕ್ಕೆ ಸೇರಿದವರೆಲ್ಲರೂ ರುದ್ರರು; ರುದ್ರ ಗಣರು. 'ನಮಸ್ತೇ ಅಸ್ತು ರುದ್ರರೂಪೇಭ್ಯಃ' ಎಂದಿದೆ ವೇದವಾಣಿ. ಅಲ್ಲದೆ,

"ಸಹಸ್ರಾಣಿ ಸಹಸ್ರಶೋಯೇ ರುದ್ರಾ ಅಧಿಭೂಮ್ಯಾಂ"

ಎಂದು ತೈತ್ತಿರೀಯ ಸಂಹಿತೆಯಲ್ಲಿ ಉಕ್ತವಾಗಿದೆ. "ಸರ್ವೋ ವೈರುದ್ರಃ" ಎಂದು ಮಹೋಪನಿಷತ್ತು ರುದ್ರಗಣರೆಲ್ಲ ರುದ್ರಸ್ವರೂಪರೆಂಬುದನ್ನು ಸಮರ್ಥಿಸುತ್ತದೆ.

"ನರರು ಸುರರು ಕಿನ್ನರರು ಮೊದಲಾದವರೆಲ್ಲರು
ಪಿಂಡವೆಂಬ ಭಾಂಡದಲ್ಲಿ ಅಡಗಿಹರಾಗಿ–
ನಾನವರ ರೂಹಿಸಬಲ್ಲೆನೆ ಅಯ್ಯಾ?
ರುದ್ರಗಣ ದೇವಗಣ ಪ್ರಮಥಗಣ ಮೊದಲಾದವರೆಲ್ಲರು
ಬ್ರಹ್ಮಾಂಡವೆಂಬ ಭಾಂಡದಲ್ಲಿ ಅಡಗಿಹರಾಗಿ,
ನಾನವರ ಭಾವಿಸಬಲ್ಲೆನೆ ಅಯ್ಯಾ?...." –ಪ್ರಭುದೇವರು.

ರುದ್ರಗಣರು ಈ ಬ್ರಹ್ಮಾಂಡಕ್ಕೆ ಸೇರಿದವರೆಂದು ಪ್ರಭುದೇವನು ಪ್ರತಿಪಾದಿಸಿದ್ದಾನೆ. ಮತ್ತು ಲೋಕ ಕಾರ್ಯವೆ ರುದ್ರನ–ರುದ್ರಗಣರ ಜೀವಿತ ಲಕ್ಷ್ಯ. ಲೋಕದ ಜನರಿಗೆ ಎಲ್ಲ ಬಗೆಯ ಭೋಗ ಭಾಗ್ಯಗಳನ್ನು ಭಕ್ತಿ ಶಕ್ತಿಗಳನ್ನು ಅನುಗ್ರಹಿಸುವುದೆ ರುದ್ರಗಣರ ಕ್ರಾಂತಿಧ್ಯೇಯ.

ಮೊಟ್ಟ ಮೊದಲಿಗೆ ಒಟ್ಟಾಗಿ ಮೂವತ್ತು ಮೂವರೇ ಮುಖ್ಯ ದೇವತೆಗಳಿದ್ದರು. ಎಂಟು ಜನ ವಸುಗಳು. ಹನ್ನೊಂದು ಜನ ರುದ್ರರು, ಹನ್ನೆರಡು ಜನ ಆದಿತ್ಯರು, ಒಬ್ಬ ಪ್ರಜಾಪತಿ, ಮತ್ತೊಬ್ಬ ವಷಟ್ಕಾರ –ಇವರೇ ಮೂವತ್ತು ಮೂವರು. ಇವರಲ್ಲಿ ಮೂರನೆಯ ಒಂದು ಭಾಗ ರುದ್ರಗಣರಿರುವರು. ಗಣರಲ್ಲಿ ಇವರಿಗೇ ಅಗ್ರಸ್ಥಾನ ಮೀಸಲಾಗಿದ್ದಿತು.

ರುದ್ರಗಣರು ಕ್ರಾಂತಿಮಯರು, ಕ್ರಾಂತಿಕಾರರು. ಋತದರ್ಮಿಗಳು, ಸರ್ವಸಮರ್ಥರು, ಶಾಂತಿಸಂಸ್ಥಾಪಕರು, ಆದಿತೇಯರಿಗೆ ಆದ್ಯರು. ಅವರು ಸಂಕರ್ಷಕರೂ ಅಹುದು; ಆಕರ್ಷಕರೂ ಅಹುದು. ಘೋರಾಘೋರ ಸ್ವರೂಪರು ಋಗ್ವೇದ ಕಾಲದ ಋಷಿಗಳು ಅವರನ್ನು ಗಾಯತ್ರೀ ಅನುಷ್ಟುಪ್ ಛಂದಸ್ಸುಗಳಿಂದ ಸ್ತುತಿಸಿದ್ದರು. ರುದ್ರಜಪ ನಿರತರಾಗುತ್ತಿದ್ದರು. ತಮ್ಮೆಲ್ಲ ಪಾಪಗಳನ್ನು ಪರಿಹರಿಸಿಕೊಳ್ಳುತ್ತಿದ್ದರು.

"ಯೇಚ ಮಾಗ್ಸ್ಂ ರುದ್ರಾ ಅಭಿತೋ ದಿಕ್ಷು ಶ್ರುತಾಃ
ಸಹಸ್ರ ಶೋವೈಷಾಗ್ಸ್ಂ ಏಡಹೇಮಹೇ।"

ರುದ್ರರು ಎಲ್ಲ ದಿಕ್ಕುಗಳಲ್ಲಿದ್ದರು, ಹರವಾಗಿ ಹಬ್ಬಿದ್ದರು. ನೆಲದಲ್ಲಿ ಎಲ್ಲಿ ನೋಡಿದರಲ್ಲಿ ಸಹಸ್ರ ಸಹಸ್ರವಾಗಿ ಇರುತ್ತಿದ್ದರು. ಸಾಂಸ್ಕೃತಿಕ ಉತ್ಕ್ರಾಂತಿಗೆ ಕಾರಣರಾಗಿರುತ್ತಿದ್ದರು.

ಜ್ಯೋತಿರ್ವಿಜ್ಞಾನ ರುದ್ರಗಣ

ಜ್ಯೋತಿರ್ವಿಜ್ಞಾನ ಬಹು ಪುರಾತನದ್ದು; ಬಹು ಪುರಾತನದ್ದು; ಬಹು ಬೃಹತ್ತಾದದ್ದು. ತ್ರಿನೇತ್ರಕಲ್ಪನೆ ಅಗ್ನಿನೇತ್ರಸೂಚನೆ ಜ್ಯೋತಿರ್ವಿಜ್ಞಾನದ ಬುನಾದಿ. ಇದರಿಂದ ಮುಮ್ಮೊದಲು ವ್ಯಕ್ತಿಗಳೇ ವಿಶಿಷ್ಟವಾದ ಅಗ್ನ್ಯಸ್ತ್ರವಾಗಿ ಅಗ್ನಿಬಲ ಸಮನ್ವಿತರಾಗಿರುತ್ತಿದ್ದರೆಂದು ಹೇಳಿದರೆ ಒಪ್ಪದಿರುವ ಮಾತಲ್ಲ; ನಿರಾಧಾರವಾದ ನುಡಿಯಲ್ಲ. ಅಗ್ನಿನೇತ್ರದಿಂದ ಅಗ್ನಿವಿಜ್ಞಾನ ಆರಂಭವಾಯಿತು. ಪ್ರಥಮ ಜ್ಯೋತಿರ್ವಿಜ್ಞಾನಿ ರುದ್ರದೇವನು ತನ್ನ ನೇತ್ರ ಜನಿತ ಜ್ವಾಲಾಸ್ತ್ರದಿಂದ ತ್ರಿಪುರರನ್ನು ದಹಿಸಿದನು. ಬಳಿಕ ಶಿವನು ಅದೇ ವಿಜ್ಞಾನವನ್ನು ಮುಂದುವರಿಸಿದನು. ಕಾಮದಹನವನ್ನು ಮಾಡಿದನು.

ಆ ತೇಜೋ ವಿಜ್ಞಾನವನ್ನು ಅಂತರಂಗಿಕವಾಗಿಯೂ ಉಪಯೋಗಿಸ ತೊಡಗಿದರು. ಶಿಷ್ಯರ ಅಂತರಂಗದಲ್ಲಿರುವ ಕಾಳಿಕೆಯನ್ನು ಕಳೆಯಲು ಅಂತರ್ದೃಷ್ಟಿಯ ಬೆಳಗನ್ನು ಬೀರತೊಡಗಿದರು. ಅದನ್ನೇ ವೇಧಾ ದೀಕ್ಷೆಯೆಂದು ಕರೆದರು. ಬ್ರಹ್ಮಾಂಡವನ್ನು ಪಿಂಡಾಂಡವನ್ನು ದಹಿಸುವ ಶಕ್ತಿ ಸಂಪನ್ನ ಜ್ಯೋತಿರ್ವಿಜ್ಞಾನ ರುದ್ರನಿಂದ ರುದ್ರಗಣರಿಂದ ಬೆಳೆದು ಬಂದಿದೆಯೆಂದರೆ ಯಾರೂ ಅಚ್ಚರಿಪಡಬೇಕಾಗಿಲ್ಲ. ಅವರ ಆ ವೇಧ ವಿಜ್ಞಾನ ಅಗಾಧವಾದುದು, ಅದ್ಭುತವಾದುದು. ಆ ವಿಜ್ಞಾನವು ಎಂಟನೆಯ ಶತಮಾನದ ಶ್ರೀ ಸಿದ್ಧರಾಮ ಶ್ರೀ ಅಲ್ಲಮಾದಿಗಳವರೆಗೆ ಹರಿದು ಬಂದಿದೆ.

ಜ್ಯೋತಿರ್ವಿಜ್ಞಾನದಲ್ಲಿ ಅಪ್ರತಿಮ ಪ್ರಗತಿಯನ್ನು ಸಾಧಿಸಿದವನು ವೀರಭದ್ರದೇವನು; ಮತ್ತು ಆತನ ಅನುಯಾಯಿಗಳು. ರುದ್ರ-ಶಿವರು ತಮ್ಮ ಜ್ಯೋತಿರ್ವಿಜ್ಞಾನವನ್ನು ಬರೀ ಕಣ್ಣಿನಲ್ಲಿ ತೋರಿದರೆ ವೀರಭದ್ರನು ತನ್ನ ಇಡೀ ದೇಹದಲ್ಲಿ ಅಳವಡಿಸಿಕೊಂಡು ತೋರಿದನು.

"ದದೃಶುರ್ವೀರಭದ್ರಂ ತಂ ಜ್ವಲಂತಮಿವ ಪರ್ವತಂ।"

ದಕ್ಷಯಜ್ಞದಲ್ಲಿರುವ ಇಂದ್ರೋಪೇಂದ್ರರು ಪ್ರಜಾಪತಿಗಳು ದೂರದಿಂದ ಬರುವ ವೀರಭದ್ರನನ್ನು ಉರಿವ ಗಿರಿಯಂತೆ ಕಂಡರಂತೆ! ತೇಜೋಮಂಡಲದಂತೆ ಕಂಡರಂತೆ! ಅದು ಹಿಂದೆಂದೂ ಕಾಣದ ತೇಜಸ್ಸು; ಮುಂದೆಂದೂ ಕಾಣಬಾರದ ತೇಜಸ್ಸು.

ಇದರಿಂದ ವೀರಭದ್ರನ ಸರ್ವಾಂಗೀನ ಜ್ಯೋತಿರ್ವಿಜ್ಞಾನದ ಅಭಿವೃದ್ಧಿ ಅಭಿವ್ಯಕ್ತವಾಗುತ್ತದೆ. ಜ್ಯೋತಿರ್ವಿಜ್ಞಾನದಿಂದ ಆತನು ಸಂಪೂರ್ಣ ಜ್ಯೋತಿರ್ಮಯನಾಗಿದ್ದನು. ಜ್ಯೋತಿರ್ವಿಜ್ಞಾನದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿ ರುದ್ರಗಣರಿಗೆ ಅಗ್ರಗಣ್ಯನಾಗಿದ್ದನು. ವೀರಭದ್ರನು ರುದ್ರದೇವನಿಂದ ಬಂದ ವೀಕ್ಷಣ ವಿಚಕ್ಷಣತೆಯನ್ನು ಮುಂದುವರಿಸಿ ಸೂರ್ಯ-ಚಂದ್ರಾಗ್ನಿ ಮಂಡಲಗಳ ಸಾಕ್ಷಾತ್ಕಾರವನ್ನು ಪಡೆದಿದ್ದನು. ಆತನ ಸೂರ್ಯ ನೇತ್ರ ಸೂರ್ಯನಿಗಿಂತ ಉಜ್ವಲವಾಗಿದ್ದಿತು. ಆತನ ಚಂದ್ರನೇತ್ರ ಚಂದ್ರನಿಗಿಂತ ಶೀತಲವಾಗಿದ್ದಿತು. ಇದರಿಂದಾಗಿ ಆತನ ಇಡೀ ಶರೀರವೇ ಸೋಜ್ವಲವಾಗಿತ್ತು. ಆತನು ಹಸ್ತದಲ್ಲಿ ಧರಿಸಿದ ತ್ರಿಶೂಲವು ತೇಜೋಮಯವಾದ ಒಂದು ಅಗ್ನ್ಯಸ್ತ್ರವಾಗಿದ್ದಿತು. ಅದರಲ್ಲಿ ಕೇವಲ ಮಾರಕ ಶಕ್ತಿಯೊಂದೇ ಇರಲಿಲ್ಲ; ಜತೆಗೆ ಉದ್ಧಾರಕ ಶಕ್ತಿಯೂ ಇದ್ದಿತು. ತ್ರಿಗುಣಗಳನ್ನು ಕಳೆವ ಅಪೂರ್ವ ಕಲೆ-ಕಳೆಗಳು ಅದಕ್ಕಿದ್ದವು. ಆ ವೀರಭದ್ರನ ತ್ರಿಶೂಲವನ್ನು ವಿಷ್ಣುವು ಹೀಗೆ ವರ್ಣಿಸಿದ್ದಾನೆ:

"ಯದ್ಯದ್ಯ ವೀರಭದ್ರೋಽಯಮಸ್ಮಾನ್ಶೂಲೇನ ಸತ್ವರಂ
ಪ್ರೋಥಯಿತ್ವಾ ವಿಪೋಥ್ಯೇತ ತದಾನ ಯಮಯಾತನಾ ।
ಅಸ್ಮಾಕಮೀದೃಶಂ ಭಾಗ್ಯಂ ಕಥಂವಾ ಸಂಭವಿಷ್ಯತೆಇ
ಯತ್ರಿಸೂಲ ಪರಿಪ್ರೋತಾಸ್ಯ, ಕ್ಷಾಮೋಽಸೂನಿಹಾಧುನಾ।
ತ್ರಿಶೂಲ ಪ್ರೋಥಿತಾಃಪೂರ್ವಂ ಮುಕ್ತಾಜಾತಾಃ ಪುರಾದಯಃ
ಮುಕ್ತಾ ಜಾತಾಸ್ತದನ್ಯೇಽಪಿ ತ್ರಿಶೂಲೇನ ನಿಪಾತಿತಾಃ ।
ಶೂಲದರ್ಶನ ಮಾತ್ರೇಣ ಮುಕ್ತಿರ್ಭವತಿ ವಸ್ತುತಃ ।
ತತ್ಸಂಯೋಗಾತ್ತದಾ ಮುಕ್ತಿರ್ಭವತೀತ್ಯತ್ರ ನಾದ್ಭುತಂ ॥"

ಇವುಗಳ ಅಭಿಪ್ರಾಯ ಹೀಗಿದೆ: ಈ ವೀರಭದ್ರನು ಈಗ ನಮ್ಮನ್ನು ತನ್ನ ತ್ರಿಶೂಲದಿಂದ ತಿವಿದು ಕೊಂದರೆ ಯಮಬಾಧೆಯನ್ನು ತಪ್ಪಿಸಿಕೊಳ್ಳುವೆವು; ನಮಗೆಲ್ಲಿದೆ ಆ ಭಾಗ್ಯ? ದಿಟಕ್ಕೂ ತ್ರಿಶೂಲದಿಂದ ಪ್ರಾಣಗಳನ್ನು ಬಿಡುವುದೊಂದು ಮಹಾ ಪುಣ್ಯ. ಹಿಂದೆ ತ್ರಿಪುರರು ತ್ರಿಶೂಲದಿಂದ ಮುಕ್ತರಾಗಿರುವರು. ತ್ರಿಪುರರಷ್ಟೇ ಅಲ್ಲ, ಇನ್ನೂ ಅದೆಷ್ಟೋ ಜನರಾಗಿರುವರು. ವಾಸ್ತವವಾಗಿ ತ್ರಿಶೂಲ

ದರ್ಶನದಿಂದಲೇ ಮುಕ್ತಿಯಾಗುತ್ತದೆಂದರೆ, ಇನ್ನು ಅದರ ಸ್ಪರ್ಶನದಿಂದಾಗದೇನು? ನನ್ನ ಈ ಮಾತಿನಲ್ಲಿ ಯಾವ ಆಶ್ಚರ್ಯವಿಲ್ಲ; ಯಾವ ಅದ್ಭುತವಿಲ್ಲ.

ಈ ತ್ರಿಶೂಲ ವಿಜ್ಞಾನ ತೃತೀಯ ನೇತ್ರವನ್ನು ತೆರೆಯಿಸುವಂತಹದು. ತ್ರಿಶೂಲದಲ್ಲಿ ತ್ರಿವಿಧ ಸೂರ್ಯಚಂದ್ರಾಗ್ನಿ ಮಂಡಲ ತೇಜವನ್ನು ತುಂಬಿ ಪ್ರತಿಷ್ಠಿತಗೊಳಿಸುತ್ತಿದ್ದರು. ಅ.ಉ. ಮಕಾರ ಮಂತ್ರಾತ್ಮಕವಾಗಿರುತ್ತಿದ್ದಿತು ಆ ತ್ರಿಶೂಲ. ಅದರ ಪ್ರಭಾವ ಪರಮಾದ್ಭುತ.

ತ್ರಿಶೂಲ ಲೋಹದ ಉಪಕರಣಗಳಲ್ಲಿ ಒಂದು. ರುದ್ರನಿಗೆ ರುದ್ರಗಣರಿಗೆ ಮೀಸಲಾದದ್ದು ಸುಧಾರಿತ ಲೋಹಾಯುಧಗಳನ್ನು ಆರಂಭಿಸಿದವರು ರುದ್ರಗಣರು. ತಮಗೆ ಅನುಕೂಲವಾದ ಕಬ್ಬುನದ ಕೈದುಗಳನ್ನು ತಾವೇ ರಚಿಸಿಕೊಳ್ಳುತ್ತಿದ್ದರು.

ನಕ್ಷತ್ರಪುಂಜಗಳಾಗಿ ರಾರಾಜಿಸುವವರು ರುದ್ರಗಣರು. ಧೂಮಕೇತುಗಳಾಗಿ ಧ್ರುವನಕ್ಷತ್ರಗಳಾಗಿ ವಿರಾಜಿಸುತ್ತಿರುವರೆಂದು ತಿಳಿದು ಬರುತ್ತದೆ. ರುದ್ರಲೋಕದಿಂದ ಸಿಡಿದು ಬಂದ ಜ್ಯೋತಿಷ್ಕಣಗಳೇ ಇವೆಲ್ಲವುಗಳೆಂದು ಹೇಳುವುದುಂಟು ರುದ್ರನು ಜ್ಯೋತಿರ್ಮಯನು ಪರಂಜ್ಯೋತಿ ಸ್ವರೂಪನೂ ಅವನೆ! ಅಪರಂಜ್ಯೋತಿ ಸ್ವರೂಪನೂ ಆತನೆ! "ರುದ್ರೋವಾ ಏಷೋಽಗ್ನಿಃ। ತ್ವಮಗ್ನೇ ರುದ್ರಃ।" ಇವೇ ಮುಂತಾದ ಮುಖ್ಯವಾದ ಶ್ರುತಿ, ನಿರುಕ್ತ, ಬ್ರಾಹ್ಮಣ ವಾಕ್ಯಗಳಿಂದ ರುದ್ರದೇವನ ಜ್ಯೋತಿರ್ಮಯವು ಗೋಚರವಾಗುತ್ತದೆ. ರುದ್ರಗಣರು ಜೀವಂತ ಜ್ಯೋತಿಗಳಾದರೆ ರವಿಶಶಿ ಅಗ್ನಿನಕ್ಷತ್ರ ರಾಶಿಗಳು ಜಡಜ್ಯೋತಿಗಳಾಗಿ ಜ್ವಲಿಸುತ್ತಿವೆ.

ರುದ್ರರಿರುವ ಲೋಕ ಅದೊಂದು ಜ್ಯೋತಿರ್ಮಯಲೋಕ, ಅದು ಎಲ್ಲ ಜ್ಯೋತಿಗಳ ಕೇಂದ್ರ, ಅದನ್ನೇ ಪ್ರಥಮ ಲೋಕವೆಂದು ಹೇಳುವರು. ಅದು ನಿರ್ಮಲವಾಗಿದೆ. ಅದು ಕೈವಲ್ಯ ಲೋಕ. ಅದನ್ನೆ ರುದ್ರಲೋಕವೆನ್ನುವರು. ಅದು ಅಮೃತಮಯವಾಗಿದೆ. ಅದು ಸತ್ಯಲೋಕ ವೈಕುಂಠಲೋಕಗಳಿಗಿಂತ ಹನ್ನೊಂದು ಕೋಟಿ ಗುಣ ಅಧಿಕವಾಗಿದೆ. ಅಲ್ಲಿ ಶಿವಯೋಗಿಗಳು ಶಿವಜ್ಞಾನಿಗಳು ವೀರ ಮಾಹೇಶ್ವರರು ಇರುತ್ತಾರೆ. ಇವರಿಗೆ ಮಾತ್ರ ಅದು ಗಮ್ಯಸ್ಥಾನವಾಗಿದೆ. ಅಲ್ಲಿ ಸೃಷ್ಟಿ ಸ್ಥಿತಿ ಸಂಹಾರಕರ್ತನಾದ ಶ್ರೀರುದ್ರನಿರುವನು. ಅವನು ಸರ್ವದೇವತಾ ಸಾರ್ವಭೌಮನಾಗಿರುವನು. ಆತನು ಸಕಲೈಶ್ವರ್ಯ ಸಕಲ ಮಾಹಾತ್ಮ್ಯ ಸಕಲ ಶಕ್ತಿ ಪ್ರಾಭವ ಮಹಿತನಾಗಿರುನು. ಅಪರಿಚ್ಛಿನ್ನವಾದ ಸ್ವಭಾವ ವೀರ್ಯವಂತನಾಗಿರುವನು. ಅನಿತರ ಸಾಧಾರಣವೆನಿಸುವ ಸ್ವಾತಂತ್ರ್ಯದಿಂದ ಜಗತ್ಪತಿಯಾಗಿ ಪಶುಪತಿಯಾಗಿರುವನು. ಧ್ರುತಿ, ಅದ್ರುಷ್ಟತೆ, ಆತ್ಮಬೋಧ, ಸೃಷ್ಟಿ, ವಿರಾಗ, ತಪಸ್ಸು, ಮಲೆ, ಈಶ್ವರತ್ವವೆಂಬ ದಶಕಲ್ಯಾಣ ಗುಣಸಂಪನ್ನನಾಗಿರುವನು. ಸರ್ವಜ್ಞತ್ವಾದಿಷಡಂಗಗಳಿಂದ, ಜ್ಞಾನಾದಿ ಷಡ್ಗುಣಗಳಿಂದ ಕೂಡಿರುವನು. ಗಂಗಾವಾಲುಕಿಗಳಂತೆ ಅಸಂಖ್ಯಾತ ಶತಕೋಟ್ಯಧಿಕರುದ್ರರಿಂದ ಮತ್ತು ಬ್ರಹ್ಮೋಪೇಂದ್ರ ಮುನಿಮನು ಮೊದಲಾದ ಸಕಲ ದೇವ ವರಿಷ್ಠರಿಂದ ಓಲೈಸಿಕೊಳ್ಳುವನು. ಅದಕ್ಕೆ ಜ್ಯೋತಿಯೇ ಕೋಟೆಯಾಗಿರುವುದು. ಪರಂಜ್ಯೋತಿಯೇ ಆ ಲೋಕದ ಪ್ರಕಾಶ. ಅಲ್ಲಿರುವ ರುದ್ರಗಣರು ತೈಜಸ ಸಿದ್ಧಿಯನ್ನು ಸಹಜವಾಗಿ ಸಂಪಾದಿಸಿದ್ದರು. ಅವರಿಗೆ ಅಗ್ನಿಯ ಭಯವಿರಲಿಲ್ಲ. ಅಂಗದಲ್ಲಿ ಅಂಗೈಯಲ್ಲಿ ಅಗ್ನಿಯನ್ನು ಧರಿಸುತ್ತಿದ್ದರು. ನೀರಿನಲ್ಲಿ ಜ್ಯೋತಿಯನ್ನು ಉರಿಸುತ್ತಿದ್ದರು, ಇರಿಸುತ್ತಿದ್ದರು. ದಿವ್ಯದರ್ಶಿಗಳು ದೂರದರ್ಶಿಗಳು ಆಗಿದ್ದರು. ಅಗ್ನ್ಯಸ್ತ್ರಗಳನ್ನು ತಯಾರಿಸಿದ್ದರು. ಅವರು ಕೈಗಳಲ್ಲಿ ಹಿಡಿದಿರುವ ಎಲ್ಲ ಆಯುಧಗಳಲ್ಲಿ ಅಗ್ನಿ ಅಡಕವಾಗಿರುತ್ತಿದ್ದಿತು. ಅವರು ಯಾವಾಗಲೂ ತೇಜಃಪುಂಜರಾಗಿರುತ್ತಿದ್ದರು.

ಕಾಳ-ಕಳಾಮಯಿ ಕಾಳಿ

ರುದ್ರಗಣರ ಮೂಲಶಕ್ತಿ ಕಾಲೀ ಅಥವಾ ಕಾಳೀ. ಕಾಳಿಯು ಪ್ರಾಕೃತಿಕವಾಗಿ ಕಳಾಮಯಳು; ಜ್ಯೋತಿ ಸ್ವರೂಪಳು.

"ಪುನಶ್ಚ ಕಾಲೀನಾಮ್ನಾ ಸಾ ಮದಂಶಂ ಪ್ರಾಪ್ಸ್ಯತಿ ಧ್ರುವಂ ।
ಜ್ಯೋತೀರೂಪೇಣ ಸಾ ತತ್ರ ಕಾರ್ಯಾರ್ಥೇ ಸಂಭವಿಷ್ಯತಿ" – ಶಿವಪುರಾಣ

ಮರಳಿ ಪ್ರಕೃತಿಯೇ ಕಾಲೀ ಎಂಬ ಹೆಸರಿನಿಂದ ಉದಯಿಸುವಳು. ರುದ್ರಜ್ಯೋತಿಯನ್ನೆ ಪಡೆಯುವಳು. ಜ್ಯೋತಿರೂಪದಲ್ಲಿ ಆತನಿಗೆ (ರುದ್ರನಿಗೆ) ಕೆಲಸ ಕಾರ್ಯಗಳಲ್ಲಿ ನೆರವಾಗುವಳು. ಇದರಿಂದಲೂ ರುದ್ರಗಣರು ಜ್ಯೋತಿರ್ಮಯರು. ಜ್ಯೋತಿಮೂಲದಿಂದ ಬಂದವರು. ರುದ್ರಗಣರೆಲ್ಲ ರುದ್ರಜನ್ಯರು; ಅಥವಾ ರುದ್ರನೇ ಮೂಲ ಪುರುಷನಾಗಿರುವವರು. ಕಾಳೀ ಶಕ್ತಿಯಿಂದಲೆ ಕಾಯಧಾರಿಗಳು ತೇಜೋಂಶರು; ತೇಜೋವಂತರು. ಜ್ಯೋತಿರ್ಮಯ ವಿಜ್ಞಾನದಲ್ಲಿ ತುಂಬಾ ಪಳಗಿದವರು.

ಮೂರ್ತಿರೂಪಕ್ಕೆ ತೇಜಸ್ತತ್ವವೆ ಆಧಾರ. ತೇಜಸ್ತತ್ವವೇ ಕಾಲ ಕಾರಣ. ಅಂತಹ ಕಾಲಕ್ಕೂ ಅಧಿಪತಿಯಾಗಿದ್ದನು ರುದ್ರದೇವನು. ಕಾಳೀ ಪತಿತ್ವವು ಅದನ್ನೇ ಸೂಚಿಸುತ್ತದೆ.

ಕಾಲಕ್ಕೆ ಮೂಲವಾದ ಶಕ್ತಿಯನ್ನು ವಶಪಡಿಸಿಕೊಂಡಿದ್ದನು ರುದ್ರನು. ಅದೇ ಕಳಾ ಶಕ್ತಿ. ಕಳಾ ಶಕ್ತಿಯಿಂದ ಕಾಳ ಮತ್ತು ಕಾಲಗಳು. ಕಾಳ (ಕತ್ತಲು) ಶಕ್ತಿಯಿಂದ ಕಳೆ ಕಾಲಗಳು, ಕಳಾ, ಕಳಾ, ಕಾಲ, ನೀಲಗಳನ್ನೆಲ್ಲ ರುದ್ರನು ರುದ್ರಗಣರು ವಶಪಡಿಸಿಕೊಂಡಿದ್ದರು. ಅದರಿಂದಾಗಿ ಅವರು ಕಲಾವಂತರಾದರು. ಆದಿಕಲಾವಂತರು ಅವರು.

ಕಾಳೀ ದೇವಿಗೆ ಹೈಮಾವತಿ, ಜ್ಯೋತಿಷ್ಮತಿ ಎಂದು ಹೆಸರುಗಳು. ರುದ್ರ-ವೀರಭದ್ರ-ರುದ್ರಗಣರ ಬಾಳು ಬೆಳಗಿತು ಆ ಕಳಾಮಯ ಶಕ್ತಿಯಿಂದ. ಆದಿ ಕಳೆ ಅವಳು. ಜ್ಯೋತಿಗೆ ಜ್ಯೋತಿ ಅವಳು. ಆ ಜ್ಯೋತಿಷ್ಮತಿ ಕಳೆಯನ್ನು ಅಳವಡಿಸಿಕೊಂಡವರು ರುದ್ರಗಣರು; ಅಂತೆಯೇ ಅವರು ಕಳಾವಂತ ಜೀವಿಗಳು. ಅದರಿಂದ ಅವರ ಅಸ್ತಿತ್ವವು ಅಚ್ಚಳಿಯದೆ ಬೆಳಗಿತು. ಅಚ್ಚತನವುಳ್ಳದಾಗಿ ಬೆಳಗಿತು. ಸದ್ರೂಪದಲ್ಲಿ ಚಿತ್ರಕಾಶವಾಗಿಯೂ ಬೆಳ್ಳಂ ಬೆಳಗಿತು. ಅವರ ಆ ಚಿತ್ರಕಾಶ ಅಂತರ್ಗತ ಕಾರಣವಾಗಿದ್ದಿತು. ಅದು ಅವರ ಬಹಿರಂಗದಲ್ಲಿ ಬಾಹ್ಯ ಆಯುಧಗಳಲ್ಲಿ ಹೊಮ್ಮಿ ಪಜ್ವಳಿಸಿತು.

ಕಾಳಿಯು ಜಗದ ಅನಾದಿ ಕಾಳ ರಾತ್ರಿಯೂ ಅಹುದು; ಕಳಾ ಜ್ಯೋತಿಯೂ ಅಹುದು; ಕಲಾವಂತ ವ್ಯಕ್ತಿಯೂ ಅಹುದು. ಕಾಳಿಗೆ ಈ ಮೂರು ಮುಖಗಳಿವೆ.

ಜಗತ್ತಿನ ಆದಿಶಕ್ತಿಯಾದ ಆದಿ ದೀಪ್ತಿಯಾದ ಕಾಳಿದೇವಿಯು ಜಗತ್ತಿನ ಎಲ್ಲ ಜ್ಯೋತಿಗಳಿಗೆ ಕಾರಣಳು. ಜ್ಯೋತಿರ್ಮಯರಾದ ಜ್ಯೋತಿರ್ವಿಜ್ಞಾನಿಗಳಾದ ರುದ್ರಗಣರ ಜನನಿಯು; ಜಗತ್ತಿನ ಜನನಿಯು, ಸತ್ತಿನ ಆಶ್ರಯದಲ್ಲಿ ಚಿತ್ರಕಾಶವನ್ನು ಜಾಗತಿಕ ಜ್ಯೋತಿಗಳನ್ನು ಬೆಳಗ ಬಯಸಿ ಬಸಿರು ಹೊತ್ತು ಭಾವಪೂರ್ಣ ಲೀಲೆಗಾಗಿ ಎಲ್ಲವನ್ನು ಹೆತ್ತಳು. ಹೊಳಪೇರಿಸಿದಳು. ಅನಾದ್ಯನಂತಳಾದ ಕಾಳಿದೇವಿ ತನ್ನ ಜ್ಯೋತಿರ್ಗಣರನ್ನು ಜಗತ್ತನ್ನು ನೋಡಿ ಸಮ್ಮೋದಗೊಂಡಳು. ಆಗ ಸತ್‌ಚಿತ್ ಆನಂದಗಳ ಸಂಗಮವಾಯಿತು. ವ್ಯಷ್ಟಿತ್ರಯ-ಸಮಷ್ಟಿತ್ರಯಗಳಲ್ಲಿ ತುಂಬಿ ತುಳುಕಿದಳು. ಸದಸನ್ಮಯವಾಗಿಸಿದಳು. ಚಿರಚಿನ್ಮಯವಾಗಿಸಿದಳು. ಸುಖ-ದುಃಖ ಸಮನ್ವಯಗೊಳಿಸಿದಳು. ತಾನು ತ್ರಿಪುರ ಸುಂದರಿಯಾಗಿ ತ್ರಿಲೋಕವನ್ನು ತುಂಬಿ ನಿಂತಳು. ನಿತ್ಯಪೂರ್ಣಳಾದಳು. ಸತ್-ಅಸತ್; ಸದಸತ್. ಚಿತ್-ಅಚಿತ್; ಚಿದಚಿತ್. ಸುಖ-ದುಃಖ; ಸುಖ-ದುಃಖ ಇವು ಒಂದೊಂದು ತ್ರಿಲೋಕವೆಂದು ಬಾವಿಸುವುದು, ಕಾಳಿದೇವಿಯು ಇರುಳು-ಬೆಳಗುಗಳ ಸ್ವರೂಪಿಣಿಯಾಗಿ ಸರ್ವವನ್ನು ಸರ್ವಕಾಲದಲ್ಲಿ ತುಂಬಿಕೊಂಡಿರುವಳು.

ಸರ್ವಾತ್ಮಕಳಾದ ಆ ಕಾಳಿಮಾತೆ ಮುಂದೆ ಉಮಾ ರೂಪಿಣಿಯಾಗಿ ಅವತರಿಸಿ ಓಂಕಾರ ರೂಪಿಣಿಯಾಗುವಳು. ಪ್ರಣವವನ್ನು ಪೂರ್ಣಗೊಳಿಸುವರು. ಮಂತ್ರಲೋಕವನ್ನು ಪ್ರವೇಶಿಸಿ ವ್ಯಾಪಿಸುವಳು. ಬಿಂದು ರೂಪಿಣಿಯಾಗಿ ಕಲಾಮಯಳಾಗಿ ಬೆರೆದು ಬೆಳಗುವಳು. ಶಕ್ತಿಶಾಲಿನಿಯಾಗಿ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣ ಕರ್ತಳಾಗುವಳು. ತನ್ನ ರಸಕಣಗಳನ್ನು ಕಳೆಯ ಕಳೆಯ ಕಿರಣಗಳನ್ನು ಅಣು ಅಣುಗಳ ಅಂತರಾಳದಲ್ಲಿ ತುಂಬುವಳು. ಅವಳ ಪತಿಯು ನಾದಾತ್ಮಕವಾಗಿ ಅಕಾರಾತ್ಮಕನಾಗಿ ಅವತರಿಸಿ ವ್ಯಾಪಿಸಿ ಚೇತನವನ್ನುಂಟುಮಾಡುವನು.

ಕಾಳೀದೇವಿಯು ಕಾಳಿದಾಸ ಕವಿಯ ನಾಲಗೆಯ ಮೇಲ ಮಂತ್ರದ ಬೀಜಾಕ್ಷರವನ್ನು ಬರೆದು ಕುರುಬನನ್ನು ಕವಿಯನ್ನಾಗಿಸಿದುದನ್ನು ಇಲ್ಲಿ ನೆನೆಯಬೇಕು. ಅಂತೆಯೇ ಲಿಂಗಕ್ಕೆ 'ಕಾಂತಿ'ಯಾಗಿರುವುದನ್ನು ನೆನೆಯಬೇಕು.

ಕಾಳಿಮಾತೆ ಮಹಾಶಕ್ತಿ; ಮಹಾದೀಪ್ತಿ. ಲೋಕಾದಿಲೋಕಗಳ ಅಭಿವ್ಯಕ್ತಿಗೆ ಆದಿ ಕಾರಣಳು. ಇವುಗಳಲ್ಲಿರುವ ಏನೆಲ್ಲವೂ ಅವಳ ಸ್ವರೂಪಗಳು ಅವಳ ಹೊರತು ಬೇರೇನು ಇಲ್ಲ. ಅಣುವಿಗೆ ಅಣುವಾದವಳು ಅವಳೆ! ಮಹತ್ತಿಗೆ ಮಹತ್ತಾದವಳು ಅವಳೆ! ಪುರುಷನಿಗೆ ಹಿರಣ್ಮಯತ್ವ ಬಂದುದು ಅವಳಿಂದಲೆ! ಅವಳು ಜ್ಯೋತಿಯಾಗಿ ಉದ್ಗಮಿಸಿದಳು. ವಿಜ್ರಂಭಿಸಿದಳು. ಅವಳು ರಾತ್ರಿಯಾಗಿ ಅವತರಿಸಿದಳು; ಆವರಿಸಿದಳು. ಈ ಉಭಯ ಕಾರ್ಯವು ಅವಳದೇ ಆಗಿದೆ. ಬ್ರಹ್ಮನ ಸತ್ತೆಗೆ ಅವಳು ಕಾರಣವಾದಂತೆ ಬ್ರಹ್ಮಾಂಡ ಸತ್ತೆಗೂ ಕಾರಣಳಾಗಿದ್ದಾಳೆ. ಅವಳು ತಮಸ್ಸು-ತೇಜಸ್ಸುಗಳ ಲೀಲಾ ಭೂಮಿಯಾಗಿದ್ದಾಳೆ; ಮೂಲ ಗಂಗೋತ್ರಿಯಾಗಿದ್ದಾಳೆ.

ಅದು ಬರೀ ಬಯಲ ಬೆಳಕು ಮಾತ್ರವಲ್ಲ, ಬಾಳ ಬೆಳಕು. ಬಾಳನ್ನು ರೂಪಿಸುವ ತೇಜಸ್ಸು. ವಿಜ್ಞಾನವನ್ನು ವರ್ಧಿಸುವ ಪ್ರಕಾಶ. ಬಲವನ್ನು ಬರಿಸುವ ಪ್ರಭೆ, ಪರಮಾನುಭೂತಿಯನ್ನುಂಟುಮಾಡುವ ಪ್ರತಿಭೆ. ಚೈತನ್ಯ ಸನ್ನಿಹಿತ ಕಳೆ; ಸಮವಾಯ ಶಕ್ತಿ. ಚೈತನ್ಯದೊಡನೆ ಚಿನ್ಮಯಿಯಾಗಿ ದೃಕ್ಕ್ರಿಯಾಶಾಲಿಯಾಗಿ ಪರಮೇಚ್ಛಾಶಕ್ತಿಯಾಗಿ ಇರುವಳು.

ಕ್ರಾಂತಿದರ್ಶಿಗಳಾದ ರುದ್ರಗಣರು ಆ ದಿವ್ಯ ದೀಪ್ತಿಯ ದರ್ಶನವನ್ನು ಪಡೆಯಲು ತಮ್ಮ ತನು ಮನ ಪ್ರಾಣಗಳನ್ನು ಅರ್ಪಿಸಿದವರು; ಅರ್ಪಿಸಿ ಅದನ್ನು ಅಳವಡಿಸಿಕೊಂಡವರು. ರುದ್ರಗಣರು ಅದನ್ನು ಪಡೆದು ತಾವೇ ಬಾಳ ಬೆಳಗಿದವರಲ್ಲ. ಧರೆಗಿಳಿದು ಬಂದು ಧರೆಯವರಿಗೆ ಅದನ್ನು ಧಾರೆಯೆರೆದವರು. ಗುರು-ಜಂಗಮರೂಪಿಗಳಾಗಿ ಇಳೆಗೆ ಬಂದು ಜನರಿಗೆ ಜ್ಯೋತಿ ದರ್ಶನವನ್ನು ಮೂಡಿಸಿದವರು. ಬರೀ ಬಯಲು ಬೆಳಗಾಗದೆ ಬಾಳ ಬೆಳಗನ್ನಾಗಿಸಿದವರು. ಬಾನ ಬೆಳಗು ಭೂಮಿಯ ಬೆಳೆಗೆ ಕಾರಣವಾದಂತೆ ಆ ಕಾಳೀದೇವಿಯ ಕಳಾಶಕ್ತಿ ರುದ್ರಗಣರ ಮುಖದಲ್ಲಿ ಭೂಜನಂ ಬಾಳನ್ನು ಬೆಳಗಿಸಿತು; ಬೆಳಗಿಸುತ್ತಿದೆ.

ಆ ಬೆಳಕು ವೀರಭದ್ರ ದೇವನ ಮುಖದಲ್ಲಿ ವಿಶೇಷವಾಗಿ ವಿಶ್ವಕ್ಕೆ ಒಂದು ವಿಶಿಷ್ಟ ಕ್ರಾಂತಿಯನ್ನುಂಟು ಮಾಡಿತು. ಪದಾರ್ಥಗಳನ್ನು ಪ್ರಾಣಿಗಳನು ವಧಿಸುವ ಯಜ್ಞ ನಿರೋಧಕ ಕ್ರಾಂತಿಯನ್ನು ಹರಡಿತು. ಶಿವಪಥವನ್ನು ತೋರಿಸಿ ಕರುಣಿಸಿತು.

ಕಾಳಿ ತೇಜದ ನೆಲೆಯೂ ಅಹುದು; ತೇಜದೊಳಗಿನ ಒಂದು ನಿಲವರ್ಣದ ಕಲೆಯೂ ಅಹುದು. ನೀಲಲೋಹಿತತ್ವದ ಕಳೆಯೂ ಅಪ್ಪುದು ಕಾಳಿಯಿಲ್ಲದೆ ನೀಲಲೋಹಿತತ್ವವಿಲ್ಲ. ಕಾಳಿಯೂ ರುದ್ರನೂ ಪರಸ್ಪರ ಪೂರಕರು.

ರುದ್ರಜ್ಯೋತಿಯ ಒಂದು ಸ್ಥೂಲ ತೇಜವೇ ಅಗ್ನಿ. ಸೂಕ್ಷ್ಮ ತೇಜಗಳೇ ನಕ್ಷತ್ರಗಳು ಸ್ಥೂಲಸೂಕ್ಷ್ಮರರೆ ಸೂರ್ಯಚಂದ್ರರು. ಇವೆಲ್ಲವೂ ರುದ್ರಗಣರ ಸಾಧನ ಸಾಮಗ್ರಿಗಳು ಶಸ್ತ್ರಾಸ್ತ್ರರೂಪಹರು.

ರುದ್ರತೇತನವಿಲ್ಲದೆ ಇವು ರಂಜಿಸುವ; ರಾಜಿಸವು. ರುದ್ರಾನುಗ್ರಹದಿಂದ ಬ್ರಹ್ಮಾಂಡವನ್ನು ಬೆಳಗುತ್ತಿರುವಂತೆ ಪಿಂಡಾಂಡವನ್ನೂ ಬೆಳಗುತ್ತಿವೆ. ರುದ್ರನಿಗೆ ತ್ರಿನೇತ್ರರಾದಂತೆ ಮಾನವರಿಗೆ ವಿಶೇಷವಾಗಿ ಮಹಾನುಭಾವರಿಗೆ ದೃಕ್ಕ್ರಿಯಾನುಭೂತಿಗಳೆಂಬ ತ್ರಿನೇತ್ರರಾಗಿ ಸೂಯ-ಚಂದ್ರ ತೇಜರಿರುವರು. ಉದರಾಗ್ನಿ ಅಥವಾ ಜಠರಾಗಿಯಿಲ್ಲದೆ ಜೀವನವಿಲ್ಲ. ನೇತ್ರದ್ವಯವಿಲ್ಲದೆ ದೃಶ್ಯ ದಾರ್ಶನವಿಲ್ಲ ಪ್ರಜ್ಞಾನೇತ್ರವಿಲ್ಲದೆ ದಿವ್ಯಶಕ್ತಿಯು ಅವತರಣವಿಲ್ಲ. ಮಹಾನುಭಾವತೆಯ ಉತ್ಕರ್ಷವಿಲ್ಲ. ಕಲ್ಯಾಣಕಾರಕವಾದ ಲೋಕಾಕರ್ಷಣವಿಲ್ಲ.

ರುದ್ರನು ಲೋಹಿತ; ಕಾಳಿಯು ನೀಲ. ನೀಲ-ಲೋಹಿತತ್ವವಿರುವರೆಲ್ಲ ಕಾಳಿ-ರುದ್ರರ ಸಕೀಲ ಸಂಬಂಧ'ವಿದ್ದೇ ಇರುತ್ತದೆ. ಬಾಳನ್ನು ಸರ್ವತೋಮುಖವಾಗಿ ಬೆಳಗುವ ಆದಿ ಭೌತಿಕ ಆಧ್ಯಾತ್ಮಿಕ ಆದಿದೈವಿಕ ತತ್ವತೇಜ ನೀಲಲೋಹಿತ. ಈ ನಿರೂಪಣೆಯಲ್ಲಿ ಒಂದು ಅಮೂಲ್ಯವಾದ ಸತ್ಯದ ನಿರೂಪಣೆಯಿದೆ. ರುದ್ರಕಾಳಿಯೇ ವಿದ್ಯಾಕಲೆಯಾಗಿ 'ಪ್ರಸಾದಿ'ಯನ್ನು ರೂಪಿಸುತ್ತದೆ. ಶಾಂತಿಕಲೆಯಾಗಿ ಪ್ರಾಣಲಿಂಗಿಯನ್ನು ಪ್ರತಿಷ್ಠಿಸುತ್ತದೆ.

ಕಲಾಮಯ ಜ್ಯೋತಿರ್ವಿಜ್ಞಾನದಲ್ಲಿ ನಿಜವಾಗಿಯೂ ರುದ್ರಗಣರಿಗೆ ಒಂದು ಪ್ರಭುತ್ವವಿದೆ. ಅವರು ಜ್ಯೋತಿರ್ಮಯರು. ರುದ್ರತತ್ತ್ವಕ್ಕೂ ಜ್ಯೋತಿತ್ತ್ವಕ್ಕೂ ಭಿನ್ನತೆಯಿಲ್ಲ. ರುದ್ರಜ್ಯೋತಿಯ ರಹಸ್ಯವನ್ನೆಲ್ಲ ಅವರು ಅರಿತಿದ್ದರು; ರುದ್ರಜ್ಯೋತಿಯ ಸ್ವರೂಪರೇ ಅವರಾಗಿದ್ದರು.

ರುದ್ರಜ್ಯೋತಿಯ ಭಾವವೆ ಜೀವನ; ಅದರ ಅಭಾವವೆ ಮರಣ. ರುದ್ರಜ್ಯೋತಿಯ ಅನುಭೂತಿ ಅಗಾಧ; ಆರಾಧ್ಯ. ಪ್ರತಿಯೊಬ್ಬರ ಹೃನ್ಮೂಲದಲ್ಲಿರುವ ನಿಗೂಢ ದೀಪ್ತಿಯದು; ಪ್ರಗಾಢ ಶಕ್ತಿಯದು. ವ್ಯಕ್ತಿ ಸತ್ತೆಗೆ ಅವನ್ನು ಬಿಟ್ಟರೆ ಬೇರೊಂದಿಲ್ಲ. ವ್ಯಕ್ತಿ ಶಕ್ತಿ ದೀಪ್ತಿಗೂ ಅದೇ ಸರ್ವಸ್ವ. "ಅಗ್ನಿಮೀಳೇ ಪುರೋಹಿತಂ" ಎಂಬ ಋಷಿಗ್ವಾಣಿಯನ್ನು ಮೆಲುಕು ಹಾಕಬೇಕು. ರುದ್ರಾಗ್ನಿಯ ಉಪಾಸನೆಯ

ಉಪಯುಕ್ತತೆಯನ್ನು ಮನದಟ್ಟಾಗಿಸಬೇಕು. ಬಾಳಿಗೆ ಮೊದಲಿನದು; ಬಾಳಿಗೆ ಬೆಳಗದು; ಬಲವದು. ಬಾಳಿಗೆ ಬೆನ್ನಾಸರಾದ ರುದ್ರಗಣರೆಂದರೆ ಗುರುಲಿಂಗಜಂಗಮರು. ಇವರು ಔಪಾಸಕರಾಗದೆ ವಿಧಿಯಿಲ್ಲ; ಬಾಳಿಗೆ ಯಾವ ಬೆಳಕುಬಾರದು. ವಿದ್ಯಾಕಲೆ-ಶಾಂತಿ ಕಲೆಗಳು ಸಮನಿಸವು. ಊರ್ಧ್ವಗಮನ ಉಂಟಾಗದು; ಉಜ್ವಲ ಕಿರಣ ಉಲ್ಲಸಿತವಾಗದು. ಕ್ರತುಶಕ್ತಿ ಕೈಗೂಡದು. ಕವಿದೀಪ್ತಿ ಮೈಗೂಡದು. ಪಾರ್ಥಿವ ಸತ್ತೆ ಪ್ರಾಪ್ತವಾಗದು. ವಿಜ್ಞಾನವಾಗುದಯವಾಗದು. ವಿಶುದ್ಧ ಸ್ವಗುಂಟಾಗದು.

ರುದ್ರ-ಕಾಳಿ ಈ ಪದಗಳನ್ನು ತುಂಬಾ ಎಚ್ಚರಿಕೆಯಿಂದ ವಿಚಾರಿಸಬೇಕು. ಅವುಗಳಲ್ಲಿ ಅಗಾಧ ರಹಸ್ಯವಿದೆ. ಅನುಪಮ ಜ್ಯೋತಿಯ ವಿಜ್ಞಾನವಿದೆ. ವಿಜ್ಞಾನ ಪರಂಪರೆಯನ್ನೇ ಅವುಗಳಲ್ಲಿ ಕಾಣಬಹುದಾಗಿದೆ. ಕಾಳಿ ನೀಲತೋಯದ; ರುದ್ರ ಅದರ್ಮ ಹೊಮ್ಮಿಂಚು; ಸೂಕ್ಷ್ಮಾಂಬರದಲ್ಲಿ ಶೋಭಿಸುವ ವಿಶಿಷ್ಟ ವಿದ್ಯುಲ್ಲೇಖೆ. ಕಾಳಿ ಅಜ್ಞಾನ ಶೂನ್ಯಸ್ಥಲದ ಪ್ರಶಾಂತ ಶಕ್ತಿ. ತಿರೋಧಾನಶಕ್ತಿ. ರುದ್ರ ಅನುಗ್ರಹ ವ್ಯಕ್ತಿ. ಅಪಾರ ಪ್ರಕಾಶಮಯ ವ್ಯಕ್ತಿ.

ಎಲ್ಲ ಮಂಡಲಗಳ ಮೇಲೆ ಅವರಿಗೆ ಅಧಿಕಾರವಿದ್ದಿತು. ಪಂಚ ಮಹಾ ಭೂತಗಳು ಅವರ ಕೈ ವಶವಾಗಿದ್ದವು. ಜಲಾನಿಲಗಳ ಭಯ ಅವರಿಗಿರಲಿಲ್ಲ. ಪ್ರತಿಯಾಗಿ ಅಗ್ನಿ ಮಂಡಲ ಅಖಂಡವಾಗಿ ಅವರ ವಶವಾಗಿದ್ದಿತು. ಅಗ್ನಿಮಂಡಲ ಆದಿತ್ಯ ಮಂಡಲಗಳನ್ನು ಅವರ ಧಾರಾಳವಾಗಿ ಬಳಸಿಕೊಳ್ಳುತ್ತಿದ್ದರು. ಅವುಗಳ ಬೆಳಕನ್ನು ಪಡೆದಿದ್ದರು. ತಾಮ್ರವರ್ಣದಂತೆ ತೊಳಗುತ್ತಿದ್ದರು. ರುದ್ರಗಣಕ್ಕೆ ಅಗ್ನಿಯ ಮಹಾ ಸಾಮರ್ಥ್ಯವನ್ನು ಮೈಗೂಡಿಸಿಕೊಂಡಿದ್ದರು. ತೇಜೋಮಯರಾಗಿದ್ದರು. ತೇಜಶ್ಶಕ್ತಿವಂತರಾಗಿದ್ದರು. ಜ್ಯೋತಿರ್ಲಿಂಗಧಾರಿಗಳಾಗಿದ್ದರು.

ರಂಜಿಸುವ ತೇಜಸ್ಸುಗಳೆಲ್ಲ ರುದ್ರ ದೇವನ ಅಂಶಗಳು. ಜ್ಯೋತಿರ್ಮಂಡಲಗಳನ್ನು ಅನುಗ್ರಹಿಸಿದವನು ರುದ್ರ ದೇವನು. ಜಗ ಜಗತ್ತುಗಳಿಗೂ ಬೆಳಕನ್ನಿತ್ತನು. ಬೆಳಕಿನ ಜತೆಗೆ ಬಲವನ್ನೂ ಅನುಗ್ರಹಿಸಿದನು. ಸರ್ವಶಕ್ತನವನು. ಸರ್ವದೀಪ್ತನವನು. ಆತನ ಅನುಯಾಯಿಗಳಾದ ರುದ್ರಗಣರೂ ಸಹ ಪ್ರತಿಭಾವಂತರು, ಪ್ರತಾಪವಂತರು ವಿಲೋಹಿತರು.

ಸಹಸ್ರಾಕ್ಷನು ಶ್ರೀರುದ್ರನು. ಸಹಸ್ರ ಹಸ್ತನು ಶ್ರೀರುದ್ರನು ರುದ್ರಗಣರ ಮಾತೂ ಅಷ್ಟೆ! "ಸಹಸ್ರಾಕ್ಷಾಯ ಮಿಢುಷೇ" ಸಹಸ್ರಾಕ್ಷ-ಸಹಸ್ರ ಹಸ್ತ ಪದಗಳನ್ನು ನಾವು ಗಂಭೀರವಾಗಿ ಗಮನಿಸಬೇಕು; ಅಂತರ್ಮುಖ ವಿಜ್ಞಾನದಿಂದ ಆಲೋಚಿಸಬೇಕು. ಆಗ ಅವುಗಳ ಅಂತರಾರ್ಥ ಅಭಿವ್ಯಕ್ತವಾಗುತ್ತದೆ. ಅವರ ತೇಜೋವಂತಿಕೆ ಅವರ ಸತ್ವವಂತಿಕೆ ಮನದಟ್ಟಾಗುತ್ತದೆ. ಅವರ ಹಸ್ತಗತ ಇಷುಗಳು ಸಾಸಿರ ಸಾರಿ! ಅವೆಲ್ಲ ತೇಜೋಮಯಗಳು. ಶಿವ ತಮಗಳು.

"ಪರೀ ತೇ ಧನ್ವನೋ ಹೇತಿ ರಸ್ಮಾನ್ ವೃಣುಕ್ತು ವಿಶ್ವತ ॥"

ರುದ್ರಗಣರು ಹಿರಣ್ಯ ಬಾಹುಗಳುಳ್ಳವರು ಸೇನಾನ್ಯರು. ದಿಕ್ಪತಿಗಳು. ದಿಗಂತವ್ಯಾಪ್ತರು. ಸಿಂಹಕೇಶರು ಶರಭಕಲಿಗಳು. ಸಂಪುಟ್ಟರು. ಸೃಷ್ಟೀಶರು. ಅನಲ್ಪ ವೀರರು, ಅನುಪಮ ಸುಖ ಪ್ರದರು.

"ರುದ್ರಾ ಅಭಿತೋ ದಿಕ್ಷು ಶ್ರಿತಾಃ ಸಹಸ್ರಶೋಃ ವೈಷಾಗ ಹೇಡ ಈಮಹೇ" ಎಂದಿದೆ ಶ್ರುತಿ. ಅವರ ದಿಗಂತ ವ್ಯಾಪ್ತಿಗೆ ಇದಕ್ಕಿಂತ ಬೇರೆ ಸಾಕ್ಷಿ ಬೇಕಿಲ್ಲ. ಅವರು ಸಂತುಷ್ಟರಂ; ಸಕಲ ಸೃಷ್ಟಿಗೊಡೆಯರು. ಮಂತ್ರಮಯರು. ತಂತ್ರ ನಿಪುಣರು ಎಲ್ಲ ಔಷಧಿಗಳ ಒಡೆಯರು. ಉದ್ಘೋಷಿಸುವವರು. ಸಭಾಪತಿಗಳು, ಅಶ್ವಪತಿಗಳು, ಗಣಪತಿಗಳು. ವಿರೂಪರು ವಿಶ್ವರೂಪರು. ಮಹಂತರು, ಶತಧನ್ಯರು. ವೃದ್ಧರು, ಸಂವೃದ್ಧರು. ತೊರೆಯ ಪ್ರವಾಹವನ್ನು ಹೋಲುವವರು. ಪ್ರಗಲ್ಭರು, ಪ್ರಬುದ್ಧರು. ಮೇಘ-ಮಿಂಚುಗಳನ್ನು ವಶಪಡಿಸಿಕೊಂಡವರು. ದೇವ ಹೃದಯರು. ವಿಕಿರಿಕರು, ವಿಕ್ಷೀಣಕರು; ವಿಚಿನ್ವತ್ಕರು. ಅಮೀವತ್ಕರು. ಸಹಸ್ರ ಪ್ರಾಚೀನ ಮುಖರು ಈಶಾನರು.

ಆಂಜನೇಯ ಯಾರ ತನಯ?

ಇದೊಂದು ವಿಚಾರಾರ್ಹ ವಿಷಯ: ಏಕೆಂದರೆ ಹನುಮಂತ ವಾಯುಪುತ್ರ ಎಂದು ಹೇಳುವುದುಂಟು. ಆದರೆ ಇದು ನಂಬತಕ್ಕ ಮಾತಲ್ಲ. ಗಾಳಿಗೆ ಹುಟ್ಟುವುದು ನಿಸರ್ಗ ನಿಯತಿಯಲ್ಲ. ಅಲ್ಲದೆ ವಾಯು ಮಾರುತಿಯ ಜನನಕ್ಕೆ ಅಸಾಧಾರಣ ಕಾರಣವೇನಲ್ಲ. ಋಗ್ವೇದ ಮತದಂತೆ ಸರ್ವರ ಜನನಕ್ಕೂ ಕಾರಣವಾಗಿದೆ ವಾಯು. ರೈಕ್ವನು ವಾಯುವೆಲೆಯ ಸ್ಥಾನವೆನ್ನುವನು. "ಆತ್ಮಾದೇವಾನಾಂ, ಭುವನಸ್ಯಗರ್ಭಃ, ಯಥಾವಶಂಚರತಿ ದೇವ ಏಷಃ ॥ ಘೋಷಾ ಇದಸ್ಯಶೃಣ್ವಿರೇ, ನರೂಪಂ, ತಸ್ಮೈವಾತಾಯ ಹವಿಷಾ ವಿಧೇಯಂ॥" ಎಂದು ಋಗ್ವೇದ ಮಂತ್ರವಿದೆ. ವಾಯು ಇಂದ್ರಾದಿ ದೇವತೆಗಳಿಗೆ ಆತ್ಮನೂ ಭುವನಕ್ಕೆ ಪ್ರಾಣ ಸ್ವರೂಪನೂ ಅಥವಾ ಭೂತ ಜನ್ಮ ಕಾರಣನೂ ಆಗಿದ್ದಾನೆ. ತನ್ನಿಚ್ಛೆಯಂತೆ ಚರಿಸುತ್ತಾನೆ. ಆತನ ಶಬ್ದ ಕೇಳುತ್ತದೆ; ರೂಪಿಲ್ಲ. ಉಳಿದ ಭೂತಗಳಂತೆ ವಾಯು ಒಂದು. ನೇರ ಕಾರಣವಲ್ಲ. ಇದರಿಂದಾಗಿ ಆಂಜನೇಯನ ಜನ್ಮ ಮೂಲ ಕಾರಣ ಬೇರೊಂದಿರಬೇಕು. ಅದು ಪುರಾಣಗಳಲ್ಲಿ ಅಲ್ಲಲ್ಲಿ ದೊರೆಯುತ್ತದೆ. ಪುರಾಣ ವಾದದಲ್ಲಿಯೂ ಎರಡು ತೆರನಿದೆ. ರುದ್ರ ತನಯನೆಂದು ವೀರಭದ್ರತನಯನೆಂದು ಪುರಾಣಗಳು ಹೇಳುತ್ತವೆ. ಅವರೆರಡು ಅಭಿಪ್ರಾಯಗಳು ಹೀಗಿವೆ.

ಮದ್ರಾಸಿನ ವಾವಿಳ್ಲ ರಾಮಸ್ವಾಮಿ ಶಾಸ್ತ್ರುಲು ಅಂಡ್ ಸನ್ಸ್ ಅವರು ಪ್ರಕಟಿಸಿದ "ಆಂಜನೇಯ ಸಹಸ್ರನಾಮಸ್ತೋತ್ರಮ್" ಎಂಬ ಗ್ರಂಥದ ಕೊನೆಯಲ್ಲಿರುವ ನೂರೆಂಟು ನಾಮಾವಳಿಯ ನೂರೊಂದನೆಯದಾಗಿ ನಿರ್ದಿಷ್ಟವಾದ ನಾಮ "ರುದ್ರವೀರ್ಯ ಸಮುದ್ಧವಾಯ" ಎಂದಿದೆ. ಮತ್ತು "ಕಾಲಾಗ್ನಿ ರುದ್ರಾಯ" ಎಂದು ಹನುಮಂತ್ಪಂಚವಿಂಶತಿಯಲ್ಲಿದೆ. ಇದಲ್ಲಿದೆ,

"ಚಿರಂಜೀವತು ದೀರ್ಘಾಯುರ್ವಾನರೋ ಹನುಮಾನ್ಸದಾ ।
ಆಂಜನೀಗರ್ಭ ಸಂಭೂತೋ ರುದ್ರಾಂಶೋ ಹಿಧರಾತಲೇ ॥"

–ಸ್ಕಾಂದ ಮಹಾಪುರಾಣ

ಆಂಜನೇಯನ ತಾಯಿ ಅಂಜನಾದೇವಿ. ಆದರೆ ಆತನ ತಂದೆ ಕೇಸರಿಯಲ್ಲ, ವಾಯುವಲ್ಲ; ರುದ್ರನೆಂದು ಸ್ಕಂದಾದಿ ಪುರಾಣಗಳು ಉಗ್ಗಡಿಸಿವೆ. ಶಿವ ಪುರಾಣದ ಆರನೆಯ ಆಶ್ವಾಸದಲ್ಲಿ ಆಂಜನೇಯನ ಹುಟ್ಟು ಹೀಗಿದೆ:

ತಾರಕಾಸುರನ ಸಂಹಾರಕ್ಕಾಗಿ ಕುಮಾರನ ಜನನವಾಗಬೇಕಾಗಿತ್ತು. ಅದಕ್ಕಾಗಿ ಶಿವನ ವೀರ್ಯಸ್ಖಲನವಾಗುವುದು. ಅದನ್ನು ಅಗ್ನಿಯು ಮತ್ತು ವಾಯುವು ಹೊತ್ತು ತರುವರು. ಅವರಲ್ಲಿ ಅಗ್ನಿಯು ಹೊತ್ತು ತಂದ ವೀರ್ಯವು ಆರು ಜನ ಕೃತ್ತಿಕಾ ಕನ್ಯೆಯರ ಗರ್ಭವನ್ನು ಸೇರಿ ಕಾರ್ತಿಕೇಯನು ಜನಿಸುವನು. ಎರಡನೆಯವನಾದ ವಾಯು ಹೊತ್ತು ತಂದ ವೀರ್ಯವು ಅಂಜನಾದೇವಿಯ ಒಡಲ ಸೇರಿ ಹನುಮಂತನು ಹುಟ್ಟುವನು.

ಅಂಜನಾದೇವಿಯು "ಕೇಸರಿ" ಎಂಬ ವಾನರನ ಹೆಂಡತಿಯು, ಯೌವನವತಿ, ಸೌಂದರ್ಯವತಿ; ಸೌಶೀಲ್ಯವತಿ. ಅವಳೊಮ್ಮೆ ಋತುಸ್ನಾತಳಾಗಿ ತನ್ನ ನೀಳವಾದ ಕೂದಲನ್ನು ಆರಿಸಿಕೊಳ್ಳಲು ತನ್ನ ಮನೆಯ ಮಾಳಿಗೆಯ ಮೇಲೆ ಬಿಸಲಿಗೆ ಕುಳಿತಿದ್ದಳು. ಆಗ ವಾಯುವು ಬಂದು ಅವಳನ್ನು ಸೋಂಕಿ ತಾನು ತಂದ ಶಿವನ ವೀರ್ಯವನ್ನು ಅವಳಲ್ಲಿ ಇಡುವನು. ಅದು ಅವಳ ಒಡಲ ಸೇರಿ ಗರ್ಭಧಾರಣವಾಗಿ ಆಂಜನೇಯನು ಹುಟ್ಟುವನು.

ಇದೇ ಬಗೆಯಾಗಿ ವೀರಭದ್ರನಿಗೂ ಹೇಳುವುದುಂಟು. ಒಮ್ಮೆ ವೀರಭದ್ರನು ಮೇರುಗಿರಿಯ ಸಾನು ಪ್ರದೇಶಗಳಲ್ಲಿ ಸಂಚರಿಸುತ್ತಿದ್ದನು. ಅಲ್ಲಿ ಸುಂದರಿಯಾದ ಯಕ್ಷ ಕನ್ಯೆಯನ್ನು ಕಂಡು ಮನವಿಕಾರವಾಗಿ ವೀರ್ಯಸ್ಖಲನವಾಗುವುದು. ಅದನ್ನು ವಾಯುದೇವನು ಹೊತ್ತು ತರುವನು. ಆಗ ಕುರುಡಿಯಾದ ಅಂಜನಾದೇವಿಯು ಆಹಾರಕ್ಕಾಗಿ ಅಲ್ಲಿ ಅಲೆಯುತ್ತಿದ್ದಳು. ಕೈಬೊಗಸೆಯನ್ನೊಡ್ಡಿ ಆಹಾರವನ್ನು ಪ್ರಾರ್ಥಿಸುತ್ತಿದ್ದಳು. ಅಷ್ಟರಲ್ಲಿ ಆ ವಾಯು ತಂದ ವೀರಭದ್ರ ವೀರ್ಯವನ್ನು ಅವಳ ಬೊಗಸೆಯಲ್ಲಿ ವಾಯುವು ಸುರಿಯುವನು. ಅವಳು ಅದು ಆಹಾರವೆಂದು ಭಾವಿಸಿ ಕುಡಿದು ಬಿಡುವಳು. ಅದರಿಂದಾಗಿ ಹೊಟ್ಟೆ ಬಂದು ಹನುಮಂತನ ಜನನವಾಗುವುದೆಂದು ಹೇಳುತ್ತಾರೆ.

ಒಂದು ದೃಷ್ಟಿಯಿಂದ ಇದುವೆ ಇರಬಹುದೇನೊ ಎಂದೆನಿಸುತ್ತದೆ. ಏಕೆಂದರೆ ಅಂಜನಾ ಅಂದರೆ ಕಾಳಿ ಎಂತಲೇ ಅರ್ಥವಾಗುತ್ತದೆ. ಎರಡು ಪದಗಳಿಗೂ ಕಪ್ಪಾದವಳು ಎಂದೇ ಅರ್ಥವಾಗುತ್ತದೆ. ಕಾಳಿಗೆ ಮತ್ತೊಂದು ಹೆಸರು 'ಅಂಜನಾ' ಎಂದು ಏಕಿರಬಾರದು? ಅಲ್ಲದೆ ಹನುಮಂತನು ಪರಾಕ್ರಮದಲ್ಲಿ ವೀರಭದ್ರನನ್ನು ಹೋಲುತ್ತಾನೆ. ಇಂದ್ರ ಉಪೇಂದ್ರರಿಗಿಂತಲೂ ಮಹಾ ಪರಾಕ್ರಮಿ

ಹನುಮಂತ. ಈತನಿಲ್ಲದಿದ್ದರೆ ರಾಮಭದ್ರನ ಆಟ ಏನೂ ನಡೆಯುತ್ತಿರಲಿಲ್ಲ; ಗೆಲುವುಂಟಾಗುತ್ತಿರಲಿಲ್ಲ.

ಇದಲ್ಲದೆ ಹನುಮಂತನಿಗೆ ವೀರಭದ್ರದೇವನು ಗುರುವೆಂದು ದೀಕ್ಷಾ ಸಂಸ್ಕಾರವನ್ನು ಕೊಟ್ಟು ಶಿವಾಚಾರ್ಯನೆಂದು ಹೇಳುವುದುಂಟು:

ಶ್ರೀರಾಮನಿಗೆ ಸಂಪೂರ್ಣ ಸಹಾಯವನ್ನು ಮಾಡಿ ಶ್ರೀರಾಮಭದ್ರನನ್ನು ಅಯೋಧ್ಯೆಗೆ ಕರೆತಂದು ಸತಿ ಸೀತೆಯನ್ನು ಒದಗಿಸಿಕೊಟ್ಟು ಸಿಂಹಾಸನವನ್ನೇರಿಸಿ ಶತ್ರುಗಳಿಲ್ಲದಂತೆ ಮಾಡಿ ರಾಜ್ಯವನ್ನು ಆಳ ಹಚ್ಚುವನು. ಕೃತಕೃತ್ಯನಾಗುವನು.

ಇಷ್ಟೆಲ್ಲ ಮಾಡಿದರೂ ಮುಖ್ಯವಾಗಿ ಆಂಜನೇಯನಿಗೆ ಮನಸ್ಸಿನ ಶಾಂತಿಯಿಲ್ಲದಾಯಿತು. ಶ್ರೀರಾಮನನ್ನು ಶಾಂತಿಗಾಗಿ ಪ್ರಾರ್ಥಿಸಿದನು. ಶ್ರೀರಾಮನು ತನ್ನ ಕೊರಳೊಳಗಿನ ರತ್ನ ಹಾರವನ್ನು ಕೊಟ್ಟನಲ್ಲದೆ ಶಾಂತಿಯನ್ನು ಕೊಡಲು ಅಸಮರ್ಥನಾದನು. ಹನುಮಂತನು ಅದನ್ನು ತೆಗೆದು ಶ್ರೀರಾಮಭದ್ರನ ಚರಣದಲ್ಲಿರಿಸಿ ನೇರವಾಗಿ ಕೈಲಾಸಕ್ಕೆ ಬರುವನು. ಕೈಲಾಸದ ಹೆಬ್ಬಾಗಿಲಲ್ಲಿರುವ ನಂದಿಯು ಆಂಜನೇಯನನ್ನು ಒಳಗೆ ಬಿಡದೆ ತಡೆಯುವನು.

"ತತೋ ನಂದೀ ಪ್ರತೀಹಾರೋ ರುದ್ರಾಂಶಮಪಿ ತಂ ಕಪಿಂ ।
ನ ಚ ಸಂಗಮಯಾಮಾಸ ರುದ್ರೇಣಾಽಘೌಘಹಾರಿಣಾ ॥"

–ಸ್ಕಾಂದ ಮಹಾಪುರಾಣ

ಹನುಮಂತನು ವಾಸ್ತವವಾಗಿ ರುದ್ರಸಂಭೂತನು. ಆದರೂ ರುದ್ರನ ಸಂದರ್ಶನಕ್ಕೆ ನಂದಿಯು ಅವಕಾಶವನ್ನು ಕೊಡದಾದನು. ಅದಕ್ಕಾಗಿ ಆಂಜನೇಯನಿಗೆ ಅತ್ಯಾಶ್ಚರ್ಯವಾಗುವುದು. ಆಗ ನಂದಿಯನ್ನು ಕೇಳುವನು. ಓ ನಂದಿಯೆ, ನಾನು ಮಾಡಿದ ಪಾಪವೇನು? ನನ್ನನ್ನೇಕೆ ಶಿವಸಂದರ್ಶನಕ್ಕೆ ಬಿಡಲಾರದವನಾಗಿದ್ದೀಯೆ? ಕೇಳಿ ತಿಳಿಯುವ ಕುತೂಹಲವುಂಟಾಗಿದೆ; ಹೇಳು! ಎಂದೆನಲು ನಂದಿಯು ಹೀಗೆಂದು ಹೇಳುವನು:

ಆಂಜನೇಯನೆ, ನಿನ್ನಿಂದ ಸಾಕಷ್ಟು ಅಪರಾಧಗಳಾಗಿವೆ. ಎಲ್ಲಕ್ಕೂ ಬಂಧು ದ್ರೋಹಿಯಾಗಿರುವೆ. ನೀನು ಸುಗ್ರೀವನೂ ಸೇರಿ ವಾಲಿಗೆ ಪರಮ ಅನ್ಯಾಯವನ್ನು ಮಾಡಿದ್ದೀರಿ. ಮೋಸದಿಂದ ಕೊಲ್ಲಿಸಿದ್ದೀರಿ. ಸುಗ್ರೀವನು ಗುಂಪಿಗೆ ಸೇರಿ ರಾಗ ದ್ವೇಷಗಳನ್ನು ಬೆಳೆಸಿದ್ದೀರಿ. ಸಾಲದ್ದಕ್ಕೆ ಶಿವಭಕ್ತನಾದ ಪೌಲಸ್ತ್ಯನಲ್ಲಿಗೆ ಹೋಗಿ ನಿರ್ನಿಮಿತ್ತವಾಗಿ ಆತನ ಅಶೋಕವನವನ್ನು ಅಮರಾವತಿಯಂತಿರುವ ನಗರವನ್ನು ಸುಟ್ಟು ಹಾಳು ಮಾಡಿರುವೆ. ಶತ್ರು ಪಕ್ಷಕ್ಕೆ ಸೇರಿ ಸಹಾಯ ಮಾಡಿರುವೆ. ಸತ್ಪಥಗಾಮಿಗಳಾದ ವೀರಭದ್ರದೇವನ ಯಜ್ಞ ನಿರೋಧ ಕ್ರಾಂತಿಗೆ ಸೇರಿದ ಅನೇಕ ಶಿವಭಕ್ತರನ್ನು ಸಂಹಾರ ಮಾಡಿಸಿರುವೆ. ಯಜ್ಞ ಧ್ವಂಸಕರೆಂದು ಮಿಥ್ಯಾಪವಾದುವನ್ನು ಹೊರಿಸಿ ನಿರ್ನಿಮಿತ್ತವಾಗಿ ರಕ್ಷಕರನ್ನು ರಾಕ್ಷಸರೆಂದು ಕರೆವಂತೆ ದುರ್ನಾಮಕ್ಕೀಡು ಮಾಡಿರುವವರಲ್ಲಿ ಸೇರಿರುವೆ. ಇದರಿಂದಾಗಿ ನಿಮಗೂ ಕೋತಿಗಳೆಂದು ಕೆಟ್ಟ ಹೆಸರು ಬರುವಂತಾಗಿದೆ. ಕಪಿಧ್ವಜರಾದ ನೀವು ಕಪಿಚೇಷ್ಟೆಯನ್ನು ಮಾಡಿದ್ದರಿಂದ ಕಪಿಗಳೇ ಎಂದು ಭಾವಿಸುವಂತಾಗಿದೆ. ಇವೇ ಮುಂತಾದ ಅಪರಾಧಗಳು ನಿನ್ನಲ್ಲಿ ಲೆಕ್ಕವಿಲ್ಲದಷ್ಟಿವೆ. ಇದರಿಂದಾಗಿ ಶ್ರೀ ರುದ್ರದೇವನ ದರ್ಶನಕ್ಕೆ ಅರ್ಹತೆಯಿಲ್ಲದಾಗಿದೆ.

ಹಾಗಾದರೆ ಇವೆಲ್ಲ ಪಾಪಗಳನ್ನು ಕಳೆದುಕೊಳ್ಳಬೇಕಾದರೆ ನಾನೇನು ಮಾಡಬೇಕು ಹೇಳು?

ನನಗೂ ಗುರುವಾದ ವೀರಭದ್ರ ದೇವನಿದ್ದಾನೆ. ಆತನ ಸನ್ನಿಧಿಗೆ ಹೋಗು. ಸಾಷ್ಟಾಂಗವೆರಗು. ಮನಸಾರೆ ಮೊರೆ ಹೋಗು. ಅತನಿಂದ ತ್ರಿವಿಧ ದೀಕ್ಷೆಯನ್ನು ಪಡೆ. ಆತನ ಕಾರುಣ್ಯದಿಂದ ಕಾರ್ಮಿಕಮಲ ಮಾಯಾಮಲ ಆಣವಮಲಗಳು ತೊಲಗುತ್ತವೆ. ಲಿಂಗಧಾರಣವಾಗುತ್ತದೆ. ನಿನ್ನ ಅಂಗಾಂಗಗಳೆಲ್ಲ ಲಿಂಗಸಂಗದಿಂದ ಪವಿತ್ರವಾಗುತ್ತವೆ. ಆತನ ಪಾದೋದಕಕ್ಕೆ ಗಂಗೆ ಯಮುನೆ ಸರಸ್ವತಿ ನದಿಗಳ ತೀರ್ಥವೂ ಸರಿಬಾರದು. ಅದನ್ನೊಮ್ಮೆ ಸ್ವೀಕರಿಸಿದರೆ ಸಾಕು, ನಿನ್ನ ಪಾಪಗಳೆಲ್ಲ ಪರಿಹಾರವಾಗಿ ಮನಸ್ಸಿಗೆ ಶಾಂತಿಯುಂಟಾಗುತ್ತದೆ. ಆ ಬಳಿಕ ಶ್ರೀ ರುದ್ರದೇವನ ಸಂದರ್ಶನ ಲಭಿಸುತ್ತದೆ ಎಂದು ಮಾರ್ಗದರ್ಶನ ಮಾಡುವನು.

ಅದನ್ನು ಕೇಳಿ ಆಂಜನೇಯನು ಆನಂದದಿಂದ ಆಸಕ್ತಿಯಿಂದ ವೇಗವಾಗಿ ವೀರಭದ್ರ ದೇವನಲ್ಲಿಗೆ ಹೋಗಿ ಭಯಭಕ್ತಿಭಾವದಿಂದ ಸಾಷ್ಟಾಂಗವೆರಗಿ ತನ್ನ ಸತ್ಯ ಸಂಕಲ್ಪವನ್ನು ಭಿನ್ನವಿಸಿಕೊಳ್ಳುವನು. ಅದಕ್ಕೆ ವೀರಭದ್ರಸ್ವಾಮಿಯ ಅಂತಃಕರಣವು ಕರಗಿ ಹನುಮಂತನನ್ನು ಶಿಷ್ಯನನ್ನಾಗಿ ಅಂಗೀಕರಿಸಿ ಶಿವದೀಕ್ಷೆಯನ್ನು ಅನುಗ್ರಹಿಸುವನು.

ಆಂಜನೇಯನು ವೀರಭದ್ರನಿಗೆ ಗುರುಪುತ್ರನೆಂಬ ಹೇಳಿಕೆ ಹೆಸರಾಗಿದೆ. ಆದರೆ ಔರಸಪುತ್ರನೆಂಬುದು ಹೊಸ ವಿಚಾರ. ಹೊಸದಾದರೂ ನಂಬಲರ್ಹವಾದ ವಿಚಾರ. ಕಾಳಿಗೂ ಅಂಜನಾದೇವಿಗೂ ಭೇದವಿಲ್ಲ. ಕಾಳಿಯೇ ಅಂಜನಾದೇವಿಯಾಗಿ ಅವತರಿಸಿದಂತಿದೆ. ರುದ್ರದೇವನೆ ವೀರಕೇಸರಿಯಾಗಿ ಏಕೆ ಅವತರಿಸಿರಬಾರದು?

ಅಂಜನಾ ಕೇಸರಿಯವರು ರುದ್ರ ಸಂಪ್ರದಾಯದವರು. ಅಂತೆಯೇ ಹನುಮಂತನು ರುದ್ರ ವೀರ್ಯ ಸಮುದ್ಭವನೆಂದು ಹೇಳಿರಬೇಕು. ವೀರಭದ್ರ ವೀರ್ಯಜನ್ಯನೆಂಬುದು ಇನ್ನೂ ವಿಶೋಧನೀಯ ವಿಚಾರ. ಯಾವ ಪುರಾಣದಲ್ಲಿ ಬೇರೆ ಯಾವ ಕೃತಿಯಲ್ಲಿ ಬಂದಿದೆಯೆಂಬುದನ್ನು ಕಂಡುಕೊಳ್ಳಬೇಕಾಗಿದೆ. ರುದ್ರ-ವೀರಭದ್ರ-ಹನುಮಂತ-ಮಾಚಿದೇವ ಇದು ರುದ್ರ ಪರಂಪರೆಯೆಂದು ಹೇಳುವಲ್ಲಿ ಯಾವ ಸಂಶಯವಿಲ್ಲ; ಯಾವ ಅಭ್ಯಂತರವಿಲ್ಲ. ಅಂತೆಯೇ ಕಾಳಿ-ಭದ್ರಕಾಳಿ-ಅಂಜನಾ ಮಾಚಿ ತಂದೆಯ ತಾಯಿಯಾದ.... ಇವರೂ ಒಂದು ಶಕ್ತಿಪರಂಪರೆಗೆ ಸೇರಿದವರು. ಒಟ್ಟಾರೆ ಆಂಜನೇಯನು ರುದ್ರ ಅಥವಾ ವೀರಭದ್ರ ಜನ್ಯನೆಂಬುದು ಗಮನಾರ್ಹ ವಿಚಾರ; ಅನಿವಾರ್ಯ ವಿಷಯ.

ರುದ್ರ-ವೀರಭದ್ರರು ತೇಜಃಸ್ವರೂಪರಾದರೆ ಆಂಜನೇಯನು ತೇಜವಾಯು ತತ್ತ್ವಗಳೆರಡರ ಸಂಬಂಧವುಳ್ಳವನು. ಪ್ರಧಾನವಾಗಿ ಅವೆರಡು ಆತನಲ್ಲಿ ಮೈಗೂಡಿದ್ದವು. ಕಾಳಿಯ ಕಳಾಂಶಳಾದ ಅಂಜನೆಯು ವಾಯುವಿನ ಹಸ್ತದಿಂದ ತೇಜೋರೂಪರಾದ ರುದ್ರ ವೀರಭದ್ರರ ವೀರ್ಯವನ್ನು ಧಾರಣ ಮಾಡಿ ವೀರ್ಯವಂತನಾದ ಪುತ್ರಜನನಿಯಾದಳು ರಾಮರಕ್ಷಣೆಗೆ ಕಾರಣಕರ್ತನನ್ನು ಪಡೆದು ಪ್ರಖ್ಯಾತಳಾದಳು. ಅಚ್ಚ ಕನ್ನಡಿಗನಾದ ಆಂಜನೇಯನ ಬಲ ಅತ್ಯಾಶ್ಚರ್ಯಕರವಾದುದು. ವೀರಭದ್ರನಂತೆ ವೀರನು. ಅಧಿಕಾರ ಲಾಲಸೆಯಿಲ್ಲದವನು. ಅಹಂಕಾರರಹಿತನು.

ಹನುಮಂತನು ಆತ್ಮರಾಮನ ಪ್ರಾಣಶಕ್ತಿ. ಪ್ರಾಣಶಕ್ತಿಗೆ ವಾಯುತೇಜಗಳು ಮೂಲವಸ್ತುಗಳೆಂಬುದನ್ನು ಬೇರೆ ಹೇಳಬೇಕಿಲ್ಲ. ಹನುಮಂತ ಅದೆಷ್ಟೇ ಬಲವಂತನಾದರೂ ತೇಜಸ್ತತ್ತ್ವವನ್ನು ಪೂರ್ಣ ಪ್ರತಿನಿಧಿಸದಾದನು. ತೇಜೋಮಂಡಲದ ಸಾಕ್ಷಾತ್ಕಾರವನ್ನು ಪಡೆಯದಾದನು. ಆರೋಹಣ ಸಾಧನೆಯಲ್ಲಿ ಸಿದ್ಧಿಯನ್ನು ಪಡೆಯದಾದನು. ತನ್ನ ಮೂಲ ತೇಜಸ್ತತ್ವಕ್ಕೆ ತೀರ ದೂರನಾಗಿ ದುಃಖಿತನಾದನು; ಶಾಂತಿರಹಿತನಾದನು. ಪ್ರಕಾಶಕ್ರಿಯೆಗೆ ವಂಚಿತನಾದನು. ಸುಗ್ರೀವನಂತೆ ಸ್ವಜನವಿರೋಧಿಯಾದನು. ಜನ್ಮ ಭೂಮಿಯ ಪಾರತಂತ್ರ್ಯಕ್ಕೆ ಕಾರಣನಾದನು. ಪರಮಾತ್ಮನನ್ನು ಮರೆತು ಆತ್ಮರಾಮನಲ್ಲಿ ರಮಿಸಿದನು. ಅಸುಬಲ ಕ್ಷಾತ್ರಬಲಗಳೆಂದು ನಂಬಿ ನೆಲೆಗಾಣದಾದನು. ಸತ್ಯವನ್ನು ಸಾಧಿಸದೆ ಗುರುತಿಸದೆ ಕಂಗೆಟ್ಟನು. ಕೊನೆಕೊನೆಗೆ ಕಣ್ಣು ತಂದುಕೊಂಡನು. ವೀರಭದ್ರದೇವನಿಗೆ ಮೊರೆಹೊಕ್ಕು ಶರಣಾಗಿ ಪರಮ ಬಲವನ್ನು ಸತ್ಯಶಾಂತಿಯನ್ನು ಸಂಪಾದಿಸಿದನು. ಸರ್ವಾಂಗಲಿಂಗ ಸ್ವರೂಪನಾದನು. ಯಜ್ಞಹಿಂಸೆ ಸೋಮರಸ ಪಾನಗಳು ನಿಷೇಧಕಾರ್ಯಗಳೆಂದು ನಿರ್ಧರಿಸಿಕೊಂಡನು. ಯಜ್ಞ ನಿರೋಧಕರ ಗುಂಪಿಗೆ ಸೇರಿದನು.

ವೀರಭದ್ರ-ವೀರಶೈವ

ವೀರಶೈವ ಸಾಹಿತ್ಯದಲ್ಲಿ 'ರುದ್ರಗಣ'ದ ಹೆಸರು ಹೇರಳವಾಗಿ ಬರುತ್ತದೆ. ರುದ್ರಗಣ ಪ್ರಮಥಗಣಕ್ಕಿಂತ ಬಹು ಪುರಾತನದ್ದು. ರುದ್ರಗಣದ ಮೂಲವಾಸಸ್ಥಾನ ಕೈಲಾಸ. ವೀರಶೈವದ ಆದಿಗಣರು ರುದ್ರರು. ಆ ರುದ್ರಗಣದ ಸಂಖ್ಯೆ ಅಸಂಖ್ಯಾತ. 'ಗಂಗೆ ವಾಳುಕ ಸಮರುದ್ರರು' ಎಂದು ವಚನಕಾರರು ವಚಿಸಿದ್ದಾರೆ; ತೊರೆಯ ಮಳಲಿನಷ್ಟು ರುದ್ರಗಣರಿದ್ದರಂತೆ! ಇದು ಸಂಶೋಧಕರು ಗಮನಿಸಿ ಶೋಧಿಸುವ ವಿಷಯ. ಗಣಸಹಸ್ರದಲ್ಲಿ ಅನೇಕ ರುದ್ರಗಣರ ಹೆಸರುಗಳು ಬಂದಿವೆ. "ಛಲಿಗಳ ಪ್ರತಿಮ ರತಿರಥ ರುದ್ರ ನಾಯಕರ್ ಕೆಲಬಲದೊಳೊಪ್ಪಿದ್ದರಮರ ಗಣನಾಯಕರ್" ಎಂದು ಹರಿಹರ ದೇವ ಕವಿಯು ಹೇಳಿದ್ದಾನೆ.

ವೀರಶೈವ ತತ್ತ್ವದ ಕ್ರಾಂತಿಗೂ ಉಗಮಕ್ಕೂ ಮೂಲ ಕೇಂದ್ರ ಕೈಲಾಸ; ಮೂಲಕ್ರಾಂತಿಕಾರರು ರುದ್ರಗಣರು. ಈ ಮಾತಿಗೆ ಮೊದಲ ಸಾಕ್ಷಿ ವೀರಶೈವಾಗಮಗಳು ಮತ್ತು ನಿಮಗಳು. ಎರಡನೆಯ ಸಾಕ್ಷಿ-ಕಲ್ಯಾಣಕ್ಕೆ ದ್ವಿತೀಯ ಕೈಲಾಸವೆಂದೂ ಬಸವಣ್ಣನಿಗೆ ದ್ವತೀಯ ಶಂಭುವೆಂದೂ ಉಗ್ಗಡಿಸುತ್ತಿರುವುದು. ದ್ವಿತೀಯ ಕೈಲಾಸವೆಂದ ಬಳಿಕ ಪ್ರಥಮ ಕೈಲಾಸವಿದ್ದಾಗ ಬೇಕಲ್ಲವೆ? ದ್ವಿತೀಯ ಶಂಭುವೆಂದಾಗ ಪ್ರಥಮ ಶಂಭು- ಐತಿಹಾಸಿಕ ಶಂಭೂ ಇದ್ದಾಗಬೇಕಲ್ಲವೇ? ಆ ಪ್ರಥಮ ಶಂಭುವೇ ರುದ್ರ. ಆತನ ಕಾಲ ಪ್ರಾಚೀನ, ಋಗ್ವೇದಕ್ಕೆ ಮುನ್ನ, ಆತನ ವಾಸ ಕೈಲಾಸ, ಆತನ ಗಣ ರುದ್ರಗಣ.

ಮೂರನೆಯ ಸಾಕ್ಷಿ -ಹರಪ್ಪ ಮೊಹೆಂಜದಾರೊ ಪಟ್ಟಣಗಳ ಸಂಶೋಧನೆ. ಸರ್ ಜಾನ್ ಮಾರ್ಷಲ್‌ರವರು ಸಿಂಧು ತೀರದ ಈ ಎರಡು ನಗರಗಳನ್ನು ಸಂಶೋಧಿಸಿ ಆರ್ಯ-ದ್ರಾವಿಡ ಸಂಸ್ಕೃತಿಗಳಿಗಿಂತ ಪೂರ್ವದಲ್ಲಿ ಲಿಂಗಧಾರಿಗಳಿದ್ದರೆಂದು ಹೇಳಿದ್ದಾರೆ. ಇವರು ಮೇರು ಗಿರಿಯ ನಿವಾಸಿಗಳೆಂದೂ ಕೈಲಾಸ, ವೈಕುಂಠ, ಸತ್ಯಲೋಕಗಳಲ್ಲಿ ವಾಸಿಸಿದ್ದರೆಂದೂ ಪುರಾಣಾದಿಮದ ತಿಳಿಯುತ್ತದೆ. ಇದರಿಂದಾಗಿ ಆದಿ ಕೈಲಾಸವಾಸಿಗಳಾದ ವೀರಭದ್ರಾದಿ ರುದ್ರಗಣರು ವೀರಶೈವರಾಗಿದ್ದರೆಂದು ವಿಶದವಾಗುತ್ತದೆ.

"ವೀರ ನಂದಿ ವೃಷಶ್ಚೈವ ಭೃಂಗಿ ಸ್ಕಂದಸ್ತಥೈವಚ
ಅತಿವರ್ಣಾಶ್ರಮೋಪೇತಾ ಮದೂರ್ಧ್ವಮುಖ ವಿಶ್ರುತಾಃ ।
ಗೋತ್ರರೂಪಾಶ್ಚ ಪಂಚೈತೇ ವಿಶಿಷ್ಟಾದ್ವೈತವಾದಿನಃ
ಅತ ಏವೋತ್ತಮಾಃ ಪ್ರೋಕ್ತಾಃ ಅತಿವರ್ಣಾಶ್ರಮಾಸ್ತಥಾ ॥"

–ಸುಪ್ರಭೇದಾಗಮ

ಪ್ರಮಥಗಣರಿಗೆ ನಂದಿ ಹೇಗೆ ಪ್ರಮುಖನೋ, ರುದ್ರಗಣರಿಗೆ ವೀರಭದ್ರನು ಹಾಗೆ ಪ್ರಮುಖನು. ವೀರಭದ್ರನು ವೀರಶೈವ ಮೂಲ ಸಂಸ್ಥಾಪಕನು. ಶೈವ ಸಂಸ್ಕೃತಿಯ ಉದ್ಧಾರಕನು, ಪ್ರಸಾರಕನು. ಈ ದಿಸೆಯಲ್ಲಿ ಅವನಿಗೆ ಸಹಾಯಕವಾಗಿದ್ದ ರುದ್ರಗಣ ಅಪರಿಮಿತವಾಗಿತ್ತು; ಅತಿ ಬಲವುಳ್ಳದ್ದಾಗಿತ್ತು.

"ಸಿಡಿಲ ಬಳಗವನೊಂದು ಮಾಡಿ ಗಡಣೆಸಿದಂತೆ
ಮೃಡನತಿ ಬಲಂ ಬೇರೆ ಬೇರೆ ರೂಪಾದಂತೆ"

ರುದ್ರಗಣರಿದ್ದರು, ಅವರೆಲ್ಲರ ನೆರವಿನಿಂದ ತನ್ನ ವಿಶೇಷವಾದ ವೀರಶ್ರೀಯಿಂದ ಶೈವ ಸಂಸ್ಕೃತಿಯನ್ನು ಭೂಲೋಕದಲ್ಲಿ ನೆಲೆ ನಿಲ್ಲಿಸಿದನು. ವೀರಭದ್ರನು. ಇದರ ಕುರುಹಾಗಿಯೆ ವೀರಶೈವವೆಂದು ಹೆಸರು ಬಂದಿರಲು ಸಾಕು; ಹೆಚ್ಚಳಿಕೆ ಬಂದಿರಬೇಕು.

ದಕ್ಷ ಬ್ರಹ್ಮಾದಿಗಳೆಲ್ಲರೂ ಒಂದು ಕಾಲದ ಈ ಲೋಕದ ಪುರುಷರು. ಐತಿಹಾಸಿಕ ವ್ಯಕ್ತಿಗಳು. ದಕ್ಷಬ್ರಹ್ಮನ ವಾಸಸ್ಥಳಗಳಲ್ಲಿ ಒಂದು ಬೆಳಗಾವಿ ಜಿಲ್ಲೆಯಲ್ಲಿರುವ ಎಡೂರು ಎಂಬ ಹೆಸರಿನ ಊರು. ಇದರ ವಿಷಯವಾಗಿ 'ಯಜ್ಞಭೂಮಿ ಯಾವುದು?' ಎಂದು ಮುಂದೆ ಬರುವ ಪ್ರಕರಣದಲ್ಲಿ ಪ್ರಸ್ತಾಪಿಸಲಾಗಿದೆ.

ಬುದ್ಧನಿಗಿಂತಲೂ ಪೂರ್ವದಲ್ಲಿ ಯಜ್ಞಯಾಗಾದಿಗಳ ಹಿಂಸಾತ್ಮಕ ಸಂಸ್ಕೃತಿಯನ್ನು ಸದೆಬಡಿದ ಕೀರ್ತಿ ವೀರಭದ್ರನದು. ವಿಶಿಷ್ಟ ಕ್ರಾಂತಿಯೊಡನೆ ವೀರಶೈವ ವಿಜಯ ಪತಾಕೆಯನ್ನು ವಿಶ್ವದಲ್ಲಿ ವಿಯತ್ತಿನೆತ್ತರಕ್ಕೆ ಹಾರಿಸಿದ ಕೀರ್ತಿ ವೀರಭದ್ರನದು. ಈ ನಿಟ್ಟಿನಲ್ಲಿ ವೀರಭದ್ರನ ಇತಿಹಾಸ ತುಂಬಾ ಗಮನಾರ್ಹವಾದುದು; ಸಂಶೋಧನೀಯವಾದುದು.

ಕಡುಗಲಿಯಾದ ವೀರಭದ್ರನು ಶ್ರೀ ರುದ್ರಪುತ್ರನು; ಶ್ರೇಷ್ಠನು. ರುದ್ರದೇವನ ಅಪರಾವತಾರಿ. ವೀರಕ್ರಾಂತಿಕಾರಿ. ಆತನ ಜನನ ರುದ್ರನ ಉರಿಗಣ್ಣಿನಲ್ಲಿ ಎಂದು ಹೇಳುವುದುಂಟು. ತಾತ್ತ್ವಿಕವಾದ ಈ ಪ್ರತಿಪಾದನೆಯಲ್ಲಿ ವೀರಶೈವ ತತ್ತ್ವದ ರಹಸ್ಯವಡಗಿದೆ. ವೀರಶೈವ ತತ್ತ್ವಮೂಲವಾದ ಲಿಂಗೋತ್ಪತ್ತಿಯಾಗುವುದು ನೇತ್ರ ಮುಖದಿಂದ! ಶ್ರೀ ಗುರು ಶಿಷ್ಯನ ನೇತ್ರದ್ವಾರದಿಂದ ನಿಟಿಲಕ್ಕೇರಿ ಅಲ್ಲಿಂದ ಆ ತೇಜೋ ಮೂರ್ತಿಯಾದ ಪರಶಿವ ಕಲೆಯನ್ನು ಗ್ರಹಿಸಿ ಸಾಕಾರಗೊಳಿಸಿ ಕರಕಮಲಕ್ಕೆ ಕರುಣಿಸುತ್ತಾನೆ. ಈ ರಹಸ್ಯವನ್ನು ಉಗ್ಗಡಿಸುತ್ತದೆ ಈ ವೀರಭದ್ರನ ಉತ್ಪತ್ತಿ ತತ್ತ್ವ! ಇದರಿಂದ ವೀರಭದ್ರನ ಉತ್ಪತ್ತಿಯೆಂದರೆ ವೀರಶೈವ ಸಾರಸರ್ವಸ್ವವಾದ ಶಿವಲಿಂಗೋತ್ಪತ್ತಿ; ಅಥವಾ ವೀರಶೈವೋತ್ಪತ್ತಿ; ಮತ್ತು ವೀರಶೈವ ಆದಿ ಮಹಾಪುರುಷನ ನೇತ್ರ ಸಂಜಾತತ್ವ.

"ಲಿಂಗಾರ್ಚನಯುಕ್ತೋಽಸೌ ವೀರಭದ್ರೋಽಭವತ್ತದಾ
ತದ್ರೂಪಶ್ಚೈವ ಲಿಂಗಸ್ಯ ಯೇನ ಸರ್ವಮಿದಂ ಜಗತ್ ।
ಉದ್ಭಾತಿ ಸ್ಥಿತಿಮಾಪ್ನೋತಿ ತಥಾ ವಿಲಯಮೇತಿ ಚ
ತಲ್ಲಿಂಗಂ ಲಿಂಗಮಿತ್ಯಾಹುರ್ಲಯನಾತ್ತತ್ತ್ವವಿತ್ತಮಾಃ ॥"

–ಸ್ಕಂದಪುರಾಣ, ಅ–೬

ವೀರಭದ್ರನ ರೂಪವೆ ಲಿಂಗ; ಲಿಂಗರೂಪವೇ ವೀರಭದ್ರ. ಲಿಂಗ ಸಂಸ್ಕೃತಿಯ ಮೂಲಪುರುಷ ವೀರಭದ್ರ, ಪ್ರಥಮ ಕೈಲಾಸದಲ್ಲಿನ ವೀರಶೈವ ತತ್ತ್ವದ ಪ್ರತಿಷ್ಠಾಪನ ಪ್ರಕಾಶನ ಕಾರ್ಯಗಳಿಗೆ ಪ್ರಧಾನ ಕಾರಣನಾದ ವೀರಭದ್ರ.

ವೀರಶೈವ ಮತದ ಮೂಲಪೀಠಗಳಾದ ಪಂಚ ಪೀಠಗಳಲ್ಲಿ ಒಂದಾದ ಶ್ರೀ ಜಗದ್ಗುರು ರೇಣುಕ ಪೀಠದ ಪೂಜ್ಯ ಮೂರ್ತಿಯಾಗಿದ್ದಾನೆ ವೀರಭದ್ರ. ಗೋತ್ರಪುರುಷನೂ ಆಗಿದ್ದಾನೆ. ಇದರ ಇಂಗಿತವೇನು? ಶ್ರೀ ಜಗದ್ಗುರು ನಿಡುಮಾಮಿಡಿ ಶ್ರೀಶೈಲ ಸಂಸ್ಥಾನದಲ್ಲಿಯೂ ವೀರಭದ್ರನು ಪೂಜಾರ್ಹನಾಗಿದ್ದಾನೆ. ವೀರಶೈವಾಚಾರ್ಯರಿಗೆ ವಿಶೇಷ ಪೂಜ್ಯನಾದ ವೀರಭದ್ರನು ವೀರಶೈವ ಸಂಸ್ಕೃತಿಯ ಮೂಲಕರ್ತನಾಗಿರಬೇಕು. ಇಲ್ಲವಾದರೆ ಈ ಪೂಜಾರ್ಹತೆ ಬರಲು ಬೇರೆ ಕಾರಣವಿಲ್ಲ.

ವೀರಶೈವ ಪ್ರಾಚೀನತೆಗೂ ಪ್ರಾಚುರ್ಯತೆಗೂ ಪರಮ ನಿದರ್ಶನವಾಗಿ ಕನ್ನಡ ಮತ್ತು ಪರಿಸರ ಪ್ರಾಂತಗಳಲ್ಲಿ ವೀರಭದ್ರನ ಮಂದಿರಗಳು ವಿಪುಲವಾಗಿ ವೈಭವವಾಗಿ ನಿಂತು ಮೆರೆಯುತಿವೆ. ವೀರಭದ್ರನಿಗೆ ಎಲ್ಲ ಜಾತಿಯ ಜನರು ಭಕ್ತರಿದ್ದಾರೆ. ವೀರಭದ್ರನದೇ ಆದ ಒಂದು ವೀರ ಸಂಸ್ಕೃತಿಯಿದೆ.

ವೀರ ಘೋಷಗಳನ್ನು ವೀರಖಡ್ಗಗಳನ್ನು ಉಗ್ಗಡಿಸುವ ಪುರಾತನ ಸಂಸ್ಕೃತಿ ವೀರಭದ್ರನದಲ್ಲದೆ ಮತ್ತಾರದಿಲ್ಲ. ಪುರಾತನ ವೀರಶೈವರಲ್ಲಿ ವೀರಭದ್ರನಲ್ಲಿರುವ ವಿಶ್ವಾಸ ಸ್ಮಾರಕವಾಗಿ ಅಭಿಮಾನ ಸೂಚಕವಾಗಿ ಐತಿಹಾಸಿಕ ಸಂಗತಿಗಾಗಿ ಮಂಗಳ ಕಾರ್ಯಗಳಲ್ಲಿ ಮದುವೆಯ ಸಮಯದಲ್ಲಿ ಗುಗ್ಗುಳ ಕಾರ್ಯವನ್ನು ಪರಂಪರೆಯಾಗಿ

ನೆರವೇರಿಸುವ ನೋಂಪಿಯಿದೆ. ವೀರಭದ್ರನ ವೀರಶ್ರೀಯ ದ್ಯೋತಕವಾಗಿ ಶಸ್ತ್ರಧಾರಣಾದಿ ಕಾರ್ಯವು ಜರುಗುತ್ತದೆ. ವೀರಭದ್ರನ ಪೂಜೆ ವಿಶೇಷವಾಗಿ ಜರುಗುತ್ತದೆ. ದಕ್ಷನ ಹೋಮ ಕುಂಡವನ್ನು ಧ್ವಂಸ ಮಾಡಿದುದರ ನಿದರ್ಶನಕ್ಕಾಗಿ ಅಲ್ಲಲ್ಲಿ ಯಾತ್ರೋತ್ಸವಗಳಲ್ಲಿ ವಿಶೇಷೋತ್ಸವಗಳಲ್ಲಿ 'ಅಗ್ನಿಕುಂಡ' ಉತ್ಸವಗಳು ನಡೆಯುತ್ತವೆ. ವ್ರತಸ್ಥರಾದ ಅನೇಕ ಜನ ಮುತ್ತೈದೆಯರು ಮತ್ತು ಗಂಡಸರು ಅಗ್ನಿಕುಂಡದಲ್ಲಿರುವ ಅಗ್ನಿಯನ್ನು ತೊತ್ತುಳಿದು ದಾಟಿ ಹೋಗುವ ರೋಮಾಂಚಕಾರಿ ವಿಸ್ಮಯಕಾರಿ ದೃಶ್ಯಗಳನ್ನು ದಿಟ್ಟಿಸದೆ ಇರುವವರಿಲ್ಲ. ಇವೆಲ್ಲ ವೀರ ಕಾರ್ಯಗಳು ವೀರಶೈವರನ್ನೆ ವಿಶೇಷವಾಗಿ ಬಳಸಿಕೊಂಡು ಬಂದುದರ ಭಾವವೇನು?

"ಭದ್ರಾಕ್ಷೋ ವೀರಕೋ ಭದ್ರೋ ಮಹಾ ಕಾಲಸ್ತ್ರಿಯಕ್ಷರಃ
ರುದ್ರನಾಥೋ ಮಹಾ ವೀರಭದ್ರೋ ವಿಜಯಭದ್ರಕಃ ।"

ಗಣಸಂಕೀರ್ತನದಲ್ಲಿ ಬರುವ ಈ ವೀರಭದ್ರನ ವೀರವರ್ಣನೆ, ವಿಜಯವರ್ಣನೆ ಮಿಗಿಲಾಗಿ ಮಂಗಲದೃಷ್ಟಿಯ ವರ್ಣನೆಗಳನ್ನು ನೋಡಿದರೆ ವೀರಭದ್ರನು ಹೇಗೆ ವೀರನೋ ಹಾಗೆ ಮಂಗಳಕರನೆಂಬುದು ಮನವರಿಕೆಯಾಗುತ್ತದೆ. ವೀರಭದ್ರನು ವೀರಪುರುಷನೂ ಅಹುದು; ಭದ್ರಪುರುಷನೂ ಅಹುದು. ಭದ್ರಪದ ಶಿವಪದದ ಪರ್ಯಾಯ ಪದ. ಶಿವಪದವು ಹೇಗೆ ಮಂಗಳವಾಚಿಯೋ ಹಾಗೆ ಭದ್ರಪದವೂ ಮಂಗಳವಾಚಿಯಾಗಿದೆ. ಶುಭಸೂಚಕದೊಡನೆ ಸ್ಥಿರ ಸೂಚಕವೂ ಆಗಿದೆ. ಇದರಿಂದಾಗಿ ವೀರಭದ್ರನಿಗೆ "ವೀರಶೈವ" ಎಂಬ ಹೆಸರೂ ಇದ್ದಿರಬೇಕು. ಆ ವೀರಶಿವನಿಂದ ಬಂದ ಮತಕ್ಕೆ "ವೀರಶೈವ" ಎಂದು ಹೆಸರು ಬರುವುದರಲ್ಲಿ ಹೆಚ್ಚು ಔಚಿತ್ಯವಿದೆ; ಒಪ್ಪಿತವೂ ಆಗುತ್ತದೆ. ಇದರಿಂದ ವೀರಭದ್ರ ಅಂದರೆ ವೀರಶಿವನು ವೀರಶೈವದ ಮೂಲ ಪುರುಷನಾಗಲು ಎಲ್ಲ ಬಗೆಯಲ್ಲಿಯೂ ಎಲ್ಲರಿಗಿಂತಲೂ ಹೆಚ್ಚು ಯುಕ್ತನಾಗಿದ್ದಾನೆ.

"ವೀರಭದ್ರ ಇತಿ ಖ್ಯಾತಂ ದೇವದೇವಂ ಜಗದ್ಗುರುಂ" –ಕೂರ್ಮಪುರಾಣ

ಎಂಬೀಮಾತು ಪೋಷಕವಾಗಿದೆ. ಅಲ್ಲದೆ ಈ ಕೆಳಗಿನ ವಾಕ್ಯವನ್ನು ಗಮನಿಸುವುದು:

"....ನಿರಸ್ತಪರವಾದಿಗಳುಂ, ದುರ್ವಾಸಾಗಸ್ತ್ಯಭೃಗೂಪಮನ್ಯುಸಾನಂದ ದಧೀಚಿ ವಶಿಷ್ಠ ಗೌತಮಾದಿ ಮುನಿಮಾರ್ಗ ಪ್ರತಿಷ್ಠಾಪನಾಚಾರ್ಯರುಂ, ಸಕಲ ಜಗದವನಚಾತುರ್ಯಧುರ್ಯರು, ಕಲಿಯುಗ ವೀರಭದ್ರಾವತಾರರುಂ, ಏಕಾಂಗ ವೀರರುಂ, ದುಷ್ಟನಿಗ್ರಹ ಶಿಷ್ಟಪರಿಪಾಲನ ವಿಚಕ್ಷಣರುಂ, ಶಿವಸಮಯ ಶರಣಾಗತ ರಕ್ಷಣರುಂ, ಪರಮಶಿವಾಚಾರ ಶೀಲಪರರುಂ...." –ಪಾಲ್ಕುರಿಕೆ ಸೋಮನಾಥ

ಇನ್ನಾವ ಯುಗದ ಮಾತಲ್ಲ; ಕಲಿಯುಗದ ಮಾತು. ಕಲಿಯುಗದಲ್ಲಿ ಅವತರಿಸಿದ ವೀರಭದ್ರಾವತಾರರ ಮಾತು. ಅವರ ಈ ಲೋಕ ಚರಿತೆಗಳನ್ನು ವರ್ಣಿಸುವ ವಿಶೇಷಣಗಳನ್ನು ಗಮನಿಸಬೇಕು; ಪ್ರಮಾಣಿಸಬೇಕು. ಆ ವಿಶೇಷಣಗಳು ಅರ್ಥಪೂರ್ಣವಾಗಿವೆ. ವೀರಭದ್ರನ ಸತ್ಯಚಾರಿತ್ರಕ್ಕೆ ವಿಸ್ಪಷ್ಟ ಸಾಕ್ಷಿಗಳಾಗಿವೆ. ಶಿವಸಮಯ ಪರಿಪಾಲನ ಶಿವಾಚಾರ ಆಚರಣಗಳನ್ನು ಉಗ್ಗಡಿಸುತಿವೆ. ಪರವಾದಿ ಪರಾಜಯ ಸೂಚಕವಾಗಿವೆ. ವೀರಶ್ರೀದ್ಯೋತಕವಾಗಿವೆ. ಶಿಷ್ಟರಕ್ಷಣೆಯ ಮೂಲಕ ಒಳಿತು ಬಾಳು ಬದುಕುಗಳಿಗೆ ಉತ್ತೇಜಕವಾಗಿವೆ. ವೀರಭದ್ರಾವತಾರವನ್ನು ವೀರಶೈವ ಮೂಲವೆಂದು ಹೇಳುವಷ್ಟು ಹತ್ತಿರಕ್ಕೆ ನಮ್ಮನ್ನು ಕರೆದೊಯ್ಯುತಿವೆ.

ವೀರಭದ್ರನ ಉತ್ಪತ್ತಿ ಏತಕ್ಕಾಗಿ ಇವೆರಡು ಪ್ರಯೋಜನಕ್ಕಾಗಿ: ಒಂದು, ಕರ್ಮಮೂಲವಾದ ಯಜ್ಞಯಾಗಾದಿಗಳ ನಿರ್ಮೂಲನಕ್ಕಾಗಿ! ಎರಡು, ಶೈವ ಸಂಸ್ಕೃತಿಯ ಸಂಸ್ಥಾಪನೆಗಾಗಿ!! ಇವೆರಡನ್ನು ಬಿಟ್ಟರೆ ಬೇರೆ ಕಾರಣವೇ ಇಲ್ಲ; ಕಾರ್ಯವೂ ಇಲ್ಲ.

ವೀರಶೈವದ ಉಗಮ ಮತ್ತು ಪ್ರಗತಿ ಬಹು ಪುರಾತನದ್ದು. ಮೊಹೆಂಜೋದಾರೋ ಹರಪ್ಪ ನಾಗರಿಕತೆಯ ಕಾಲದಲ್ಲಿ ಪ್ರಚಲಿತವಾಗಿತ್ತೆಂದು, ಶೈವಧರ್ಮವು ಶಿಲಾಯುಗಕ್ಕಿಂತಲೂ ಹಿಂದಿನದೆಂದು, ಪ್ರಪಂಚದ ಎಲ್ಲ ಧರ್ಮಗಳಲ್ಲಿ ಅತ್ಯಂತ ಪುರಾತನದ್ದೆಂದು ಶ್ರೀ ಟಿ.ಎನ್. ಮಲ್ಲಪ್ಪನವರು ಬೆಂಗಳೂರು ಇವರು ತಮ್ಮ 'ವಚನೋಪನಿಷತ್' ಎಂಬ ಗ್ರಂಥದಲ್ಲಿ ವೀರಶೈವ ಪುರಾತನತೆಯನ್ನು ಕುರಿತು ವಿಪುಲವಾಗಿ ಪ್ರತಿಪಾದಿಸಿದ್ದಾರೆ. ಪ್ರವೃತ್ತಿ ಮುಖವಾಗಿರುವ ಜನರನ್ನು ನಿವೃತ್ತಿ ಮುಖವಾಗಿಸುವಿಕೆಯೇ ವೀರತನ. ಅಂತಹ ವೀರತನವನ್ನು ವೀರಭದ್ರನು ಮುಮ್ಮೊದಲು ಆರಂಭಿಸುವನು. ಶೈವೀ ಭಾವವನ್ನು ಶೈವೀ ಆರಾಧನೆಯನ್ನು ಆರಂಭಿಸಿ ಅಧಿಕಗೊಳಿಸಿದವನು ವೀರಭದ್ರನು. ಎಲ್ಲಕ್ಕೂ ಮೊದಲು ಲಿಂಗಧಾರಣ ಸಂಸ್ಕಾರವನ್ನು ಮುಮ್ಮೊದಲು ರುದ್ರ–ವೀರಭದ್ರರು ಆರಂಭಿಸುವರು.

ವೀರಭದ್ರನ ಕಾಲ ಕೃತಯುಗವೆಂದು ಚನ್ನಬಸವಣ್ಣನು ಹೇಳಿದ್ದಾನೆ ಮತ್ತು ವೃಷಭನ ಕಾಲ ದ್ವಾಪರಯುಗವೆಂಧು ನಿರೂಪಿಸಿದ್ದಾನೆ.

"ಕೃತಯುಗದಲ್ಲಿ.... ಅಸುರರ ಶಿರೋಮಾಲೆಯ
ಕೊರಳಲ್ಲಿ ಉರದಲ್ಲಿ ಹಾರವಾಗಿ ಧರಿಸಿ,
ಜಗಕ್ಕೆ ಜೂಬಾಗಿಪ್ಪಲ್ಲಿ ಶಂಕೆಯಿಲ್ಲದೆ
ನಿಶ್ಶಂಕನೆಂಬ ವೀರಗಣೇಶ್ವರನಾಗಿದ್ದನು.

ತ್ರೇತಾಯುಗದಲ್ಲಿ ಕಾಳಾಂಧರದೊಳಗೆ ಶಿವನು
ನಿಜಮಂದಿರವಾಗಿಪ್ಪಲ್ಲಿ ಕಾಲಾಗ್ನಿರುದ್ರನೆಂಬ ಗಣೇಶ್ವರನಾಗಿದ್ದನು
ದ್ವಾಪರದಲ್ಲಿ ಲಿಂಗಪ್ರಾಣ ಸಂಯೋಗವಾಗಿ
ವೃಷಭನೆಂಬ ಗಣೇಶ್ವರನಾಗಿದ್ದನು....."

ಇದಲ್ಲದೆ ಇನ್ನೊಂದು ವಚನದಲ್ಲಿ ನಿರೂಪಿಸಿದ ಗಣೇಶ್ವರರಲ್ಲಿ ವೀರಭದ್ರನಿಗೆ ಪ್ರಥಮ ಸ್ಥಾನ ಮೀಸಲಾಗಿದೆ. ಆ ವಚನವಿದು:

"ರುಂಡವ ಧರಿಸಿದಾತ ರುಂಡಾಭರಣನೆಂಬ ಗಣೇಶ್ವರನು.
ಆಕಾಶವ ಧರಿಸಿದಾತ ಅಂಡಾಭರಣನೆಂಬ ಗಣೇಶ್ವರನು.
ಭೂಮ್ಯಾಕಾಶವ ತಾಳವ ಮಾಡಿ ಒತ್ತಿದಾತ
ಕ್ಷಿತಿವಿಯುತ್ತಳನೆಂಬ ಗಣೇಶ್ವರನು.
ಬ್ರಹ್ಮಾಂಡವ ಖಂಡಿಸಿದಾತ ಬ್ರಹ್ಮಾಂಡಖಂಡಿತನೆಂಬ ಗಣೇಶ್ವರನು.
ತ್ರಿಪುರದಹನವ ಮಾಡಿದಾತ ಪಂಚವಿಕೃತನೆಂಬ ಗಣೇಶ್ವರನು.
ಕಾಮದಹನವ ಮಾಡಿದಾತ ಅರ್ಧನಾರೀಶ್ವರನೆಂಬ ಗಣೇಶ್ವರನು
ಬಲ್ಲಾಳನ ವಧುವ ಬೇಡಿದಾತ ಮಹಾರುದ್ರನೆಂಬ ಗಣೇಶ್ವರನು
ಸಿರಿಯಾಳನ ಮಗನ ಭಿಕ್ಷವ ಬೇಡಿದಾತ ಬಹುಬಿಕ್ಷುಕನೆಂಬ ಗಣೇಶ್ವರನು.
ಪರ್ವತಂಗಳ ಧರಿಸಿದಾತ ಪರ್ವತಾಭರಣನೆಂಬ ಗಣೇಶ್ವರನು.
ಇಂತಿವರೆಲ್ಲರೂ ಕೂಡಲಚನ್ನಸಂಗಯ್ಯನ ಲೀಲೆಯ ತದರ್ಥಕರು."

ವೀರಭದ್ರನ ಅಗ್ರತೆಗೆ ಇದು ಸಾಕ್ಷಿಯಾಗಿದೆ. ಇಲ್ಲಿ ಉಪಯೋಗಿಸಿದ ರುಂಡ ಪದವು ಚೇತನ ದ್ಯೋತಕವೂ ಆತ್ಮತ್ವಧ್ವನಿಯುಳ್ಳುದೂ ಆಗಿದೆ. ಆತ್ಮಕ್ಕೆ ಆದ್ಯತೆ ಇದ್ದೇ ಇದೆ.

ಲಿಂಗಾರಾಧನೆ ಬಹು ಪುರಾತನದ್ದೆಂಬುದಕ್ಕೆ ಸಂದೇಹವಿಲ್ಲ; ವಿವಾದವಿಲ್ಲ. ಈ ಮಾತಿಗೂ ಚನ್ನಬಸವಣ್ಣನ ಸಾಕ್ಷಿ ವಚನವಿದೆ:

"ಶ್ರುತಿ ಪುರಾಣಾಗಮ ಇತಿಹಾಸಾದಿಗಳಿಂದ
ಶಿವನೇ ಅಧಿಕನೆಂದರಿದು, ಸಕಲ ಋಷಿ ಜನಂಗಳು-ದೇವರ್ಕಳು
ರತ್ನ, ಸುವರ್ಣ, ರಜತ, ತಾಮ್ರ, ಚಂದ್ರಕಾಂತ, ಸ್ಫಟಿಕ,
ಪವಳದ ಲಿಂಗಂಗಳನಾರಾಧಿಸಿ,
ಅಗಸ್ತ್ಯ, ದಧೀಚಿ, ಕಣಾದ, ಬಾಣಾಸುರ. ಪುರಂದರ,
ಬ್ರಹ್ಮ, ವಿಷ್ಣು, ದುರ್ವಾಸ, ನಂದಿಕೇಶ್ವರ, ಸ್ಕಂದ, ಬೃಂಗಿ, ರಿಟಿ,
ವೀರಭದ್ರ ಪ್ರಮಥಾದಿಗಣಂಗಳೆಲ್ಲರು
ಶಿವನ ಪೂಜಿಸಿ ಮಹದೈಶ್ವರ್ಯಪದಂಗಳ ಪಡೆದರು."

ಅದೆಂತೆಂದಡೆ: ಆದಿತ್ಯೇ-

"ರುದ್ರೇಣ ದೀಕ್ಷಿತೋ ಭೂತ್ವಾಸ್ಕಂದಃ ಶಿವಸಮೋಭವೇತ್ ।
ಶಿವಾಚಾರರಹಸ್ಯೇಃ ಪಾತ್ರತಾಂ ಪ್ರಥಮಂ ಗತಃ ॥
ಇದನರಿದು, ಪರಶುರಾಮ, ಪರಾಶರ, ವಸಿಷ್ಠ, ವಾಲ್ಮೀಕಿ,
ಕಮಲಾಕರ, ವಿಶ್ವಾಮಿತ್ರಾದಿ ಮಹಾ ಮುನಿಗಳೆಲ್ಲರು
ಶಿವಲಿಂಗವ ಧರಿಸಿಕೊಂಡು ಶಿವಲಿಂಗಾರ್ಚನೆಯ ಮಾಡಿಕೊಂಡು
ಪಾದತೀರ್ಥ ಪ್ರಸಾದವ ಕೊಂಡು ಮುಕ್ತರಾದರು."

ಅದು ಹೇಗೆಂದೊಡೆ: ಶಿವಧರ್ಮೇ

"ಪ್ರಾಣೆನಿಶ್ಚ ಕಣಾದಶ್ಚ ಕಪಿಲೋ ಗೌತಮಾದಯಃ ।
ಪ್ರಸಾದ ಸೇವನಾಧ್ಯಾನಾದ್ಧಾರಣಾದರ್ಚನಾದಪಿ ॥"

ಇದು ಕಾರಣ, ಕೂಡಲ ಚನ್ನಸಂಗಮ ದೇವರ ಪೂಜಿಸಿ ಪಾದೋದಕ ಪ್ರಸಾದವಕೊಂಡು ಅತ್ಯಂತ ಶುದ್ಧರಾದರು- ಎಲ್ಲಾ ದೇವತೆಗಳು, ಎಲ್ಲಾ ಋಷಿ ಜನಂಗಳು.

ಇದಲ್ಲದೆ "ವೀರಶೈವ ಉಗಮ ಮತ್ತು ಪ್ರಗತಿ" ಎಂಬ ಗ್ರಂಥದಲ್ಲಿ ಶ್ರೀ ಟಿ.ಎನ್. ಮಲ್ಲಪ್ಪನವರು, ಸ್ಕಾಂದಪುರಾಣದ ಖೇದಾರ ಖಂಡದ ಈ ಶ್ಲೋಕಗಳೆರಡನ್ನು ಎತ್ತಿ ಉದ್ಧರಿಸಿದ್ದಾರೆ:

"ಕಥಿತಾಶ್ಶಂಕರೇಣ್ಶೈವ ಲಿಂಗಸ್ಯಾರ್ಚನ ಸೂಚಕಾಃ ।
ಸಂತಿ ರುದ್ರೇಣ ಕಥಿತಾಃ ಶಿವಧರ್ಮಾಸ್ಸನಾತನಾಃ ॥
ವೀರಭದ್ರೋ ಯಥಾರುದ್ರಸ್ಷ್ವನ್ಯೇ ಚ ಗುರವಃ ಸ್ಮೃತಾಃ ।
ಗುರೋರ್ಜಾತಾಶ್ಚ ಗುರವೋ ವಿಖ್ಯಾತಾ ಭುವನತ್ರಯೇ ॥"

ಶಿವ, ವೀರಭದ್ರ, ರುದ್ರ, ಸ್ಕಂದ, ನಂದಿ ಮೊದಲಾದವರು ವೀರಶೈವರ ಆದಿಗುರುಗಳೆಂದು ಸ್ಕಾಂದ ಪುರಾಣವು ನಿರೂಪಿಸಿದೆ. ವೀರಭದ್ರದೇವನಿಂದ ವೀರಶೈವ ಚರಿತ್ರೆ ಮೊದಲಾಗುತ್ತದೆ. ಈ ದಿಸೆಯಲ್ಲಿ ಸಾಕಷ್ಟು ಸಂಶೋಧನೆ ಸಾಗಬೇಕಾಗಿದೆ.

ವೀರಭದ್ರನು ವೀರಶೈವರ ವಿಶಿಷ್ಟ ವ್ಯಕ್ತಿ; ವಿಶಿಷ್ಟ ಶಕ್ತಿ. ಹೆಮ್ಮೆಯ ಹಿರಿಯ. ಮಂಗಳೋದಯ. ವೀರಶೈವೋದಯ.

ಎಸಳೆರಡು

ಕೈಲಾಸನಾಥ-ಕಲಾವಂತ

ಪರಶಿವ-ಶಿವ ಎಂದು ಇಬ್ಬರು. ಪರಶಿವನು ನಿರಾಕಾರನು. ಶಿವನು ಸಾಕಾರನು; ಕೈಲಾಸಕ್ಕೆ ಒಡೆಯನು. ಪರಶಿವನು ಕೈವಲ್ಯ ಸ್ವರೂಪನು.

'ಕೈಲಾಸ' ಪದಕ್ಕೆ ಅನೇಕ ಅರ್ಥಗಳನ್ನು ಬುದ್ಧಿವಂತರು ತಂತಮ್ಮ ಬುದ್ಧಿ ಬಲದಿಂದ ಮಾಡಿದ್ದಾರೆ. ಕ-ಇಲಾ-ಆಸ ಈ ಮೂರು ಪದಗಳು ಸೇರಿ ಕೈಲಾಸವಾಗಿದೆಯೆಂದಂ, ಕಾಲ ಶಕ್ತಿಯ ವಾಸಕ್ಕೆ ಉಚಿತವಾದುದು ಕೈಲಾಸವೆಂದು ಸ್ಫಟಿಕವೆಂದು, ಹಿಮಾಲಯವೆಂದು, ಶುಭ್ರವೆಂದು, ಶಿವನ ನೆಲೆಯೆಂದು ಮೊದಲಾಗಿ ಹೇಳುತ್ತಾರೆ.

ಮತ್ತೆ ಕೆಲವರು ಈ ವಿಶ್ವಸೃಷ್ಟಿಯ ಎಲ್ಲ ಕಾರಣಗಳಿಗೆ ಮೂಲಸ್ಥಾನವಾದುದೆ ಕೈಲಾಸವೆಂದು ವಿಶ್ವದ ಸಂಪೂರ್ಣ ಶಕ್ತಿಯ ಅಧಿಷ್ಠಾನಸ್ಥಾನವೆಂದು ಹೇಳುತ್ತಾರೆ. ಅಂತಹ ಆ ಕೈಲಾಸಕ್ಕೆ ಒಡೆಯನಾದವನೆ ಶಿವನು. ಕ- ಎಂದರೆ ಗಂಗೆ, ಇಲಾ ಅಂದರೆ ಗೌರೀ; ಇವರಿಬ್ಬರು ಇರುವ ನೆಲೆಯೇ ಕೈಲಾಸ. ಅದಕ್ಕೆ ಒಡೆಯ ಶಿವನು.

ಶಿವನು ಪ್ರಕಾಶಮಯನು. ಪೂರ್ಣ ಸಮರ್ಥನು. ಬ್ರಹ್ಮನಿಗೆ ಬರೀ ಹುಟ್ಟಿಸುವ ಶಕ್ತಿ, ವಿಷ್ಣುವಿಗೆ ಕೇವಲ ರಕ್ಷಿಸುವ ಶಕ್ತಿ ಇದ್ದರೆ ಶಿವನಿಗೆ ಸೃಷ್ಟಿ ಸ್ಥಿತಿ ಲಯ ಈ ಮೂರು ಶಕ್ತಿಗಳೂ ಇವೆಯೆಂದು ಜತೆಗೆ ತಿರೋಧಾನ ಅನುಗ್ರಹ ಶಕ್ತಿಗಳೆರಡು ಸೇರಿ ಪಂಚಕೃತ್ಯಕರ್ತನೆಂದು ಹೇಳುವುದುಂಟು ಮತ್ತು ಶಿವನು ಪ್ರಪಂಚ-ಪರಮಾರ್ಥಗಳೆರಡರ ಪ್ರಭುವಾಗಿದ್ದಾನೆ. ಸುಖ-ಶಾಂತಿಗಳಿಗೆ ಕಾರಣನಾಗಿದ್ದಾನೆ. ಪಶುಪತಿಯೆನಿಸಿದ್ದಾನೆ. ಮಹೇಶ, ಭೂತೇಶ ಎಂತಲೂ ಆತನಿಗೆ ಹೆಸರುಗಳು. ಪ್ರಮಥಾಧಿಪನಾಗಿದ್ದಾನೆ. ಪಿನಾಕ, ಖಂಡ ಪರಶು, ಕಪಾಲ, ಕಪರ್ದಗಳನ್ನು ಧರಿಸಿದ್ದಾನೆ. ಕೃತ್ತಿವಾಸನಾಗಿದ್ದಾನೆ. ಮೃತ್ಯುಹರನಾಗಿದ್ದಾನೆ. ಶ್ರೀಕಂಠ, ಶಿತಿಕಂಠನೂ ಆಗಿದ್ದಾನೆ. ಮಹಾದೇವನೆನಿಸಿ ಎಲ್ಲಕ್ಕೂ ಮೇಲಿನ ಸ್ಥಾನಮಾನಗಳುಳ್ಳವನಾಗಿದ್ದಾನೆ.

ಶಿವನು ಕಲ್ಯಾಣಕಾರಕನು. ಶಕ್ತಿಶಾಲಿಯು, ಪರಾಕಾಷ್ಠ ಪ್ರಜ್ಞೆಯುಳ್ಳವನು. ವಿಶಿಷ್ಟ ವೈಭವಶಾಲಿಯು. ಶಿವನು ಯೋಗವಿದ್ಯೆಯ ಆದಿ ಆಚಾರ್ಯನು. ಸರ್ವವಿದ್ಯಾವಂತನು. ವಿದ್ಯಾಜನಕನು. ಆಯುರ್ವೇದದ ರಸಾಯನಕ ಪ್ರಯೋಗವು ಅವನಿಂದ ಪ್ರಾರಂಭವಾಯಿತೆಂದು ಹೇಳುವರು. ಧನುರ್ವಿದ್ಯೆಯ ಉಪಾಧ್ಯಾಯನಾತನು. ಶಿವನಿಂದಲೇ ಸಂಗೀತದ ಉತ್ಪತ್ತಿ, ನೃತ್ಯಕಲೆ, ವಾದ್ಯಕಲೆ, ಯಂತ್ರಕಲೆಗಳು ಅವನಿಂದ ಆರಂಭವಾಗಿವೆ. ಒಳ್ಳೆಯದೆಂಬುದು ಎಲ್ಲವೂ ಆತನಿಂದಲೇ ಆದುದು. ಸಾಲದ್ದಕ್ಕೆ ಆತ ಸರ್ವ ಸಮದರ್ಶಿ; ಅಂತರ್ದರ್ಶಿ ಕೃಪಾಮೂರ್ತಿ. ಇದಿಷ್ಟು ಕೈಲಾಸನಾಥನ ಪೂರ್ವ ಪೀಠಿಕೆ.

ಶಿವನು ಕೈಲಾಸನಾಥನೆಂದು ಹೇಳುವಿಕೆಯಲ್ಲಿಯೇ ಸಿದ್ಧವಾಗುತ್ತದೆ. ಆತನು ಒಂದು ಕಾಲದಲ್ಲಿ ಒಂದು ಪ್ರದೇಶದಲ್ಲಿ ಇದ್ದ, ಇದ್ದು ಸರ್ವ ಸಮರ್ಥನಾಗಿ ಬದುಕಿದ್ದ ಚಾರಿತ್ರಿಕ ವ್ಯಕ್ತಿಯೆಂಬುದು.

ಕೈಲಾಸ ಹಿಮಾಲಯದ ಒಂದು ಪ್ರದೇಶವೆಂಬುದು ಎಲ್ಲರೂ ತಿಳಿದ ವಿಷಯವೆ ಆಗಿದೆ. ನಿರಾಕಾರನಾದ ಸರ್ವಾಂತರ್ಯಾಮಿಯಾದ ಆ ಪರಶಿವನು ಆ ಪರಬ್ರಹ್ಮನ ಕೈಲಾಸದಲ್ಲಿ ಮಾತ್ರ ಇದ್ದನೆಂದು ಹೇಳುವುದು ಉಚಿತವಲ್ಲ. ಒಂದು ವೇಳೆ ಛಲದಿಂದ ಹೇಳಿದರೆ ದೇಶ-ಕಾಲಾದಿ ಪರಿಚ್ಛೇದತ್ವವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಒಪ್ಪಿಕೊಂಡರೆ ಪರಬ್ರಹ್ಮತ್ವ ಸಿದ್ಧಿಸದೇ ಹೋಗಬೇಕಾಗುತ್ತದೆ. ಇದರಿಂದಾಗಿ ಕೈವಲ್ಯ ಸ್ವರೂಪನಾದ ಪರಶಿವನೇ ಬೇರೆ; ಕೈಲಾಸನಾಥನಾದ ಸಾಕಾರ ಶಿವನೇ ಬೇರೆ ಎಂದು ಒಪ್ಪದೆ ಬೇರೆ ವಿಧಿಯಿಲ್ಲ.

ವೀರಶೈವ ಸಿದ್ಧಾಂತದಂತೆ ಶಿವನು ಮೂವತ್ತಾರು ತತ್ತ್ವಗಳಲ್ಲಿ ಒಬ್ಬನು. ಶಿವನು ತತ್ತ್ವಾತೀತನಲ್ಲೆಂಬುದು ಇಲ್ಲಿ ಗಮನಿಸಬೇಕಾದ ಗುಟ್ಟು. ಪರಶಿವನು ತಾತ್ತ್ವಿಕವಾಗಿ ತತ್ತ್ವಾತೀತನು; ನಿರವಯಲನು. ಸರ್ವಶೂನ್ಯ ನಿರಾಲಂಬನು.

ಶಿವನಾದರೋ ಕೈಲಾಸ ಪರ್ವತದ ಆಲಂಬನವುಳ್ಳವನು. ಶೂಲಾಯುಧವುಳ್ಳವನು. ಮೊಂಡಕೊಡಲಿಯನ್ನು ಕೈಯಲ್ಲಿ ಹಿಡಿದವನು; ಮತ್ತೊಂದು ಕೈಯಲ್ಲಿ ಕಪಾಲವುಳ್ಳವನು. ಚರ್ಮಾಂಬರನು. ಮುಡಿಯಲ್ಲಿ ಜಡೆಯುಳ್ಳವನು. ತ್ರಿವಿಧ ಶಕ್ತಿನಿಯರಿಗೆ ಪತಿಯು, ಕ್ರಮವಾಗಿ ದಕ್ಷ, ಪರ್ವತ, ಓಂಕಾರರಿಗೆ ಅಳಿಯನು. ಪರಿವಿಡಿದು ಸತೀ ಪಾರ್ವತೀ ಉಮಾದೇವಿಯರ ಗಂಡನು. ಮನುಯುಗದ ಒಬ್ಬ ಮಹಾವ್ಯಕ್ತಿಯು. ಶೈವ ಸಂಸ್ಕೃತಿಯನ್ನು ಮುಮ್ಮೊದಲು ರೂಪಿಸಿದ ಮಹಾಪುರುಷನು.

"ಅಮೂರ್ತೇನ ಸ್ವಮೂರ್ತಿಶ್ಚ ತೇನಾಕಲ್ಪ ಸ್ವಲೀಲಯಾ ।
ಸರ್ವೈಶ್ವರ್ಯಗುಣೋಪೇತಾ ಸರ್ವಜ್ಞಾನಮಯೀ ಶುಭಾ ॥"

ಎಂಬುದಾಗಿ ಶಿವಪುರಾಣದ ರುದ್ರಸಂಹಿತೆಯ ಸೃಷ್ಟಿ ಖಂಡದ ಅಧ್ಯಾಯ ಆರರಲ್ಲಿ ಹದಿನಯ್ದನೆಯ ಶ್ಲೋಕವಿದು. ಇದರರ್ಥ ಹೀಗಿದೆ:

ಆ ಪರಶಿವನು ಅಮೂರ್ತನು; ಆತನೇ ತನ್ನ ಲೀಲಾಮಾತ್ರದಿಂದ ಮೂರ್ತಿರೂಪವನ್ನು ಧರಿಸುವನು. ಶರೀರವನ್ನು ಕಲ್ಪಿಸುವನು; ಸೃಷ್ಟಿಸಿಕೊಳ್ಳುವನು. ಅವನೇ ಸಾಕಾರ ಶಿವನು. ಆತನು ಸರ್ವೈಶ್ವರ್ಯಗಳಿಂದ ಗುಣಗಳಿಂದ ಕೂಡಿದವನು; ಸರ್ವಜ್ಞಾನವುಳ್ಳವನು; ಶುಭಸ್ವರೂಪನು. ಅಂದರೆ ಮಂಗಲಮಯನು. ಅದೇ ಶಿವಪುರಾಣವು ಮುಂದುವರಿದು ಮತ್ತೆ ಹೀಗೆ ಹೇಳಿದೆ:

"ಅಮೂರ್ತೆ ಯತ್ಪರಾಖ್ಯಂ ವೈ ತಸ್ಯ ಮ್ಮೂರ್ತಿಸ್ಸದಾಶಿವಃ ।
ಅರ್ವಾಚೀನಾಃ ಪರಾಚೀನಾ ಈಶ್ವರಂ ತಂ ಜಗುರ್ಬುಧಾಃ ॥
ಪರಃ ಪುಮಾನೀಶ್ವರಃ ಸ ಶಿವಃ ಶಂಭುರನೀಶ್ವರಃ ।
ಶಿರ್ಷೆ ಮಂದಾಕಿನೀಧಾರೀ ಭಲಚಂದ್ರಸ್ತ್ರಿ ಲೋಚನಃ ॥
ಪಂಚವಕ್ತ್ರಃ ಪ್ರಸನ್ನಾತ್ಮಾ ದಶಬಾಹುಸ್ತ್ರಿಶೂಲಧೃಕ್ ।
ಕರ್ಪೂರ ಗೌರಸುಸಿತೋ ಭಸ್ಮೋದ್ಧೂತ್ತಿಲಿತ ವಿಗ್ರಹಃ ॥"

ಅಮೂರ್ತವಾದ ಆ ಪರವಸ್ತುವೇ ಅಪರವಾಗಿ ಮೂರ್ತಿ ರೂಪವನ್ನ ತಳೆದು ಅದೇ ಸದಾಶಿವನೆಂದಾಯಿತು. ಆ ಸದಾಶಿವಮೂರ್ತಿಯನ್ನೆ ಬುದ್ಧಿವಂತರಾದ ಹಿಂದಿನವರು ಇಂದಿನವರು ಈಶ್ವರನೆಂದು ಕರೆದರು. ಈ ಈಶ್ವರನೇ ಪರಮಪುರುಷನು. ಹಾಗೂ ಶಿವನು, ಶಂಭುವು, ಈತನಿಗೆ ಬೇರೊಬ್ಬ ಒಡೆಯನಿಲ್ಲ. ಈತನ ತಲೆಯಲ್ಲಿ ಗಂಗೆ ಹಣೆಯಲ್ಲಿ ಭಾಲಚಂದ್ರ ಮೂರುಕಣ್ಣ ಅಯ್ದು ಮುಖ, ಹತ್ತು ಕೈ, ಕೈಯಲ್ಲಿ ತ್ರಿಶೂಲ ಇವೆಲ್ಲ ಇವೆ. ಕಪ್ಪುರದಂತೆ ಮೈಬಣ್ಣ ಬೆಳ್ಳಗಿದೆ. ಮೈತುಂಬ ಭಸ್ಮವನ್ನು ಧರಿಸಿರುತ್ತಾನೆ. ಯಾವಾಗಲೂ ಪ್ರಸನ್ನಾತ್ಮನಾಗಿರುತ್ತಾನೆ.

"ಯುಗಪಚ್ಚ ತಯಾ ಶಕ್ತ್ಯಾ ಸಾಕಂ ಕಾಲಸ್ವರೂಪಿಣೌ ।
ಶಿವಲೋಕಾಭಿದಂಕ್ಷೇತ್ರಂ ನಿರ್ಮಿತಂ ತೇನ ಬ್ರಹ್ಮಣೌ ॥"

ಆ ಶಿವನೇ ಬ್ರಹ್ಮನೆನಿಸಿದನು. ಶಕ್ತಿಶಾಲಿಯಾಗಿ ಶಿವಲೋಕವೊಂದನ್ನು ನಿರ್ಮಿಸುವನು. ಅದು ಕ್ಷೇತ್ರವೆನಿಸಿತು. ಅದಕ್ಕೆ ಶಿವನು ಒಡೆಯನಾದನು ಆ ಕ್ಷೇತ್ರವೇ ಕೈಲಾಸ. ಶಿವನೇ ಕೈಲಾಸನಾಥ.

ಶಿವಪುರಾಣದ ಬ್ರಹ್ಮನೆನಿಸಿದನು. ಶಕ್ತಿಶಾಲಿಯಾ ಶಿವಲೋಕವೊಂದನ್ನು ನಿರ್ಮಿಸುವನು. ಅದು ಕ್ಷೇತ್ರವೆನಿಸಿತು. ಅದಕ್ಕೆ ಶಿವನು ಒಡೆಯನಾದನು. ಆ ಕ್ಷೇತ್ರವೇ ಕೈಲಾಸ. ಶಿವನೇ ಕೈಲಾಸನಾಥ.

ಶಿವಪುರಾಣದ ಚಾರಿತ್ರಿಕವಲ್ಲದ ಈ ನಿರೂಪಣದಿಂದ ಶಿವನೊಬ್ಬ ಎಲ್ಲರಂತೆ ಶರೀರಧಾರಿಯಾದ ವ್ಯಕ್ತಿಯೆಂಬುದು ವ್ಯಕ್ತವಾಗುತ್ತದೆ. ಆತನ ನಾಮ ರೂಪಗಳ ಚಿತ್ರದಲ್ಲಿ ಸಾಂಕೇತಿಕತೆಯಿದೆ.

ಶಿವನ ತಂದೆ ತಾಯಿಗಳ ಹೆಸರು ಗೊತ್ತಿಲ್ಲದೆ ಪರಶಿವನೆ ಶಿವನಾಗಿ ಸ್ವಯಂಭುವಾದನೆಂದು ಹೇಳಿರಬೇಕು. ಅಥವಾ ಹೆಚ್ಚು ಪ್ರಭಾವಿತನಾದ ವ್ಯಕ್ತಿಯನ್ನು ದೇವತ್ವಕ್ಕೇರಿಸಿದ ಬಳಿಕ ತಂದೆ ತಾಯಿಗಳ ಹೆಸರನ್ನು ಹೇಳುವುದು ಎಲ್ಲರಂತೆ ಹುಟ್ಟಿ ಬಂದನೆಂದು ಹೇಳುವುದು ಸರಿಯಲ್ಲೆಂಬ ಸಂಪ್ರದಾಯ ನಂಬುಗೆ ಕಾರಣವಾಗಿರಬೇಕು. ಯಾವಾಗಲೂ ಬೆಳುಪಾಗಿ ಪ್ರಕಾಶಮಯನಾಗಿರುವಿಕೆಯನ್ನು ಸೂಚಿಸಲು ಸದಾಶಿವನೆಂದು ಕರೆದರು. ಶಿವ, ಶಂಭು ಹೆಸರುಗಳನ್ನೂ ತಮ್ಮ ಕಲ್ಪನೆಗೆ ತಕ್ಕಂತೆ ಸಂಕೇತಿಸಿರುವರು. ಶಿವ ಪದವು ಸಂಸ್ಕೃತದ್ದಲ್ಲ. ಇದು ವ್ಯಾಪ್ತಿಸೂಚಕವೂ ಅಸ್ತಿತ್ವ ಸೂಚಕವೂ ಆಗಿದೆ. ಎಲ್ಲರಿಗೂ ಸುಖವನ್ನೆ ಶಿವನು ಕೊಡುವುದರಿಂದ ಶಂಭುವೆಂದರು. ಆ ಕಾಲದ ಹಿರಿಯ ಒಡೆಯ ಅಥವಾ ಪ್ರಭುವಾದ್ದರಿಂದ ಈಶ್ವರನೆಂದರು. ಶಿವನು ವಿಶ್ವಪ್ರೇಮಿಯಾದ್ದರಿಂದ ಗಂಗಾಧರನೆಂದರು ಅಥವಾ ಅಮೌಘಜ್ಞಾನಾಮೃತವನ್ನು ಶಿವನು ತಲೆಯಲ್ಲಿ ತುಂಬಿಕೊಂಡಿದ್ದನೆಂಬುದನ್ನು ಗಂಗಾಧರತ್ವವು ಸಂಕೇತಿಸುತ್ತದೆ. ಯಾವಾಗಲೂ ಶಾಂತಿಯಿಂದಿರುವಿಕೆಯನ್ನು ಚಂದ್ರಧರ ಎಂಬ ಪದ ಸೂಚಿಸುತ್ತದೆ. ಕ್ರಿಯಾಶಕ್ತಿ ಜ್ಞಾನಶಕ್ತಿ ಅನುಭವ ಶಕ್ತಿಗಳನ್ನು ಸೂಚಿಸುತ್ತದೆ ತ್ರಿಲೋಚನ ಪದ, ತ್ರಿವಿಧ ಶಕ್ತಿಯಿಂದ ತುಂಬಾ ಪ್ರಭಾವಿತನಾಗಿದ್ದನೆಂದರ್ಥ. ಹೀಗೆಯೇ ಅಯ್ದು ಮೊಗ, ಹತ್ತು ಕೈಗಳಿಗೂ ಸಂಕೇತಾರ್ಥವಿದೆಯೆಂದು ಭಾವಿಸಬೇಕು. ನಮ್ಮಂತೆ ಇರುವ ರಾವಣನಿಗೆ ಹತ್ತು ತಲೆಗಳಿದ್ದವೆಂದು ಹೇಳುವ ಜನ ದೇವನೆಂದು ಭಾವಿಸಿದ ಶಿವನಿಗೆ ಅಯ್ದು ಮುಖಗಳೆಂದು ಹೇಳಿರುವುದು ಹೆಚ್ಚಲ್ಲಾ. ಪಂಚಭೂತಗಳ ಮೇಲೆ ಆತನಿಗೆ ಅಗಾಧ ಅನುಪಮ ಅಧಿಕಾರವಿತ್ತೆಂದೂ ಅನುಭವವಿತ್ತೆಂದು ಸೂಚಿಸುತ್ತದೆ. ಪಂಚವಕ್ತ್ರ ಪದ. ಹತ್ತುಕಡೆಗೂ ಕೈಯಾಡಿಸುತ್ತಿದ್ದನು ಅಂದರೆ ಹತ್ತಾರು ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದ್ದನೆಂಬುದನ್ನು ಸಂಕೇತಿಸುತ್ತದೆ ದಶಬಾಹು ಎಂಬ ಪದ. ಈವೇ ಎಲ್ಲ ಶ್ರೇಷ್ಟಶಕ್ತಿಗಳಿಲ್ಲದಿದ್ದರೆ ಅದೇ ಪುರಾಣವು ಹೇಳುವ ಸರ್ವೈಶ್ವರ್ಯಗಳು ಸದ್ಗುಣಗಳು ಸರ್ವಜ್ಞಾನಗಳು ಸರ್ವಶುಭಗಳು ಪ್ರಸನ್ನತೆಯ ಕಾಲವನ್ನು ಜಯಿಸುವ

ಕಲಿತನವು ಶಿವನಿಗೆ ಸಂಭವಿಸುತ್ತಿರಲಿಲ್ಲ. ಯಶಸ್ಸು ಆತನಿಗೆ ಉಂಟಾಗುತ್ತಿರಲಿಲ್ಲ. ಸರ್ವೈಕವಂದ್ಯನೆನಿಸುತ್ತಿರಲಿಲ್ಲ. ಸರ್ವ ಸಂಸ್ಕೃತಿಗೆ ಮೂಲಪುರುಷನೆನಿಸುತ್ತಿರಲಿಲ್ಲ.

"ಕೈಲಾಸೇ ಭವನಂ ರಮ್ಯಂ ಪಂಚವಕ್ತ್ರಶ್ಚಕಾರ ಹ ।
ಬ್ರಹ್ಮಾಂಡಸ್ಯ ತಥಾ ನಾಶೇ ತಸ್ಯ ನಾಶೋಽಸ್ತಿವೈನಹಿ " ॥೫॥ -ಶಿವಪುರಾಣ

ಕೈಲಾಸ ಕ್ಷೇತ್ರದಲ್ಲಿ ಶಿವನು ತನ್ನ ವಾಸಕ್ಕಾಗಿ ಒಂದು ಮನೆಯನ್ನು ಮಾಡಿದನು. ಆ ಮನೆ ರಮ್ಯವಾಗಿದ್ದಿತು. ಅದು ಭದ್ರವಾಗಿದ್ದಿತು. ಅದರ ಹೆಸರು 'ವಿಶ್ವೇಶ್ವರ' ಎಂದಿದ್ದಿತು.

ಮರ್ತ್ಯಲೋಕದ ಮನುಷ್ಯರೆಲ್ಲರೂ ಮನುವಿನ ಸಂತಾನ. ಮನುಷ್ಯ ಎಂಬ ಹೆಸರು ಅದನ್ನೇ ಸೂಚಿಸುತ್ತದೆ. ಮನುವಿನ ಮೂರನೆಯ ಮಗಳು ಪ್ರಸೂತಿ. ಪ್ರಸೂತಿಯ ಮಗಳು ಸತೀದೇವಿ. ಈ ಸತೀದೇವಿಯು ಮನುಷ್ಯ ಸಂತತಿಯವಳು. ಇವಳನ್ನು ಮದುವೆಯಾದ ಶಿವನು ಮಾನವನಿರಬೇಕಲ್ಲವೆ? ಮರ್ತ್ಯಲೋಕದವನಿರಬೇಕಲ್ಲವೆ? ಅಲ್ಲದೆ ಶಿವನಿಗೊಬ್ಬ ಆಪ್ತಸ್ನೇಹಿತನಿದ್ದನು. ಆ ಸ್ನೇಹಿತನು ತುಂಬಾ ಸ್ಥಿತಿವಂತನು. ಅವನ ಹೆಸರು ಮನುಷ್ಯ ಧರ್ಮ. ಅವನನ್ನೇ 'ಕುಬೇರ' ಎಂದು ಮತ್ತೊಂದು ಹೆಸರಿನಿಂದ ಕರೆಯುವರು. ಈತನು ಪುಲಸ್ತ್ಯನ ಮಗನು. ಎಲ್ಲ ಐಶ್ವರ್ಯಗಳಿಗೆ ಒಡೆಯನು ಅಲಕಾ ನಗರ ನಿವಾಸಿಯು. ಕುಬೇರನು ರಾವಣನ ಸೋದರನೆಂದು ಹೇಳುವರು. ರಾವಣನನ್ನು 'ಧನದಾನುಜ' ಅಂದರೆ ಕುಬೇರನ ತಮ್ಮನೆಂದು ಹೇಳುವುದು. ಕುಬೇರ-ರಾವಣರು ಅಣ್ಣ-ತಮ್ಮಂದಿರು. ಕುಬೇರನು 'ಮನುಷ್ಯಧರ್ಮ'ನೆಂದು ಹೆಸರಾಗಿದ್ದಾನೆ. ಶಿವನು ಈ ಮನುಷ್ಯ ಧರ್ಮನೆನಿಸಿದ ಕುಬೇರನ ಮಿತ್ರನು. ಈತನ ಕೈಲಾಸವು ಕುಬೇರನ ಅಲಕಾ ನಗರದ ಬಳಿಯಿದೆ. 'ಅಲಕಾನ್ನಿಕಷಾ ಚಾಸೀತ್ಕೈಲಾಸಃ ಶಂಕರಾಲಯಃ ।' ಎಂದಿದೆ ಶಿವಪುರಾಣವು.

ಶಿವನು ಒಬ್ಬ ತಪಸ್ವಿ. ಪರಶಿವಲಿಂಗ ಪೂಜಕನು. ಆತನು ತನ್ನ ಶಿವಲಿಂಗಾರ್ಚನೆಯಲ್ಲಿ ಢಕ್ಕೆಯನ್ನು ಅಂದರೆ ಡಮರುಗವನ್ನು ಬಾರಿಸುತ್ತಿದ್ದನು. ಡಮರುಗವಾದ್ಯ ಆತನದೇ ಆದ ವಾದ್ಯ. ಅದು ಅಪೂರ್ವವಾದ್ಯ. ಒಳ್ಳೆಯ ಗತಿಯುಳ್ಳ ನಾದವುಳ್ಳವಾದ್ಯ. ಅದನ್ನು ಬಾಜಿಸಿದರೆ ಅದರ ಶಬ್ದಕ್ಕೆ ಅನೇಕ ದೇವತೆಗಳು ಆತನಲ್ಲಿಗೆ ಪಾಠಕ್ಕೆ ಬರುತ್ತಿದ್ದರು. ಶಿವನಿಂದ ಸರ್ವವಿದ್ಯೆಗಳನ್ನು ಕಲಿಯುತ್ತಿದ್ದರು. ಶಿವನು ಒಬ್ಬ ಶ್ರೇಷ್ಠ ಶಿಕ್ಷಕನಾಗಿದ್ದನು; ಕಲಾ ತಪಸ್ವಿಯಾಗಿದ್ದನು.

ಸಂಸ್ಕೃತದಲ್ಲಿ ವ್ಯಾಕರಣವನ್ನು ರಚಿಸಿದ ಪಾಣಿನಿಯೂ ಶಿವನಲ್ಲಿಯೇ ವಿದ್ಯೆಯನ್ನು ಕಲಿತವನು. ಶಿವನು ಪಾಣಿನಿಯ ಪ್ರಾಧ್ಯಾಪಕನಾಗಿದ್ದನು. ಶಿವನು ಎಲ್ಲ ವಿದ್ಯೆಗಳಲ್ಲಿ ಪಾರಂಗತನಾಗಿದ್ದನು. 'ಈಶಾನಃ ಸರ್ವವಿದ್ಯಾನಾಂ' ಎಂದು ಪಂಚಬ್ರಹ್ಮ ಮಂತ್ರವು ಆತನನ್ನು ಹೊಗಳಿಲ್ಲವೆ?

ಶಿವನ ಶಿಕ್ಷಣ ನೈಪುಣ್ಯಕ್ಕೆ ಇನ್ನೊಂದು ಬೆರಗಿನ ಬೆಡಗಿನ ನಿದರ್ಶನವಿದೆ. ಅದೇ ಡಮರುಗ. ಆತನು ತನ್ನ ಬಾಯಿಂದ ಹೆಚ್ಚಾಗಿ ಪಾಠ ಪ್ರವಚನಗಳನ್ನು ಹೇಳುತ್ತಿರಲಿಲ್ಲ. ಡಮರುಗ ಶಬ್ದದಿಂದಲೇ ಪಾಠವನ್ನು ಹೇಳುತ್ತಿದ್ದನು. ತಾನು ಹೇಳಬೇಕಾದ ನುಡಿಗಳನ್ನೆಲ್ಲ ಆ ಡಮರುಗದಿಂದಲೇ ಹೊರಡಿಸುತ್ತಿದ್ದನು. ಅದೇ ಆತನ 'ಟೆಲಿಗ್ರಾಂ' ಆಗಿದ್ದಿತು. ದಿಟವಾಗಿಯೂ ಡಮರುಗವು ಆತನದೇ ಆದ ಒಂದು ವಿಜ್ಞಾನ ಸಾಧನವಾಗಿದ್ದಿತು.

ಪಾಣಿನಿ ಶಿವನಲ್ಲಿ ವ್ಯಾಕರಣಶಾಸ್ತ್ರ ಅಂದರೆ ಶಬ್ದಶಾಸ್ತ್ರವನ್ನು ಕಲಿತ ಶಿಷ್ಯನು. ಭೃಂಗಿಯು ಶಿವನಲ್ಲಿ ನಾಟ್ಯವನ್ನು ಕಲಿತ ಶಿಷ್ಯನು. ವೀರಭದ್ರನು ವೀರವಿದ್ಯೆಯನ್ನು ಕಲಿತ ಶಿಷ್ಯನು. ಬ್ರಹ್ಮನು ಸೃಷ್ಟಿ ಕ್ರಮವನ್ನು, ವೇದ ಪಾಠವನ್ನು, ವಿಷ್ಣುವು ಲೋಕಪಾಲನ ವಿಧಾನವನ್ನು ಕಲಿತ ಶಿಷ್ಯರು. ಇಂದ್ರನು ರಾಜ್ಯಾಂಗ ವಿದ್ಯೆಯನ್ನು ಕಲಿತ ಶಿಷ್ಯನು. ನಾರದನು ನ್ಯಾಯಾಂಗವನ್ನು ಕಲಿತ ಶಿಷ್ಯನು. ಕುಬೇರನು ಅರ್ಥಶಾಸ್ತ್ರವನ್ನು ಕಲಿತ ಶಿಷ್ಯನು. ವಿಶ್ವಕರ್ಮನು ಶಿವನಲ್ಲಿ ವಾಸ್ತುಶಿಲ್ಪವನ್ನು ಶಿಲ್ಪಕಲೆಯನ್ನು ಕಲಿತ ಶಿಷ್ಯನು. ಕಿನ್ನರರು ಸಂಗೀತ ಶಿಷ್ಯರು. ಹೀಗೆ ಶಿವನು ಸರ್ವರಿಗೆ ವಿದ್ಯಾಗುರುವಾಗಿದ್ದನು. ಅಂತೆಯೇ ಶಿವನು ಸರ್ವಶಕ್ತಿ ಪ್ರದನೂ ಮುಕ್ತಿಪ್ರದನೂ ಆಗಿದ್ದನು.

ಮಾನವರು ಮೂರು ಬಗೆಯಾಗಿರುವರು. ದಾನವ ಗುಣವುಳ್ಳವರು ಮಾನವಗುಣವುಳ್ಳವರು; ದೇವಗುಣವುಳ್ಳವರು. ದಾನವಗುಣವುಳ್ಳವರು ತಾಮಸರು. ಮಾನವಗುಣವುಳ್ಳವರು ರಾಜಸರು; ದೇವಗುಣವುಳ್ಳವರು ಸಾತ್ವಿಕರು. ಇವರೆಲ್ಲರೂ ಈ ಮರ್ತ್ಯಲೋಕದವರೇ ಆಗಿರುವರು. ಈ ಮೂರು ಬಗೆಯ ಜನರನ್ನೂ ಆನಂದಗೊಳಿಸುತ್ತಿದ್ದನು ಶಿವನು. ಸಮವಾಗಿ ಕಾಣುತ್ತಿದ್ದನು ಶಿವನು. ಸಮವಾಗಿ ಕಾಣುತ್ತಿದ್ದನು ಶಿವನು. ಶಿವನು ವರ್ಣ ಕುಲಭೇದಗಳನ್ನು ಮಾಡಿದವನಲ್ಲ. ಆತನ ಕಾಲದಲ್ಲಿ ಆರ್ಯ ದ್ರಾವಿಡ ಭೇದವೂ ಇರಲಿಲ್ಲ. ಸಾತ್ವಿಕರಿಗೆ ಸುರರೆಂದು, ಸಾತ್ವಿಕರಲ್ಲದವರಿಗೆ ಅಸುರರೆಂದು ಹೇಳುವ ರೂಢಿಯಿದ್ದಿತು. ಅಸುರರೆಂದರೆ ರಾಕ್ಷಸರೆಂದರ್ಥವಲ್ಲ. ಸುರ ವರ್ಗಕ್ಕೆ ಸೇರದವರೆಂದರ್ಥ. ಇದರಿಂದ ಶಿವಗಣರು ಸುರಗಣರಲ್ಲಿ ಸೇರುವುದಿಲ್ಲ. ರುದ್ರಗಣರೂ ಅಷ್ಟೆ! ಇಷ್ಟು ಮಾತ್ರದಿಂದ ರುದ್ರಗಣರಾಗಲಿ, ಶಿವಗಣರಾಗಲಿ, ರಾವಣಾದಿಗಳಾಗಲಿ ರಾಕ್ಷಸಗಣವೆಂದು ಅರ್ಥವಾಗುವುದಿಲ್ಲ. ಅವರು ಅನಾಗರಿಕರಲ್ಲ.

ನಿಷ್ಕಲ, ಸಕಲ ಎಂದು ಶಿವತತ್ತ್ವ ಎರಡು ಬಗೆಯಾಗಿದೆ. ನಿಷ್ಕಲತತ್ತ್ವ ಸೃಷ್ಟಿಯ ಹಿನ್ನೆಲೆಯಲ್ಲಿರುವಂತಹದು. ನಿಷ್ಕ್ರಿಯಾತ್ಮಕವಾದುದು. ಯಾವ ಕಲೆಗಳಿಲ್ಲದುದು. ಇಲ್ಲಿ ಇಲ್ಲೆಂದರೆ ನಾಸ್ತಿ ಎಂಬರ್ಥವಲ್ಲ. ಅವ್ಯಕ್ತವೆಂದರ್ಥ. ಸಕಲ ಶಿವನಲ್ಲಿ ಎಲ್ಲ ಕಲೆಗಳೂ ಇವೆ. ಚಾರಿತ್ರಿಕ ಶಿವನು ಸಕಲ ಕಲಾವಂತನು. ಅಂತೆಯೇ ಎಲ್ಲರ ಹೃದಯಗಳು ಕಲಾಸಹಿತವಾಗಿಯೂ ಇರಬಲ್ಲವು; ಕಲಾರಹಿತ (ಅವ್ಯಕ್ತ)ವಾಗಿಯೂ ಇರಬಲ್ಲವು. ನಾದ-ಬಿಂದುಕಲಾತ್ಮಕವಾದುದೇ ಸೃಷ್ಟಿ. ನಾದ ಬಿಂದು ಕಲಾತೀತವಾದುದೆ ಸೃಷ್ಟಿಗೆ ಹಿನ್ನೆಲೆಯಲ್ಲಿರುವ ನಿಷ್ಕಲ ಪರಮವಸ್ತು; ನಿರಾಲಂಬ ಪರಮಾರ್ಥ.

ಆ ಪರವಸ್ತುವೆ ಸಕಲವಾಗಿ ವ್ಯಾವಹಾರಿಕ ವಸ್ತುವಾಗಿದೆ; ವ್ಯಾವಹಾರಿಕ ಸತ್ತಾಗಿದೆ. ನಾದವಾಗಿ ಶ್ರವಣ ಸಾಧನವಾಗಿದೆ. ಬಿಂದುವಾಗಿ ರುಚಿ ಅಥವಾ ರಸಸಾಧನವಾಗಿದೆ. ಕಲೆಯಾಗಿ ನೋಟ ಅಥವಾ ದರ್ಶನ ಸಾಧನವಾಗಿದೆ. ಸಚ್ಚಿದಾನಂದ ಸ್ವರೂಪವಾಗಿದೆ.

ನಿರಾಲಂಬ ಆಲಂಬ ಎಂದು ವಸ್ತು ಇಬ್ಬಗೆ. ಮಾನವನ ಏಳ್ಗೆಗೆ ಆಲಂಬ ಅಗತ್ಯ. ಕಾರಣ ಸಗುಣ ಸಾಕಾರ ಶಿವನ ಆರಾಧನೆ ಅಗತ್ಯವಾಯಿತು. ಅದಕ್ಕಾಗಿ ಅನಿರ್ಗುಣ ವಸ್ತುವು ಸಗುಣ ಶಿವನಾಗಿ ಬಂದು ಕೈಲಾಸವನ್ನು ತನ್ನ ಲೀಲಾಕೈವಲ್ಯವನ್ನಾಗಿ ಮಾಡಿದನು. ಮಾನವನ ದಾನವರ ದೇವತೆಗಳ ಅಶಿವತ್ವವನ್ನು ಕಳೆಯಲು ಕರ್ತನಾದನು. ವಿಜ್ಞಾನ ವಿಜೃಂಭಣೆಗೆ ಕಾರಣನಾದನು.

ಗುರುವಿಲ್ಲದೆ ಜ್ಞಾನ-ವಿಜ್ಞಾನಗಳು ವ್ಯಕ್ತವಾಗವು. ಗುರುಗಳಿಗೆಲ್ಲ ಆದಿಗುರುವಾಗಿ ಶಿವನು ಅವತರಿಸಿದನು. ಮೂಲಗುರುವಾದನು. ಸರ್ವಗುರು ಸರ್ವದೇವತಾಧಿಷ್ಠಾನನಾದನು. ಶೈವೀ ಸಂಸ್ಕೃತಿಯ ಸಂಪ್ರತಿಷ್ಠಾಪಕನಾದನು. ಶೈವ ಸಂಸ್ಕೃತಿಯ ಮೂಲ ಪುರುಷನಾದನು; ಮೂಲ ಚೇತನನಾದನು.

ಶಿವಶಕ್ತಿ ಅಪಾರವಾದುದು; ಶತಮುಖವುಳ್ಳುದು. ಅಷ್ಟೇ ಅಲ್ಲ ಸಹಸ್ರ ಸಹಸ್ರ ಮುಖವಾಗಿ ಜನಜೀವನವನ್ನು ಬಳಸಿ ನಿಂತುದು. ಪುರಾಣಾದಿ ಸಾಹಿತ್ಯದಲ್ಲಿ ಪ್ರಸಿದ್ಧವಾದುದು.

ಶಿವನು ಲೋಕಕಂಟಕ ನಿವಾರಕನು; ಸುಖಪ್ರದಾಯಕನು ದುಷ್ಟಶಕ್ತಿಗಳನ್ನು ದಮನಿಸುವ ಧೀರನು. ತಪೋನಿರತನು, ಕಲಾಕಾರನು.

ದಕ್ಷ-ದಾಕ್ಷಾಯಣಿ

ದಕ್ಷ ಬ್ರಹ್ಮ ಪುತ್ರ; ಪ್ರಜಾಪತಿ, ನವಬ್ರಹ್ಮರಲ್ಲಿ ಒಬ್ಬ, ಬ್ರಹ್ಮನ ಪ್ರಾಣದಿಂದ ಪ್ರಾದುರ್ಭೂತ. ಅದರಿಂದಾಗಿ ಬ್ರಹ್ಮನಿಗೆ ಪ್ರಾಣ ಪಾತ್ರ. ಇವನು ಸ್ವಾಯಂಭುವ ಮನ್ವಂತರದಲ್ಲಿ ಬ್ರಹ್ಮನ ಬಲಗೈ ಹೆಬ್ಬೆಟ್ಟಿನಿಂದ ಹುಟ್ಟಿದನೆಂದು ಆದಿತ್ಯ ಪುರಾಣ ಪ್ರತಿಪಾದನೆ. ಮನಸಿನಿಂದ ಹುಟ್ಟಿದನೆಂದೂ ಹೇಳುವುದುಂಟು. ಪ್ರಾಣ, ಮನ, ಕಾಯ (ಹೆಬ್ಬೆಟ್ಟು) ಯಾವುದೇ ಇರಲಿ, ಬ್ರಹ್ಮನಿಗೆ ಜನಿಸಿದವನೆಂಬುದು ದಿಟ. ಈತನಿಗೆ ಈ ಲೋಕದ ಮನುವಿನ ಮಗಳಾದ 'ಪ್ರಸೂತಿ'ಯನ್ನು ಕೊಟ್ಟು ಮದುವೆಯಾಗುವುದು. ಪ್ರಸೂತಿ ಮನುವಿನ ಮೂರನೆಯ ಮಗಳು, ಚಿಕ್ಕಮಗಳು. ಪುರಾಣ ಮತದಂತೆ ಪ್ರಸೂತಿ-ದಕ್ಷಪ್ರಜಾಪತಿ ದಂಪತಿಗಳಿಂದ ಮಿಥುನ ಸಂತತಿ ಮೊದಲಾಗುತ್ತದೆ. ದಕ್ಷನೊಬ್ಬ ಹೆಣ್ಣುಮಕ್ಕಳನ್ನೆ ಹಡೆಯಲು ಮೀಸಲಾದ ವ್ಯಕ್ತಿ. ಅವನಿಗೆ ಅಷ್ಟಿಷ್ಟಲ್ಲ ಅರವತ್ತು ಮಂದಿ ಹೆಣ್ಣುಮಕ್ಕಳು. ಆತನ ಮೊಮ್ಮಕ್ಕಳಿಗೆ ಲೆಕ್ಕವಿಲ್ಲ. ದಕ್ಷ ಕನ್ನೆಯರೇ ಎಲ್ಲೆಲ್ಲಿಯೂ ತುಂಬಿದ್ದರು. ಹೆಣ್ಣುಗಳನ್ನು ಹೆತ್ತು ಎಲ್ಲ ಪ್ರಮುಖ ದೇವತೆಗಳಿಗಿತ್ತು ಮದುವೆ ಮಾಡಿಕೊಟ್ಟು ಎಲ್ಲರಿಗೂ ಮಾವನಾದೆನೆಂಬ ಹೆಮ್ಮೆ ಆತನಿಗೆ ಅಪಾರವಾಗಿತ್ತು.

ಸಾಲದ್ದಕ್ಕೆ ಮತ್ತೊಂದು ಹೆಣ್ಣುಮಗುವಿಗಾಗಿ ತಪಸ್ಸು ಮಾಡುವನು. ರುದ್ರದೇವನು ಆತನ ತಪಸ್ಸಿಗೊಲಿದು ಆತನ ಇಷ್ಟದಂತೆ ತನ್ನ ತ್ರಿಶೂಲಗತ ಶಕ್ತಿಯ ಒಂದಂಶವನ್ನೆ ದಕ್ಷಬ್ರಹ್ಮನಿಗೆ ಅನುಗ್ರಹಿಸುವನು. ಅವಳೇ ಸತಿಯು ಲೋಕಕಾರ್ಯಾರ್ಥವಾಗಿ ಅರವತ್ತೊಂದನೆಯವಳಾಗಿ ದಕ್ಷ-ಪ್ರಸೂತಿಯರ ಉದರದಲ್ಲಿ ಉದಯಿಸುವಳು. ಅವಳೇ ದಾಕ್ಷಾಯಣಿಯು. 'ಸತೀ' ಎಂಬುದು ಅವಳ ಹುಟ್ಟು ಹೆಸರು. "ದಾಕ್ಷಾಯಣಿ" ಎಂಬುದು ಯೌಗಿಕ ಹೆಸರು. ದಕ್ಷನ ಮಗಳೆಂಬುದನ್ನು ಸೂಚಿಸುವ ಹೆಸರು. ಸತೀ ದೇವಿಯು ಸತ್ವಮಯಳು. "ಸತೀ ಪ್ರಕೃತಿರೀಶ್ವರೀ" ಎಂಬಂತೆ ಸಾಕ್ಷಾತ್ ಪ್ರಕೃತಿ ಸ್ವರೂಪಳು ಸರ್ವೇಶ್ವರಿಯು.

"ಏವಂ ಶಿವಾ ಸತೀಭೂತ್ವಾ ಶಂಕರೇಣ ವಿವಾಹಿತಾ ।

ಪಿತುರ್ಯಜ್ಞೇ ತನುಂತ್ಯಕ್ತ್ವಾನಾದತ್ತಾಂ ಸ್ವಪದಂಯಂತಿತಾ ॥" –ಶಿವಪುರಾಣ

ಶಾಂಭವೀ ಲೀಲೆಗಾಗಿ ಸತೀದೇವಿ ಹುಟ್ಟಿ ಬಂದಳು. ಶಂಕರನ ಕೈ ಹಿಡಿದಲು. ಕಂಕಣ ಕಟ್ಟಿದಳು. ಮೊದಲಿಗೆ ಶಿವನಿಗೆ ಸತಿಯಾದಳು. ಶಿವೆಯೆನಿಸಿದಳು. ಆದರೇನು ತನ್ನ ತಂದೆಯ ಯಜ್ಞದಲ್ಲಿಯೇ ತನುವನ್ನು ತ್ಯಜಿಸಬೇಕಾಯಿತು.

ಪತಿಯೇ ಸತಿಗೆ ಸರ್ವಸ್ವವೆಂಬುದನ್ನು ಸತೀದೇವಿ ಸೃಷ್ಟಿಗೆ ಸಾರಿದಳು. ವೀರಭದ್ರನ ವೀರಚಾರಿತ್ರಕ್ಕೆ ಕಾರಣಳಾದಳು.

ದಕ್ಷನು ಪ್ರಜಾಪತಿಯೆಂಬುದು ಗಮನಾರ್ಹವಾದುದು. ತನ್ನ ಕೊನೆಯ ಮಗಳಾದ ಸತೀದೇವಿಯನ್ನು ಶಿವನಿಗೆ ಕೊಟ್ಟು ಮದುವೆ ಮಾಡಿ ಶಿವನನ್ನೂ ತನ್ನ ಅಳಿಯನನ್ನಾಗಿಸಿಕೊಳ್ಳುವನು. ಪ್ರಜರ ಒಡೆಯನೆಂಬ ದರ್ಪ ದಕ್ಷನಲ್ಲಿ ಸಾಕಷ್ಟಿದ್ದಿತು.

ವರಗಳೆಲ್ಲ ದಕ್ಷನಿಗೆ ಮೀಸಲು. ಹೆಣ್ಣು ಹೆತ್ತ ಉಳಿದವರು ವರಗಳು ಸಿಕ್ಕದೆ ಗೋಳಿಡುತ್ತಿದ್ದರು.

ದಕ್ಷನು ಬ್ರಹ್ಮನ ಬಲಹೆಬ್ಬೆರಳಿನಿಂದ ಹುಟ್ಟಿದವನೆಂದು ಭಾರತ ಸಂಹಿತೆ ಹೇಳುತ್ತದೆ. ಮತ್ತು ಈತನು ನಷ್ಟಪುತ್ರನು. ಪುತ್ರಿಕಾಧರ್ಮದ ಪ್ರವರ್ತಕನು. ಅಂದರೆ ಮಗಳ ಮಗನನ್ನೆ (ಅಳಿಯನನ್ನೆ) ಮಗನೆಂದು ಭಾವಿಸುವುದು; ದತ್ತು ಪುತ್ರನನ್ನಾಗಿಸಿಕೊಳ್ಳುವುದು. ಶ್ರಾದ್ಧಕರ್ಮ ಮಾಡಲು ಅರ್ಹತೆಯನ್ನು ಕಲ್ಪಿಸುವುದು.

ದಕ್ಷನು ತನ್ನ ಮಕ್ಕಳಲ್ಲಿ ಹತ್ತು ಜನರನ್ನು ತನ್ನ ತಮ್ಮನಾದ ಧರ್ಮ ಮುನಿಗೆ ಕೊಟ್ಟು ಮದುವೆ ಮಾಡುವನು. ಕೀರ್ತಿ, ಲಕ್ಷ್ಮೀ, ಧೃತಿ, ಮೇಧಾ, ಪುಷ್ಟಿ, ಶ್ರದ್ಧಾ, ಕ್ರಿಯಾ, ಬುದ್ಧಿ, ಲಜ್ಜಾ, ಮತಿ ಇವರು ದಶಕನ್ಯೆಯರು. ಉಳಿದ ಇಪ್ಪತ್ತೇಳು ಜನ ಕನ್ಯೆಯರನ್ನು ಚಂದ್ರನಿಗೆ, ಹದಿಮೂರು ಜನರನ್ನು ಕಶ್ಯಪನಿಗೆ ಕೊಟ್ಟು ಮದುವೆ ಮಾಡುವನು. ಕಶ್ಯಪನು ದಕ್ಷನ ಅಣ್ಣನಾದ ಪರೀಚಿಯ ಮಗನು.

ಮಹಾಭಾರತದ ಆದಿಪರ್ವದಲ್ಲಿ ದಕ್ಷವಂಶವನ್ನು ಕುರಿತು ಹೀಗೆ ಉಲ್ಲೇಖಿತವಾಗಿದೆ. ಸತ್ಯಲೋಕದ ಬ್ರಹ್ಮದೇವನಿಗೆ ಆರು ಮಂದಿ ಮಾನಸ ಪುತ್ರರು. ಮರೀಚಿ, ಅತ್ರಿ, ಅಂಗಿರ, ಪುಲಸ್ತ್ಯ, ಪುಲಹ, ಕ್ರತು ಇವರೆ ಆರು ಜನರು. ಮರೀಚಿಯ ಮಗನೆ ಕಶ್ಯಪನು, ಕಶ್ಯಪನಿಂದ ಉಳಿದ ಪ್ರಜರ ಉತ್ಪತ್ತಿ. ಎರಡನೆಯದಾಗಿ ಆ ಬ್ರಹ್ಮನಿಗೆ ದಕ್ಷನೂ ಮಗನಾಗಿದ್ದನು. ದಕ್ಷನಿಗೆ ಹದಿಮೂರು ಜನ ಕನ್ನೆಯರಿದ್ದರು. ಅವರು ಸೌಭಾಗ್ಯಶಾಲಿಗಳಾಗಿದ್ದರು. ಅದಿತಿ, ದಿತಿ, ದನು, ಕಾಲಾ, ದನಾಯು, ಸಿಂಹಿಕಾ, ಕ್ರೋಧಾ, ಪ್ರಾಧಾ, ವಿಶ್ವಾ, ವಿನತಾ, ಕಪಿಲಾ, ಮುನಿ, ಕದ್ರೂ ಇವು ದಕ್ಷಕನ್ಯೆಯರ ಹೆಸರುಗಳು. ಇವರಿಗೆ ಅನಂತ ಪುತ್ರಪೌತ್ರರು ಹುಟ್ಟುವರು.

ಮೊದಲನೆಯವಳು ಅದಿತಿ. ಇವಳ ಹೊಟ್ಟೆಯಲ್ಲಿ ಧಾತ್ಯ, ಮಿತ್ರ, ಶಕ್ರ, ಅರ್ಯಮಾ, ಇಂದ್ರ, ವರುಣ, ಭಗ, ವಿವಸ್ವಾನ್, ಪೂಷಾ, ಸವಿತಾ, ತ್ವಷ್ಟ, ವಿಷ್ಣು ಈ ಹನ್ನೆರಡು ಜನರು ಹುಟ್ಟುವರು. ದ್ವಾದಶಾದಿತ್ಯರೆಂದು ಹೆಸರಾಗಿರುವರು. ಇವರಲ್ಲಿ ವಿಷ್ಣು ಎಲ್ಲರಿಗಿಂತ ಚಿಕ್ಕವನು. ಎರಡನೆಯವಳಾದ ದಿತಿಗೆ ಹಿರಣ್ಯಕಶಿಪು ಎಂಬ ಒಬ್ಬನೇ ಮಗನು. ಇವನು ಮಹಾದೈತ್ಯನಂತೆ! ಇದೊಂದು ವಿಚಿತ್ರ ತಾನೆ? ಅದಿತಿಯಲ್ಲಿ ಹುಟ್ಟಿದವರು ದೇವತೆಗಳು; ದಿತಿಯಲ್ಲಿ ಹುಟ್ಟಿದವನು ದೈತ್ಯನು. ಇದು ವಿಚಾರಾರ್ಹ ವಿಷಯವಲ್ಲವೆ? ಹಿರಣ್ಯಕಶಿಪುವಿನ ಹೊಟ್ಟೆಯಲ್ಲಿ ಹುಟ್ಟಿದವರು ಪ್ರಹ್ಲಾದ, ಸಂಹ್ರಾಧ, ಅನುಹ್ರಾದ, ಶಿಬಿ, ವಾಷ್ಕಲರು. ಪ್ರಹ್ಲಾದನಿಗೆ ವಿರೋಚನ, ಕುಂಭ–ನಿಕುಂಭರು ಜನಿಸುವರು. ವಿರೋಚನನಿಗೆ ಬಲಿಚಕ್ರವರ್ತಿಯು, ಬಲಿಗೆ ಬಾಣನು ಹುಟ್ಟುವರು. ಹೀಗೆ ದಕ್ಷನ ವಂಶಪರಂಪರೆಯು ಬೆಳೆದು ಬರುವುದು.

ಗೌತಮೀನದಿಯ ಉತ್ತರದಲ್ಲಿರುವ ತುಲ್ಯಭಾಗಾನದಿಯ ದಕ್ಷಿಣದಲ್ಲಿ ದಕ್ಷನು ವಾಸವಾಗಿದ್ದನು; ಉಪಬ್ರಹ್ಮನಾಗಿದ್ದನೆಂದು ಶಿವಪುರಾಣವು ಹೇಳುತ್ತದೆ. ಇದರಿಂದಲೂ ಇವರೆಲ್ಲ ಈ ಲೋಕದವರೆಂಬುದು ಸ್ಪಷ್ಟವಾಗುತ್ತದೆ.

ಸನ್ಮಾನ-ಅವಮಾನ

ಸಪ್ತ ಸಮುದ್ರಾವೃತವಾದ ಭೂಭಾಗದಲ್ಲಿರುವ ದಕ್ಷ ಬ್ರಹ್ಮನು ಎಲ್ಲೆಲ್ಲಿಯೂ ಹೆಸರನ್ನು ಗಳಿಸಿದ್ದನು. ಪ್ರಜಾಧಿಪತಿಯಾಗಿದ್ದುದಲ್ಲದೆ ರಾಜಾಧಿರಾಜರನ್ನು ಜಯಿಸುವ ಬಲವುಳ್ಳವನಾಗಿದ್ದನು. ಬಹುಜನರ ಬೆಂಬಲವುಳ್ಳವನಾಗಿದ್ದನು. ಮೂರು ಲೋಕಗಳಲ್ಲಿ ಮನ್ನಣೆಯುಳ್ಳವನಾಗಿದ್ದನು. ದಕ್ಷ ಪಿತಾಮಹನೆಂದು ಪ್ರಸಿದ್ಧನಾಗಿದ್ದನು. ಹೀಗಿರಲು ಒಮ್ಮೆ ತನ್ನ ಎಲ್ಲ ಅಳಿಯಂದಿರ ಮನೆಗಳಿಗೆ ಹೋಗಿ ಅವರುಗಳಿಂದ ಸನ್ಮಾನ ಪಡೆಯಬೇಕೆಂದು ಯೋಚಿಸುವನು. ಯೋಚಿಸಿದಂತೆ ಕಾರ್ಯ ಪ್ರವೃತ್ತನಾಗುವನು. ತಕ್ಕ ಸನ್ಮಾಹದೊಡನೆ ಪ್ರಯಾಣವಾಗುವನು.

ಆ ಸಮಯಕ್ಕೆ ಯಾನ ವಿಜ್ಞಾನ ವಿಜೃಂಭಿಸಿದ್ದಿತು. ಅನೇಕ ಬಗೆಯ ಯಾನ ಸಾಧನಗಳಾದ ವಾಹನಗಳನ್ನು ರಚಿಸಿದ್ದರು. ಪ್ರಯಾಣ ಸೌಕರ್ಯ ಸಾಕಷ್ಟಿದ್ದಿತು. ಎಲ್ಲಿಗೆಂದರೆ ಅಲ್ಲಿಗೆ ಲೀಲಾಜಾಲವಾಗಿ ಪಯಣ ಬೆಳೆಸುತ್ತಿದ್ದರು.

ಅಂತೆಯೇ ದಕ್ಷ ಪಿತಾಮಹನು ಅತ್ಯಂತ ವೇಗವುಳ್ಳ ತನ್ನ ರಥದಲ್ಲಿ ಕುಳಿತು ಪಯಣವಾದನು. ಮೊದಲು ಬ್ರಹ್ಮನಲ್ಲಿಗೆ ಹೋಗುವನು. ಬಳಿಕ ವಿಷ್ಣುವಿನ ಬಳಿಗೆ ಹೋಗುವನು. ಸಾಕಷ್ಟು ಮನ್ನಣೆಯನ್ನು ಪಡೆದು ಮುಂದೆ ಸೂರ್ಯ-ಚಂದ್ರ ಇಂದ್ರಲೋಕಗಳಿಗೆ ಹೋಗಿ ಗೌರವವನ್ನು ಉಡುಗೊರೆಗಳನ್ನು ಅವರಿಂದ ಪಡೆಯುವನು ಕೊನೆಯದಾಗಿ ಕೈಲಾಸಕ್ಕೆ ಹೋಗಿ ಶಿವನಿಂದ ಸನ್ಮಾನ ಪಡೆಯಬೇಕೆಂದು ಯೋಚಿಸುವನು.

ಯೋಚಿಸಿದಂತೆ ಕೈಲಾಸಕ್ಕೆ ತೆರಳುವನು. ಹೋಗುತ್ತ ಮನಸ್ಸಿನಲ್ಲಿ ನಾನಾ ಬಗೆಯ ಸಂಕಲ್ಪಗಳನ್ನು ಮಾಡಿಕೊಳ್ಳುವನು. ಆತನು ಶಿವನಾದರೇನು? ನನ್ನ ಅಳಿಯನಲ್ಲವೆ? ಆತನಿಗಿಂತ ನಾನು ವೃದ್ಧನು ಹೆಚ್ಚಿನವನು. ಆತನು ನನ್ನನ್ನು ಉಚ್ಚಸ್ಥಾನದಲ್ಲಿ ಕುಳ್ಳಿರಿಸಿ ಉಪಚರಿಸಬೇಕು. ಆತನು ಎಲ್ಲರಿಗಿಂತಲೂ ಹೆಚ್ಚಾಗಿ ಸನ್ಮಾನಿಸಬೇಕು ಎಂದು ಮುಂತಾಗಿ ಮನದಲ್ಲಿ ಮಂಡಿಗೆಗಳನ್ನು ತಿನ್ನುತ್ತ ತೆರಳುವನು.

ಮಹಾ ಮೇರುವಿನ ಉತ್ತರ ಭಾಗ, ಎತ್ತರ ಪ್ರದೇಶ, ರಜತಗಿರಿ. ಗಿರಿಗಳಿಗೆಲ್ಲ ಸಿರಿ ಅದೊಂದು ನೂರಾರು ಚಂದ್ರಬಿಂಬಿಗಳ ರಾಶಿಯಂತಿದ್ದಿತು. ಬೆಳುದಿಂಗಳಿಗಿಂತ ಬೆಳುಪಾಗಿದ್ದಿತು. ಮಂಗಳಮಯವಾಗಿದ್ದಿತು. ಪುಣ್ಯದ ಪಂಜರದಂತಿದ್ದಿತು. ಭಾಗ್ಯವೇ ಬೆಟ್ಟವಾದಂತಿದ್ದಿತು. ವಿಶ್ವವೈಭವವೆಲ್ಲ ಬಬ್ಬುಳಿಗೊಂಡಂತಿದ್ದಿತು. ಅಂತಹ ಬೆಡಗಿನ ಬೆಟ್ಟವನ್ನು ದಕ್ಷ ಬ್ರಹ್ಮನು ಏರಿ ಹೋದನು.

ಆ ಕೈಲಾಸದಲ್ಲಿ ಕಲಾ ಪೂರ್ಣವಾದ ಶಿವನ ಅರಮನೆ ಕಾಣಿಸುವುದು. ಅದರ ಅಂದವನ್ನು ಬಣ್ಣಿಸಲು ಸಾಧ್ಯವಿಲ್ಲ. ಅದೊಂದು ಮುಕ್ತಿ ಮಂದಿರ. ಶಾಂತಿಯ ಸದನ. ನಿಜ ಸುಖ ನಿವಾಸ. ಶ್ರೀಕಂಠ ನಿಲಯ, ನಿತ್ಯದನೆಲೆ. ಭದ್ರತೆಯ ಬೀಡು. ಭೂತಿ ವಿಭೂತಿಗಳ ಭವನ. ಮಾದರಿಯ ಮಾಮನೆ.

ಆ ಅರಮನೆಯೊಳಗೊಂದು ಒಡ್ಡೋಲಗ. ರತ್ನರಚಿತಭಿತ್ತಿ. ಚಿನ್ನದನೆಲೆಗಟ್ಟು, ಓಲಗದವರ ನೆಲೆವೀಡು. ಸೂರ್ಯಕಾಂತ-ಚಂದ್ರಕಾಂತ ಶಿಲೆಗಳ ವೇದಿಕೆ. ಅದರ ಮೇಲೆ ನವರತ್ನ ಖಚಿತವಾದ ಸುಂದರ ಸಿಂಹಾಸನ. ಅದರ ಮೇಲೆ ಸತೀ ಸಹಿತನಾದ ಶಿವನು ಮಂಡಿಸಿದ್ದಾನೆ. ಹಣೆಯಲ್ಲಿ ಎಳೆ ಚಂದಿರನನ್ನು ಸೂಡಿದ್ದಾನೆ. ಮುಡಿಯ ಮುಟ್ಟಿದ ಕೆಂಜೆಡೆಯುಳ್ಳವನು. ಮುಕ್ಕಣ್ಣನು ಪ್ರಮಥಾಧಿಪನು. ಮನೋಹರನು ಮಾಹೇಶ್ವರನು. ಶುಭ್ರಾಂಗನು. ಸತ್ಯಶಿವ ಸುಂದರನು ಶ್ರೀಕಂಠನು.

ಅಂತಹ ಆ ಶಿವನನ್ನು ಸುರರು ಸ್ತುತಿಸುತ್ತಿದ್ದರು. ಪ್ರಮಥರು ಪ್ರಾರ್ಥಿಸುತ್ತಿದ್ದರು. ಭಕ್ತರು ಭಾವಿಸುತ್ತಿದ್ದರು ಗಾಯಕರು ನರ್ತಕರು ಮುಂತಾದವರು ತಂತಮ್ಮ ಕಲೆಗಳನ್ನು ಪ್ರದರ್ಶಿಸುತ್ತಿದ್ದರು. ಸೇವಕರು ಸೇವಿಸುತ್ತಿದ್ದರು. ಎಡಬಲಗಳಲ್ಲಿ ಚಾಮರಗಳು ಬೀಸುತ್ತಿದ್ದವು; ದಂಡಧಾರಿಗಳಿದ್ದರು. ಪರಾಕು ಹೇಳುವವರಿದ್ದರು ಬ್ರಹ್ಮ ವಿಷ್ಣು ಮೊದಲಾದ ದೇವತೆಗಳು ಮನು ಮುನಿಗಳು ಮೊದಲಾಗಿ ಎಲ್ಲರೂ ಓಲಗದಲ್ಲಿದ್ದರು. ಶಿವಗಣರು ರುದ್ರಗಣರಿದ್ದರು.

ಅಂತಹ ದಿವ್ಯ ಸಭೆಯಲ್ಲಿ ಹಮ್ಮು ಬಿಮ್ಮುಗಳಿಂದ ಬಿಗಿದುಕೊಂಡಿದ್ದ ದಕ್ಷ ಬ್ರಹ್ಮನು ಪ್ರವೇಶಿಸುವನು. ಅಹಂಕಾರದಿಂದ ನಮಸ್ಕಾರ ಮಾಡದಿರುವನು. ಅದರಿಂದಾಗಿ ಶಿವನು ಸನ್ಮಾನಿಸದಾದನು. ವಿಚಾರಿಸದಾದನು ಅಹಂಕಾರಕ್ಕೆ ತಕ್ಕ ಪ್ರತಿಕ್ರಿಯೆಯಾದಂತಾಯಿತು.

ಇದನ್ನು ತಿಳಿದ ದಕ್ಷನು ಅಚ್ಚರಿಗೊಂಡನು, ಬೆಚ್ಚಿದನು; ಬೆರಗಾದನು. ಈ ಮರುಳ ಶಂಕರನಿಗೆ ಅದೆಷ್ಟು ಗರ್ವ ಎಂದುಕೊಂಡನು. ಆತನು ಸನ್ಮಾನಿಸದಿದ್ದರೆ

ಹೋಗಲಿ, ಮಗಳಾದರೂ ಮನ್ನಿಸಲಿಲ್ಲವಲ್ಲಾ! ಎಂದು ಮಗಳನ್ನು ನೋಡುವನು. ದಾಕ್ಷಾಯಿಣಿಯು ದಿಟ್ಟಿಸದಾದಳು. ಅರಸನ ಕಿರೀಟದಲ್ಲಿರುವ ಮುತ್ತು ತಾನು ಹುಟ್ಟಿದ ಚಿಪ್ಪನ್ನು ಆದರಿಸುವುದೆ? ಮರದಿಂದಾದ ಕಾಯಿ ಮಾಗಿದ ಬಳಿಕ ಆ ಮರದ ಹಂಗಿನಲ್ಲಿರುವುದೆ? ಕೆಸರಿನಿಂದ ಹುಟ್ಟಿದ ಕಮಲ ಕೆಸರನ್ನು ಹೊತ್ತು ಮೆರೆಯುವುದೆ? ಸತಿಧರ್ಮವನ್ನರಿತ ಸತೀದೇವಿಯು ಪತಿಯ ಇಂಗಿತವನ್ನರಿದು ಪಿತನನ್ನು ಪುರಸ್ಕರಿಸದಾದಳು. ಇದನ್ನರಿತ ಸಭಿಕರು ಯಾರೂ ಸನ್ಮಾನಿಸದಾದರು.

ತನಗಾದ ಅಪಮಾನದಿಂದ ದಕ್ಷನು ಹೃದಯದಲ್ಲಿ ಹಳಹಳಿಸಿದನು; ಕಳವಳಗೊಂಡನು. ಅಲ್ಲಿ ನಿಲ್ಲದೆ ಹೊರ ಹೊರಡುವನು ಬಗೆ ಬಗೆಯಾಗಿ ಚಿಂತಿಸುವನು ಬಹುವಾಗಿ ಕೋಪಿಸುವನು ಕೈಲಾಸಕ್ಕೆ ಕಾಲಿಟ್ಟುದೇ ತಪ್ಪಾಯಿತೆಂದು ಭಾವಿಸಿದನು. ತನ್ನನ್ನು ತಾನೆ ನಿಂದಿಸಿಕೊಳ್ಳುವನು. ಮತ್ತೊಮ್ಮೆ ಮಗಳನ್ನು ಇನ್ನೊಮ್ಮೆ ಅಳಿಯನನ್ನು ಹಳಿವನು ಕೊಂಚ ದೂರ ನಡೆದು ನಿಲ್ಲುವನು. ಅತ್ಯಂತ ಖಿನ್ನನಾಗಿ ಆಲೋಚಿಸುವನು. ನಿಟ್ಟುಸಿರು ಬಿಡುವನು. ಬಳಿಗೆ ಬಂದವರ ಮುಂದೆ ಶಿವನನ್ನು ಇಚ್ಛಾನುಸಾರವಾಗಿ ನಿಂದಿಸುವನು. ಎಲ್ಲರಿಂದಲೂ ಮಾನ್ಯತೆಯನ್ನು ಪಡೆದ ನನಗೆ ಇಂದು ಈ ಗತಿಯಾಯಿತಲ್ಲಾ! ಇಂದು ಎದ್ದ ಗಳಿಗೆ ಸರಿಯಿಲ್ಲ. ಎಂದಿಲ್ಲದ ಎಲ್ಲಿಯಿಲ್ಲದ ಅನುಮಾನ! ಇದನ್ನು ಸಹಿಸಲಾಗದು. ಇದಕ್ಕೆ ತಕ್ಕ ಉಪಾಯವನ್ನು ಯೋಚಿಸಿ ಯೋಚಿಸಲೇಬೇಕು. ಇಲ್ಲವಾದರೆ ನಾಳೆ ಉಳಿದ ಅಳಿಯಂದಿರುಗಳೂ ಸಹ ಹೀಗೆಯೇ ಮಾಡಿಯಾರು! ಎಂದು ಚಿಂತಿಸುತ್ತ ದಟ್ಟಡಿಯಿಡುತ್ತ ರಥದ ಬಳಿಗೆ ಬಂದು ರಥವೇರಿ ತನ್ನ ನಗರಕ್ಕೆ ಬರುವನು. ಬರುತ್ತ ಆತನು ತನ್ನ ಮನದಲ್ಲಿ ಹೀಗೆ ಯೋಚಿಸಿದನು:

ಏನೂ ಇಲ್ಲದ ಶಂಕರನಿಗೆ ಅದೇನು ಅಹಂಕಾರ? ಸಿರಿಸಂಪದವಿಲ್ಲ ಬಂಧು-ಬಳಗವಿಲ್ಲ ದಿಕ್ಕು ದೇಶವಿಲ್ಲ ಸೂತ್ರಗೋತ್ರವಿಲ್ಲ ಆಹಾ! ಈತನ ಸ್ವರೂಪವೇನು? ಜೀವನೋಪಾಯವೇನು? ಎಲ್ಲರಿಗೂ ತಿಳಿದಿರುವಂತೆ ನಂಜುಂಡವನು; ವಿರೂಪನು ಮುದಿಯೆತ್ತೇರಿ ಓಡಾಡುವನು. ಉಡಿಗೆಯಿಲ್ಲ, ತೊಡಿಗೆಯಿಲ್ಲ, ಸ್ಮಶಾನವಾಸಿ. ಗೃಹಸ್ಥನಲ್ಲ. ಬ್ರಹ್ಮಚಾರಿಯಲ್ಲ, ಯಾವ ವರ್ಣಾಶ್ರಮಕ್ಕೆ ಸೇರಿದವನಲ್ಲ. ಹೋಗಲಿ, ಪುರುಷನೂ ಅಲ್ಲ, ಸ್ತ್ರೀಯೂ ಅಲ್ಲ; ಅರ್ಧನಾರೀಶ್ವರ ಭೂತೇಶ್ವರ, ತಂದೆಯ ತಲೆಯೊಂದನ್ನು ಕತ್ತರಿಸಿದ ಪಾತಕಿ; ಘಾತಕಿ.

ಇಂಥವನಿಗೆ ಅದೆಷ್ಟು ಗರ್ವ? ನನ್ನನ್ನು ಕಂಡು ಏಳಲಿಲ್ಲ ಬಾ ಎಂದು ಕರೆಯಲಿಲ್ಲ. ಕುಳಿತುಕೋ ಎಂದು ಹೇಳಲಿಲ್ಲ ತಾಯಿ-ತಂದೆಯಿಲ್ಲದವನಿಗೆ ಶಿಕ್ಷಣವೆಂದರೇನು? ಸಂಸ್ಕಾರವೆಂದರೇನು? ಕುಲಮರ್ಯಾದೆ ಏನೆಂಬುದು ತಿಳಿಯದು. ಗುಣಹೀನ. ಆಚಾರ ಹೀನ. ಸ್ವೇಚ್ಛಾಚಾರಿ, ದುರಭಿಮಾನಿ, ದುಸ್ಸಹವಾದ ಗರ್ವಿ, ಅಳಿಯಂದಿರುಗಳೇ ಹೀಗೆಂದು ಕಾಣುತ್ತದೆ ಹಿಂದೆ ಚಂದ್ರನು ನನ್ನ ಮಕ್ಕಳನ್ನು ಅನಾದರ ಮಾಡಿದನು. ಆಗ ಆತನಿಗೆ ಶಾಪವಿತ್ತು ಕ್ಷಯರೋಗ ಬರುವಂತೆ ಮಾಡಿದನು. ಇವನಿಗೂ ತಕ್ಕ ಶಾಸನವಾಗಬೇಕು ಎಂದು ಮುಂತಾಗಿ ಯೋಚಿಸುವಷ್ಟರಲ್ಲಿ ನಗರ ಬರುವುದು.

ದಕ್ಷನನ್ನು ಎದುರುಗೊಂಡು ಕರೆದೊಯ್ಯಲು ಆತನ ಅರಮನೆಯ ಪರಿವಾರ ಬಂದಿತ್ತು. ಜತೆಗೆ ನಗರದ ಜನರೂ ಬಂದಿದ್ದರು. ಕಹಳೆ ಭೇರಿ ಮುಂತಾದ ವಾದ್ಯಗಳು ಬಂದಿದ್ದವು. ಏನಿದ್ದರೂ ಯಾವುದನ್ನು ಆತನು ಗಮನಿಸದಾದನು. ಆತನ ಆ ಅಪಾರವಾದ ಅಪಮಾನದಿಂದ ಅತ್ಯಂತ ವ್ಯಥಿತನಾಗಿದ್ದನು. ಹಾಗೂ ಹೀಗೂ ಮನೆಗೆ ಬರುವನು ಅವಸರದಿಂದ ಒಳಕ್ಕೆ ಹೋಗುವನು ತನ್ನ ಹೆಂಡತಿಯ ಮುಂದೆ ನಡೆದುದನ್ನೆಲ್ಲ ಹೇಳತೊಡಗಿದನು.

ಪ್ರಿಯಳೆ! ನಿನ್ನ ಚಿಕ್ಕ ಅಳಿಯನಾದ ಶಿವನಲ್ಲಿಗೆ ನಾನೇಕೆ ಹೋದೆನೋ? ಅಲ್ಲಿ ನಡೆದ ಅವಮಾನ ಹೇಳಲಾಸಲ್ಲ; ಸಹಿಸಲಾಸಲ್ಲ, ಆತನಿಗೆ ಅದೆಷ್ಟು ಅಹಂಕಾರ? ಅದೇನು ದುರಭಿಮಾನ? ತನ್ನ ಮಾವನನ್ನೇ ತಾನು ತಿರಸ್ಕರಿಸಬೇಕೆ? ದುರ್ಲಕ್ಷಿಸಬೇಕೆ? ಅದು ಲೌಕಿಕ ನೀತಿಯೆ? ರೀತಿಯೆ? ನಿನ್ನ ಮಗಳ ಗರ್ವವಾದರೋ ಗಣಿಸದಷ್ಟು! ತಂದೆಯೆಂಬ ಅಭಿಮಾನ ಅವಳಲ್ಲಿ ಅದೆಷ್ಟೂ ಇಲ್ಲ. ಆ ಶಿವನ ಕೈ ವಿಡಿದನೆಂದು ಸೊಕ್ಕಿಗೇರಿದ್ದಾಳೆ. ಇದೇನು ಕಾಲ ಮಹಿಮೆಯೋ ಮೋಹ ಮಹಿಮೆಯೋ? ತುಂಬಿದ ಸಭೆಯಲ್ಲಿ ಸರ್ವರ ಎದುರಿನಲ್ಲಿ ನನ್ನನ್ನು ಅವಮಾನಿಸಬೇಕೆ? ನಾನು ಮಾಡಿದ ತಪ್ಪೇನು ನನ್ನನ್ನು ಸನ್ಮಾನಿಸದಿರಲು ಕಾರಣವೇನು? ಇದಕ್ಕೆ ಪ್ರತಿಯಾಗಿ ಮಾಡುವುದೇನು? ಯೋಚಿಸಿ ಹೇಳಬಲ್ಲೆಯಾ?

ಸತಿ ಪ್ರಸೂತಿಯು ಪತಿಯನ್ನು ಕುರಿತು ಪ್ರಭುವೆ, ಪ್ರತ್ಯಕ್ಷವಾದರೂ ಪ್ರಮಾಣಿಸಿ ನೋಡಬೇಕೆಂದು ನಾಣ್ಣುಡಿಯಿಲ್ಲವೆ? ಈಗಲೇ ದುಡುಕುವುದು ಬೇಡ. ಪ್ರತಿಭಟಿಸುವುದು ಬೇಡ. ಕಾರಣವನ್ನು ತಿಳಿದ ಬಳಿಕ ಮುಂದಿನ ಮಾತು; ಎಂದು ಹೇಳುವಳು.

ಕ್ರೋಧಾವೇಶದಲ್ಲಿರುವ ಸಮೆದಮೆಗಳ ದಾರಿಯನ್ನು ತಪ್ಪಿರುವ ದಕ್ಷನಿಗೆ ಸತಿಯ ಸಮಾಧಾನ ವಚನ ಮನಸ್ಸಿಗೆ ಹಿಡಿಯದಾಯಿತು. ಕೈಲಾಸದಲ್ಲಿ ಶಿವಸಭೆಯಲ್ಲಿ ನಡೆದ ಚಿತ್ರವು ಆತನ ಕಣ್ಣುಮುಂದೆ ಕಟ್ಟಿದಂತಾಗುತ್ತದೆ. ಕೋಪ ಇಮ್ಮಡಿಸುತ್ತದೆ. ಕಣ್ಣು ಕೆಂಪೇರುತ್ತವೆ ಸಿಡಿಮಿಡಿಗೊಂಡು ಮರಳಿ ಮಾತಾಡುತ್ತಾನೆ.

ಪ್ರಸೂತಿಯೆ, ನೀನೂ ಮಗಳ ಪಕ್ಷ ವಹಿಸಿ ಮಾತಾಡುತ್ತಿರುವೆ. ನಿನ್ನ ಮಾತು ಮನಸ್ಸಿಗೆ ಹಿಡಿಯದು. ಇಂದಿನಿಂದ ಆ ಶಿವನಿಗೂ ನನಗೂ ಯಾವ ಸಂಬಂಧವಿಲ್ಲ. ನಮ್ಮಿಬ್ಬರಲ್ಲಿ ನೆಲ ಮುಗಿಲುಗಳ ಅಂತರ! ಶಿವನೆ ನನಗೆ ದೀರ್ಘ ದ್ವೇಷಿ; ಘೋರ ಶತ್ರು. ಆತನ ಸಂಬಂಧವಿನ್ನು ನನಗಾಗದು. ಅವನನ್ನು ಅವಮಾನಗೊಳಿಸದೆ ನನಗೆ ಸಮಾಧಾನವಿಲ್ಲ. ಇದೀಗ ಅದುವೇ ನನ್ನ ಉದ್ದೇಶ. ಯಾಗವೊಂದನ್ನು ಆರಂಭಿಸುವೆನು. ಅದರಲ್ಲಿ ಮುಕುಂದನನ್ನು ಅಭಿನಂದಿಸುವೆನು; ಅಭಿವಂದಿಸುವೆನು. ಹರನನ್ನು ಅಗೌರವಿಸುವೆನು. ಇದೇ ನನ್ನ ನಿಶ್ಚಯ.

ಹೀಗೆಂದು ಹೆಂಡತಿಗೆ ಹೇಳಿ ಹೊರಕ್ಕೆ ಬರುವನು. ತನ್ನ ಮಂತ್ರಿಯನ್ನು ಕರೆಯಿಸುವನು. ತನ್ನ ಮನದ ನಿಶ್ಚಯವನ್ನು ಮುಂದಿಡುವನು. ಆತುರದಿಂದ ಕಾತುರದಿಂದ ಆಜ್ಞಾಪಿಸುವನು; ಮಾಡಲಿರುವ ಮಹಾಯಾಗದಿಂದ ಮಹಾ ಶಕ್ತಿಯೊಂದನ್ನು ಸಂಪಾದಿಸಿ ಶಿವನ ಸರ್ವೋತ್ತಮತ್ವವನ್ನು ಸುಡುವೆನು. ದೇವತ್ವವನ್ನು ಧ್ವಂಸ ಮಾಡುವೆನು. ಕಾರಣ, ಆ ಮಹಾಯಾಗಕ್ಕೆ ಬೇಕಾದ ಪಡಿ ಪದಾರ್ಥಗಳನ್ನು ಒದಗಿಸು, ವಿಳಂಬಿಸದಿರು.

ಎಂದು ಹೇಳಿದುದನ್ನು ಕೇಳಿ ಮತಿವಂತನಾದ ಮಂತ್ರಿಯು ಮನದಲ್ಲಿ ಮಮ್ಮಲನೆ ಮರುಗಿ ಮುಂದಿನಂತೆ ಬಿನ್ನವಿಸಿಕೊಳ್ಳುವನು: ಶಿವಾನುಗ್ರಹವಿಲ್ಲದೆ ಶತಯಾಗ ಮಾಡಿ ಸುಖವಿಲ್ಲ. ರುಂಡವಿಲ್ಲದ ಮುಂಡವಿದ್ದಂತೆ; ತಂತಿಯಿಲ್ಲದ ತಂಬೂರಿಯಿದ್ದಂತೆ, ಉಸಿರಿಲ್ಲದ ಮೈಯಿದ್ದಂತೆ ಸಿಹಿಯಿಲ್ಲದ ಸಕ್ಕರೆಯಂತೆ ಸುಖವಿಲ್ಲ. ಭೂಮಿಯಿಲ್ಲದೆ ಬೆಳೆ ತೆಗೆಯಲು ಯತ್ನಿಸಿದಂತಾಗುತ್ತದೆ. ಪಿತಾಮಹನೆ, ನಿನ್ನದು ವ್ಯರ್ಥ ಸಾಹಸ; ಅನಿಷ್ಟ ಫಲಪ್ರದ. ದಯೆಯಿಟ್ಟು ಈ ಪ್ರಯತ್ನವನ್ನು ಮಾಡಲು ಮುಂದುವರಿಯದಿರು.

ಎಲೋ ಮಂತ್ರಿಯೆ, ಹೀಗೇಕೆ ಆಡುತ್ತಿರುವೆ? ಯಾಗಕ್ಕೆ ಸ್ವಯಂ ಶಕ್ತಿಯಿಲ್ಲವೇನು? ಹಿಂದೆ ಅನೇಕರು ಮಾಡಿ ಅಗಾಧ ಶಕ್ತಿಯನ್ನು ಸಂಪಾದಿಸಿಕೊಳ್ಳಲಿಲ್ಲವೆ? ಯಜ್ಞದಿಂದ ಸಾಧ್ಯವಾಗದ್ದು ಯಾವುದೂ ಇಲ್ಲ. ಯಜ್ಞವೇ ಅಪ್ರತಿಮ ಆರಾಧನೆ. ಅದರಲ್ಲಿ ಅಗಾಧ ಶಕ್ತಿಯಿದೆ. ಅದರಲ್ಲಿ ನನಗೆ ನಿಶ್ಚಲವಾದ ನಿಸ್ಸಂಶಯವಾದ ನಂಬುಗೆಯಿದೆ. ನೀನು ಇದರಲ್ಲಿ ನಿಜವಾಗಿಯೂ ಅಡ್ಡ ಬರಬೇಡ; ಎಂದೆನ್ನಲು ಆತನ ಆಜ್ಞೆಯಲ್ಲಿರುವ ಮಂತ್ರಿಯು ಮನಸ್ಸಿಲ್ಲದೆ ಮೌನವಾಗುವನು. ದಕ್ಷನ ಅಪ್ಪಣೆಯಂತೆ ಪಡಿ ಪದಾರ್ಥಗಳನ್ನು ಸಂಗ್ರಹಿಸಲು ಯಜ್ಞ ಕುಂಡವನ್ನು ಮಾಡಿಸಲು ತೊಡಗುವನು.

ಕಾಶಿ ಕ್ಷೇತ್ರದ ಬಳಿ ಭಾಗೀರಥಿ. ಅದರ ತೀರದಲ್ಲಿ ಕನಖಲವೆಂಬ ಮತ್ತೊಂದು ಕ್ಷೇತ್ರ. ಅಲ್ಲಿ ಒಂದು ಯಜ್ಞಕುಂಡವನ್ನು ಮಾಡಿಸುವನು. ಅದರ ವಿಶಾಲ ಒಂದು ಸಾವಿರ ಗಾವುದ. ಅದರ ಉದ್ದ ಇನ್ನೂರು ಗಾವುದ. ಅದನ್ನು ಕಟ್ಟಿದವನು ವಿಶ್ವಕರ್ಮ. ಅದರ ಬಳಿ ರತ್ನಖಚಿತವಾದ ರಮ್ಯಗೃಹ. ಅಲ್ಲಿ ಅಡಿಗೆ ಮಾಡುವವರು ಮೂವತ್ತು ಸಾವಿರ ಜನ. ನೀಡುವವರು ಮೂವತ್ತು ಸಾವಿರ. ಊಟದ ಎಲೆ ಹೊಲಿಯುವವರು ಮೂವತ್ತು ಸಾವಿರ. ಹೋಮಾಗ್ನಿಗೆ ಬೇಕಾಗುವ ಅತ್ತಿ, ಆಲ, ಅರಳಿ, ಬೇವು, ಮುತ್ತುಗ, ಉತ್ತರಣಿ, ಎಕ್ಕೆ ಮೊದಲಾದ ಕಟ್ಟಿಗೆಗಳು, ಹಾಲು-ತುಪ್ಪ ಹಿಟ್ಟು ಮೊದಲಾದ ಹದಿನೆಂಟು ಬಗೆಯ ಹವಿಸ್ಸುಗಳು, ಹೋತಗಳು, ಎಲ್ಲವೂ ತಯಾರಾದವು. ತಯಾರಾದುದನ್ನು ಮಂತ್ರಿಯು ಬಂದು ದಕ್ಷನಿಗೆ ತಿಳಿಸುವನು.

ದಕ್ಷನು ಆ ಕೂಡಲೇ ಮಹೇಂದ್ರನೇ ಮುಂತಾದ ಎಲ್ಲ ದೇವತೆಗಳನ್ನು ಬರಮಾಡಿಕೊಳ್ಳುವನು. ಅವರ ಮುಂದೆ ತನಗಾದ ಅವಮಾನವನ್ನು ತಾನು ಮಾಡಲಿರುವ ಪ್ರತಿಕ್ರಿಯೆಯನ್ನು ಅವರಿಗೆಲ್ಲ ಹೇಳುವನು. ಅವರೆಲ್ಲರ ನೆರವನ್ನು ಕೋರುವನು. ವಿಷ್ಣುವನ್ನೇ ಯಜ್ಞಾಧ್ಯಕ್ಷನನ್ನಾಗಿ ತೀರ್ಮಾನಿಸಿ ಒಪ್ಪಿಸುವನು. ದಕ್ಷನ ಅಳಿಯಂದಿರಾದ ಧರ್ಮ ಚಂದ್ರ ಸೂರ್ಯ ಕಶ್ಯಪರು ಬಂದು ಭಾಗವಹಿಸಲು ಅನುವಾದರು. ಅಷ್ಟವಸುಗಳು ಕಾಮಧೇನು ಕಲ್ಪವೃಕ್ಷಗಳು ಎಲ್ಲವನ್ನು ಒದಗಿಸಲು ಒಪ್ಪುವರು.

ದಕ್ಷಯಜ್ಞ–ದಕ್ಷಕನ್ಯೆ

ಚಾಕ್ಷುಷ ಮನ್ವಂತರದಲ್ಲಿ ದಕ್ಷನಿದ್ದನು. ಶಿವದ್ವೇಷಕ್ಕಾಗಿ ಅಶ್ವಮೇಧವನ್ನು ಮಾಡಿದನು. ಮೇಧಪತಿಯಾದ ಶಿವನನ್ನು ಆಹ್ವಾನಿಸದೆ ಹೋದನು. ಆತನ ತಂದೆಯಾದ ಚತುರ್ಮುಖ ಬ್ರಹ್ಮನೆ ಬ್ರಹ್ಮನಾಗಿದ್ದನು. ವಿಷ್ಣು ಆಚಾರ್ಯನಾಗಿ ಬಂದಿದ್ದನು. ಅತ್ರಿ, ಭೃಗುಮುನಿಗಳಿಬ್ಬರು ಅಧ್ವರ್ಯುಗಳಾಗಿದ್ದರು. ಕಪಿಲ, ಮುದ್ಗಲರು ಹೋತೃಗಳಾಗಿದ್ದರು. ತಂಡು–ತಾಂಡಕರು ಉದ್ಗಾತೃಗಳಾಗಿ, ಶತರ್ಚನ, ಶ್ಯಾವಾಕ, ಅಗ್ನೀಧ್ರ, ಜಾಮದಗ್ನಿ ಋತ್ವಿಕ್ಕುಗಳಾಗಿ, ಪೋತಾ ಸುಮಂತು, ಜಾತೂಕರ್ಣ, ಅಂಗಿರ–ಮುನಿಗಳು ನೇಷ್ಟ್ರಗಳಾಗಿ, ಜೈಮಿನಿ, ತುಂಬುರ ಇವರು ಪ್ರಸ್ತೋತೃಗಳಾಗಿ ಪ್ರತಿಹರ್ತೃಗಳಾಗಿ ಬಂದಿದ್ದರು. ಮತ್ತು ವಸುಮಾನ್, ಸಾಮಗ, ಪ್ರತಿಪ್ರಸ್ಥಾ, ಸಂವರ್ತ, ಉನ್ನೇತಾ, ಗಾರ್ಗ್ಯ, ಧ್ರುವಗೋಪ, ಅನಮಿತ್ರಜ, ಸಂಸ್ರಾವ್ಯ, ಅಭಿಗರ, ಮೈತ್ರ, ವರುಣ, ಗ್ರಾವ, ಮಧು, ಕಟ –ಇವರೇ ಮೊದಲಾದ ಋಷಿಗಳು ಆಯಾಗದ ಸದಸ್ಯರಾಗಿದ್ದರು. ಋತ್ವಿಜರೂ ಆಗಿದ್ದರು. ಇಂದ್ರ ಮಿತ್ರ ವರುಣ ಸೋಮ ಸೂರ್ಯ ಅನಲ ಅನಿಲ ವಸುಗಳು ಮರುತ್ತುಗಳು ಪಿತೃಗಳು ಮರುತರು ಋಭುಗಳು ಅಶ್ವಿನೀ ದೇವತೆಗಳು ಯಜ್ಞಕ್ಕೆ ಆಹ್ವಾನಿತರಾಗಿ ಬಂದಿದ್ದರು. ಅಲ್ಲದೆ ಕಿಂಪುರುಷರು ಅಪ್ಸರರು ವಿದ್ಯಾಧರರು ಚಾರಣರು ಕಿನ್ನರರು ಬಂದಿದ್ದರು. ಯಜ್ಞಕ್ಕಾಗಿ ಎಲ್ಲರಂತೆ ರುದ್ರಗಣರೂ ಸಹ ವಿಮಾನಾ ರೂಢರಾಗಿ ಆಗಮಿಸಿದ್ದರು. ಹೆಚ್ಚೇನು ನೆಲ ಮುಗಿಲುಗಳಲ್ಲಿರುವವರೆಲ್ಲರೂ ಅಲ್ಲಿಗೆ ನಡೆತಂದಿದ್ದರು. ಸಾಲದೆ ಯಜ್ಞ ಭೂಮಿಗೆ ಸಿಂಹಗಳು ಹುಲಿಗಳು ಹಾವುಗಳು ಗರುಡರು ಪನ್ನಗಗಳು ಪರ್ವತಗಳು ಕಡಲಗಳು ತೊರೆಗಳು ಛಂದಸ್ಸುಗಳು ಸಹ ಬಂದು ಭಾಗವಹಿಸಿದ್ದವು. ಪ್ರಜಾಪತಿಯಾದ ದಕ್ಷ ಬ್ರಹ್ಮನು ತನ್ನ ದರ್ಪದಿಂದ ಎಲ್ಲರನ್ನೂ ಕರೆಯಿಸಿ ಎಲ್ಲ ಪಡಿಪದಾರ್ಥಗಳನ್ನು ನೆರೆಯಿಸಿ ಎಲ್ಲ ಬಗೆಯ ಅನುಕೂಲಗಳನ್ನು ಕಲ್ಪಿಸಿಕೊಂಡಿದ್ದನು. ಮತ್ತು ಸಾಕ್ಷಾತ್ ದಕ್ಷನೇ ಯಜ್ಞದಲ್ಲಿ ದೀಕ್ಷಿತನಾಗಿ ಯಜ್ಞವನ್ನು ಅಟ್ಟಹಾಸದಿಂದ ನೆರವೇರಿಸುತ್ತಿದ್ದನು.

ಶಿವನನ್ನು ತನ್ನ ಮಗಳಾದ ಸತೀದೇವಿಯನ್ನು ಮುನಿಸಿನಿಂದ ಕರೆಯಿಸಿರಲಿಲ್ಲ; ಅವಮಾನಿಸಬೇಕೆಂದು ಆಹ್ವಾನಿಸಿರಲಿಲ್ಲ. ಶಿವಸತಿಯಾದ ದಾಕ್ಷಾಯಿಣಿಯು ತಂದೆಯ ಯಾಗವನ್ನು ನೋಡಬಯಸುವಳು. ಹೊರಡಲು ಉತ್ಸಾಹಿತಳಾಗುವಳು. ನೆಲ ಮುಗಿಲುಗಳಲ್ಲಿ ಎಲ್ಲಿ ನೋಡಿದರೂ ಯಜ್ಞಕ್ಕೆ ಹೋಗುವರೇ ಕಾಣುತ್ತಿದ್ದರು. ಅವರನ್ನು ಕಂಡು ದಾಕ್ಷಾಯಣಿಗೆ ಮತ್ತಷ್ಟು ಕೌತುಕ ಕೆರಳುವುದು. ಸ್ತ್ರೀ ಚಾಪಲ್ಯ ಹೆಚ್ಚುವುದು. ತಳುವದೆ ಶಿವನ ಬಳಿಗೆ ಬರುವಳು. ತಂದೆಯ ಯಾಗಕ್ಕೆ ಹೋಗಲು ಅಪ್ಪಣೆಯನ್ನು ಕೇಳುವಳು. ಓ ಪ್ರಿಯೆ, ತಂದೆಯಾದರೇನು? ಕರೆಕಳುಹಿರುವರೇನು? ಕರೆಯದವರಲ್ಲಿಗೆ ಹೋಗುವುದು ಸರಿಯಲ್ಲ. ಯೋಚಿಸಿನೋಡು; ಎಂದು ಹೇಳಿದರೂ ಕೇಳದೆ ಓ ಎನ್ನ ಪ್ರಭುವೆ, ತಂದೆಯಲ್ಲಿಗೆ ಹೋಗಲು ಮಾನ–ಅಪಮಾನಗಳ ಮಾತೆಂದರೇನು? ಎಂದು ಹೇಳಿ ಒತ್ತಾಯದಿಂದ ಒಪ್ಪಿಸಿ ತಂದೆಯ ಯಜ್ಞಕ್ಕೆ ತೆರಳುವಳು. ರವಿಯಂತೆ ಹೊಳೆಯುತ್ತ ವೇಗವಾಗಿ ಹೋಗುವ ವಿಮಾನದಲ್ಲಿ ಮೆಚ್ಚಿನ ಗೆಳತಿಯರೊಡನೆ ನೆಚ್ಚಿನ ಗಣರೊಡನೆ ಆನಂದದಿಂದ ತಂದೆಯ ಯಜ್ಞ ಮಂಟಪಕ್ಕೆ ಬರುವಳು.

ಸರ್ವ ಮಂಗಳೆಯಾದ ಶಿವನ ಸತಿಯಾದ ಮಹಾದೇವಿಯು ಬಂದುದನ್ನು ನೋಡಿ ಯಜ್ಞ ಮಂಟಪದಲ್ಲಿರುವವರು ಹಲವರು ಹೂಮಳೆಗರೆದರು. ಗಾಳಿ ತಂಪಾಗಿ ಕಂಪಾಗಿ ಬೀಸಿತು. ವೀಣಾಧ್ವನಿ ಹರಡಿತು. ದೇವ ದುಂದುಬಿಗಳು ಮೊರೆದವು. ಗಂಧರ್ವರು ಇಂಪಾಗಿ ಹಾಡಿದರು. ಊರ್ವಶಿ ಮೊದಲಾದ ಅಪ್ಸರೆಯರು ಉತ್ಸಾಹದಿಂದ ನರ್ತನ ಮಾಡಿದರು. ನಾಗಕನ್ನಿಕೆಯರು ಗಾನಶಾಸ್ತ್ರಕ್ಕೆ ಅನುಗುಣವಾಗಿ ಸಂಗೀತವನ್ನು ಮಾಡಿದರು.

ಮಹಾಲಕ್ಷ್ಮಿಯು ಎದ್ದು ಸಂತಸದಿಂದ ಬಾಗಿ ವಂದಿಸಿದಳು. ಸರಸ್ವತಿಯು ಕೈ ಮುಗಿದು ಬಗೆ ಬಗೆಯಾಗಿ ಸ್ತುತಿಸಿದಳು. ಶಚಿಯು ಸಾಷ್ಟಾಂಗವೆರಗಿದಳು.

ಹರಿ ವಿರಿಂಚಿ ಇಂದ್ರಾದಿ ದೇವತೆಗಳು ಆ ಜಗದಂಬೆಗೆ ಸಾಷ್ಟಾಂಗ ಪ್ರಣಾಮ ಮಾಡಿದರು. ಇದನ್ನು ನೋಡಿ ಉಳಿದೆಲ್ಲ ದೇವಮಾನವರು ಮನು ಮುನಿಗಳು ಋಷಿಸಿದ್ದರು ರುದ್ರಗಣರು ಎದ್ದು ಬಂದು ಅಡ್ಡ ಬಿದ್ದು ನಮಸ್ಕರಿಸಿದರು. ಯಜ್ಞ ಮಂಟಪದಲ್ಲಿ ಸಂದಿಲ್ಲದಂತಾಗಿ ಗಂದರ ಗೋಳಾಯಿತು. ಗುಂಪನ್ನು ಚದುರಿಸಲು ರುದ್ರಗಣರು ಮುಂದೆ ಬಂದರು. ಕೈಗಳಲ್ಲಿ ಬೆತ್ತ ಹಿಡಿದು ಜನರನ್ನು ದೂರ ಸರಿಸುತ್ತ ಸಂಚರಿಸಿದರು. ಈ ಗದ್ದಲದಲ್ಲಿ ವಂದಿಸಿ ಮೇಲಕ್ಕೇಳುವ ಹರಿಬ್ರಹ್ಮರ ರತ್ನ ಕಿರೀಟಗಳು ಕಳಚಿ ಹೋಗಿದ್ದವು; ಕಳೆದು ಹೋಗಿದ್ದವು.

ಆ ಸಮಯದಲ್ಲಿ ಸುರರು ಸತೀದೇವಿಯನ್ನು ಹೀಗೆ ಸಂತಸದಿಂದ ಸ್ತುತಿಸಿದರು:

ಓ ಜಗಜ್ಜನನಿ, ಜಗತ್ಸುಖಕಾರಿಣಿ! ನೀನು ದಿವ್ಯತೇಜಸ್ವಿನಿ, ದಿಗ್ವಿಜಯಶಾಲಿನಿ. ನೀನು ಕಲ್ಯಾಣ ಗುಣ ಪರಿಪೂರ್ಣಳು; ಸರ್ವಮಂಗಳ ಸ್ವರೂಪಳು. ಪರಮ ಸಂಪತ್ತುಳ್ಳವಳು; ಪರಮ ಶ್ರೇಷ್ಠಳು. ಸಕಲ ಜೀವರಾಶಿಗಳಿಗೆ ಭುಕ್ತಿ ಮುಕ್ತಿ (ಭೋಗ ಮೋಕ್ಷ)ಗಳನ್ನು ಕೊಡುವವಳು. ಲಿಂಗಕಳಾ ಸ್ವರೂಪಳು. ಅನ್ನಪೂರ್ಣಾ ದೇವಿಯೆಂದು ಹೆಸರಾದವಳು. ಸಂತುಷ್ಟಳು, ಸಂಪುಷ್ಟಳು. ಶಾಂತಿಪ್ರದಳು, ಭೋಗ ಭಾಗ್ಯದಾಯಕಳು. ಪುಣ್ಯರೂಪಳು; ಗಣ್ಯ ಸ್ವರೂಪಳು. ಧರ್ಮರೂಪಳು, ಧರ್ಮಪ್ರದಾಯಕಳು. ವಿದ್ಯಾಸ್ವರೂಪಳು, ವಿದ್ಯಾ ಪ್ರದಾಯಕಳು. ಪರಶಿವನ ಅರ್ಧಾಂಗಿ; ಮಂಗಳಾಂಗಿ. ದಯಾಮಯಳು. ದಿವ್ಯರೂಪಳು. ಯೋಗ ಸ್ವರೂಪಳು ಯೋಗಿಗಳ ತ್ಯಾಗಿಗಳ ಹೃದಯ ನಿವಾಸಗಳು. ಭಕ್ತರ ಭಾವ ಪ್ರಕಾಶಕಳು. ಹೀಗೆ ಸಕಲ ಸುರರಿಂದ ಸ್ತುತ್ಯಳಾದ ದಾಕ್ಷಾಯಣಿಯು ದಕ್ಷಯಜ್ಞ ಮಂಟಪದೊಳಕ್ಕೆ ಮಿಂಚಿನ ಬಳ್ಳಿಯಂತೆ ಪ್ರವೇಶ ಮಾಡುವಳು. ಜನಕನಾದ ದಕ್ಷನ ಬಳಿಗೆ ಬರುವಳು. ದಕ್ಷನು ನೋಡಿದರೂ ನೋಡದಂತಿರುವನು; ಪ್ರೀತಿಸದೆ ಸತ್ಕರಿಸದೆ ಇರುವನು. ಬಳಿಗೆ ಕರೆಯದಾದನು. ಕುಳಿತಿದ್ದವನು ಏಳದಿದ್ದನು. ಹೀಗಿದ್ದರೂ ತಾನೇ ತನ್ನ ತಂದೆಯನ್ನು ಮುಂದಿನಂತೆ ಕೇಳುವಳು:

ಸತೀದೇವಿಯ ಸದುಪದೇಶ

ತಂದೆಯೇ, ನೀನು ನಿನ್ನ ಈ ಯಜ್ಞಕ್ಕೆ ಎಲ್ಲರನ್ನೂ ಕರೆಯಿಸಿರುವೆ. ಎಲ್ಲರಿಗೆ ಒಡೆಯನಾದ ಶಿವನನ್ನೇ ಕರೆಯಿಸದಿರುವೆ. ಇದಕ್ಕೆ ಕಾರಣವೇನು? ಆ ಮಹಾದೇವನು ಯಜ್ಞಪತಿಯಲ್ಲವೇನು? ಯಜ್ಞದ ಅಗ್ರಪೂಜೆ ಆತನದಲ್ಲವೇನು? ಆ ಮಹಾದೇವನಿಲ್ಲದೆ ಈ ಯಜ್ಞ ಶೋಭಿಸುವುದೇನು? ಯಜ್ಞ ಫಲಿಸುವುದೇನು? ಏತಕ್ಕಾಗಿ ಆ ವಿರೂಪಾಕ್ಷನೊಡನೆ ವಿರಸವನ್ನು ತಂದುಕೊಂಡಿರುವೆ?

ಶಿವನು ಸರ್ವರಿಗೆ ಒಡೆಯ. ಆತನಿಗೆ ಬೇರೊಬ್ಬ ಒಡೆಯನಿಲ್ಲ. ಆತನನ್ನು ಮಹಾದೇವನೆಂದು ಮಹಾರುದ್ರನೆಂದು ವೇದಗಳು ಹೊಗಳಿವೆ. "ಏಕ ಏವ ಮಹಾ ರುದ್ರೋ ವೇದೇಷು ಪ್ರತಿಪಾದ್ಯತೇ" ಮಹರ್ಷಿಯೂ ಮಹೇಶನೂ ಆತನೇ ಆಗಿದ್ದಾನೆ. ಆತನು ಎಲ್ಲ ವಿದ್ಯೆಗಳಿಗೆ ಒಡೆಯನು. ಇಂದ್ರ ಮಿತ್ರ ಬ್ರಹ್ಮವಿಷ್ಣು ಸೂರ್ಯಚಂದ್ರ ಅಗ್ನಿ ವರುಣ ಮೊದಲಾದವರ ಉತ್ಪತ್ತಿ ಸ್ಥಾನನು ಶಿವನಾಗಿದ್ದಾನೆ. ಪ್ರಣವ ಸ್ವರೂಪನೂ ಪರಮ ತೇಜೋಮಯನೂ ಸರ್ವವ್ಯಾಪಿಯೂ ಆಗಿದ್ದಾನೆ. ಅವನೇ ಈ ವಿಶ್ವ, ಅವನೇ ಈ ವಿಶ್ವಾಧಿಪತಿ. ವಿಶ್ವಾಧಿಕನೂ ಅವನೇ! ಅವನ ಅಪ್ಪಣೆಯಿಲ್ಲದೆ ಅವನ ಅನುಗ್ರಹವಿಲ್ಲದೆ ಬ್ರಹ್ಮಪ್ರಜಾಪತಿಯು ಜಗತ್ತನ್ನು ಸೃಷ್ಟಿಸಲಾರನು; ವಿಷ್ಣುವು ಪಾಲಿಸಲಾರನು; ರುದ್ರನು ಸಂಹರಿಸಲಾರನು; ಸೋಮ ಸೂರ್ಯರು ಬೆಳಗಲಾರರು. ಅಗ್ನಿಯು ಹವ್ಯ ಕವ್ಯಗಳನ್ನು ಹೊತ್ತು ದೇವತೆಗಳನ್ನು ತೃಪ್ತಿಪಡಿಸಲಾರನು. ಗಾಳಿ ಸಂಚರಿಸಲಾರದು. ಜಲ ನೆಲಗಳು ಇರಲಾರವು. ವನಸ್ಪತಿಗಳು ಬೆಳೆಯವು ಗ್ರಹನಕ್ಷತ್ರಗಳು ಕಾಂತಿಗೊಳ್ಳವು. ಇಂದ್ರ ಯಮ ವರುಣ ಕುಬೇರರು ಅವನಿಂದಲೇ ಬಾಳುತ್ತಿರುವರು; ಆಳುತ್ತಿರುವರು. ಪ್ರಣವ ಆತನ ದೇಹ; ವೇದ ಆತನ ಉಸಿರು. ಛಂದಸ್ಸುಗಳು ಪುರಾಣಗಳು ಆತನ ರೋಮಗಳು ಮರುಗ್ಗಣರು, ಪಿತೃ ದೇವತೆಗಳು, ಸಿದ್ಧರು, ಸಾಧ್ಯರು, ಋಭುಗಳು, ವಸುಗಳು, ಮನುಗಳು, ವಿಶ್ವದೇವರು, ಅಶ್ವಿನೀದೇವತೆಗಳು ದ್ವಾದಶಾದಿತ್ಯರು ಮೊದಲಾದವರು ಶಿವಶಾಸನದಿಂದಲೇ ತಂತಮ್ಮ ಕಾರ್ಯಗಳನ್ನು ಮಾಡುತ್ತಿರುವರು. ಯಜ್ಞಗಳು

ಆತನಿಂದ! ಯಜ್ಞಕಾರ್ಯಗಳು ನಿರ್ವಿಘ್ನವಾಗುವುದು ಆತನಿಂದ!! ಇದೆಲ್ಲ ನಿನಗೆ ತಿಳಿಯದೆ? ತಿಳಿಯದೇನು? ಮರೆತಂತೆ ಕಾಣುತ್ತದೆ. ಅಥವಾ ಆ ಪರಶಿವನ ಸ್ವರೂಪ ಜ್ಞಾನ ವೇದಗಳಿಗೂ ಅಪರಿಚಿತ, ಅಸಾಧ್ಯ ತಾನೆ? "ಯತ್ಸ್ವರೂಪ ವಿಜ್ಞಾನಂ ವೇದ್ಯೈರಪಿನ ಶಕ್ಯತೇ!" ಉಳಿದವರ ಮಾತೇನು? ಆ ಮಹಾದೇವನು ಮಹತ್ತಿಗೆ ಮಹಂತನು; ಅಣುವಿಗೆ ಅಣುಸ್ವರೂಪನು, ಆತನು ಪುರುಷನಲ್ಲ ಸ್ತ್ರೀ ರೂಪನಲ್ಲ, ನಪುಂಸಕನೂ ಅಲ್ಲ, ಮನಸ್ಸಿಗೂ ಮಾತಿಗೂ ನಿಲುಕುವವನು. "ಯತೋ ವಾಚೋ ನಿವರ್ತಂತೆ ಅಪ್ರಾಪ್ಯ ಮನಸಾ ಸಹ!" ಎಂದಿಲ್ಲವೆ? ಆ ಮಹಾದೇವನು ಮಹಾಮಹಿಮನು; ಷಡ್ಗುಣೈಶ್ವರ್ಯ ಸಂಪನ್ನನು, ಸಚ್ಚಿದಾನಂದನು, ನಿತ್ಯ ಪರಿಪೂರ್ಣನು, ಸದ್ಯೋಜಾತಾದಿ ಪಂಚ ಬ್ರಹ್ಮಗಳು ಆತನ ಮುಖಗಳು ಆ ಮುಖಗಳೆ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣಗಳು ಸದ್ಯೋ ಜಾತ ಮುಖ ಸೃಷ್ಟಿಗೆ, ಅಘೋರ ಮುಖ ಲಯಕ್ಕೆ, ಈಶಾನ ಮುಖ ಸ್ಥಿತಿಗೆ ವಾಮದೇವ ಮುಖ ಶ್ರೇಷ್ಠತೆಗೆ, ತತ್ಪುರುಷ ಮುಖ ವಿಶ್ವವ್ಯಾಪ್ತಿಗೆ ಕಾರಣಗಳಾಗಿವೆ. ಆ ಮಹಾದೇವನೆ ವಿರಾಟ್ ಸ್ವರಾಟ್ ಸಂರಾಟ್ ಸ್ವರೂಪನಾಗಿದ್ದಾನೆ, ಮತ್ತು ಇವುಗಳಿಗೆ ಈಶಾನನೂ ಆಗಿದ್ದಾನೆ. ವಿಶ್ವತೋಮುಖನಾಗಿದ್ದಾನೆ. ಸಗುಣ-ನಿರ್ಗುಣನಾಗಿದ್ದಾನೆ, ವಿಶ್ವತೋನೇತ್ರನಾಗಿದ್ದಾನೆ, ವಿಶ್ವತೋಬಾಹುವಾಗಿದ್ದಾನೆ. ದೃಗ್ ದೃಶ್ಯ ಅವನಾಗಿದ್ದಾನೆ ರಸ ಸ್ವರೂಪನಾದ ಆತನು ವಿಶ್ವಾತ್ಮನಾಗಿದ್ದಾನೆ. "ಋತಂ ಸತ್ಯಂ ಪರಂಬ್ರಹ್ಮ ಪುರುಷಃ ಕೃಷ್ಣಪಿಂಗಳಂಃ" ಸ್ವರೂಪನಾಗಿದ್ದಾನೆ, ಊರ್ಧ್ವರೇತನೆನಿಸಿದ್ದಾನೆ! ಮೃತ್ಯುಂಜಯನಾಗಿದ್ದಾನೆ. ಅವನಿಗೆ ಮೂರು ಕಣ್ಣುಗಳಿವೆ. ಅದರಿಂದ ಅವನು ಎಲ್ಲವನ್ನೂ ನೋಡಬಲ್ಲ ಎರಡು ಸಾವಿರ ಕೈಗಳಿವೆ; ಎಲ್ಲವನ್ನು ಮಾಡಬಲ್ಲ. ಆತನನ್ನು ಆತ್ಮವಿದ್ಯೆಯನ್ನು ಬಲ್ಲ ಯತಿ ಮುನಿಗಳೂ ಸಹ ಪೂರ್ಣವಾಗಿ ಅರಿಯರು. ಆತನು ಮಾಯೆಯಿಂದ ಕೂಡಿದ್ದರೂ ಮಾಯೆಗೆ ಒಳಗಾಗಿಲ್ಲ. ಎಲ್ಲೆಲ್ಲಿಯೂ ಅವನಿದ್ದಾನೆ. ಎಲ್ಲ ವಸ್ತುಸ್ವರೂಪನಾಗಿದ್ದಾನೆ. ಎಲ್ಲಕ್ಕೂ ಚೇತನನಾಗಿದ್ದಾನೆ. ಒಡೆಯನೂ ಆಗಿದ್ದಾನೆ. ಆತನ ಸ್ವರೂಪವನ್ನರಿಯದವರು ಯಜ್ಞವನ್ನು ಮಾಡಿದರೂ ಮುಕ್ತಿಯಾಗದು. ಶ್ರೇಯಸ್ಸನ್ನು ಬಯಸುವವರು ಶಿವನನ್ನು ಹಗಲಿರುಳು ಬಿಡದೆ ಆರಾಧಿಸುವರು; ಆಸಕ್ತಿಯಿಂದ ಧ್ಯಾನಿಸುವರು.

ಮಲ ಮಾಯಾ ಮೋಹಿಗಳು ಮದಾಂಧರು ಪರಶಿವನನ್ನು ಸರಿಯಾಗಿ ಅರಿಯರು ನಿಜವಾಗಿಯೂ ಶಿವಾರಾಧನೆಯೇ ಎಲ್ಲರ ಸೊತ್ತು; ಅದರಿಂದ ಹರಿಯುವವು ಎಲ್ಲ ಬಗೆಯ ಕುತ್ತು. ಆತನ ವಿಭೂತಿ ಧಾರಣದಿಂದ ಉಂಟಾಗುವುದು ವಿಭೂತಿಯೋಗ. ರುದ್ರಾಕ್ಷಿ ಧಾರಣದಿಂದ ರುದ್ರ ಸ್ವರೂಪ ಸಂವಿತ್ತುಂಟಾಗುತ್ತದೆ. ಆತನ ಪರಮ ಪಂಚಾಕ್ಷರ ಮಂತ್ರವೇ ಸಂಸಾರ ತಾರಕ. ವೇದ ಮೂಲವಾದ ಪ್ರಣವದಲ್ಲಿ ಅರ್ಥರೂಪವಾಗಿದ್ದಾನೆ. ಸ್ವರದಲ್ಲಿ ಪರತತ್ವವಾಗಿದ್ದಾನೆ. ವೇದಾಂತದೊಳಗಿನ ಬ್ರಹ್ಮಸ್ವರೂಪವೂ ಅವನೇ ಆಗಿದ್ದಾನೆ. ಬ್ರಹ್ಮಾಂಡವನ್ನು ಅವ್ಯಕ್ತವಾಗಿ ವ್ಯಾಪಿಸಿರುವಂತೆ ಪಿಂಡಾಂಡದಲ್ಲಿ ವ್ಯಕ್ತಾವ್ಯಕ್ತ ರೂಪದಲ್ಲಿರುತ್ತಾನೆ. ಅಂಥವನ ಸನ್ನಿಧಿಯಲ್ಲಿದ್ದು ಯಜ್ಞಮಾಡಿದರೆ ಹೆಚ್ಚು ಫಲವುಂಟು. ಹೀಗಿದ್ದು ಓ ತಂದೆಯೇ ಏಕೆ ಮರೆದು ತೊರೆದು ಮುಂದುವರಿಯುತ್ತಿರುವೆ.

ಓ ಬ್ರಹ್ಮ ವಿಷ್ಣಾದಿಗಳೇ! ನಿಮಗೂ ಅಜ್ಞಾನವೇ?' ನೀವೂ ಮಾಯಾ ಮೋಹಿತರಾಗಿರುವಿರಲ್ಲಾ! ಸತ್ಯ ವಸ್ತುವನ್ನೇ ಚಿತ್ತಕ್ಕೆ ತಾರದಂತಿರುವುದೆ? ಶಿವನಿಲ್ಲದ ಈ ಕಾರ್ಯಕ್ಕೆ ನೀವು ಬರಬಹುದೆ? ಶಿವಕೋಪಕ್ಕೆ ಪಕ್ಕಾಗಬಹುದೇ? ಆತನು ಮಹೇಶನಲ್ಲವೆ? ತನಿಗೆ ಹವಿರ್ಭಾಗ ಸಲ್ಲತಕ್ಕದ್ದಲ್ಲವೆ? ನೀವಾದರೂ ತಂದೆಗೆ ತಿಳಿ ಹೇಳಬಾರದೇನು? ಅಲ್ಪಶಕ್ತಿಯುಳ್ಳ ಈ ದೇವತೆಗಳ ಪೂಜೆಯಿಂದ ಪ್ರಯೋಜನವೇನು? ಶಿವನು ವೇದಸ್ತುತ್ಯ; ವೇದಾಂತ ಪ್ರತಿಪಾದ್ಯ. ಎಲ್ಲ ಗಣರಿಗೆ ಗಣ್ಯದೇವತೆಗಳಿಗೆಲ್ಲ ದಿವ್ಯ ಸುರರಿಗೆಲ್ಲ ಸೇವ್ಯ ಸರ್ವಜಗದಾರಾಧ್ಯ. ಉಪಾಸಕರಿಗೆ ಇಷ್ಟಾರ್ಥಗಳನ್ನು ಅನುಗ್ರಹಿಸುವಾತ ಆ ಶಿವನನ್ನು ಬಿಟ್ಟು ಈ ಯಾಗವನ್ನು ಆರಂಭಿಸಿರುವುದು ಒಂದು ಅಪರಾಧ. ಈಗಲೇ ನೀವು ಹೋಗಿ ಆ ಶಿವನನ್ನು ಮೊರೆಯಿಡಿರಿ; ಕ್ಷಮೆಯನ್ನು ಕೇಳಿರಿ ಕರುಣಾಶಾಲಿಯಾದ ಆತನು ನಿಮ್ಮನ್ನು ಕ್ಷಮಿಸುವನು. ಸನಾತನ ಪದ್ಧತಿಯನ್ನು ಮೀರಬೇಡಿರಿ. ಏಳಿರಿ, ಎಚ್ಚರಾಗಿರಿ. ಶಿವನನ್ನು ಕರೆತರುವ ಹೊಲಬನ್ನು ಹಿಡಿಯಿರಿ. ಇದರಿಂದ ನಿಮಗೆ ಒಳಿತಾಗುವುದು; ಗುರಿ ಕೈಗೂಡುವುದು.

ಓ ತಂದೆಯೆ! ಮತ್ತೊಮ್ಮೆ ಹೇಳುವೆನು ಕೇಳು: ಮನಸ್ಸಿನ ಬಿಗುವನ್ನು ಬಿಡು. ಸರಳನಾಗು. ಮನಸ್ಸನ್ನು ಪರಿಪಾಕಗೊಳಿಸು. ಸಮಾಧಾನ ಚಿತ್ತನಾಗು. ತಿಳಿವನ್ನು ತಂದುಕೋ! ಬ್ರಹ್ಮನಿಗೂ ಬ್ರಹ್ಮನಾಗಿ ಪರಬ್ರಹ್ಮನೆನಿಸಿರುವುದನ್ನು ನೆನಸಿಕೋ! ನಿನಗಿನ್ನು ಹೆಚ್ಚು ಹೇಳಲಾರೆ. ನೀನು ತಂದೆ! ನಾನು ನಿನ್ನ ಕಂದ! ಒಳಿತು ಎಲ್ಲಿಂದ ಬಂದರೂ ಒಳಿತೇ ತಾನೇ? -ಎಂದು ಮುಂತಾಗಿ ಸತೀದೇವಿಯು ಶಿವಸ್ವರೂಪವನ್ನು ತಿಳಿಸಿ ತಂದೆಗೆ ಕರ್ತವ್ಯವನ್ನು ಮಾಡ ಹೇಳುವಳು.

ಇದನ್ನು ಕೇಳಿ ಎಲ್ಲರೂ ಸ್ತಂಭಿತರಾದರು. ಅಚ್ಚರಿಗೊಂಡರು. ಹಿಂದು-ಮುಂದು ಏನೂ ತೋರದಂತಾದರು. ಹರಿವಿರಿಂಚಿಗಳೂ ಏನನ್ನು ಮಾತನಾಡದೆ

ಮೌನ ತಳೆದರು. ಇನ್ನೂ ಗಂಭೀರರಾದರು. ಉಳಿದವರೆಲ್ಲ ಚಿತ್ರದ ಬೊಂಬೆಗಳಂತೆ ಕುಳಿತು ಬಿಟ್ಟರು.

ಆ ಸಮಯದಲ್ಲಿ ದಕ್ಷನು ದರ್ಪದಿಂದ ದುರ್ಬುದ್ಧಿಯಿಂದ ದ್ವೇಷಾಸೂಯೆಯಿಂದ ಕೂಡಿ ತನ್ನ ಮಗಳಿಗೆ ಸಿಡಿಮಿಡಿಯಾಗಿ ಹೀಗೆ ಉತ್ತರಿಸುವನು:

ದಕ್ಷನ ದರ್ಪೋಕ್ತಿ

ಎಲೌ ಸತಿಯೇ, ನೀನಾರು? ನೀನೇಕೆ ಇಲ್ಲಿಗೆ ಬಂದೆ? ನಿನ್ನ ಕರೆದವರಾರು? ನೀನು ನಿಲ್ಲದಿರು; ನುಡಿಯದಿರು. ಎಲ್ಲರ ಎದುರಿನಲ್ಲಿ ಹೀಗೆ ಹೆದರಿಸಿ ಹೀಯಾಳಿಸಿ ಇನ್ನೂ ಹೀಗೆ ಹೇಳಿದನು:

ನಿನ್ನ ಪತಿಯಿಂದ ಇಲ್ಲಿ ಕೆಲಸವಿಲ್ಲ; ಕರೆಯಿಸಿಲ್ಲ. ಆತನು ಯಜ್ಞ ಪತಿಯಲ್ಲ. ಚರ್ಮಾಂಬರಧಾರಿ. ಸರ್ಪಾಲಂಕಾರಿ. ವಿಷಾಹಾರಿ. ಸ್ಮಶಾನವಿಹಾರಿ. ಅವನೆಂಥ ಮಂಗಲ ಸ್ವರೂಪನು? ಅವನಿಂದ ಆಗುವ ಪ್ರಯೋಜನವೇನು? ನನಗೂ ಶ್ರುತಿಬಲವಿದೆ: 'ಯಜ್ಞೋ ವೈ ವಿಷ್ಣುಃ' ಎಂಬುದರ ಸ್ಮೃತಿ ನಿನಗೂ ಇರಲಿ. ಇದರಿಂದಾಗಿ ವಿಷ್ಣುವೇ ನನ್ನ ಯಾಗಕ್ಕೆ ಪೂಜ್ಯ; ಯೋಗ್ಯ.

ದಕ್ಷಬ್ರಹ್ಮನ ಆಂತರಿಕ ಅಸಂತೃಪ್ತಿಯು ಆತನ ಕಿಡಿನುಡಿಯಲ್ಲಿ ಮೂರ್ತಿ ಮತ್ತಾದಂತಾಗಿ ಹೊರ ಹೊಮ್ಮುವುದು. ಭ್ರಾಂತಿ ಭಾವದಲ್ಲಿದ್ದ ಅವನ ಬಗೆಗೆ ಬಟ್ಟೆಯಿರಲಿಲ್ಲ. ಬುದ್ಧಿಗೆ ವಿವೇಕವಿರಲಿಲ್ಲ. ಮನಕೆ ಶಾಂತಿಯಿರಲಿಲ್ಲ. ಮತಿಯಿರಲಿಲ್ಲ. ಹಾರ್ದಿಕತೆ ಮೊದಲೇ ಇರಲಿಲ್ಲ. ತಾನೀಗ ಯಜ್ಞದೀಕ್ಷಿತನು, ಕ್ರೋಧವನ್ನು ತಾಳಬಾರದು –ಎಂಬ ಅರಿವೇ ಆತನಿಗಿರಲಿಲ್ಲ. ಬಂದವಳು, ನಿಂದವಳು, ನುಡಿದವಳು ತನ್ನ ಮಗಳೆಂಬುದನ್ನೂ ತಿಳಿಯದಾದನು. ತನ್ನ ಈ ಕೋಪ ತನ್ನ ಹಿರಿಯತನದ ಕೇಡು, ತನ್ನ ಮಾನವೀಯ ಜೀವನದ ಕೇಡು – ಎಂಬುದನ್ನು ಅರಿಯದಾದನು; ಆಲೋಚಿಸದಾದನು. ತನ್ನ ಇರುವಿಗೆ ಅರುವಿಗೆ ಹಾನಿ ಗ್ಲಾನಿ ಎಂಬುದನ್ನು ಯೋಚಿಸದೆ ಮನಬಂದಂತೆ ಕೋಪದ ಕೈಯಲ್ಲಿ ಮಾತನಾಡಿದನು. ಭವಿಷ್ಯವನ್ನು ಬಗೆಯದಾದನು. ದುರಭಿಮಾನ ದುರುದ್ದೇಶಗಳಿಂದ ಪ್ರೇರಿತನಾದನು; ದುಡುಕಿದನು. ಆಡಬಾರದುದನ್ನು ಆಡಿದನು. ತಾನಾಡಿದುದೇ ಲೇಸೆಂದೆಣಿಸಿದನು.

ದಧೀಚಿಯ ಧೀರವಾಣಿ

ದಧೀಚಿ ಶಿವಭಕ್ತಾಗ್ರಣಿ; ಭಾವಾಕಾಶದ ದಿನಮಣಿ. ದಕ್ಷನ ದೂಷಣೆಯನ್ನು ಸಹಿಸದಾದನು. ದುರ್ಭಾಷೆಯನ್ನು ಕೇಳದಾದನು. ಕಣ್ಣು ಕೆಂಪೇರಿತು. ಕೈ ಕಂಪಿಸಿತು. ಮೈಕೊಡವಿ ಮೇಲಕ್ಕೆದ್ದು ಮಾತ್ನಾಡತೊಡಗಿದನು.

ದಕ್ಷನೆ, ದುರಾಚಾರಿಯೆ; ಮುಚ್ಚು ಬಾಯಿ! ಮುಂದರಿಯದೆ ಮನ ಬಂದಂತೆ ಹರಟುವೆಯಾ? ದಂಭ ದರ್ಪಗಳಿಂದ ಮದಾಂಧನಾಗಿ ಮಾತಾಡುವೆಯಾ? ಲೋಕ ಪೂಜ್ಯಳಾದ ದೇವಿಯು ಯಾಗಕ್ಕೆ ಆಗಮಿಸಿದ್ದರೂ ಆರಾಧಿಸದೆ ಉದಾಸೀನನಾಗಿರುವೆಯಾ? ಆಸನದಿಂದ ಏಳದಿರುವೆಯಾ? ದೇವಿಯ ದಿವ್ಯಶಕ್ತಿಯನ್ನು ತಿಳಿಯದಿರುವೆಯಲ್ಲಾ! ನಿನ್ನ ಮಾತನ್ನು ಯಾರೂ ಮೆಚ್ಚರು. ನೀನು ಮಾಡುವುದನ್ನೂ ತಪ್ಪು ನಡೆಯುವುದನ್ನು ಯಾರೂ ಒಪ್ಪರು ನೀನು ಲೇಸಿಗೆ ಬದಲು ಕೇಡಿನತ್ತ ಹೋಗುತ್ತಿರುವೆ. ಸತೀದೇವಿಯನ್ನು ಸತ್ಕರಿಸದಿರುವುದು ಶಿಷ್ಟಸಮ್ಮತವಲ್ಲ.

ಸತೀದೇವಿಯು ಸುರವಂದ್ಯಳು; ಸರ್ವಯಾಗ ಫಲಪ್ರದಳು. ಸರ್ವಕಲ್ಯಾಣಿ; ಶಂಕರಾರ್ಧಾಂಗಿಣಿ. ಸಂಸಾರಭಯನಾಶಿನಿ. ಸರ್ವ ಸೌಭಾಗ್ಯ ದಾಯಿನಿ. ದೇವಿಯನ್ನು ನಿತ್ಯ ಪೂಜಿಸುವವರ ಉಪದ್ರವಗಳು ಉಡಗುತ್ತವೆ; ಉತ್ತಮತೆಯುಂಟಾಗುತ್ತವೆ. ಸಂಪತ್ತು ಹೆಚ್ಚುತ್ತದೆ; ಯಶಸ್ಸು ಹಬ್ಬುತ್ತದೆ. ಭೋಗ ಮೋಕ್ಷಗಳುಂಟಾಗುತ್ತವೆ.

ದೇವಿಯು ಜಗಜ್ಜನನಿ, ಜಗದ್ರಕ್ಷಣಕಾರಿಣಿ; ಜಗತ್ಸಂಹಾರಿಣಿ. ಸರ್ವ ಫಲಪದ ಪ್ರದಾಯಿನಿ. ವೇದ ವೇದಾಂತಗಳು ಇತಿಹಾಸ ಪುರಾಣಾದಿಗಳು ಸತೀ ದೇವಿಯನ್ನು ಸ್ತೋತ್ರಮಾಡುತ್ತವೆ. ಯೋಗಿಗಳು ತ್ಯಾಗಿಗಳು ಸಾಧಕರು ಸಿದ್ಧರು ದೇವಿಯ ದರ್ಶನಕ್ಕಾಗಿ ಅನುಗ್ರಹಕ್ಕಾಗಿ ಕಾಯ್ದಿರುವರು. ಋಷಿಮುನಿಗಳು ದೇವಿಯ ಕೃಪೆಗಾಗಿ ತಪಸ್ಸನ್ನಾಚರಿಸುವರು. ಯಾಜಕರು ಯಾಗಗಳನ್ನು ಮಾಡುವರು. ಸರ್ವಧರ್ಮಗಳಿಗೆ ದೇವಿಯ ದರ್ಶನವೇ ಫಲವಾಗಿರುವುದು. ಹೀಗಿದ್ದು ದಕ್ಷನೆ, ನೀನು ದೇವಿಯನ್ನು ಉದಾಶೀನ ಮಾಡುತ್ತಿರುವೆ. ತಾನಾಗಿಯೆ ನಿನ್ನಲ್ಲಿಗೆ ಬಂದರೂ ನೀನು ಆದರಿಸದಿರುವೆ. ನಿನ್ನ ಯಾಗ ವಿನಾಶವು ಸನ್ನಿಹಿತವಾದಂತಿದೆ. ಪೂಜ್ಯರನ್ನು ಪೂಜಿಸದೆ ಹೋದರೆ ಅಶುಭವಾಗುವುದು ಸ್ವಭಾವವೇ ಆಗಿದೆ. ಅರ್ಚಿಸದಿರುವುದು ನಿನ್ನ ದೊಡ್ಡ ಅಪರಾಧವಾಗಿದೆ. ಸದ್ಗತಿಯ ಬಯಸಿ ದುರ್ಗತಿಯ ದಾರಿ ಹಿಡಿದಿರುವೆ.

ದೇವಿಯ ಪರಮಪಾವನವಾದ ಪಾದಧೂಳಿಯನ್ನು ಆದಿಶೇಷನು ತನ್ನ ಸಾವಿರ ತಲೆಗಳಲ್ಲಿ ಹೆಮ್ಮೆಯಿಂದ ಹೊತ್ತು ವಿನಮ್ರನಾಗಿ ವಿರಾಜಿಸುತ್ತಿರುವನು. ಚತುರ್ಮುಖ ಬ್ರಹ್ಮನು ಅನಂತ ಕಾಲ ತಪಸ್ಸು ಮಾಡಿ ಪಡೆದನು. ಪಡೆದು ಅದರ ಪ್ರಭಾವದಿಂದ ಸೃಷ್ಟಿ ಕಾರ್ಯವನ್ನು ಸುಲಭವಾಗಿ ನಿರಾತಂಕವಾಗಿ ನಡೆಸುವ ಸಾಮರ್ಥ್ಯವನ್ನು ಸಂಪಾದಿಸಿರುವನು. ಭಗವತೀ ಸತೀ ಶಿವೆಯ ಪ್ರಸಾದದಿಂದ ವೃತ್ರನನ್ನು ಜಯಿಸಿ ಸ್ವರ್ಗಾಧಿಪತ್ಯವನ್ನು ಸಂಪಾದಿಸಿದನು; ಸೂರ್ಯಚಂದ್ರರು ಅವಳ ಪಾದ ಪದ್ಮವನ್ನು ಸಾದರದಿಂದ ಧ್ಯಾನಿಸಿ ಪೂಜಿಸಿ ಸೂರ್ಯತ್ವ ಚಂದ್ರತ್ವಗಳನ್ನು ಪಡೆದಿರುವರು; ಅಗ್ನಿಯೂ ವಾಯು ಯಮರೂ ಅಷ್ಟೆ! ಪರಮ ಪ್ರಭುವಾದ ಮಹಾದೇವನೂ ಸಹ ಶಿವೆಯನ್ನು ಬಿಟ್ಟು ಒಂದು ಚಣವಾದರೂ ಇರುವುದಿಲ್ಲ. ಶಿವೆಯ ಮಹಿಮೆಗೆ ಸೀಮೆಯಿಲ್ಲ. ಶಿವೆಯ ದೃಷ್ಟಿ ಬಿದ್ದವನೇ ಧನ್ಯನು, ಗುಣಿಯು, ಸಕಲ ಸೌಭಾಗ್ಯಶಾಲಿಯು. ಅಂಥವಳನ್ನು ಆರಾಧಿಸದಿದ್ದರೆ ಅದು ಹೇಗೆ ಒಳ್ಳೆಯದಾಗುವುದು? ಬರುವ ವಿಪತ್ತು ತಪ್ಪುವುದು ಹೇಗೆ? ಕಲ್ಯಾಣ ಪರಂಪರೆಗಳನ್ನೇ ಕೊಟ್ಟು ಕರುಣಿಸುವ ಭಗವತಿಯನ್ನು ಭಕ್ತಿಯಿಂದ ನೀನೇಕೆ ಪೂಜಿಸುವುದಿಲ್ಲ? ಮಂಗಳಸ್ವರೂಪಳನ್ನೇ ಬಿಟ್ಟರೆ ನಿನಗೆ ಮಂಗಳವಾಗುವುದೆ? ಗರ್ವದಿಂದಿರುವುದು ನಿನಗೆ ಉಚಿತವೆ? ಯಾರ ಬಲದಿಂದ ಹೀಗೆ ಗರ್ವಿಸುತ್ತಿರುವೆ? ನಿನ್ನನ್ನು ನಿರ್ವಹಿಸುವವರಾರು? ಅಂತಹ ದೇವೋತ್ತಮರು ಯಾರಿರುವರಿಲ್ಲಿ? ನಾಬೇರೆ ಕಾಣೆ! ಒಂದು ವೇಳೆ ಇಲ್ಲಿರುವವರು ನಿನಗೆ ಈ ವಿಷಯದಲ್ಲಿ ಸಹಾಯ ಮಾಡಿದರೆ ಪತಂಗದ ಹುಳುಗಳಂತೆ ಬೆಂಕಿಯಲ್ಲಿ ಬಿದ್ದು ಭಸ್ಮವಾಗುವರು. ಬಾಳು ಹಾಳಾಗುವುದು. ಸತಿದೇವಿಯ ಶೂಲಾಯುಧ ಅಪಾರ ತೇಜಸ್ಸುಳ್ಳದ್ದು; ಅಗ್ನಿಜ್ವಾಲೆಯನ್ನು ಮೀರಿದುದು ಅದಕ್ಕೆ ನೀನು ಆಹುತಿಯಾಗುವೆ. ಸಂಶಯವಿಲ್ಲ. ನಿನಗೆ ಇದರಿಂದ ಒಳಿತಾಗದೆಂದು ನಾನು ನನ್ನ ತೋಳುಗಳೆರಡನ್ನು ಮೇಲಕ್ಕೆತ್ತಿ ಶಪಥಪೂರ್ವಕವಾಗಿ ಹೇಳುವನು.

ವೇದಗಳಿಂದ ಪ್ರತಿಪಾದ್ಯನಾಗಿದ್ದಾನೆ ಶಿವನು. ಆ ಶಿವನ ಪ್ರೀತಿಗಾಗಿ ಪಂಚ ಮಹಾಯಜ್ಞಗಳು ವಿಹಿತವಾಗಿವೆ. ಕುಂಡದಲ್ಲಿ ಇರುವ ಅಗ್ನಿ ರುದ್ರ

ರೂಪನಾಗಿದ್ದಾನೆ. ಹೀಗಿದ್ದರೂ ಶಿವನನ್ನು ಆಹ್ವಾನಿಸದೆ ಸತೀದೇವಿಯನ್ನು ಸತ್ಕರಿಸದೆ ಇರುವುದು ಯಾಜಕನಿಗೆ ವಿಹಿತವಲ್ಲ. ಕಾರಣರುದ್ರ, ಕಾರ‍್ಯರುದ್ರ, ಲೀಲಾ ರುದ್ರರೆಂಬ ತ್ರಿಮೂರ್ತಿಗಳನ್ನು ತೃಪ್ತಿ ಪಡಿಸುವುದೇ ಯಜ್ಞದ ಧ್ಯೇಯ. ಈ ಧ್ಯೇಯಕ್ಕೂ ಇಲ್ಲಿ ಅವಕಾಶವಿಲ್ಲ. ಯಥಾ ವಿಹಿತವಾಗಿ ಮಂತ್ರ ಮಂತ್ರಾರ್ಥಗಳನ್ನು ಬಲ್ಲ ನೈಷ್ಠಿಕ ಅಧ್ವರ್ಯುಗಳ ಅಭಾವ. ಯಜ್ಞಕ್ಕೆ ಋತ್ವಿಕ್ಕರೇ ಸಂಪತ್ತು. ಅವರಾದರೂ ಸರಿಯಾದವರಿಲ್ಲ. ಮೈತ್ರಾವರುಣ್ಯರಿಗೆ ದಕ್ಷಿಣೆಯಾಗಿ ಕೊಡಬೇಕಾದ ವೃಷಭವಿಲ್ಲ. ಶ್ರದ್ಧೆ ನಿಷ್ಠೆ ಭಕ್ತಿ ಜ್ಞಾನ ಶಾಂತಿ ಸಮಾಧಾನಗಳೆಂಬ ಮಾನಸ ಸಂಪತ್ತಿಯಿಲ್ಲ. ಹೀಗೆ ಇನ್ನೆಷ್ಟೂ ಕೊರತೆಗಳಿಂದ ಕೂಡಿದೆ. ಈ ಯಜ್ಞ, ಈ ಯಜ್ಞದ ಯಜಮಾನನೆ ಯಾಗಪಶು. ಶಿವನೆ ಪಶುಪತಿ. ಆತನೇ ಇಲ್ಲದ ಈ ಯಜ್ಞಕ್ಕೆ ಧಿಕ್ಕಾರ!

ಎಲೋ ದಕ್ಷನೆ, ನೀನು ಬ್ರಹ್ಮನ ಮಾನಸ ಪುತ್ರನಲ್ಲವೆ? ಇದೀಗ ನೀನು ಈ ಯಜ್ಞದಲ್ಲಿ ದೀಕ್ಷಿತನಾಗಿರುವೆಯಲ್ಲವೆ? ಶಿವನು ಈ ಯಜ್ಞಕ್ಕೆ ಒಡೆಯನೆಂಬುದು ನಿನಗೆ ತಿಳಿಯದೆ? ಶಿವನು ದೇವ ದೇವನು ಪರಮೇಶನು ಯಜ್ಞೇಶ್ವರನು ಎಂದು ಎಲ್ಲ ವಿದ್ಯೆಗಳು ಎಲ್ಲ ವಿದ್ಯಾಧರರು ಉದ್ಘೋಷಿಸುವುದು ನಿನಗೆ ಕೇಳದಾಯಿತೆ? ಆ ಪರಶಿವನೆ ಪ್ರಪಂಚ. ಅವನನ್ನು ಬಿಟ್ಟರೆ ಪ್ರಪಂಚಕ್ಕೆ ಪ್ರಾಣವಿಲ್ಲ; ಕಣ್ಣಿಲ್ಲ. ಅಂಥವನನ್ನು ಬಿಟ್ಟು ಈ ಯಾಗವನ್ನು ಹೇಗೆ ಸಾಗಿಸುತ್ತಿರುವೆ?

ದಧೀಚಿಯ ಕ್ರೋಧವೀಚಿಯಂತಿರುವ ಈ ಮಾತುಗಳನ್ನು ಕೇಳಿ ದಕ್ಷನು ಕ್ರುದ್ಧನಾಗಿ, ಎಲೋ ದಧೀಚಿಯೇ, ನಿನಗೇಕೆ ಈ ರೋಷ? ಆ ಗೊರವನನ್ನು ಹೀಗೇಕೆ ಹೊಗಳುತ್ತಿರುವೆ? ಅವನಿಗೆ ಯಾವ ಗತಿಯಿಲ್ಲ. ಇನ್ನು ಜಗತ್ತನ್ನು ಆತನೇನು ಬದುಕಿಸಬಲ್ಲ? ಅದಿರಲಿ; ನಿನಗೆ ಇಷ್ಟವಿದ್ದರೆ ಇರು, ಇಲ್ಲದಿದ್ದರೆ ಇಲ್ಲಿಂದ ಎದ್ದು ಹೋಗು. ಇನ್ನು ಹೆಚ್ಚು ಗಳುಹಬೇಡ ಎಂದು ಕಠೋರವಾಗಿ ನಿಷ್ಠುರವಾಗಿ ಉತ್ತರಿಸುವನು.

ದಕ್ಷನ ದರ್ಪೋಕ್ತಿಗಳನ್ನು ಕೇಳಿ ದಧೀಚಿಯು ಮುನಿಸಿನಿಂದ ತನ್ನ ವಸ್ತ್ರವನ್ನು ಕೊಡವಿಕೊಂಡು ಕಿಡಿ ಕಿಡಿಯಾಗಿ ಅಲ್ಲಿರುವ ತನ್ನ ಅನುಯಾಯಿಗಳನ್ನು ಸಭಿಕರನ್ನು ಕುರಿತು ಹೊರಡ ಹೇಳುವನು.

ಓ ಸಭಾ ಸದರುಗಳೇ, ನೀವು ಇನ್ನು ಇಲ್ಲಿದ್ದು ಈ ದುಷ್ಟನಾದ ದಕ್ಷನಿಗೆ ಸಹಾಯ ಮಾಡುವುದಾದರೆ ನೀವೆಲ್ಲರೂ ಶಿವನಿಗೆ ವಿರೋಧಿಗಳಾಗುವಿರಿ. ಶಾಪಕ್ಕೆ ತಾಪಕ್ಕೆ ಗುರಿಯಾಗುವಿರಿ. ಪನ್ನಗರೆ ಕಿನ್ನರರೆ ಗಂಧರ್ವರೆ ಸಿದ್ಧರೆ ಯಕ್ಷರೆ ಋಷಿಗಳೆ ಋತ್ವಿಜರೆ ನೀವೆಲ್ಲರೂ ಜಾಗ್ರತೆಯಾಗಿ ಈ ಯಾಗ ಮಂಟಪದಿಂದ ಹೊರಟು ಬನ್ನಿರಿ. ಇಲ್ಲವಾದರೆ ನೀವೂ ನಿಶ್ಚಯವಾಗಿ ನಾಶವನ್ನು ಸಂದಿಸಬೇಕಾಗುತ್ತದೆ ಎಂದು ಹೇಳಿ ದಧೀಚಿಯು ಕಣ್ಣುಗಳಿಂದ ಕೆಂಡವನ್ನು ಕಾರುತ್ತ ಯಾಗ ಮಂಟಪದಿಂದ ಹೊರಟು ಹೋಗುವನು. ಅವನೊಡನೆ ದೂರ್ವಾಸ ಜಮದಗ್ನಿ ಮುಂತಾದ ಅನಂತ ಮಹರ್ಷಿಗಳು ಮುನಿಗಳು ದಕ್ಷನನ್ನು ನಿಂದಿಸುತ್ತ ಹೊರಟು ಹೋಗುವರು. ಜತೆಗೆ ಪ್ರಣವವೂ ವೇದಗಳೂ ಛಂದಸ್ಸುಗಳೂ ಹೊರಟು ಹೋಗುವುವು. ಇನ್ನೂ ಅನೇಕ ಸಭಾಸದರು, ಇದು ನಿಜವಾದ ಶಿವವಾದ ಯಾಗವಲ್ಲ, ಇದು ಶಿವಾ ಗ್ರಹದಿಂದ ಮೊದಲಾದ ಯಜ್ಞ, ಇದು ಸಾಂಗವಾಗದು. ಇಲ್ಲಿರುವುದು ತರವಲ್ಲ ಎಂದು ಗಟ್ಟಿಯಾಗಿ ಆಡುತ್ತ ಹೊರ ಹೊರಡುವರು.

ಹೀಗೆ ಬಹುಜನ ಹೋದ ಬಳಿಕ ಯಜ್ಞ ಮಂಟಪ ಅರ್ಧ ಬರಿದಾಗುವುದು. ಇದನ್ನು ನೋಡಿದ ದಕ್ಷನ ದರ್ಪದ ನುಡಿಯನ್ನು ಕೇಳಿದ ಸತೀ ದೇವಿಯು ಕೋಪಾಕುಲಳಾಗಿ ತಂದೆಯನ್ನು ದುರುದುರನೆ ದಿಟ್ಟಿಸಿ, "ನಿನಗೆ ಸಹಾಯಕರಾಗಿ ನಿನ್ನೊಡನೆ ನಿಂತ ಈ ದೇವತೆಗಳೊಡನೆ ನೀನು ಧ್ವಂಸನಾಗು" ಎಂದು ಶಪಿಸಿ ತನ್ನ ಯೋಗಾಗ್ನಿಯಲ್ಲಿ ತನುವನ್ನು ಅರ್ಪಿಸುವಳು. ಇದನ್ನೇ ನೋಡುತ್ತಿದ್ದ ದೇವತೆಗಳು ಅತ್ಯಂತ ದುಃಖದಿಂದ ಹಾ ಹಾಕಾರ ಮಾಡುವರು ಹಲವರು ಅಳುಕಿದರು; ಅಲ್ಲಾಡಿದರು. ಅಂತರಿಕ್ಷದಲ್ಲಿ ಗ್ರಹಗಳು ಕಾದಿದವು. ಕಲ್ಲು ಮಣ್ಣುಗಳಿಂದ ಕೂಡಿದ ಬಿರುಗಾಳಿ ಬೀಸಿತು. ಮೇಘಗಳು ಘರ್ಜಿಸಿದುವು ಸಿಡಿಲುಗಳು ಹೊಡೆದುವು. ಕೆಂಪು ಮಳೆ ಕರೆಯಿತು. ನೆಲ ಕಂಪಿಸಿತು. ತೊರೆಗಳು ಮೀರೆದಪ್ಪಿದವು. ಪಕ್ಷಿಗಳು ಅಪಸ್ವರದಿಂದ ಕೂಗಿದವು. ಅಗ್ನಿದೇವನು ಮಂಕಾದನು. ಹೀಗೆ ಹಲವಾರು ಅಪಶಕುನಗಳು ತೋರಿದವು. ಅಶುಭವು ತಲೆದೋರುವುದು.

ಈ ಅನಾಹುತವನ್ನು ಅವಲೋಕಿಸಿ ಅನೇಕ ದೇವತೆಗಳು ಅಂಜಿ ಅಳುಕಿ ದಿಕ್ಕುಗೆಟ್ಟರು; ಕೆಲವರು ಕಾಲ್ತೆಗೆದರು. ದಕ್ಷನು ಇದನ್ನೆಲ್ಲ ನೋಡಲಾರದೆ ನೊಂದು ಬೆಂದು ಕಣ್ಣು ಬಿಡುತ್ತಿದ್ದನು. ವಿಷಣ್ಣ ದೃಷ್ಟಿಯಿಂದ ವಿಷ್ಣುವನ್ನೇ ನೋಡತೊಡಗಿದನು. ಮೋಹದಿಂದ ಮೂಢನಾದ ದಕ್ಷನು ಮುಂದುಗಾಣದಾದನು. ವಿಷ್ಣುವು ದಿಗ್ಭ್ರಮೆಗೊಂಡನು. ಉಳಿದವರು ನಿಶ್ಚೇಷ್ಟರಾಗಿ ನಿಂತರು. ಹೀಗೆ ಸ್ವಲ್ಪ ಹೊತ್ತು ಕಳೆದ ಬಳಿಕ ಹೋಗೋ ಹೇಗೆ ಮರಳಿ ಚೇತರಿಸಿಕೊಂಡು ಯಜ್ಞಕಾರ್ಯವನ್ನು ದಕ್ಷನು ಮುಂದುವರಿಸುವನು.

ಶಿವ ಸಂಕಲ್ಪ–ವೀರೇಶ ಸಂಧಾನ

ಸತೀ ದೇವಿಯೊಡನೆ ಬಂದಿದ್ದ ಶಿವಗಣರು ಸಂತಾಪದಿಂದ ಕಣ್ಣೀರಿಡುತ್ತ ಕೈಲಾಸಕ್ಕೆ ಹಿಂದಿರುಗಿದರು. ಹರನ ಬಳಿಗೆ ಹೋಗಿ ಸತೀ ಅಗ್ನಿಗೆ ಆಹುತಿಯಾದ ದುರಂತ ವಾರ್ತೆಯನ್ನು ದುಃಖದಿಂದ ಅರಿಕೆ ಮಾಡುವರು. ಅದನ್ನು ಆಲಿಸಿ ಶಿವನ ಶಾಂತಿ ಭಂಗವಾಯಿತು. ಹಿಂದಾದ ಮುಂದಾಗಬೇಕಾದ ಹಲವಾರು ಯೋಚನೆಗಳು ಹೃದಯವನ್ನು ಮುತ್ತಿದವು:

ದಕ್ಷ! ನಾಮದಲ್ಲಿ ದಕ್ಷ! ಕ್ರಿಯೆಯಲ್ಲಿ ದಕ್ಷನಲ್ಲ. ಕೊನೆಗೂ ಅದಕ್ಷನಾಗಿ ಪ್ರವರ್ತಿಸುತ್ತಿರುವನು. ದುಷ್ಟರ ಹಠಕ್ಕೆ ದುರಂತವೇ ಫಲ. ಮಗಳನ್ನೇನೊ ಕೊಟ್ಟನು ಮನವನ್ನು ಕೊಡಲಿಲ್ಲ. ಪುತ್ರಿಯನ್ನು ಕೊಟ್ಟನು ಪ್ರೀತಿಯನ್ನು ಕೊಡಲಿಲ್ಲ. ಉದ್ದಕ್ಕೂ ಕಿರುಕುಳಗಳನ್ನೇ ಕೊಡುತ್ತಿರುವನು. ಮಾನ ಹೋಯಿತಂತೆ! ಮಾನ ಕೊಡಬೇಕಾಗಿತ್ತಂತೆ! ಸತ್ಯರ ಸಚ್ಚಾರಿತ್ರರ ಮಾನ ಎಂದಾದರೂ ಹೋಗುವುದೆ? ಕೊಡುವ ತೆಗೆದುಕೊಂಬುವ ಮಾನ ಚಿತ್ತಶುದ್ಧಿಯಿಲ್ಲದವರಲ್ಲಿ ನೆಲೆ ನಿಲ್ಲುವುದೆ? ಕೇಳಿ ಪಡೆವ ಮಾನ ಅದೊಂದು ಮಾನವೆ? ಕೇಳಿ ಪಡೆವ ಮಾನಕ್ಕೆ ದೇಶ ಕಾಲಗಳ ಅಗತ್ಯವಿಲ್ಲವೆ? ಪ್ರಸಕ್ತಿಯ ಔಚಿತ್ಯವಿಲ್ಲವೆ? ಪ್ರಸಂಗ ಪ್ರಸ್ತುತವಲ್ಲವೆ? ಅಲ್ಪ ಪ್ರಮಾದಕ್ಕೆ ಅನಲ್ಪ ಪ್ರಮಾದವನ್ನು ಪ್ರಾರಂಭಿಸಿ ಪ್ರಲಯಾಂತವಾಗಿ ಪ್ರಯತ್ನಿಸುವುದು ದಕ್ಷತೆಯೆ? ಪ್ರವರ್ಧನಕ್ಕೆ ಇದೇನೆ ಪ್ರಮಾಣ? ಸಂಕುಚಿತ ಸ್ವಭಾವಕ್ಕೆ ಇದಕ್ಕಿಂತ ಬೇರೆ ಸಾಕ್ಷಿ ಬೇಕೆ? ಅಧಿಕಾರ ಅಹಂಕಾರಗಳಿಗೆ ಒಳಗಾಗಿ ದೇವಲೋಕವನ್ನೇ ದಾರಿ ತಪ್ಪಿಸಬೇಕೆ? ಇದರಿಂದ ಉದ್ದೇಶ ಸಫಲವಾದಂತಾಯಿತೆ? ದಕ್ಷನಿಗೆ ತಂದೆಯ ಹೃದಯವೂ ಇಲ್ಲವಾಯಿತಲ್ಲಾ!

ನನ್ನನ್ನು ಅವಮಾನಿಸಲು ಯಾಗವನ್ನು ಆರಂಭಿಸಿದನು. ಇದಾವ ಸದುದ್ದೇಶ? ಇದರಿಂದ ಯಾವ ಸಂತೋಷ? ಸಂತಾಪದಲ್ಲಿ ತಾನೇ ಮುಮ್ಮೊದಲು ಬೇಯುತ್ತಿರುವುದು ತನಗೇ ತಿಳಿಯದಾಯಿತಲ್ಲಾ! ನನಗಾಗಿ ಏನಾದರೂ ಮಾಡಲಿ –ಎಂದು ಸಮಾಧಾನದಿಂದ ಇರಲಾಗಿತ್ತು. ಯಾಗದ ನೆಪದಲ್ಲಿ ನನಗೆ ಅವಮಾನಗೊಳಿಸುವುದೇ ಮನಸಿನ ಶಾಂತಿಗೆ ಸಾಧನವಾಗುವುದಾದರೆ ಆಗಲಿ ಎಂದುಕೊಂಡು ಸುಮ್ಮನಿರಲಾಗಿತ್ತು. ಆದರೆ ಯಾಗ ಪ್ರಯಾಗವಾಗದೆ ಪ್ರಲಯ ಯಾಗವಾಗಿದೆ; ಪ್ರಪಾತಕ್ಕಿಳಿದಿದೆ. ಇಂದು ಸಹಿಯ ಆಹುತಿ, ನಾಳೆ....? ಆಹುತಿಗಳಿಗೆ ಅಣಿಯಾಗಿರುವ ಈ ಪ್ರವೃತ್ತಿಯನ್ನು ಹೀಗೆಯೇ ಕೈಬಿಡುವುದು ವಿಹಿತವೆ? ಸಾಮದಿಂದ ಸಾಧ್ಯವಾಗದಿದ್ದರೆ ದಂಡದಿಂದ ದಕ್ಷನನ್ನು ದಾರಿಗೆ ತರುವುದು ನ್ಯಾಯಬದ್ಧವಾದ ಉಪಾಯ.

ಹೀಗೆ ಯೋಚಿಸಿ ನಚ್ಚಿನ ಬಂಟನಾದ ಕೆಚ್ಚಿನ ಕಾದಾಳುವಾದ ವೀರಭದ್ರನನ್ನು ಕರೆಯಿಸುವನು. ಹುರಿಗೊಂಡ ಮೀಸೆ, ಹರವಾದ ಎದೆ, ತುಂಬಿದ ತೋಳು, ತೀಕ್ಷ್ಣವಾದ ದೃಷ್ಟಿ, ನೀಳವಾದ ನಿಲವು, ಆಳವಾದ ಒಲವು, ತಲೆಯಲ್ಲಿ ಕಿರೀಟ, ಕೈಯಲ್ಲಿ ತ್ರಿಶೂಲ, ಕಾಲಲ್ಲಿ ಕಿರುಗೆಜ್ಜೆ, ಹಣೆಯಲ್ಲಿ ಭಸ್ಮತ್ರಿಪುಂಡ್ರ, ಕೊರಳಲ್ಲಿ ರುದ್ರಾಕ್ಷ ಮಾಲೆ, ಹೃದಯದಲ್ಲಿ ಶಿವಲಿಂಗಧಾರಣ, ಹೊಳೆವ ಮೊಗ, ಅಸೀಮ ಪರಾಕ್ರಮ, ಅತುಲ ಶಿವಪ್ರೇಮವುಳ್ಳ ಶ್ರೀ ವೀರಭದ್ರ ದೇವನು ಶಿವನ ಆಜ್ಞೆಯನ್ನು ಶಿರಸಾ ವಹಿಸಿ ಬಳಿಗೆ ಬಂದು ಬಾಗಿ ಭಕ್ತಿಯಿಂದ ವಂದಿಸುವನು, ಮುಂದಿನಂತೆ ಬಿನ್ನವಿಸುವನು:

ಏತಕ್ಕಾಗಿ ಅಪ್ಪಣೆಯಾಯಿತು ಮಹಾದೇವ?
ನಿನಗೆ ಗೊತ್ತಿಲ್ಲವೆ ವೀರಭದ್ರ?
ಗೊತ್ತಿಲ್ಲ ಮಹಾ ಪ್ರಭುವೆ!
ದಕ್ಷ ಯಾಗದಲ್ಲಿ ಒಂದು ದುರಂತ ನಡೆದು ಹೋಗಿದೆ.
ಅದೇನು ಅಂತಹ ದುರಂತ ಮಹಾಪ್ರಭು?
ಅದೋ, ಅದೊಂದು ಅನಿರ್ವಚನೀಯ ಸಂಗತಿ!

ವೀರಭದ್ರನು ಬೆರಗಾಗಿ, ಅಹುದೇ ಮಹಾಪ್ರಭುವೆ, ನಾನೂ ಕೇಳಿ ತಿಳಿಯಬಾರದ ಸಂಗತಿಯೇ ಅದು?

ಓ ವೀರೇಶ, ಅಲ್ಲ–ಹಾಗಲ್ಲ, ಅಪಾರ್ಥವನ್ನು ಮಾಡಬೇಡ. ಅನಿರ್ವಚನೀಯವೆಂದರೆ ನನಗೆ ಹೇಳಲು ಮಾತು ಬಾರದೆಂದಷ್ಟೇ ಅರ್ಥ. ವಿಯೋಗ ವ್ಯಥೆ ಅಂತಹದು ವೀರಭದ್ರ! ನಿನಗೆ ಹೇಳದೆ ಇನ್ನಾರಿಗೆ ಹೇಳಲಾದೀತು. ಇದೀಗ ಸುಧಾರಿಸಿಕೊಂಡಿರುವೆನು:

ಹೇಳುವೆನು ಕೇಳು;.... ಆಹುತಿ!

ವೀರಭದ್ರನು ಇದ್ದದ್ದು ಗಂಭೀರವಾದನು; ನಿಬ್ಬೆರಗನ್ನೂ ತಳೆದನು; ಮತ್ತು ತ್ವರಿತದಿಂದ ಕೇಳಿದನು, ಮಹಾಪ್ರಭು, ಅದಾರ ಆಹುತಿ? ಎನ್ನ ಎಡದೋಳು ಹಾರುತ್ತಿದೆ, ಬೇಗ ಹೇಳು!

ವೀರಭದ್ರ, ಸರ್ವಮಂಗಳೆಯಾದ ಸತೀದೇವಿಯ ಆಹುತಿ! ಆ ಮಾತನ್ನು ಕೇಳಿದೊಡನೆ ವೀರಭದ್ರನು ವೀರಕೇಸರಿಯಾದನು. ಗಗನ ಭೇದಿಸುವಂತೆ ಗರ್ಜಿಸಿದನು. ಎಲೋ ದುಷ್ಟ ದಕ್ಷನೇ, ಇದೋ ಇದೀಗ ನಿನ್ನನ್ನು ಧ್ವಂಸ ಮಾಡಿಬಿಡುವೆನು ಎಂದು ಆರ್ಭಟಿಸುವನು.

ವೀರಭದ್ರ, ಅಷ್ಟೊಂದು ಉಗ್ರನಾಗಬೇಡ. ಈ ಧ್ವಂಸ ಕಾರ್ಯ ನಮಗೆ ಈಗಲೇ ಬೇಡ. ತಾಳ್ಮೆಯಿಂದ ಹೋಗೋಣ! ತಾಳ್ಮೆಯೇ ಬಾಳಿನ ಬದುಕು.

ಇಂತಹದರಲ್ಲಿ ತಾಳ್ಮೆಯೆಂದರೇನು ಮಹಾಪ್ರಭುವೆ? ದುಷ್ಟರಿಗೆ ತಕ್ಕ ದಮನ ಬೇಡವೆ?

ಬೇಕು, ಅದಕ್ಕೆ ಅವಕಾಶವೂ ಬೇಕು.
ಅದೆಂತಹ ಅವಕಾಶ ಮಹಾದೇವ?

ವೀರಭದ್ರ, ಯಜ್ಞ ಮಂಟಪಕ್ಕೆ ಸುಸಜ್ಜಿತನಾಗಿಯೇ ತೆರಳು, ಅಲ್ಲಿ ಹೋಗಿ ಹಲವರನ್ನು ವಿಚಾರಿಸಿ ವಾಸ್ತವವಾದ ವಿದ್ಯಮಾನವನ್ನು ಅರಿತುಕೋ! ದಕ್ಷನದೇ ತಪ್ಪಿದ್ದರೆ ತಿಳಿಹೇಳು. ಇನ್ನಾದರೂ ಈ ದುರುದ್ದೇಶದ ಯಜ್ಞವನ್ನು ಮಾಡಬೇಡೆಂದು ಬೋಧಿಸು. ದಾರಿಗೆ ಬಾರದಿದ್ದರೆ ದಂಡನ ಮುಂದಿನ ಮಾತು.

ಹಾಗೆಯೇ ಆಗಲಿ ಮಹಾಪ್ರಭು! ಹೋಗಲು ಅಪ್ಪಣೆಯಾಗಲಿ; ಗೆಲುವಾಗಲು ಅನುಗ್ರಹವಾಗಲಿ.

ವೀರಭದ್ರನೇ, ನಿನಗೆ ಮಂಗಳವಾಗಲಿ, ನಿನ್ನ ಹೊಲಬಿನಲ್ಲಿ ಒಳಿತುಂಟಾಗಲಿ; ನಿನ್ನ ಬಾಳು ಬೆಳಗಲಿ.

ಮಹಾದೇವನ ಆಜ್ಞೆ ಅನುಗ್ರಹಗಳನ್ನು ಪಡೆದು ವೇಗದಲ್ಲಿ ಮನೆಗೆ ಬರುವನು. ನಡೆದ ಸಂಗತಿಯನ್ನು ತನ್ನ ಪತ್ನಿ ಭದ್ರಕಾಳಿಗೆ ತಿಳಿಸುವನು. ಕೇಳಿದೊಡನೆ ಭದ್ರಕಾಳಿಯೂ ಕೆರಳುವಳು. ಇದು ಕೇವಲ ಸತೀದೇವಿಯೊಬ್ಬಳ ಅವಮಾನವಲ್ಲ; ಇಡೀ ಸ್ತ್ರೀ ಲೋಕಕ್ಕೆ ಆದ ಅವಮಾನವಿದು. ದೇವಿಯ ಪ್ರಾಣ ಹೋದುದಕ್ಕೆ ನನಗೆ ಚಿಂತೆಯಿಲ್ಲ; ಆದ ಅವಮಾನ ಆತ ಆಡಿದ ನಿಂದೆ ಅಸಹನೀಯ. ಹೀಗಿರುವಾಗ ನಾನಿಲ್ಲಿ ಇರಲಾರೆ. ನಿಮ್ಮೊಡನೆ ನಾನೂ ಬರುವೆನು. ಯುದ್ಧವೇ ನಡೆಯುವ ಪ್ರಸಂಗ ಬಂದರೆ ನಾನೂ ನನ್ನ ಸೇವೆಯನ್ನು ಸಲ್ಲಿಸುವೆನು. ನನ್ನ ನೆರವಿಗೆ ನನ್ನ ಸಖಿಯರನ್ನೂ ಕರೆತರುವೆನು ಎಂದು ಹೇಳಿ ಭದ್ರಕಾಳಿಯು ತನ್ನ ಸ್ತ್ರೀ ಸಮೂಹದೊಡನೆ ಸನ್ನದ್ಧಳಾಗುವಳು.

ಇತ್ತ ವೀರಭದ್ರನು ತನ್ನ ಕೈಯಲ್ಲಿರುವ ರುದ್ರಗಣ ಮತ್ತು ಶಿವಗಣರಿಗೆ ಬರಲು ಆಜ್ಞೆಯನ್ನು ಮಾಡುವನು. ಮರು ಮಾತಿಲ್ಲದೆ ಮರುಕ್ಷಣದಲ್ಲಿ ಶಸ್ತ್ರ ಸಜ್ಜಿತರಾಗಿ ಬರುವವನು. ಶಿವಭಕ್ತಿ ಪರಾಯಣರಾದ ಅವರು ವಿಭೂತಿ ರುದ್ರಾಕ್ಷಿಗಳನ್ನು ಧರಿಸಿದ್ದರು. ಎಲ್ಲರೂ ಕಾಷಾಯ ವೇಷವುಳ್ಳವರಾಗಿದ್ದರು. ವೀರಧ್ವನಿಯನ್ನು ಮಾಡುತ್ತಿದ್ದರು. ಅಶ್ವ ಹಸ್ತಿ ರಥಾರೂಢರಾಗಿದ್ದರು. ಪದಾತಿಗಳೂ ಇದ್ದರು. ಗಣರು ಅಗಣಿತರಾಗಿದ್ದರು. ಇವರನ್ನೆಲ್ಲ ನೋಡಿ ವೀರಭದ್ರದೇವನು ಧೀರಶಾಂತನಾಗಿ ಹೀಗೆ ನುಡಿದನು:

ಓ ವೀರಭಟರೆ, ವೀರಗಣರೆ! ಈಗ ನಾವು ಹೊರಟಿರುವುದು ಧರ್ಮ ಯುದ್ಧಕ್ಕಾಗಿ! ಧರ್ಮವನ್ನು ಮೀರಿ ಯಾರೂ ದುಡುಕಬಾರದು. ಆಜ್ಞೆ ಆಗುವವರೆಗೂ ಯಾರೂ ಎದುರಾಳಿಗಳ ಮೇಲೆ ಬೀಳಬಾರದು. ನಯ ತಪ್ಪಿ ನುಡಿಯಬಾರದು. ಭಯ ಭ್ರಮಣಗಳಿಗೆ ಒಳಗಾಗಬಾರದು.

ಪ್ರಜಾಪತಿಯಾದ ದಕ್ಷಬ್ರಹ್ಮನೇ ದಾರಿ ತಪ್ಪಿದ್ದಾನೆ. ಶಿವ ಭಾವದಿಂದ ದೂರಾಗಿದ್ದಾನೆ. ಸರಳ ಸರಸ ಪ್ರವೃತ್ತಿಯೇ ಅವನಲ್ಲಿ ಇಲ್ಲದಾಗಿದೆ. ಸಹಕಾರ ಸಮಭಾವಗಳಿಲ್ಲವಾಗಿವೆ. ದೇವಗಣರನ್ನು ನಮ್ಮಿಂದ ಬೇರ್ಪಡಿಸಿ ಬಟ್ಟೆದಪ್ಪಿಸಿದ್ದಾನೆ. ಸಂಕುಚಿತ ಸ್ವಭಾವದಿಂದ ಸ್ವಾರ್ಥಾಹಂಕಾರಗಳಿಂದ ಉನ್ಮತ್ತನಾಗಿದ್ದಾನೆ. ದಯೆ ಮಮತೆ ನ್ಯಾಯ ನೀತಿಗಳೇ ಇಲ್ಲವಾಗಿವೆ. ದೇವಯಜ್ಞವನ್ನು ದಾನವೀಯ ಯಜ್ಞವನ್ನಾಗಿಸಿದ್ದಾನೆ. ಅಷ್ಟೇ ಅಲ್ಲ, ಸುತೆಯಾದ ಸತೀದೇವಿಯನ್ನು ಯಜ್ಞಾಗ್ನಿಗೆ ಆಹುತಿಯನ್ನಾಗಿಸಿದ್ದಾನೆ. ಈ ಮಾತನ್ನು ಕೇಳಿ ದಿಕ್ಕುಗಳೆಲ್ಲ ಕಿವುಡಾಗುವಂತೆ ಗಣರು ಗರ್ಜಿಸುವರು; ಉದ್ವೇಗಗೊಳ್ಳುವರು. ಹೊರಡಲು ಮುಂದಡಿಯಿಡುವರು. ತಡೆದು ವೀರಭದ್ರನು ಮರಳಿ ಮಾತನ್ನು ಮುಂದುವರಿಸುವನು; ಇದು ನಮ್ಮ ಹೆಗಲನೇರಿದ ಹೊಣೆಗಾರಿಕೆಯ ಕೆಲಸವಾಗಿದೆ. ಅನ್ಯೋನ್ಯವಾಗಿ ಕೈದುಗಳು ಕಾದಾಡುವುದೇ ಮುಖ್ಯವಲ್ಲ. ಕ್ಷಮೆಯೇ ಶ್ರೇಷ್ಠ ಶೀಲ. ಧೃತಿಯಂತೆ ಧರ್ಮವೂ ನಮ್ಮ ದೊಡ್ಡ ಆಸ್ತಿ. ನಮ್ಮ ಮುಂದೆ ಮೊದಲಿರುವುದು ನ್ಯಾಯವಾದ; ನೀತಿ ಬೋಧ; ಅಜ್ಞಾನ ಅಹಂಕಾರಗಳ ನಿರಸನ. ದಕ್ಷನ ದರ್ಪದಿಂದ ದುರ್ಬುದ್ಧಿಯಿಂದ ನಮ್ಮ ಗುರಿ ಕೈಗೂಡದಿದ್ದರೆ ಬಳಿಕ ಕಾಳಗದ ಕಥೆಯೆಂದು ಶಂಕರನ ಕಟ್ಟಪ್ಪಣೆಯಾಗಿದೆ. ಇದನ್ನು ನೀವೆಲ್ಲ ಚಾಚೂ ತಪ್ಪದೆ ಮನಸಾರೆ ಒಪ್ಪಿ

ನಡೆದುಕೊಳ್ಳಬೇಕೆಂದು ನಿತಿಯಿಂದ ವಿನಂತಿಸುವೆನು. ಈ ಕಾರ್ಯಕ್ಕೆ ನೆರವನ್ನೀಯಲು ತನ್ನ ಧರ್ಮಪತ್ನಿಯೂ ಮುಂದು ಬಂದಿದ್ದಾಳೆ. ಒಂದು ಆದರ್ಶವನ್ನು ಆರಂಭಿಸಿದ್ದಾಳೆ. ಇದರಿಂದಾಗಿ ನಾನು ಅವಳನ್ನು ಆದರದಿಂದ ಗೌರವಿಸುತ್ತೇನೆ. ಅವಳ ತ್ಯಾಗ ಅಭಿಮಾನ ಆಸಕ್ತಿ ಅಗಾಧ ಶಕ್ತಿ ಲೋಕಕ್ಕೆ ಆದರ್ಶವಾಗಿ ನಿಲ್ಲುವ ಸಂದರ್ಭ ಸನ್ನಿಹಿತವಾಗಿದೆ. ಅಂತೆಯೇ ನಿಮ್ಮೆಲ್ಲರ ನೆರವನ್ನೂ ನೆನೆಯದಿರೆನು. ನಿಮ್ಮೆಲ್ಲರ ಐಕ್ಯಮತ ಜೀವನ ಸತ್ಯ ಮೆಚ್ಚ ತಕ್ಕವು. ನೀವು ಸತ್ವಶಾಲಿಗಳಾದರೂ ಸಾತ್ವಿಕ ಪ್ರಜ್ಞೆಯುಳ್ಳವರಾಗಿದ್ದೀರಿ. ಶಿವಾಜ್ಞೆಯನ್ನು ಉಲ್ಲಂಘಿಸದೆ ನ್ಯಾಯದಲ್ಲಿ ನಡೆಯುವವರಾಗಿದ್ದೀರಿ. ಇದಕ್ಕಾಗಿ ನಿಮ್ಮೆಲ್ಲರನ್ನು ಅಭಿನಂದಿಸಿ ಮತ್ತೊಮ್ಮೆ ಅಭಿವಂದಿಸುವೆನು. ಇನ್ನು ಆ ಯಜ್ಞವಾಟಿಗೆ ಸಾಗೋಣ! ಶಿವಾಜ್ಞೆಯನ್ನು ಪಾಲಿಸೋಣ! ಸತ್ಯ ಧರ್ಮವನ್ನು ಎತ್ತಿ ಹಿಡಿಯೋಣ! ಎಂದು ಹೇಳಿದನಂತರ ಎಲ್ಲರೂ ಅಶ್ವ ಹಸ್ತಿರಥಗಳನ್ನೇರಿ ಪಯಣ ಬೆಳೆಸುವರು.

ಕುದುರೆಗಳು ಕೆನೆದವು, ಗಜಗಳು ಗುಡುಗಿ ಗೀಳಿಟ್ಟವು; ಹಸುಗಳು ಎತ್ತುಗಳು ಗಟ್ಟಿಯಾಗಿ ಕೂಗಿದವು. ಗಣರ ವೀರವಾಣಿ ನಾಲ್ದೆಸೆಗೆ ಮೊಳಗಿತು. ಆ ದೊಡ್ಡ ಧ್ವನಿಗೆ ಬೆಟ್ಟಗಳು ಬಿರುಕು ಬಿಟ್ಟವು. ಭೂಮಿಯು ಕಂಪಿಸಿತು. ಚತುರಂಗ ಬಲದ ನಡಿಗೆಯ ವೇಗಕ್ಕೆ ಬಿರುಗಾಳಿಯೆದ್ದು ಕಡಲವನ್ನು ಕದಡಿತು. ಮರಗಳನ್ನು ಮುರಿದ್ದಿಕ್ಕಿತು. ಒಂದುಗೂಡಿದ ಆ ರುದ್ರ ಗಣರ ತೇಜಸ್ಸು ಭುವಿ ಬಾನಗಳಲ್ಲಿ ಹರಡಿ ರವಿ ಶಶಿಗಳು ತೇಜೋಹೀನರಾದರು. ಶುಕ್ರಾದಿ ಗ್ರಹಗಳು ಮಂಕಾದವು. ನಕ್ಷತ್ರಗಳು ಕೆಳಗುರುಳಿದವು.

ವೀರಭದ್ರನೂ ಉಳಿದ ವೀರಗಣರೂ ಪರ್ವತಗಳಂತೆ ಅಭೇದ್ಯರಾಗಿದ್ದರು. ಲಕ್ಷಾಂತರ ರಥಗಳನ್ನೇರಿ ಕಲಶ ಕನ್ನಡಿಗಳಿಂದ ವಿರಾಜಮಾನರಾಗಿ ಪ್ರಯಾಣ ಮಾಡಿದರು.

ಯಜ್ಞಭೂಮಿ ಯಾವುದು?

ದಕ್ಷ ಬ್ರಹ್ಮನ ಯಜ್ಞಭೂಮಿ ಯಾವುದು, ಎಲ್ಲಿ? ಎಂಬ ಪ್ರಶ್ನೆಯಿಲ್ಲದಿಲ್ಲ. ಒಬ್ಬೊಬ್ಬರು ಒಂದೊಂದು ಬಗೆಯಾಗಿ ಹೇಳಿರುವರು. ಒಬ್ಬರು ಭೀಮಾದ್ರಿಯಲ್ಲಿದೆಯೆಂದರೆ ಇನ್ನೊಬ್ಬರು ಹೇಮಾದ್ರಿಯಲ್ಲಿದೆ ಯೆನ್ನುತ್ತಾರೆ. ಮತ್ತೊಬ್ಬರು ಮತ್ತೊಂದು ಕಡೆಯಿದೆ ಯೆನ್ನುತ್ತಾರೆ.

"ನಾರಾಯಣ ತನ್ನ ಲೋಕದಲ್ಲಿ ಮಾಡಿದ ಮಂಟಪದಂತಲ್ಲ.
ಇಂದ್ರ ನಿಜ ವನದಲ್ಲಿ ಮಾಡಿದ ಮಂಟಪದಂತಲ್ಲ.
ವೀರಭದ್ರ ಭೀಮಾದ್ರಿಯಲ್ಲಿ ರಚಿಸಿದ ಪೂಜಾಮಂಟಪದಂತಲ್ಲ.
ಇಲ್ಲಿರ್ಪ ಮಂಟಪದ ಉದಯವ ನೋಡಿದಡೆ.
ಇದರ ವಿಸ್ತಾರ ಅರಿದಯ್ಯ ಕೂಡಲ ಚನ್ನಸಂಗಮದೇವಾ."

-ಚನ್ನಬಸವಣ್ಣ, ವ.ಪು. ೧೫೫.

ಈ ವಚನದಲ್ಲಿ ವೀರಭದ್ರನು ಭೀಮಾದ್ರಿಯಲ್ಲಿ ಒಂದು ಪೂಜಾ ಮಂಟಪವನ್ನು ರಚಿಸಿದ್ದಂತೆ ತಿಳಿದು ಬರುತ್ತದೆ. ವೀರಭದ್ರನ ಮಂಟಪ ಇರುವುದು ಸಾಮಾನ್ಯವಾಗಿ ದಕ್ಷಯಾಗ ವಾಟಿಯಲ್ಲಿ! ಇದರಿಂದಾಗಿ ಇದೂ ಸಹ ಹಾಗೆಯೇ ಇರಬಹುದೇನೋ ಎಂದೆನಿಸುತ್ತದೆ.

"ಹಿಮ ವಚ್ಛಿಖರೇ ರಮ್ಯೇ ಹೇಮಶೃಂಗೇ ಸುಶೋಭನೇ ।
ಯಜ್ಞ ವಾಟಸ್ತದಾ ತಸ್ಯ ಗಂಗಾದ್ವಾರ ಸಮೀಪಗಃ ।
ತದ್ದೈ ಕನಖಲಂ ಖ್ಯಾತಂ ನಿಖಿಲೈರಮರೈರ್ವೃತಂ ॥"

-ಶಿವರಹಸ್ಯ, ಅ-೬, ಶ್ಲೋ. ೩೭-೩೮.

ದಕ್ಷನ ಯಜ್ಞ ಮಂಟಪವು ಗಂಗಾದ್ವಾರದ ಸಮೀಪದಲ್ಲಿರುವ ಹಿಮಾದ್ರಿಯ ತಪ್ಪಲಲ್ಲಿ ಸುವರ್ಣಮಯವಾದ ಶಿಖರ ಭಾಗದಲ್ಲಿದೆ. ರಮ್ಯವಾಗಿದೆ. ಅದಿರುವ ಭೂಮಿಗೆ "ಕನಖಲ ಕ್ಷೇತ್ರ"ವೆಂದು ಹೆಸರು. ಈಗಲೂ ಅದೇ ಹೆಸರಿನಲ್ಲಿ

ಪ್ರಸಿದ್ಧವಾಗಿದೆಯಂತೆ. ಅಲ್ಲಿರುವ ಆಗಿನ ಆ ಯಜ್ಞಕ್ಕೆ ಎಲ್ಲ ದೇವತೆಗಳೂ ಬಂದಿದ್ದರು.

ಈ ಕನಖಳ ನಗರವು ಪಶ್ಚಿಮದಲ್ಲಿದೆಯೆಂದು, ಹರಿದ್ವಾರದ ಹತ್ತಿರದಲ್ಲಿದೆಯೆಂದು ಹೇಳುತ್ತಾರೆ.

ಇದಲ್ಲದೆ ಕನ್ನಡ ನಾಡಿನ ಒಂದು ಜಿಲ್ಲೆ ಬೆಳಗಾವಿ. ಆ ಜಿಲ್ಲೆಯ ಒಂದು ತಾಲೂಕು ಚಿಕ್ಕೋಡಿ. ಆ ತಾಲೂಕಿನೊಳಗಿನ ಒಂದು ಊರು ಯಡೂರು. ಇದು ಪೂರ್ವದಲ್ಲಿ ಸ್ವರ್ಗೀಯ ಗ್ರಾಮವೆಂದು ಹೇಳುತ್ತಾರೆ. ಈಗಲೂ ಇಲ್ಲಿ ರಂಭೆ ಊರ್ವಶಿಯರ ಮತ್ತು ಕಿನ್ನರ ಕಿಂಪುರುಷರ ಮನೆತನಗಳಿವೆ. ಇಲ್ಲಿಯೇ ದಕ್ಷನ ಯಜ್ಞಕುಂಡವಿದೆ. ದೊಡ್ಡದಾಗಿದೆ. ದಕ್ಷನು ಇಲ್ಲಿಯೇ ಯಜ್ಞ ಮಾಡಿದನೆಂದು ಹೇಳುತ್ತಾರೆ. ಇದು ಕೃಷ್ಣಾನದಿಯ ತೀರದಲ್ಲಿದೆ. ಅಗ್ನಿಕುಂಡ ಪುರಾತನದ್ದಾಗಿದೆ. ಆ ಅಗ್ನಿಕುಂಡದಲ್ಲಿಯೇ ವೀರಭದ್ರನ ಗುಡಿಯಿದೆ. ಯಜ್ಞ ಮಂಟಪ ಮೇಲಿದೆ. ವಿಶಾಲ ಸ್ಥಲದಲ್ಲಿದೆ. ಅಗ್ನಿಕುಂಡ ದಕ್ಷಿಣೋತ್ತರ ೧೨೫ ಅಡಿಗಳಷ್ಟಿದೆ; ಪೂರ್ವ ಪಶ್ಚಿಮ ೮೫ ಅಡಿಗಳಷ್ಟಿದೆ ಅಗ್ನಿಕುಂಡದ ಮಧ್ಯದಲ್ಲಿ ಗರ್ಭಗುಡಿಯಿದೆ. ಅಗ್ನಿಕುಂಡ ಮತ್ತು ಗರ್ಭಗುಡಿಯನ್ನು ಕ್ರಿ.ಶ. ಸು. ೮೦೦ ವರುಷಗಳ ಹಿಂದೆ ಮೇವಾಡದ ಅರಸನು ಕಟ್ಟಿಸಿರುವನೆಂದು ಹೇಳುತ್ತಾರೆ. ಇಲ್ಲಿರುವ ವೀರಭದ್ರಸ್ವಾಮಿಯ ಮೂಲ ಅರ್ಚಕರು ಕಾಡಸಿದ್ಧೇಶ್ವರ ಪಟ್ಟಚರಮೂರ್ತಿಗಳವರು. ಇದೊಂದು ಶಿವಚಾರ್ಯ ಮಠ. ವೀರ ಗೋತ್ರ (ವಂಶ)ಕ್ಕೆ ಸೇರಿದ ಮಠ. ಇವರಿಗೆ ಈ ಹಕ್ಕು ಇರುವುದು ಗಮನಾರ್ಹವಾದ ವಿಷಯ. ಇವರ ಕೈಯಲ್ಲಿ ೨೧ ಮನೆಯ ಸೇವಕರು ಇರುವರು. ಇವರೆಲ್ಲ ನಿತ್ಯ ವೀರಭದ್ರಸ್ವಾಮಿಯ ಸೇವೆಯಲ್ಲಿ ನಿರತರಾಗಿರುವರು. ಇನ್ನೊಂದು ಸ್ವಾರಸ್ಯ ವಿಚಾರವೆಂದರೆ, ಯಡೂರಿಗೆ ನಾಲ್ಕುಮೈಲಿ ದೂರದಲ್ಲಿ ಕಿದರಾಪುರ ಎಂಬ ಗ್ರಾಮವಿದೆ. ಇದು 'ವಿರೂಪಾಕ್ಷ' ಇರುವ ಊರು. ಇಲ್ಲಿ 'ಕೋಪೇಶ್ವರ'ನ ದೇವಸ್ಥಾನವಿದೆ. ಸತೀ ಆಹುತಿಯಾದುದನ್ನು ಕೇಳಿ ಕೋಪಗೊಂಡ ಶಿವನ ಸ್ಮಾರಕಕ್ಕೆ ಇದು ಪ್ರತೀಕವಾಗಿದೆ. ಅಲ್ಲದೆ ಅದೇ ಯಡೂರಿನ ಮೂಡಲಕ್ಕೆ ಎರಡು ಮೈಲಿ ದೂರದಲ್ಲಿ ಕಡೆಬಾಗಿಲ ವೀರಣ್ಣನ ವಿಗ್ರಹವಿದೆಯಂತೆ ದಾಕ್ಷಾಯಿಣಿ ನಂದಿ ಇಬ್ಬರು ಯಜ್ಞ ಮಂಟಪಕ್ಕೆ ಬಂದ ದಾರಿಯೂ ಇದು ಎಂದು ಹೇಳುವರು. ಯಡೂರಿನ ಬಡಗಲ ದಿಕ್ಕಿಗೆ ಒಂದೂವರೆ ಮೈಲಿನಲ್ಲಿ "ಚಂದೂರು" ಎಂಬ ಊರಿದೆ ಇದು ಚಂದ್ರೇಶ್ವರ ಗಣನಿಗೆ ಸಂಬಂಧಿಸಿದುದು. ಚಂದ್ರೇಶ್ವರನು ದಾಕ್ಷಾಯಿಣಿಯೊಡನೆ ಬಂದವನೊಬ್ಬನಂತೆ! ಯಡೂರಿನ ಪಡುವಲಕ್ಕೆ ಒಂದು ಮೈಲಿನ ಮೇಲೆ ರಾಮಲಿಂಗ ಗುಡಿಯಿದೆ. ಇಲ್ಲಿ ವಿಭೂತಿ ಈಗಲೂ ದೊರೆಯುತ್ತದಂತೆ! ಇದನ್ನು ತಂದು ಧರಿಸಿಕೊಂಡರೆ ಒಂದು ದಿನವಾದರೂ ಅಳಿಸಿ ಹೋಗುವುದಿಲ್ಲವಂತೆ! ತೆಂಕಣಕ್ಕೆ ಕೃಷ್ಣಾ ನದಿಯಿದೆ; ಚಂದ್ರಾಕಾರವಾಗಿದೆ. ಉತ್ತರದಿಂದ ಪಶ್ಚಿಮಕ್ಕೆ ಹರಿದು ಬಳಿಕ ಪೂರ್ವವಾಹಿನಿಯಾಗಿ ಹರಿದಿದೆ. ಇದು ಕ್ಷೇತ್ರಕ್ಕೆ ಬಲಗಡೆಯಿದೆ. ಅಗ್ನಿಕುಂಡಕ್ಕೆ ಯಜ್ಞಮಂಟಪಕ್ಕೆ ಅನತಿ ದೂರದಲ್ಲಿದೆ. ದಿನಾಂಕ: ೨೨.೨.೧೯೯೪ರಲ್ಲಿ ಅಲ್ಲಿಗೆ ನಾವೇ ಹೋಗಿ ಇದೆಲ್ಲವನ್ನು ಶೋಧಿಸಿ ವಿಚಾರಿಸಿಕೊಂಡಿರುವೆವು.

ಇಷ್ಟೆಲ್ಲ ವಿವರಣೆಯಿಂದ ಯಡೂರು (ಎಡೆಯೂರು) ದಕ್ಷಬ್ರಹ್ಮನ ಜನ್ನದ ಎಡೆಯಾಗಿರಬೇಕೆಂದೆನಿಸುತ್ತದೆ. ಇದು ದಿಟವಾಗುವುದಾದರೆ ವೀರಭದ್ರನು ಕನ್ನಡಿಗನೆಂಬುದಕ್ಕೆ ಹೆಚ್ಚು ಪುಷ್ಠಿ ದೊರೆಯುತ್ತದೆ. ಈ ಊರು ಜನ್ನಕ್ಕೆ ಎಡೆಯಾಗಿರುವುದರಿಂದ ಈ ಹೆಸರು ಬಂದಿರಬೇಕೆಂದೆನಿಸುತ್ತದೆ. ಯಡೂರು ಎಡೆಯೂರು ಪದದ ಗ್ರಾಮ್ಯವಾಗಿ ರೂಢಿಗೆ ಬಂದಿರಬೇಕು. ಯಡೂರು ಇಂದಿಗೂ ಪುಣ್ಯಕ್ಷೇತ್ರವಾಗಿದೆ. ಸುತ್ತಲೂ ಇರುವ ಕುರುಹುಗಳಿಂದ ಇದುವೆ ಯಜ್ಞಭೂಮಿಯೆಂದು ಅರ್ಥವಾಗುತ್ತದೆ.

"ಅದ್ಯ ನೀಲಗಿರೇಸ್ತಸ್ಮಾದ್ಧಂ ದ್ವಾರ ಸಮೀಪತಃ" **–ಸ್ಕಾಂದಪುರಾಣ**

ಇಂದು ನಾನು ನೀಲಾಚಲದಿಂದ ಬರುತ್ತ ಹರಿದ್ವಾರದ ಬಳಿ ಆಶ್ಚರ್ಯಕರವಾದ ದಕ್ಷ ಯಾಗವನ್ನು ಕಂಡೆನೆಂದು ನಾರದನು ಶಿವ–ಶಿವೆಯರಿಗೆ ಹೇಳುತ್ತಾನೆ.

ಯಜ್ಞ ಪ್ರವೇಶ–ಪ್ರಜ್ಞೋಪದೇಶ

ವಿರಾಟ ಪುರುಷನಾದ ಧೀರೋದಾತ್ತನಾದ ವೀರಭದ್ರ ದೇವನು ತನ್ನೊಡನೆ ಬಂದ ಸರ್ವಗಣರನ್ನು ಯಜ್ಞಮಂಟಪದ ಹೊರಭಾಗದಲ್ಲಿ ನಿಲ್ಲಿಸಿ ತಾನು ಮಾತ್ರ ಒಳಕ್ಕೆ ಹೋಗುವನು. ದಕ್ಷನನ್ನು ನೋಡುವವನು. ಸಿಟ್ಟಿಗೇಳದೆ ಶಿವಾಜ್ಞೆಯಂತೆ ಶಾಂತಿಯಿಂದ ಹೀಗೆ ಮಾತಿಗೆ ಮೊದಲು ಮಾಡುವನು:

"ದಕ್ಷ ದಕ್ಷೋಽಸಿ ನಿತರಾಂ ಸುರೈಸ್ಸಹ ಮುನೀಶ್ವರೈಃ ।
ಏತೇ ಚ ಬ್ರಹ್ಮವಿಷ್ಣ್ವಾದ್ಯಾ ಮೋಹಿತಾ ಶಿವಮಾಯಯಾ ॥"

ಓ ದಕ್ಷಬ್ರಹ್ಮನೆ, ಈ ಸುರಮುನಿಗಳೊಡನೆ ಕೂಡಿಕೊಂಡ ನೀನು ಅತ್ಯಂತ ಸಮರ್ಥನೂ ದಕ್ಷನೂ ಆಗಿರುವೆ. ಆದರೆ ನಿನ್ನೊಡನೆ ಇರುವ ನಿನಗೆ ಹಿರಿಯರಾಗಿ ಬಂದಿರುವ ಈ ಬ್ರಹ್ಮ ಈ ವಿಷ್ಣು ಮುಂತಾದವರು ಮಾಯೆಗೆ ಸಿಕ್ಕಿ ಮೋಹಿತರಾಗಿದ್ದಾರೆ; ಮೂಢರಾಗಿದ್ದಾರೆ. ಇವರ ಮಾತು ಕೇಳಿ ನೀನು ಪರಮಪ್ರಭುವಾದ ಯಜ್ಞೇಶ್ವರನಾದ ಶಿವನಿಗೆ ಯಜ್ಞ ಭಾಗವನ್ನು ಸಮರ್ಪಿಸಿಲ್ಲ. ಅಲ್ಲದೆ ಅದಕ್ಕಾಗಿ ನಿನ್ನಲ್ಲಿಗೆ ಬಂದ ಜಗನ್ಮಾತೆಯೂ ನಿನ್ನ ಪುತ್ರಿಯೂ ಆದ ಸತೀದೇವಿಯು ಈ ಯಜ್ಞದಲ್ಲಿ ದೇಹತ್ಯಾಗ ಮಾಡಿದಳು. ಇದಕ್ಕಾಗಿ ಶಿವನು ತುಂಬಾ ನೊಂದಿರುವನು; ನನ್ನನ್ನು ಶಾಂತಿ ಸಂಧಾನಕ್ಕಾಗಿ ಕಳುಹಿರುವನು. ಇದು ಸಾಧ್ಯವಾಗದಿದ್ದರೆ ನ್ಯಾಯ ದೊರೆಯದಿದ್ದರೆ ಅನ್ಯಾಯಕ್ಕೆ ಅಕ್ರಮಕ್ಕೆ ತಕ್ಕ ಶಿಕ್ಷೆಯನ್ನು ವಿಧಿಸಲೂ ಸಹ ಸರ್ವಸ್ವಾತಂತ್ರ್ಯದ ಆಜ್ಞೆಯೂ ಆಗಿದೆ. ಇರಲಿ.

ಸೃಷ್ಟಿಗೆಲ್ಲ ಆಧಾರ ಶಿವನು. ಆತನ ಪ್ರಸಾದದಿಂದ ನೀವೆಲ್ಲರೂ ಹುಟ್ಟಿದಿರಿ; ಬೆಳೆದಿರಿ. ಬಲವಂತರಾದಿರಿ. ಅಧಿಕಾರಿಗಳೂ ಆಗಿ ಜಗತ್ತನ್ನು ಪರಿಪಾಲಿಸುತ್ತಿರುವಿರಿ. ಪ್ರಜಾತಿಗಳಾಗಿರುವಿರಿ. ಬ್ರಹ್ಮತ್ವ ವಿಷ್ಣುತ್ವ ಇಂದ್ರತ್ವಗಳನ್ನು ಪಡೆದಿರಿ. ಹೀಗಿದ್ದೂ ಇಷ್ಟು ಬೇಗ ಶಿವನನ್ನು ಮರೆಯುವುದು ಉಚಿತವೆ? ಶಿವನನ್ನು ನೆನೆದರೆ ಸಾಕು ಸಂಸಾರ ಸಾಗರವನ್ನು ಸುಖವಾಗಿ ದಾಟುವ ಶಕ್ತಿ ಬರುತ್ತದೆ. ಆತನ ಅನುಗ್ರಹವೇ ಎಲ್ಲಕ್ಕೂ ಕಾರಣ. ಅದೊಂದಿದ್ದರೆ ಎಲ್ಲ ಬಗೆಯ ಐಶ್ವರ್ಯಗಳೂ ಅಧಿಕಾರಗಳೂ ಲಭ್ಯವಾಗುತ್ತವೆ. ಮಹಾ ಮಹಾ ವಿಪತ್ತುಗಳು ಮಾಯವಾಗುತ್ತವೆ; ಮಹತ್ಕಾರ್ಯಗಳು ಕೈಗೂಡುತ್ತವೆ. ಇರುವೆ ರುದ್ರನಾಗುತ್ತದೆ. ಹುಲ್ಲು ಹೆಬ್ಬೆಟ್ಟವಾಗುತ್ತದೆ. ಆತನ ಅನುಗ್ರಹಕ್ಕೆ ಪಾತ್ರನಾದವನು ಎಂತಹ ಕಠಿಣವಾದ ಕೆಲಸವನ್ನಾದರೂ ಲೀಲಾಜಾಲವಾಗಿ ಮಾಡಿ ಮುಗಿಸಬಲ್ಲನು.

ಅವನಿಲ್ಲದೆ ಈ ಜಗತ್ತಿಲ್ಲ. ಈ ಜಾಗತಿಕ ಶಕ್ತಿಗಳಿಲ್ಲ. ಅವನ ಕರುಣೆಯಿಲ್ಲದೆ ಈ ಗಾಳಿ ಬೀಸದು; ಈ ಬೆಂಕಿ ಸುಡದು. ಈ ನೀರು ಹರಿಯದು; ಈ ನೆಲ ನೆಲಸದು; ಬೆಳೆಯದು. ರವಿ ಶಶಿಗಳು ಬೆಳಗವು. ಮೇಘಗಳು ವರ್ಷಿಸವು. ಎಲ್ಲವೂ ಎಲ್ಲರೂ ಆತನಿಂದ ನಿಯಮ್ಯರು. ಆತನನ್ನು ಮರೆಹೋಗುವುದರಿಂದ ಏನೆಲ್ಲವೂ ಸುಲಬವಾಗಿ ಸಿದ್ಧಿಸುತ್ತದೆ. ಆತನ ಆಶ್ರಮವೆ ಎಲ್ಲಕ್ಕೂ ಆಧಾರ. ಅದೇ ಸರ್ವಸಮರ್ಥವಾದ ಮಂದಾರ.

ಹೀಗಿದ್ದು ಇದೆಲ್ಲವನ್ನು ನೀನು ತಿಳಿದಿದ್ದು ಈಗೇಕೆ ಹೀಗೆ ಮಾಡುತ್ತಿರುವೆ? ನಿನ್ನ ದಕ್ಷತೆ ಎತ್ತ ಹೋಗಿದೆ? ದೈವೀಭಾವದೊಡನೆ ದಯಾಮಯ ಹೃದಯವನ್ನೂ ಕಳೆದುಕೊಂಡಿರುವೆಯಲ್ಲಾ! ಇದು ನಿನಗೆ ಉಚಿತವಲ್ಲ. ದೊಡ್ಡವರೊಡನೆ ಎಂದಿಗೂ ಸೆಣಸಾಡಬಾರದು. ಅಂಥವರ ತಪ್ಪುಗಳನ್ನು ಎಣಿಸುವುದು ಲಾಭವಲ್ಲದ ಕೆಲಸ. ಅವರು ಮಾಡುವುದೆಲ್ಲ ಲೀಲೆ.

ನಿನ್ನ ತಂದೆ ಬ್ರಹ್ಮನಿಗೆ ತಿಳಿಯದಾಯಿತೆ? ಜಗದ್ರಕ್ಷಕನಾದ ಈ ವಿಷ್ಣುವಿಗೂ ಇದೂ ಹೊಳೆಯದಾಯಿತೆ? ಇಂದ್ರನೇಕೆ ಹೀಗಾದನು? ಕುಬೇರನಿಗೇಕೆ ಈ ಕುತ್ಸಿತ ಬುದ್ಧಿ ಬಂದಿತು?

ಹೀಗೆ ಹಿತೋಪದೇಶ ಮಾಡುತ್ತಿರುವಾಗ ಮಧ್ಯದಲ್ಲಿ ದಕ್ಷ ಬ್ರಹ್ಮನು ಮಾತನಾಡುವನು:

ನೀನಾರು?
ನಾನು ವೀರೇಶ!

ಓ, ವೀರೇಶನೆ? ಕಿರಿಯನಾದ ನೀನು ಹಿರಿಯರಿಗೆ ಹೀಗೆಲ್ಲ ಮನಸ್ವಿಯಾಗಿ ಮಾತನಾಡಬಾರದು. ಈಗ ಮಾತನಾಡಿದ್ದುದೇ ಸರಿ. ಇನ್ನು ಮಾತನಾಡಿದರೆ ಲೇಸಾಗದು ತಿಳಿಯಿತೆ?

ಪ್ರಜಾಪತಿಯೆ, ನ್ಯಾಯಕ್ಕೆ ಹಿರಿ ಕಿರಿಯರೆಂಬುದುಂಟೆ? ಸಾಲದ್ದಕ್ಕೆ ಹಿರಿಯರೆನಿಸಲು ವಯಸ್ಸೊಂದೇ ಕಾರಣವೇನು? 'ಕಂಡುದನ್ನು ಆಡಿದರೆ ಕೆಂಡದಂತಹ ಕೋಪ' ಎಂಬ ನಾಣ್ಣುಡಿ ನಿಜವಾಯಿತಲ್ಲವೆ? ಮನಸ್ವಿಯಾಗಿ ಮಾತಾಡಿದ್ದೇನೆ? ಪ್ರತಿಯಾಗಿ ಮನಸ್ವಿಯಾಗಿ ಆಡುವವರು ಮಾಡುವವರು

ನೀವಲ್ಲವೆ? ಇದರ ಎಚ್ಚರ ನಿನಗಿರಬೇಡವೆ? ಸತೀದೇವಿಯ ಮುಂದೆ, ದಧೀಚಿ ಋಷಿಯ ಮುಂದೆ ಶಿವನನ್ನು ದೂಷಿಸಿದವರಾರು? ಹಿರಿಯನಾದ ಹರನನ್ನು ಈ ಯಾಗದಿಂದ ದೂರ ಮಾಡಿದವರಾರು? 'ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ ಎಂಬ ನಂದೀಶ್ವರನ ಗುಡಿ ನಿನಗೆ ಗೊತ್ತಿಲ್ಲವೆ?'

ಮುಂಗೈ ಹುಣ್ಣಿಗೆ ಅಂಗೈ ಕನ್ನಡಿ ಬೇಕೆ? ನಿನ್ನ ಬಹಿರಂಗ ಅಂತರಂಗಗಳು ನಿರ್ಮಲವಾಗಿವೆಯೆ? ನಿನ್ನನ್ನು ನೀನೇ ನೋಡಿಕೋ! ನಿನಗಿದು ತಿಳಿಯದೇನು? ನೀನು ಹಿಡಿದ ಹಾದಿ ಹಸನಾಗಿದೆಂಯೆ? ಯಜ್ಞವೆಂದರೇನು? ವ್ಯಕ್ತಿದ್ವೇಷವೆಂದರೇನು? ದ್ವೇಷಕ್ಕೆ ಲಕ್ಷ್ಯವಾದ ವ್ಯಕ್ತಿ ಮಹತ್ವವನ್ನರಿಯದೆ ದುರಹಂಕಾರಕ್ಕೆ ದುಡುಕುವುದೆ? ದೇವಗಣರನ್ನೆಲ್ಲ ದಾರಿ ತಪ್ಪಿಸುವುದೆ? ದುರ್ಮಾರ್ಗದಲ್ಲಿ ಪ್ರವರ್ತಿಸುವುದೆ? ಪ್ರಜರಿಗೆಲ್ಲ ಪ್ರಜ್ಞೆಯನ್ನು ಹೇಳುವ ಮಟ್ಟದಲ್ಲಿರುವ ನಿನ್ನಂಥವರು ಪಥ ತಪ್ಪಿ ನಡೆದರೆ ಗತಿಯೇನು? ನಿನ್ನ ಸುತಳಾದ ಸತೀದೇವಿಯ ಹತ್ಯಾಕಾಂಡಕ್ಕೆ ಕಾರಣರಾರು? ಇಷ್ಟಾದರೂ ಇನ್ನೂ ಯಜ್ಞವನ್ನು ಮುಂದುವರಿಸುತ್ತಿರುವುದು ಪಿತೃ ಧರ್ಮವೇನು? ಪ್ರಾಜ್ಞತೆಯ ಲಕ್ಷಣವಲ್ಲದೆ ಪ್ರಜ್ಞೆಯುಳ್ಳವರ ಲಕ್ಷಣವೇನು? ಮಗಳ ವಿಯೋಗವು ನಿನ್ನ ಮನಸ್ಸಿಗೆ ಬಾರದಾಯಿತಲ್ಲವೆ? ಯಾವ ಮಹಾಪ್ರಾಪ್ತಿಗಾಗಿ ನೀನು ಈ ಯಾಗವನ್ನು ಸಾಗಿಸುತ್ತಿರುವೆ? ನರಾಹುತಿಗೆ ಕಾರಣವಾದದು ಯಾಗವೆ? ಮಾಡುವವರು ಯಾಜಕರೆ? ಮಾಡಿಸುವವರು ಮಾನವೀಯ ಪ್ರಜ್ಞೆಯುಳ್ಳವರೆ? ಮಾನ್ಯರಾಗಿ ಇಲ್ಲಿ ಬಂದು ಭಾಗವಹಿಸಿದವರು ನಿಜವಾಗಿಯೂ ಮಾನ್ಯರೆ? ಹೀಗಿದ್ದು ದಕ್ಷನೆ, ವ್ಯರ್ಥವಾಗಿ ಸಲ್ಲದ ಉತ್ತರವನ್ನು ಕೊಡುತ್ತಿರುವೆಯಲ್ಲಾ! ಶಾಂತಿ ಸಂಧಾನಕ್ಕೆ ನಾನು ಪ್ರಯತ್ನಿಸಿದರೆ ಭ್ರಾಂತಿಯಿಂದ ಕ್ರೋಧದಲ್ಲಿ ಮುಂದುವರಿಯುತ್ತಿರುವೆ ನೀನು! ಇದು ನಿನಗೆ ಸರಿಯಲ್ಲ ಚನ್ನಾಗಿ ವಿಚಾರ ಮಾಡು. ಚಿತ್ತ ಶುದ್ಧಿಯಿಂದ ನನ್ನನ್ನು ನೋಡು.

ನೀನು ರಾಯಭಾರಕ್ಕೆ ಬಂದಿರುವೆಯಾ?
ಅಹುದು ಪ್ರಜಾಪತಿಯೆ!
ಹಾಗಾದರೆ ನಿನ್ನ ಸಂಧಾನ ಷರತ್ತುಗಳೇನು?
ನಾನು ಹೇಳುವುದು ಎರಡೇ ಷರತ್ತು:

ಒಂದು ಯಜ್ಞವನ್ನು ಈ ಕ್ಷಣವೆ ನಿಲ್ಲಿಸುವುದು. ಇನ್ನೊಂದು ಈಗಲೇ ನೀನು ಈ ಬ್ರಹ್ಮ ವಿಷ್ಣು ಮೊದಲಾದ ಎಲ್ಲ ದೇವತೆಗಳೊಡನೆ ಹೋಗಿ ಶಿವನಿಗೆ ಶರಣಾಗುವುದು.

ಇವೆರಡೂ ಆಗದ ಮಾತುಗಳು. ನಮ್ಮ ಧ್ಯೇಯಕ್ಕೆ ಹೊರತಾದವುಗಳು. ಪ್ರತಿಯಾಗಿ ಆ ಕಿರಾತನೇ ಬಂದು ನಮಗೆ ಶರಣಾಗಬೇಕು. ತಿಳಿಯಿತೆ? ಮುಂದೆ ಮಾತು ಬೇಡ. ನಿನ್ನಿಷ್ಟಕ್ಕೆ ನೀನು ಇಲ್ಲಿಂದ ತೆರಳು.

ಎಲೋ ದುರ್ಮದಾಂಧನಾದ ದಕ್ಷನೇ, ಮುಚ್ಚು ಬಾಯಿ! ಬಲ್ಲಂತೆ ಬೊಗಳದಿರು! ಏನು, ಆ ಕಾಲಾರಿಯು ಕಿರಾತನೆ? ಆತನು ನಿನಗೆ ಶರಣಾಗಬೇಕೆ? ಇದೋ ನೋಡು, ನಿನ್ನ ಈ ಉದ್ಧಟತನಕ್ಕೆ ತಕ್ಕ ಶಿಕ್ಷೆಯನ್ನು ಅನುಭವಿಸುವೆ! ಎಂದು ಹೇಳಿ ತನ್ನ ಉರಿಗಣ್ಣನ್ನು ತೆರೆಯುವನು. ಆಗ ಆ ಯಜ್ಞಮಂಟಪವೆಲ್ಲ ಧಗ್ಗನೆಂದು ದಳ್ಳುರಿಯಿಂದ ಉರಿಯತೊಡಗುವುದು. ಅಲ್ಲಿರುವವರೆಲ್ಲರೂ ಆ ಬಿಸಿಗೆ ಹಾಹಾಕಾರ ಮಾಡುವರು. ಕೋಲಾಹಲವಾಗುವುದು. ದಕ್ಷ ವಿಷ್ಣು ಬ್ರಹ್ಮೇಂದ್ರರಾದಿಯಾಗಿ ಮಂಟಪದಿಂದ ಹೊರಗೆ ಬಂದು ಯುದ್ಧ ಸನ್ನದ್ಧರಾಗುವರು. ಶಾಂತಿಪಾಲನ-ಸಾರ್ವಜನಿಕ ಕಲ್ಯಾಣಗಳಿಗಾಗಿ ವೀರಭದ್ರನು ಬಂದ ಕಾರ್ಯ ವಿಫಲವಾಗಿ ವಿಧಿಯಿಲ್ಲದೆ ವಿಕೋಪಕ್ಕೆ ಪಕ್ಕಾಗಬೇಕಾಯಿತು. ಮರ್ದನ ಮಾರ್ಗದಲ್ಲಿಯೇ ಶಾಂತಿ ಸ್ಥಾಪಿಸಲು ಮುಂದುವರಿಯಬೇಕಾಯಿತು.

ಯಜ್ಞರಂಗ-ಯುದ್ಧ ರಂಗ

ಷರತ್ತುಗಳೆರಡರಲ್ಲಿ ಒಂದಾದ ಯಜ್ಞನಿರೋಧವು ತಾನಾಗಿಯೇ ವೀರಭದ್ರದೇವನ ವೀರ ತೇಜಸ್ಸಿನ ಫಲವಾಗಿ ಉಂಟಾಯಿತು. ಯಜ್ಞಭೂಮಿ ಯುದ್ಧಭೂಮಿಯಾಗಿ ಮಾರ್ಪಟ್ಟಿತು. ದಕ್ಷನ ದರ್ಪದ ಮಾತಿನಿಂದ! ದೇವತಾ ಕುಲದ ಅಂತ್ಯ ಸನ್ನಿಹಿತವಾಯಿತು.

ರಣದುಂದುಭಿ ಮೊರೆಯಿತು. ರಣಭೇರಿಗಳು ಭೋರೆಂದವು. ರುದ್ರಗಣ-ಶಿವಗಣರು ದೇವಗಣರ ಮೇಲೆ ಬಿದ್ದರು ಭದ್ರಕಾಳಿ ಮುಖ್ಯರಾದ ರುದ್ರಶಕ್ತಿಯರು ಪ್ರಸೂತಿ ಸರಸ್ವತಿ ಲಕ್ಷ್ಮಿ ಶಚಿ ಮುಂತಾದ ದೇವತಾ ಸ್ತ್ರೀಯರ ಮೇಲೆ ಕೈಮಾಡಿದರು. ವೀರಭದ್ರ ದೇವನು ನೇರವಾಗಿ ಮೊದಲು ವಿಷ್ಣುವಿನೊಡನೆ ಸೆಣಸಾಡುವನು.

ದೈತ್ಯರನ್ನು ಸಂಹರಿಸಿರುವೆನೆಂಬ ದರ್ಪ ನಿನಗಿದೆಯಲ್ಲವೆ? ಶಂಖ ಚಕ್ರ ಶಾರ್ಙ್ಗಗಳೆಂಬ ಆಯುಧಗಳಿವೆಯೆಂಬ ಗರ್ವ ನಿನಗುಂಟಲ್ಲವೆ? ಈಗ ಇವೆಲ್ಲದರ ಪರೀಕ್ಷೆಯಾಗಲಿ. ದಕ್ಷನೇ ನಿನಗೆ ಸಹಾಯಕನಾಗಿ ಸೇವ್ಯನಾಗಿ ಬಂದ ಈ ವಿಷ್ಣುವಿಗೆ ಶಕ್ತಿಯಿದ್ದರೆ ನನ್ನೊಡನೆ ಈಗ ಯುದ್ಧಕ್ಕೆ ಬರಲಿ.

"ಕ್ವ ತೇ ಸಹಾಯಕೃದ್ಧಿಷ್ಣುರ್ನಿರ್ಗತ್ಯತು ಮಯಾರಣೇ!" ಎಲ್ಲಿರುವನು ಆ ಮಾಯಾವಿ ವಿಷ್ಣುವು? ಏತಕ್ಕೆ ಮರೆಯಾಗಿರುವನು? ಬರಲಿ ಮೊದಲು ಯುದ್ಧಕ್ಕೆ! ಆತನನ್ನು ಮುಗಿಸಿ ಬಳಿಕ ಉಳಿದವರನ್ನು ನೋಡಿಕೊಳ್ಳುವೆನು ಎಂದೆನಲು ವಿಷ್ಣುವಿಗೆ ವಿಶೇಷ ಕೋಪವುಂಟಾಗುವುದು. ಇಂದ್ರ ದಕ್ಷರನ್ನು ಕಟ್ಟಿಕೊಂಡು ಅಸ್ತ್ರ ಶಸ್ತ್ರ ಬಲ ಸಂಪನ್ನನಾಗಿ ವೀರಭದ್ರನ ಮೇಲೆ ಬಾಣ ಪ್ರಯೋಗಕ್ಕೆ ಮೊದಲು ಮಾಡುವನು. ಶಾರ್ಙ್ಗವೆಂಬ ಬಿಲ್ಲನ್ನು ಬಿಡುವನು. ಆತನ ಜತೆಗೆ ಕೆಲವು ದೇವತೆಗಳು ಆನೆ ಕುದುರೆ ರಥಗಳನ್ನೇರಿ ಬಿಲ್ಲು ಬಾಣಗಳನ್ನು ಹಿಡಿದು ಸಹಾಯಕ್ಕೆ ಸನ್ನದ್ಧರಾಗುವರು. ವೀರಭದ್ರನು ಲೀಲಾಜಾಲವಾಗಿ ಆ ಶಾರ್ಙ್ಗವನ್ನು ಮುರಿದಿಕ್ಕುವನು. ಆ ಮೇಲೆ ವೀರಭದ್ರನು ವಿಷ್ಣುವಿನ ಕಡೆಗೆ ತನ್ನ ರಥವನ್ನು ತಿರುಗಿಸುವನು. ವೀರಗಣರೂ ಸಹ ಈತನ ನೆರವಿಗೆ ಹಲವರು ಬರುವರು. ತ್ರಿಶೂಲ, ಮುಸಲ, ಪರಶು, ಪಟ್ಟಿಶ, ಗದೆ, ಕುಂತಾಯುಧ, ಹಲಾಯುಧಗಳನ್ನು ಧರಿಸಿ ಯುದ್ಧ ಸನ್ನದ್ಧರಾದರು.

ಎಲ್ಲರೂ ತಂತಮ್ಮ ಶಂಖಗಳನ್ನು ಊದಿದರು; ಭೇರಿ ಡಿಂಡಿಮಗಳನ್ನು ಬಾರಿಸಿದರು. ನಗಾರಿ ತಮಟೆಗಳನ್ನು ಹೊಡೆದರು. ಆನೆಗಳು ಘೀಂಕರಿಸಿದವು. ಹಯಗಳು ಹೇಕರಿಸಿದವು. ಧ್ವಜಗಳು ವಾಯುಮಂಡಲದಲ್ಲಿ ಹಾರಾಡಿದವು. ಸೈನಿಕರ ಆಟಾಟೋಪ ಕೂಗಾಟ ಮಿತಿ ಮೀರಿತು. ಎಲ್ಲರೂ ತಂತಮ್ಮ ಒರೆಗಳಿಂದೀಚೆಗೆ ಕತ್ತಿಗಳನ್ನು ಎಳೆದರು; ಝಳಪಿಸಿದರು. ಹಾ, ಹೂ, ಎದ್ದೇಳಿರಿ ಹೊಡೆಯಿರಿ, ಬಡಿಯಿರಿ ಇರಿಯಿರಿ ಕತ್ತುಗಳನ್ನು ಕತ್ತರಿಸಿರಿ, ಕೈಗಳನ್ನು ಕೊಚ್ಚಿರಿ, ಕಾಲುಗಳನ್ನು ಮುರಿಯಿರಿ – ಎಂದು ಮುಂತಾಗಿ ಕ್ರೂರವಾಗಿ ಕೂಗತೊಡಗಿದರು. ಜತೆಗೆ ಕುದುರೆಗಳ ಕೆನೆತ, ರಥಗಳ ಕ್ರೇಂಕಾರ, ವೀರರ ಚೀತ್ಕಾರ ಇವುಗಳಿಂದ ಯಜ್ಞರಂಗ ಯುದ್ಧರಂಗವಾಗಿ ಮಾರ್ಪಟ್ಟು ಅತ್ಯಂತ ಭೀಕರ ಸ್ವರೂಪವನ್ನು ತಾಳಿತು.

ವಿಷ್ಣು-ವೀರಭದ್ರರಿಗೆ ನೇರವಾಗಿ ಯುದ್ಧವಾರಂಭವಾಯಿತು. ಬರಬರುತ್ತ ಇವರಿಬ್ಬರ ಯುದ್ಧವು ಘನ ಘೋರ ರೂಪವನ್ನು ತಾಳಿತು. ಶೂರರಿಗೆ ರೋಮಾಂಚಕಾರಕವಾಗಿತ್ತು. ಭೀರುಗಳಿಗೆ ಮರಣ ಭಯವನ್ನುಂಟುಮಾಡುವಂತಿತ್ತು. ವಿಷ್ಣುವು ತನ್ನ ಶಾರ್ಙ್ಗವು ಮುರಿದು ಹೋದುದನ್ನು ಕಂಡು ಕಡು ಕ್ರುದ್ಧನಾದನು. ಚಕ್ರಾಯುಧವನ್ನು ಎಸೆದು ದಿವ್ಯಾಸ್ತ್ರಗಳನ್ನು ಬಿಟ್ಟು ವೀರೇಶನನ್ನು ನಸುನೋಯಿಸುವನು. ವೀರಭದ್ರನಾದರೋ ಎಲ್ಲರೂ ನೋಡುತ್ತಿರುವಂತೆ ವಿಷ್ಣುವಿನ ಮೇಲೆ ತನ್ನ ಅಪೂರ್ವ ಮೂರು ಬಾಣಗಳನ್ನು ಬಿಟ್ಟು ವಿಶೇಷವಾಗಿ ಗಾಯಗೊಳಿಸುವನು. ಪ್ರತಿಯಾಗಿ ವಿಷ್ಣುವು ತನ್ನ ತೊಂಬತ್ತು ಬಾಣಗಳನ್ನು ಪ್ರಯೋಗಿಸಿ ವೀರಭದ್ರನ ಧನಸ್ಸು, ಮೌರ್ವಿ, ಕವಚಗಳನ್ನು ಕತ್ತರಿಸಿ, ಸೊಕ್ಕಿನಿಂದ ಶಂಖಧ್ವನಿಯನ್ನು ಮಾಡುವನು. ಅದನ್ನು ಕೇಳಿ ಕಲಿವೀರನಾದ ವೀರಭದ್ರನಿಗೆ ಎಲ್ಲಿಲ್ಲದ ರೋಷವುಂಟಾಗುವುದು. ಮೋಡಗಳು ಮಳೆಗರೆವಂತೆ ವೀರಭದ್ರನು ಸಾಂದ್ರವಾದ ಬಾಣ ವೃಷ್ಟಿಯನ್ನು ಸುರಿಸುವನು. ಅವೆಲ್ಲವೂ ವಿಷ್ಣುವೇ ಮೊದಲಾದ ದೇವತೆಗಳಿಗೆ ದೊಡ್ಡದಾಗಿ ನೋವನ್ನುಂಟುಮಾಡುವವು. ಆಗ ದಕ್ಷ ಇಂದ್ರ ಮೊದಲಾದ ದೇವತೆಗಳೆಲ್ಲರೂ ಕೂಡಿ ನೂರು, ಸಾವಿರ, ಹತ್ತು ಸಾವಿರ, ಲಕ್ಷ, ಕೋಟಿ ಸಂಖ್ಯೆಯಲ್ಲಿ ಬಾಣಗಳನ್ನು ಬಿಡುವರು. ಎದುರಾಗಿ ಬರುವ ಆ ದೇವತೆಗಳ ಬಾಣಗಳನ್ನೆಲ್ಲ ವೀರಭದ್ರನು ತನ್ನ ಪಿನಾಕಾಯುಧವೊಂದರಿಂದ ಲಕ್ಷ್ಯವಿಲ್ಲದೆ ಕತ್ತರಿಸಿ ಹಾಕುವನು. ದೇವತೆಗಳ

ಬಾಣಗಳು ವೀರಭದ್ರನ ಆ ಆಯುಧದ ಮುಂದೆ ಏನೂ ಮಾಡದಾದವು. ಆ ಕೂಡಲೇ ವೀರಭದ್ರನು ತನ್ನ ಸರ್ವಸಮರ್ಥವಾದ ಮೂರು ಬಾಣಗಳನ್ನು ಬಿಡುವರು. ಎದುರಾಗಿ ಬರುವ ಆ ದೇವತೆಗಳ ಬಾಣಗಳನ್ನೆಲ್ಲ ವೀರಭದ್ರನು ತನ್ನ ಪಿನಾಕಾಯುಧವೊಂದರಿಂದ ಲಕ್ಷ್ಯವಿಲ್ಲದೆ ಕತ್ತರಿಸಿ ಹಾಕುವನು. ದೇವತೆಗಳ ಬಾಣಗಳು ವೀರಭದ್ರನ ಆ ಆಯುಧದ ಮುಂದೆ ಏನೂ ಮಾಡದಾದವು. ಆ ಕೂಡಲೇ ವೀರಭದ್ರನು ತನ್ನ ಸರ್ವಸಮರ್ಥವಾದ ಮೂರು ಬಾಣಗಳನ್ನು ಬಿಟ್ಟು ದಕ್ಷ–ಹರಿ–ಇಂದ್ರ ಈ ಮೂವರನ್ನು ಗಾಯಗೊಳಿಸುವನು. ದಕ್ಷನಿಗೆ ಹಣೆಯಲ್ಲಿ, ಹರಿ–ಇಂದ್ರರಿಗೆ ಎದೆಯಲ್ಲಿ ಆ ಬಾಣಗಳು ನೆಡುವವು; ನೋವಿಗೀಡುಮಾಡುವವು. ಅಷ್ಟಕ್ಕೆ ಬಿಡದೆ ವೀರಭದ್ರನು ಉತ್ಸಾಹಭರಿತನಾಗಿ ಬಾಣವೃಷ್ಟಿಯನ್ನು ಮೇಲಿಂದ ಮೇಲೆ ಸುರಿಸುತ್ತಿದ್ದನು. ಒಂದು ಬಾಣದಿಂದ ದೇವೇಂದ್ರನ ಐರಾವತದ ಕುಂಭಸ್ಥಳಕ್ಕೆ ಹೊಡೆಯುವನು. ಇನ್ನೊಂದು ಬಾಣದಿಂದ ದೇವಾಶ್ವವಾದ ಉಚ್ಚೈಃಶುವದ ಬೆನ್ನಿಗೆ ಬಿಡುವನು. ವತ್ಸದಂತ–ನಾರಾಚಗಳೆಂಬ ಬಾಣಗಳಿಂದ ದೇವೇಂದ್ರನ ರಥವನ್ನು ಪುಡಿ ಪುಡಿ ಮಾಡಿ ಬಿಡುವನು. ವಿಷ್ಣುವಿನ ಮೇಲೆ ಕಾರ್ಣಂತದವರೆಗೆ ಮೌರ್ವಿಯನ್ನು ಎಳೆದು ಸೆಳೆದು ಬಾಣವನ್ನು ಪ್ರಯೋಗಿಸಿ ಬಹುವಾಗಿ ಬಾಧಿಸುವನು.

ವಿಷ್ಣುವೂ ವಿಶೇಷವಾಗಿ ರೇಗುವನು. ವೀರಭದ್ರನೂ ವೀರಾವೇಶದಿಂದ ರೋಡಾಡುವನು. ಇಬ್ಬರೂ ಪರಸ್ಪರ ಕಾದತೊಡಗಿ ಆಗ್ನೇಯಾಸ್ತ್ರ ವಾಯವ್ಯಾಸ್ತ್ರಗಳನ್ನು ಪ್ರಯೋಗಿಸಲು ಪ್ರಾರಂಭಿಸುವರು. ವೀರಾಗ್ರಣಿಯಾದ ವೀರಭದ್ರನ ಕೈ ಮುಂದಾಗುವುದು. ವೀರಭದ್ರನ ವಿಶಿಷ್ಟಾಸ್ತ್ರದ ಹೊಡೆತದಿಂದ ವಿಷ್ಣುವಿನ ರಥ, ರಥದ ಅಚ್ಚು, ರಥದ ಮೇಲ್ಭಾಗಗಳು ಮುರಿದು ಚಿಕ್ಕ ಚಿಕ್ಕ ಚೂರುಗಳಾಗುವವು. ಛತ್ರಿ ಚಾಮರಗಳು ಹರಿದು ಛಿಂದಿ ಛಿಂದಿಯಾದವು. ವೀರಭದ್ರನ ಈ ಶೌರ್ಯವನ್ನು ನೋಡಿ ಹೆದರಿದನು. ಆತನ ಕೈಯಿಂದ ಚಕ್ರವು ಕಳಚಿ ಕೆಳಕ್ಕೆ ಬೀಳುವುದು.

ಶಿವಾನುಗ್ರಹವುಳ್ಳ ಶ್ರೀ ವೀರಭದ್ರನ ಬಲ ಕುಂದಲಿಲ್ಲ. ರಥ ಮುರಿಯಲಿಲ್ಲ. ಬಿಲ್ಲು ಬಾಣಗಳು ನಾಶವಾಗಲಿಲ್ಲ. ಬತ್ತಳಿಕೆಯಲ್ಲಿ ಬಾಣಗಳು ಮುಗಿದು ಹೋದರೂ ಶಿವಸ್ಮರಣೆಯನ್ನು ಮಾಡಿದೊಡನೆ ಮತ್ತೆ ಮೊದಲಿನಂತೆ ತುಂಬಿ ಕೊಂಡಿರುತ್ತಿದ್ದವು. ಮರಳಿ ಮರಳಿ ವಿಷ್ಣುವಿನ ಮೇಲೆ ಬಾಣಗಳನ್ನು ಬಿಡುತ್ತಿದ್ದನು. ಇದರಿಂದಾಗಿ ವಿಷ್ಣುವು ತನ್ನ ರಥ, ಸಾರಥಿ, ಛತ್ರಿ, ಚಾಮರ, ಕುದುರೆ ಕೈದುಗಳನ್ನು ಕಳೆದುಕೊಂಡು ಹತ ವೀರ್ಯನಾಗಿ ನೆಲಕ್ಕುರುಳುವನು. ಇಂದ್ರ ದಕ್ಷರ ನೆರವಿನಿಂದ ಚೇತರಿಸಿಕೊಂಡು ಮತ್ತೆ ಮೇಲಕ್ಕೆ ಎದ್ದು ಯುದ್ಧಕ್ಕೆ ನಿಲ್ಲುತ್ತಿದ್ದನು. ಆತನ ಅಸಹಾಯಕತೆಯನ್ನು ನೋಡಿ ಆತನ ವಾಹನವಾದ ಗರುಡನು ಹಾರಿ ಬಂದು ಎದುರಿಗೆ ನಿಲ್ಲುವನು. ಆ ಗರುಡನನ್ನು ಏರಿ ವಿಷ್ಣುವು ಹೊಸ ಚೇತನದಿಂದ ವೈಷ್ಣವೀ ಮಾಯೆಯನ್ನು ಉಪಯೋಗಿಸಿಕೊಳ್ಳುವನು. ಕೈಚಳಕದಿಂದ ಬಾಣಗಳನ್ನು ಬಿಡತೊಡಗುವನು. ವೀರೇಶನ ಕಡೆಯ ಗಣರನ್ನು ತಡೆಗಟ್ಟಿ ತನಗೆ ಗೆಲವಾಯಿತೆಂದು ಗರ್ವಪಡುತ್ತಿದ್ದನು.

ಇದನ್ನು ಕಣ್ಣಾರೆ ಕಂಡ ವೀರಭದ್ರನು ತನ್ನ ಪಿನಾಕಾಯುಧದಿಂದ ಹೊಡೆದು ಗರುಡನನ್ನು ನೆಲಕ್ಕೆ ಕೆಡವಿದನು. ಆಯುಧದ ಹೊಡೆತಕ್ಕೆ ಗರುಡನ ರೆಕ್ಕೆ ಕೊಕ್ಕು ಕಾಲು ಕತ್ತರಿಸಿ ಹೋಗುವುವು. ಗರುಡನೊಡನೆ ವಿಷ್ಣುವೂ ಭೂಮಿಗೆ ಬಿದ್ದು ಒದ್ದಾಡುವನು. ವಿಷ್ಣುವಿನ ದೇಹವೆಲ್ಲಾ ಗಾಯಗೊಂಡಿತ್ತು. ಮೈಯಿಂದ ರಕ್ತ ಸುರಿಯುತ್ತಿತ್ತು. ವಸಂತ ಕಾಲದಲ್ಲಿ ಹೂವು ಬಿಟ್ಟ ಮುತ್ತುಗದ ಮರದಂತೆ ತೋರುತ್ತಿದ್ದನು.

ಇಂತಹ ದುರಂತಕ್ಕೆ ಸಿಕ್ಕು ಬಿದ್ದು ದುಃಖಿಸುತ್ತಿದ್ದ ವಿಷ್ಣುವನ್ನು ವೀರಭದ್ರನು ನೋಡಿ ಒಮ್ಮೆ ಮರುಕಪಟ್ಟನು; ಮತ್ತೊಮ್ಮೆ ಸಂತಸಬಿಟ್ಟು ಶಂಖ ಧ್ವನಿಯನ್ನು ಮಾಡಿದನು. ಬಳಿಕ ಬಿದ್ದುರುಳುವ ವಿಷ್ಣುವನ್ನು ಕುರಿತು ಹೀಗೆ ಹೇಳಿದನು:

ಎಲೈ ವಿಷ್ಣುವೆ, ಏನೆಂದುಕೊಂಡಿರುವೆ? ದೈತ್ಯರೊಡನೆ ಯುದ್ಧ ಮಾಡಿದಂತಲ್ಲ. ಎಲ್ಲಿ ನಿನ್ನ ಶಂಖ ಚಕ್ರಗಳು? ಕೌಸ್ತುಭ–ವೈಜಯಂತಿಗಳು? ರಥ ಏನಾಯಿತು? ಗರುಡ ಎತ್ತ ಹೋದನು? ಇದು ದೀನರೊಡನೆ ಹೋರಾಡುತ್ತ ಆಟವಾಡಿಕೊಂಡಿರುವ ಕಾಲವಲ್ಲ. ದೇವಲೋಕದ ಸಂಹಾರ ಕಾಲವೇ ಇದು ಎಂದು ಭಾವಿಸುವವನಾಗು. ಹಿರಣ್ಯಾಕ್ಷ, ಹಿರಣ್ಯಕಶಿಪು, ಕಂಸ, ಪರಶುರಾಮರಂತೆ ನಾನು ನಿನಗೆ ಸೋಲುವವನಲ್ಲ. ತ್ರಿವಿಕ್ರಮನೆನಿಸಿದ ನಿನ್ನ ಪರಾಕ್ರಮವು ಇಂದಿಗೆ ವ್ಯರ್ಥವಾಯಿತು. ನೀನಿನ್ನು ಬಾಳಿ ಏನು ಪ್ರಯೋಜನ? ದಾರಿ ತಪ್ಪಿದ ದಕ್ಷನ ನೆರವಿಗೆ ನಿಂತಿರುವುದು ನಿನಗೆ ಉಚಿತವೆ? ನಿನ್ನಂತಹ ಸಾವಿರಾರು ಜನರನ್ನು ಹುಲ್ಲುಕಡ್ಡಿಗಳಂತೆ ಸುಟ್ಟು ಹಾಕುವೆನು; ಎಚ್ಚರಿಕೆಯಿಂದಿರಿ ಎಂದು ಕಷ್ಟದಲ್ಲಿರುವ ವಿಷ್ಣುವಿಗೆ ಹೇಳಿ, ಅಷ್ಟಕ್ಕೆ ಆತನನ್ನು ಬಿಟ್ಟು ಇತ್ತ ಇರುವ ಇಂದ್ರನನ್ನೂ ದಕ್ಷನನ್ನೂ ನೋಡತೊಡಗಿದು ಅದರಲ್ಲಿಯೂ ಯಜ್ಞದೀಕ್ಷಿತನಾಗಿ ಶಿವಭಕ್ತಿಹೀನನಾಗಿ ಸೊಕ್ಕಿನಿಂತ ದಕ್ಷನನ್ನಂತೂ ಇನ್ನೂ ಹೆಚ್ಚಿನ ಕ್ರೂರ ದೃಷ್ಟಿಯಿಂದ ನೋಡುತ್ತ ವೇಗದಿಂದ ಬಳಿಗೆ ಬಂದು ತನ್ನ ತ್ರಿಶೂಲದಿಂದ ತಿವಿದು ತಲೆಯನ್ನು ತೆಗೆದುಹಾಕುವನು.

ಇತ್ತ ವೀರಭದ್ರನ ಗಣರು ದೇವಗಣರೊಡನೆ ಹೊಡೆದಾಡುವರು. ರುದ್ರಗಣರ ವೀರಾವೇಶಕ್ಕೆ ದೇವತೆಗಳು ದಿಕ್ಕುಗೆಡುವರು. ಅಷ್ಟವಸುಗಳು ಗತಪ್ರಾಣರಾಗಿ ಬಿದ್ದು ಬಿಡುವರು. ಶಿವಗಣರ ಬಾಣ ಪ್ರಯೋಗಕ್ಕೆ ಮರುದ್ಗಣರು ಹೆದರಿ ಮೂರ್ಛಿತರಾಗುವರು.

ಅಗ್ನಿಪುರುಷನಿಗೆ ನಾಲಿಗೆ ಒಣಗಿತು. ಒಣಗಿದ ತುಟಿಯನ್ನು ನಾಲಿಗೆಯಿಂದ ನೆಕ್ಕುತ್ತ ತೇವವಿಲ್ಲದೆ ಎಲ್ಲೆಲ್ಲಿಯೂ ನೀರಿಗಾಗಿ ಓಡಾಡತೊಡಗಿದನು. ವಿಶ್ವೇ ದೇವತೆಗಳು ಶ್ವಾಸಹೀನರಾಗಿ ಮೃತರಂತೆ ಕೆಳಕ್ಕೆ ಬೀಳುವರು. ಕುಬೇರನು ವಿಕಾರಾಂಗನಾಗಿ ಕುಸಿಯುವನು. ವರುಣನು ಹತವೀರ್ಯನಾದನು. ನಿರುತಿಯು ಧೈರ್ಯಗುಂದಿದನು. ಪಿತೃ ದೇವತೆಗಳು ಕಾತರರಾದರು. ಯಮನು ಭಯಗ್ರಸ್ತನಾದನು. ಗಂಧರ್ವರ ಗರ್ವವಡಗಿತು. ಕಿಂಪುರುಷರು, ನಾಗರು, ಯಕ್ಷರು, ವಿದ್ಯಾದರರು, ಹೆದರಿ ಹಾಹಾಕಾರ ಮಾಡಿದರು.

ವೀರಭಟರಲ್ಲಿ ಕೆಲವರು ಸುಟ್ಟು ಉಳಿದ ಯಜ್ಞಮಂಟಪವನ್ನು ನುಗ್ಗಿದರು. ಅಲ್ಲಿದ್ದ ಯೂಪಸ್ತಂಭಗಳನ್ನು ಕಿತ್ತೆಸೆದರು. ಯಜ್ಞಕರ್ಮಕ್ಕಾಗಿ ಬಂದಿದ್ದ ಪ್ರಸ್ತೋತ, ಹೋತ, ಪೋತ ನೇಷ್ಟಾ ಮುಂತಾದ ಹೆಸರಿನ ಋತ್ವಿಕ್ಕರನ್ನು ಯಜ್ಞಾಶ್ವವನ್ನು ಎತ್ತಿಕೊಂಡು ಹೋಗಿ ಹೊಳೆಗೆ ಎಸೆದು ಬಿಟ್ಟರು. ಯಾಗ ಭಾಂಡಗಳನ್ನು ಒಡೆದು ಹಾಕಿದರು.

ಇತ್ತ ಹೆದರಿ ಓಡಿ ಹೋಗುತ್ತಿದ್ದ ಹಲವಾರು ಮಂದಿ ದೇವತೆಗಳನ್ನು ಮುನಿಗಳನ್ನು ಹಿಂಬಾಲಿಸಿ ಹೋಗಿ ರುದ್ರಗಣರು ಬಾಣಗಳನ್ನು ಬಿಟ್ಟು ಬಳಲಿಸಿದರು. ಗಾಯಾಳುಗಳು 'ಅಪ್ಪ' 'ಅಮ್ಮ' ಎಂದು ಕೂಗಿಕೊಳ್ಳುತ್ತಿದ್ದರು. ಕೈಯಲ್ಲಿರುವ ದಂಡ ಕಮಂಡಲಗಳನ್ನು ಮುನಿಗಳು ಎಸೆದು ಬಿಟ್ಟರು. ಖಡ್ಗಗಳ ಏಟುಗಳನ್ನು ತಾಳಲಾರದೆ ಅರಚಿಕೊಳ್ಳುತ್ತಿದ್ದರು. ಕೆಲವರ ಕತ್ತುಗಳನ್ನು ಕತ್ತರಿಸಿದರು. ಕೆಲವರನ್ನು ಎತ್ತಿ ಕಲ್ಲುಬಂಡೆಗಳಿಗೆ ಹೊಡೆದರು. ಜುಟ್ಟುಗಳನ್ನು ಕಿತ್ತು ನೆಲಕ್ಕೆ ಅಪ್ಪಳಿಸಿದರು.

ಯಜ್ಞದಲ್ಲಿ ಸದಸ್ಯರಾಗಿದ್ದ ಎಂಟು ಜನ ಋಷಿಗಳ ಮೀಸೆ, ಹಲ್ಲು, ಮೂಗುಗಳನ್ನು ಕಿತ್ತು ಓಡಿಸಿದರು. ಋತ್ವಿಜರ ಮಧ್ಯದಲ್ಲಿದ್ದು ಸೋಮರಸವನ್ನು ಹೋಮ ಮಾಡುತ್ತಿದ್ದ ಭೃಗು ಮಹರ್ಷಿಯ ಕೆನ್ನೆಗೆ ಹೊಡೆದು ದವಡೆಯನ್ನು ಹರಿದು ಎತ್ತಿ ನೆಲಕ್ಕೆ ಅಪ್ಪಳಿಸಿದರು.

ದ್ವಾದಶಾದಿತ್ಯರಲ್ಲಿ ಒಬ್ಬನಾದ ಅರ್ಯಮನು ವಿನಯಾನ್ವಿತನಾಗಿ ಶರಣಾಗುವನು. ಗಣದೇವತೆಗಳ ನೇತ್ರಗಳನ್ನು ಬಾಣಗಳಿಂದ ಕಿತ್ತುಹಾಕುವರು. ಪೂಷದೇವತೆಯ ಹಲ್ಲುಗಳನ್ನು ಉದುರಿಸಿದರು. ವೀರಭದ್ರದೇವನು ಚಂದ್ರನನ್ನು ಕಾಲುಂಗುಷ್ಠದಿಂದ ಮೇಲಕ್ಕೆತ್ತಿ ಹಾರಿಸುವನು. ಯಜ್ಞಪುರುಷನ ತಲೆಯನ್ನು ಕತ್ತಿಯಿಂದ ಹೊಡೆದು ಕೆಳಕ್ಕೆಸೆದನು. ಅಗ್ನಿಯ ಎರಡು ಕೈಗಳನ್ನು ಕತ್ತರಿಸಿ ನಾಲಗೆಯನ್ನು ಎಳೆದು ಸೆಳೆದು ಕಿತ್ತುಹಾಕಿದನು. ವೀರಭದ್ರನ ಕಾಲಿನ ತುಳಿತದಿಂದ ಅನೇಕರು ನರಳಿದರು. ಆತನ ಗದಾ ಪ್ರಹಾರದಿಂದ ಗಾಯಗೊಂಡರು. ಯಮನು ವೀರೇಶನ ಪಾದಾಘಾತಕ್ಕೆ ಸಿಕ್ಕಿ ಮೂರ್ಛೆಹೋದನು.

ಇತ್ತ ಭದ್ರಕಾಳಿಯು ಪ್ರಸೂತಿ ಸರಸ್ವತಿಯರ ಮೇಲೆ ಕೈಮಾಡಿ ಹಣ್ಣು ಹಣ್ಣಾಗಿಸುವಳು. ದೇವತೆಗಳ ಹೆಂಡತಿಯರನ್ನು ಹೊಡೆದು ಹಾಕಿದಳು. ಲಕ್ಷ್ಮಿಗೆ ತಕ್ಕ ಬುದ್ಧಿಯನ್ನು ಕಲಿಸಿದಳು. ಬೇರೆ ಹಲವಾರು ದೇವತಾ ಸ್ತ್ರೀಯರು ಬಗೆ ಬಗೆಯ ಏಟುಗಳಿಗೆ ಸಿಕ್ಕಿ ನುಗ್ಗಾದರು. ವಸ್ತ್ರಾಭರಣಗಳನ್ನು ಕಳೆದುಕೊಂಡರು. ತಲೆ ಕೆದರಿಕೊಂಡು ತಿರುಗಾಡಿದರು. ಕಣ್ಣೀರಿಡುತ್ತ ಗೋಳಾಡಿದರು. ಹಲವರು ಹೆಣ್ಣು ಜಿಂಕೆಗಳಂತೆ ಅರಚುತ್ತ ದಿಕ್ಕೆಟ್ಟು ಓಡಿದರು. ಅವರನ್ನು ಕಾಪಾಡಲು ದೇವತೆಗಳಲ್ಲಿ ಯಾರಿಂದಲೂ ಸಾಧ್ಯವಾಗಲಿಲ್ಲ.

ಅತ್ತ ಆನೆ–ಆನೆಗಳು, ಕುದುರೆ–ಕುದುರೆಗಳು, ರಥಿಕ–ರಥಿಕರು ಪರಸ್ಪರವಾಗಿ ಹೊಡೆದಾಡುತ್ತಿದ್ದರು. ಕುದುರೆಗಳ ಮೇಲೆ ಸವಾರರು ಕುಳಿತು, ಲಗಾಮುಗಳನ್ನು ಎಳೆಯುತ್ತ, ಚಾಟಿಯಿಂದ ಹೊಡೆಯುತ್ತ ಯುದ್ಧರಂಗದಲ್ಲಿ ಎದುರು ಪಕ್ಷದ ಸವಾರರನ್ನು ಹೊಡೆದಟ್ಟುತ್ತಿದ್ದರು. ಅದೇ ಬಗೆಯಲ್ಲಿ ಆನೆಗಳು ತಮ್ಮ ಕಿವಿಗಳ ಮೇಲೆ ಚಾಮರಗಳನ್ನಿಟ್ಟು ಮದೋದಕವನ್ನು ಸುರಿಸುತ್ತ, ಎದುರು ಪಕ್ಷದ ಆನೆಗಳ ಮೇಲೆ ನುಗ್ಗುತ್ತಿದ್ದುವು. ಕುದುರೆಗಳು ತಮ್ಮ ಕಾಲುಗೊರಸಿನ ಕೆಳಗಿನ ಲಾಳಗಳಿಂದ ನೆಲವನ್ನು ತೊತ್ತುಳಿದು ದೂಳನ್ನು ಎಬ್ಬಿಸುತ್ತಿದ್ದವು. ಅದರಿಂದ ರಣರಂಗವು ರಜೋಮಯವಾಗಿದ್ದಿತು. ಹಾಗೂ ರಥ ಚಕ್ರಗಳ ಓಡಾಟದಿಂದಲೂ ದೂಳಿ ತುಂಬಿತ್ತು.

ಅನೇಕ ಸೈನಿಕರು ಅಲ್ಲಲ್ಲಿ ಹುಳುಗಳಂತೆ ಸತ್ತುಬಿದ್ದಿದ್ದರು. ದೇವತೆಗಳ ರುಂಡ ಮುಂಡಗಳಿಂದ ರಣರಂಗವೆಲ್ಲ ತುಂಬಿಹೋಗಿದ್ದಿತು. ದೇವಗಣದ ಕೋಲಾಹಲ ಧ್ವನಿಯಿಂದ ಅರ್ತನಾದದಿಂದ ಯುದ್ಧಭೂಮಿಯು ತುಂಬಿ ಹೋಗಿದ್ದಿತು. ಕ್ರಮ ಕ್ರಮವಾಗಿ ದೇವಗಣರು ಕ್ಷೀಣಿಸುತ್ತ ಬಂದರು.

ವೀರಭದ್ರದೇವನ ಸೈನ್ಯವು ಸಣ್ಣಾಗುತ್ತಿರುವ ದೇವತೆಗಳನ್ನು ಸದೆ ಬಡಿಯುವ ಅತ್ಯಂತ ಅಭಿಲಾಷೆಯಿಂದ ಅತ್ತಿತ್ತ ಸುತ್ತುತ್ತಿದ್ದಿತು. ಅತ್ಯಂತ

ಉದ್ರಿಕ್ತವಾಗಿ ಮುಂದುವರಿಯುತ್ತಿದ್ದಿತು. ರುದ್ರಗಣರು ಕುಂತಾಯುಧಗಳಿಂದ ಪಕ್ಷಿಗಳನ್ನು ಹೊಡೆದು ಕೆಡುವುವಂತೆ. ತಮ್ಮ ತಮ್ಮ ಧನುರ್ಬಾಣಗಳಿಂದ ದೇವತೆಗಳನ್ನು ಹೊಡೆದು ಕೆಡುವುತ್ತಿದ್ದರು. ಕೆಲವರನ್ನು ಸದೆ ಬಡಿದು ಚದುರಿಸುತ್ತಿದ್ದರು. ತಮ್ಮ ಚತುರತೆಯಿಂದ ಎದುರಾಳಿಗಳಿಂದ ಬರುತ್ತಿದ್ದ ಏಟುಗಳನ್ನು ತಪ್ಪಿಸಿಕೊಳ್ಳುತ್ತ ಮುಂದುವರಿಯುತ್ತಿದ್ದರು.

ರುದ್ರಗಣರ ಬಾಣಗಳ ಹೊಡೆತಕ್ಕೆ ದೇವಗಣರ ಕವಚ ಕುಂಡಲಾದಿಗಳು ಹರಿದು ನೆಲಕ್ಕೆ ಉದುರಿ ಬಿದ್ದವು. ಮಕುಟಾಭರಣಗಳಿಂದ ಅಲಂಕೃತವಾದ ಶಿರೋಭಾಗಗಳು ಅಲ್ಲಲ್ಲಿ ಅಸಂಖ್ಯಾತವಾಗಿ ಬಿದ್ದಿದ್ದವು. ಸುರರ ಕತ್ತಿ ಕಠಾರಿಗಳು, ಗುರಾಣಿಗಳು, ಕೈಚೀಲಗಳು, ಶಿರಸ್ತ್ರಾಣಗಳು, ಛತ್ರಿ ಚಾಮರಗಳು ಅಲ್ಲಲ್ಲಿ ಹರಡಿದ್ದು ನಕ್ಷತ್ರ ಮಂಡಲವು ನೆಲಕ್ಕೆ ಕಳಚಿ ಬಿದ್ದಂತೆ ತೋರಿಬರುತ್ತಿದ್ದವು.

ವೀರಭದ್ರನ ಬಾಣ ಸಮೂಹಗಳ ಹೊಡೆತಕ್ಕೆ ದೇವತೆಗಳ ಮರ್ಮಸ್ಥಳಗಳೆಲ್ಲ ಜಜ್ಜಿ ಹೋಗಿದ್ದವು; ಕೊಚ್ಚಿ ಬಿದ್ದಿದ್ದವು. ಬೇರೆ ಹಲವು ಜನ ದೇವತೆಗಳು ಆತನ ಬಾಣಾಘಾತಕ್ಕೆ ಸಿಕ್ಕಿ ಹೊರ ಚಿಮ್ಮುವ ತಮ್ಮ ರಕ್ತವನ್ನು ತಾವೇ ಕುಡಿಯುತ್ತಿದ್ದರು. ಕೆಲವರು ಕಾಲು ಕೀಳುತ್ತಿದ್ದರು. ಕೆಲವರು ಕೆಳಕ್ಕೆ ಉರುಳಿ ಬೀಳುತ್ತಿದ್ದರು. ಕೆಲವರು ಕುಡಿಯುವ ನೀರಿಗಾಗಿ ಕೂಗಿಕೊಳ್ಳುತ್ತಿದ್ದರು; ಕೆಲವರು ತಮ್ಮ ಹೆಂಡರು ಮಕ್ಕಳುಗಳಿಗಾಗಿ ಅಳುತ್ತಿದ್ದರು. ಕೆಲವರು ತಮ್ಮ ವೇಷ-ಭೂಷಣಾದಿಗಳನ್ನು ಕಳೆದುಕೊಂಡು ಶೋಕಿಸುತ್ತಿದ್ದರು. ಕೆಲವರು ಕ್ಷೀಣ ಬಲರಾಗಿ ಪ್ರಾಣ ರಕ್ಷಣೆಗಾಗಿ ಪರಿತಪಿಸುತ್ತಿದ್ದರು. ಇವರನ್ನೆಲ್ಲ ನೋಡಿ ಶಿವಗಣರು ನಗುತ್ತಿದ್ದರು.

ಕಾಡು ಕಿಚ್ಚಿನಿಂದ ಕೆರಳಿದ ಆನೆಯು ಕಾಡನ್ನು ತುಳಿಯುವಂತೆ, ಮರ ಬಳ್ಳಿಗಳನ್ನು ಮುರಿಯುವಂತೆ, ಬಿರುಗಾಳಿಯು ಮುಗಿಲ ಮೋಡಗಳನ್ನು ಚದುರಿಸುವಂತೆ, ಬಡಬಾಗ್ನಿಯು ಕಡಲಿನ ಅಲೆಗಳನ್ನು ಕುಡಿಯುವಂತೆ – ವೀರಭದ್ರದೇವನು ವಿರೂಪಾಕ್ಷನ ಅಪ್ಪಣೆಯಂತೆ ದೇವತೆಗಳನ್ನೆಲ್ಲ ಧ್ವಂಸ ಮಾಡತೊಡಗಿದನು. ದೇವತೆಗಳಲ್ಲಿ ಹಲವರು ಹೆದರಿ ಅಭಯವನ್ನು ಕೋರಿ ಬಾಯಲ್ಲಿ ಹುಲ್ಲು ಕಡ್ಡಿಗಳನ್ನು ಕಚ್ಚಿಕೊಂಡು ಯುದ್ಧದಲ್ಲಿ ತಾವು ಅಸಮರ್ಥರು ಅಪಜಯವನ್ನು ಒಪ್ಪಿದವರು ಎಂಬುದನ್ನು ತೋರ್ಪಡಿಸಿ ವೀರಭದ್ರದೇವನ ಕರುಣೆಗೆ ಪಾತ್ರರಾದರು. ಇಂಥವರಲ್ಲಿ ಚತುರ್ಮುಖ ಬ್ರಹ್ಮನು ಪ್ರಮುಖನು. ಈತನ ಮೇಲೆ ಕರುಣೆಯನ್ನು ತೋರಿ ತನ್ನ ರಥದ ಸಾರಥಿಯನ್ನಾಗಿ ನಿಯಮಿಸಿಕೊಳ್ಳುವನು. ಬ್ರಹ್ಮನು ವೀರಭದ್ರಸ್ವಾಮಿಯ ರಥದ ವೃದ್ಧ ಸಾರಥಿಯಾಗಿ ಜಾಣತನದಿಂದ ಶ್ರದ್ಧೆಯಿಂದ ಕೈಚಳಕದಿಂದ ಕೆಲಸ ಮಾಡುವನು.

ಹೀಗಿರುವಾಗ ಅತ್ತ ಇಂದ್ರನು ಹೆದರಿ ಓಡುತ್ತಿರುವ ದೇವತೆಗಳನ್ನು ಮುನಿಗಳನ್ನು ಹುರುದುಂಬಿಸಿ ಒಂದುಗೂಡಿಸಿ ಯುದ್ಧ ಸನ್ನದ್ಧನಾಗುವನು. ಮಾತಲಿಯನ್ನು ಸಾರಥಿಯನ್ನಾಗಿಸಿಕೊಳ್ಳುವನು. ಆದರೆ ವೀರಾಗ್ರಣಿಯಾದ ವೀರಭದ್ರನ ಮುಂದೆ ಇಂದ್ರನ ಆಟ ನಡೆಯದಾಗುವುದು. ವೀರಭದ್ರನ ವೀರಬಾಣಗಳ ಹೊಡೆತದಿಂದ ಇಂದ್ರನು ಗಾಯಾಳುವಾಗುವನು; ಗತ ಪ್ರಾಣನಾಗುವ ಗತಿಯೊದಗುವುದು. ಆಗ ವೀರಭದ್ರನಿಗೆ ವಂದಿಸಿ ಪಾದಗಳನ್ನು ಬಿಡದೆ ಹಿಡಿದುಕೊಂಡು "ತಪ್ಪೆನ್ನದು ಕ್ಷಮೆ ನಿಮ್ಮದು ನನ್ನನ್ನು ಕಾಪಾಡು" ಎಂದು ಪ್ರಾರ್ಥಿಸಿ ಪ್ರಾದೇಯ ಪಡುವನು. ದೀನತೆಯಿಂದ ಕೊರಗುತ ಮೊರೆಯಿಡುತ್ತಿರುವ ಇಂದ್ರನನ್ನು ನೋಡಿ ವೀರಭದ್ರನು ದಯಾರ್ದ್ರ ಹೃದಯನಾಗಿ ಇಂದ್ರನ ಪ್ರಾಣಗಳನ್ನು ಉಳಿಸುವನು.

ಬಳಿಕ ವಿಷ್ಣುವಿನ ಮೇಲೆ ದೃಷ್ಟಿ ಬೀಳುವುದು. ಕತ್ತಿಯಿಂದ ಇರಿದು ಕೊಲ್ಲಲು ಎಳಸುವನು. ಬ್ರಹ್ಮನಿಗೆ ಮರುಕು ಹುಟ್ಟಿ ವೀರಭದ್ರನ ಚರಣಕ್ಕೆರಗಿ ವಿಷ್ಣುವಿನ ಪ್ರಾಣದಾನ ಮಾಡುವಂತೆ ಕರುಣಿಸಲು ಪ್ರಾರ್ಥಿಸುವನು; ವಿಷ್ಣುವಿನ ಅಪರಾಧವನ್ನು ದಯಾಳುವೂ ಭಕ್ತಪ್ರೇಮಿಯೂ ಆದ ನೀನು ಕ್ಷಮಿಸು; ರಕ್ಷಿಸು ಎಂದು ಸಾರಥಿಯಾದ ವೃದ್ಧಬ್ರಹ್ಮನು ಪರಿ ಪರಿಯಿಂದ ಪ್ರಾರ್ಥಿಸಿಕೊಳ್ಳಲು ವೀರಭದ್ರನು ಕರುಣಿಸಿ ಕೈ ಬಿಡುವನು, ವೀರಭದ್ರ ದೇವನ ಈ ದಯಾರಸಕ್ಕೆ ಸಂತೃಪ್ತನಾದ ಬ್ರಹ್ಮದೇವನು ಸಾಮಗಾನದಿಂದ ಶ್ರೀ ವೀರೇಶ್ವರನನ್ನೂ ವಿವಿಧವಾಗಿ ಸ್ತುತಿಸುವನು.

ದರ್ಪಿಷ್ಠನೂ ಪಾಪಿಷ್ಠನೂ ಆದ ದಕ್ಷನನ್ನು ಅನುಸರಿಸಿದ್ದರಿಂದ ದೇವತೆಗಳಿಗೆ ಈ ಪಾಡಾಯಿತು; ಈ ತೀವ್ರವಾದ ಶಿಕ್ಷೆಯಾಯಿತು. ಅನೇಕರ ಗರ್ವ ಹರಣವಾಯಿತು. ದಕ್ಷನೊಡನೆ ವಿಷ್ಣುವಿನ ಕೀರ್ತಿಯೂ ಕಲಂಕಿತವಾಯಿತು. ದುಷ್ಟರ ಸಂಪರ್ಕದಿಂದ ಅನೇಕ ಅನರ್ಥಗಳು ಒದಗುವವು.

ಉಪೇಂದ್ರನು ಉಮ್ಮಳದ ಉಸುರು ಬಿಡುತ್ತ ಅತ್ಯಂತ ಖಿನ್ನನಾಗಿದ್ದನು. ವೀರಭದ್ರ ದೇವನು ದಯೆ ತೋರಿದೊಡನೆ ಹೃದಯದಲ್ಲಿ ಹರುಷವುಂಟಾಯಿತಾದರೂ ನಾಚಿಕೆಯಿಂದ ತಲೆ ತಗ್ಗಿಸುವಂತಾಯಿತು. ಕೂಡಲೇ ವೀರಭದ್ರಸ್ವಾಮಿಗೆ ವಂದಿಸಿ ನಿನ್ನ ಭಕ್ತನಾಗಿಯೇ ಬಾಳುವೆನೆಂದು ಹೇಳಿ ತನ್ನ ಲೋಕಕ್ಕೆ ಪಯಣವಾಗುವನು ಆಗ ವೀರಭದ್ರನು ಸತ್ತು ಬಿದ್ದಿದ್ದ ಆತನ ವಾಹನವಾದ ಗರುಡನನ್ನು ಬದುಕಿಸಿ ಅನುಗ್ರಹಿಸುವನು.

ಇತ್ತ ಮತ್ತೊಂದು ಭಾಗದಲ್ಲಿ ದಕ್ಷನ ಪತ್ನಿ ಪ್ರಸೂತಿಯು ಪ್ರಳಾಪಿಸುತ್ತ ಕುಳಿತಿದ್ದಳು. ಜತೆಗೆ ಮೃತರಾದ ದೇವತೆಗಳ ಪತ್ನಿಯರೂ ತಮ್ಮ ತಮ್ಮ ಗಂಡಂದಿರನ್ನು ಕಷ್ಟಪಟ್ಟು ಹುಡುಕಿ ಹೆಣಗಳನ್ನು ನೋಡುತ್ತ ರಣರಂಗದಲ್ಲಿ ಗೋಳಿಟ್ಟು ಅಳಲಾರಂಭಿಸಿದರು. ಕೆಲವರು ಎದೆ ಎದೆ ಬಡಿದುಕೊಂಡು ತಲೆ ತಲೆ ಚಚ್ಚಿಕೊಂಡು ರೋಧಿಸುತ್ತಿದ್ದರು. ಕೆಲವರು ನೆಲಕ್ಕುರುಳಿ ಹೊರಳಾಡುತ್ತಿದ್ದರು; ಧೂಳಿ ದೂಸರಿತರಾಗಿದ್ದರು. ಇನ್ನು ಕೆಲವರು ಮೂರ್ಛಿತರಾಗಿ ಮೈಮರೆದಿದ್ದರು. ಬೇರೆ ಕೆಲವರು ದಕ್ಷನನ್ನು ದೂರುತ್ತಿದ್ದರು. "ಅಯ್ಯೋ, ಅಬ್ಬಾ! ಈ ದಕ್ಷನ ಪಕ್ಷವನ್ನು ವಹಿಸಿದ ದೇವತೆಗಳೆಲ್ಲಾ ಹಾಳಾದರಲ್ಲಾ! ಹುಳುಗಳಂತೆ ಸತ್ತರಲ್ಲ!! ಅವರವರ ಹೆಂಡಂದಿರೆಲ್ಲಾ ರಂಡೆ ಮುಂಡೆಯರಾದರಲ್ಲಾ!!! ಮುಂದೇನು ಗತಿ? ಎಂದು ಗೋಗರೆದರು."

ಮುಂದೆ ಗತಿ ಮತಿ ಮಹಾವೀರನಾದ ಆ ವೀರಭದ್ರ ದೇವನಲ್ಲದೆ ಬೇರಾರಿಲ್ಲ ಎಂದು ಎಲ್ಲರೂ ಒಗ್ಗೂಡಿ ನಿರ್ಧರಿಸುವರು. ಈಗ ನಾವೇ ಹೋಗಿ ವೀರೇಶ್ವರನನ್ನು ಶರಣು ಹೋಗೋಣ ಎಂದು ಎಲ್ಲರೂ ಬಳಿಗೆ ಬರುವರು. ಭಾವಪೂರ್ಣವಾಗಿ ಭೂಮಿಗೆ ಬಿದ್ದು ನಮಸ್ಕರಿಸುವರು; ನಮ್ಮ ಕಣ್ಣೀರು ನಿಲ್ಲುವಂತೆ ಮುತ್ತೈದೆತನ ಮಣ್ಣುಗೂಡದಂತೆ ಅನುಗ್ರಹಿಸಿ ಕಾಪಾಡು ತಂದೆ! ನಮ್ಮವರು ತಿಳಿಯದೆ ಮಾಡಿದ ತಪ್ಪುಗಳನ್ನು ಮನ್ನಿಸು ಮಹಾನುಭಾವ! ನೀವು ಕರುಣಾಮೂರ್ತಿಯೆಂದು ಕಲ್ಯಾಣಕಾರಕನೆಂದು ಕೇಳಿದ್ದೇವೆ. ನಿಮ್ಮನ್ನು ಬಿಟ್ಟು ನಮಗಾರಿಲ್ಲ ರಕ್ಷಕರು; ನಮಗಾರಿಲ್ಲ ಉದ್ಧಾರಕರು ಎಂದು ಪ್ರಾರ್ಥಿಸುತ್ತ ಪ್ರಾರ್ಥೇಯಪಡುತ್ತ ಅಂತಃಕರಣ ಉಕ್ಕಿ ಬಗೆದುಂಬಿ ಬಿಕ್ಕಿ ಬಿಕ್ಕಿ ಕಣ್ಣೀರ ಕೋಡಿ ಹರಿಸುವರು. ವೀರೇಶನ ಪಾದ ಪ್ರಕ್ಷಾಳನ ಮಾಡುವರು.

ತಾಯಿಗಳಿರಾ, ಶಿವನಿಂದಕರಿಗೆ ಶಿವದ್ವೇಷಿಗಳಿಗೆ ಇದೇ ಶಾಸನ. ಅಲ್ಲದೆ ಶಿವನಿಂದೆಯನ್ನು ಕೇಳಿದವರಿಗೂ ಸಹ ಇದೇ ಫಲವಾಗುವುದು; ಇದೇ ಪಾಡಾಗುವುದು. ಪಾಪದ ಕೂಪದಲ್ಲಿ ಬಿದ್ದು ಒದ್ದಾಡಬೇಕಾಗುವದು. ಶಿವನ ಅನುಗ್ರಹ ಅವರಿಗೆ ಎಂದಿಗೂ ಆಗದು. ಪ್ರತಿಯಾಗಿ ಶಿವನ, ಹಣೆಗಣ್ಣಿನ ಉರಿಯಲ್ಲಿ ಬೆಂದು ಬೂದಿಯಾಗುವರು. ಕಾಮಕಾಲರ ಕಥೆಯೇ ಹಾಗಾಗಿರುವಾಗ ಉಳಿದವರ ಮಾತೇನು? ಇನ್ನು ಮುಂದೆ ಯಜ್ಞಯಾಗಾದಿಗಳನ್ನು ಮಾಡುವುದಿಲ್ಲೆಂದು ಮಾತುಕೊಟ್ಟರೆ ನಿಮ್ಮ ಪತಿಗಳನ್ನೆಲ್ಲರನ್ನು ಬದುಕಿಸುತ್ತೇನೆ. ಏನನ್ನುವಿರಾ?

ತಮ್ಮ ಅಪ್ಪಣೆಯಂತೆ ತಪ್ಪದೆ ನಡೆಯುತ್ತೇವೆ; ನಮ್ಮ ಪತಿಗಳಿಗೂ ಹೇಳುತ್ತೇವೆ. ಸದ್ಯಃ ಪತಿಗಳ ಪ್ರಾಣಗಳನ್ನು ಅನುಗ್ರಹಿಸು ಮಹಾನುಭಾವ! ಎಂದು ಅಂಗಲಾಚುವರು. ಆಗ ವೀರಭದ್ರನು ಅವರವರ ಪತಿಗಳಿಗೆ ಪ್ರಾಣಗಳನ್ನು ಕರುಣಿಸುವನು. ಇಂದ್ರಾದಿ ದೇವತೆಗಳಿಗೂ ಯಜ್ಞಯಾಗಗಳನ್ನು ಮಾಡದಂತೆ ಮಾಡುವವರಿಗೆ ನೆರವಾಗದಂತೆ ಆಜ್ಞೆಯನ್ನು ಮಾಡುವನು. ಅವರೆಲ್ಲ ತಲೆಬಾಗಿ ಒಪ್ಪಿಕೊಳ್ಳುವರು.

ಯುದ್ಧ ವಿಶ್ರಾಂತವಾಯಿತು. ವೀರಭದ್ರನ ಮೇಲೆ ವಿಯತ್ತಳದಿಂದ ವಿಪುಲ ಪುಷ್ಪವೃಷ್ಟಿಯಾಯಿತು. ಮಂದ ಮಾರುತವು ಸುಖ ಶೀತಲವಾಗಿ ಸುಳಿಯಿತು. ಕಳವಳಗೊಂಡಿದ್ದ ಜಗತ್ತು ಹರ್ಷಪೂರಿತವಾಯಿತು. ಸಮಸ್ತ ಲೋಕಗಳು ಸುಖ ಶಾಂತಿಯನ್ನು ಪಡೆದುವು.

ರುದ್ರಗಣ-ಶಿವಗಣರು ವಿಜಯನಾದವನ್ನು ಮೊಳಗಿಸಿದರು. ವೀರೋಲ್ಲಾಸದಿಂದ ವಿಜೃಂಭಿಸಿದರು. ಕೈ ಮೈಗಳನ್ನು ತಿಳಿನೀರಿನಿಂದ ತೊಳೆದುಕೊಂಡರು. ಒಂದೆಡೆಗೆ ಎಲ್ಲರೂ ಸೇರಿ ಶಿವಲಿಂಗಾರ್ಚನೆಯನ್ನು ನೆರವೇರಿಸಿದರು. ಶಿವಪ್ರಸಾದವನ್ನು ಸ್ವೀಕರಿಸಿದರು. ಶಾಂತಿ ಸಮಾಧಾನಗಳನ್ನು ತಳೆದರು. ವಿಶ್ರಾಂತಿಯನ್ನು ಪಡೆದರು.

ಈಶ್ವರಾನುಗ್ರಹದಿಂದ ವೀರಭದ್ರ ದೇವನು ವಿಜಯಶಾಲಿಯಾದನು. ವಿದ್ವೇಷಿಯಾದ ದಕ್ಷನನ್ನು ದಂಡಿಸಿದನು. ಇಂದ್ರೋಪೇಂದ್ರರ ಗರ್ವಹರಣ ಮಾಡಿದನು. ಬ್ರಹ್ಮನು ಶರಣಾಗತನಾದನು. ಇದಕ್ಕಿಂತ ಇನ್ನೇನು?

ಗಣರೆಲ್ಲರೂ ಸೇರಿ ಯಜ್ಞ ಮಂಟಪವನ್ನು ಯಜ್ಞ ಕುಂಡವನ್ನು ಶುಭ್ರಗೊಳಿಸಿದರು. ಆ ಯಜ್ಞ ಕುಂಡದಲ್ಲಿಯೇ ವೀರಭದ್ರನ ವಿಗ್ರಹವೊಂದನ್ನು ವಿಜಯಸ್ಮಾರಕಕ್ಕಾಗಿ ಪ್ರತಿಷ್ಠಾಪಿಸುವರು ವೀರ ಧ್ವಜವನ್ನು ಎತ್ತಿ ಕಟ್ಟಿ ಹಾರಿಸಿದರು.

ಇಷ್ಟೆಲ್ಲ ಆದ ಬಳಿಕ ದಕ್ಷನ ಪತ್ನಿ ಪ್ರಸೂತಿಯು ವೀರಭದ್ರಸ್ವಾಮಿಯ ಸನ್ನಿಧಿಗೆ ಬಂದು ಪತಿಭಿಕ್ಷೆಯನ್ನು ಅನುಗ್ರಹಿಸಲು ಪ್ರಾರ್ಥಿಸುವಳು; ಅದಕ್ಕೆ ವೀರಭದ್ರ ದೇವನು, ತಾಯಿ! ನಿನ್ನ ಪತಿಯ ತಲೆ ಹೊರಟು ಹೋಗಿದೆ. ಮರಳಿ ಅದೇ ಬಾರದು. ಆತನೇ ಯಜ್ಞದ ಕೊನೆಯಲ್ಲಿ ಕತ್ತರಿಸಿದ ಕುರಿತಲೆಯಿದೆ. ಅದನ್ನು ಬೇಕೆಂದರೆ ಕೊಡುವೆನು. ಆ ಕುರಿಯನ್ನೂ ಈ ನರಕುರಿಯನ್ನೂ ಬದುಕಿಸಿದಂತಾಗುತ್ತದೆ. ಇಷ್ಟನ್ನು ಮಾತ್ರ ನಿನಗಾಗಿ ಮಾಡಬಲ್ಲೆ. ಪೂರ್ಣಾನುಗ್ರಹ ಬೇಕಾದರೆ ನೀವಿಬ್ಬರೂ ಆ ಮಹಾ ದೇವನಲ್ಲಿಗೇನೆ ಬಂದು ಶರಣಾಗಬೇಕು ಎಂದು ಹೇಳಲು ಪ್ರಸೂತಿಯು ವಿಧಿಯಿಲ್ಲದೆ ಒಪ್ಪುವಳು; ವೀರಭದ್ರಸ್ವಾಮಿಯು ಹೇಳಿದಂತೆ ದಕ್ಷನಿಗೆ ಕುರಿದಲೆಯನ್ನು ಕರುಣಿಸುವನು. ನಿರಹಂಕಾರಿಯಾಗಿರಲು ಇದೂ ಒಂದು ಬಗೆಯ ಉಪಾಯ ತಾನೆ? ಕಾಸಿಗೆ ತಕ್ಕ ಕಜ್ಜಾಯ!

ಶಿವಾನುಗ್ರಹ-ದಕ್ಷ ಪಿತಾಮಹ

ವೀರಭದ್ರನೂ ವೀರಗಣರೂ ವಿಜಯೋಲ್ಲಾಸದಿಂದ ಕೈಲಾಸಕ್ಕೆ ಪ್ರವಾಸ ಬೆಳಸಿದರು. ಮಹಾದೇವನಲ್ಲಿಗೆ ಮರುಳಿದರು. ಶಿವನಿಲಯಕ್ಕೆ ಬರುವರು. ಗಣರೆಲ್ಲರೂ ಹೊರಗಿರುವರು. ವೀರಭದ್ರದೇವನು ನೇರವಾಗಿ ಒಳಕ್ಕೆ ಹೋಗುವನು. ನಡೆದ ವಿದ್ಯಮಾನವನ್ನೆಲ್ಲ ನಿವೇದಿಸುವನು. ಶಿವನು ಕೇಳಿ ಸಂತೋಷಿಸುವನು. ವೀರಭದ್ರನ ವೀರಪ್ರತಾಪಕ್ಕೆ ಹೆಮ್ಮೆಗೊಳ್ಳುವನು. ಶಿವನು ತನ್ನ ನೆಚ್ಚಿನ ಅಚ್ಚಾಳುವಾದ ವೀರಭದ್ರನೊಡನೆ ಓಲಗಕ್ಕೆ ಬರುವನು. ಹೊರಗಿರುವ ರುದ್ರಗಣ-ಶಿವಗಣರನ್ನು ಓಲಗದೊಳಕ್ಕೆ ಬರಮಾಡಿಕೊಳ್ಳುವನು. ಎಲ್ಲರೂ ಎಲ್ಲೆ ಮೀರಿದ ಉತ್ಸಾಹ ಉಲ್ಲಾಸಗಳಿಂದ ಒಳನುಗ್ಗುವರು. ಎಲ್ಲರು ಮುಖಗಳಲ್ಲಿ ಗೆಲುವಿನ ಒಲವು ಕಳೆಯು ಚಿಮ್ಮುತ್ತಿದ್ದಿತು. ವಿಜಯಘೋಷ ಬಾಯಿಂದ ಹೊರಟು ಓಲಗವನ್ನು ಪ್ರತಿಧ್ವನಿಸಿತು. ಆ ನಿನಾದದಿಂದ ಕೊಂಚ ಕಾಲ ಓಲಗ ತುಂಬಿ ತುಳುಕಿದ್ದಿತು. ಕಿವಿಗಳು ಗಡುಸಿಕ್ಕಿದವು. ಶಿವನು ಮಂದಹಾಸದಿಂದ ಅಭಯಹಸ್ತದಿಂದ ಸಮಸ್ತ ಗಣರನ್ನು ಅನುಗ್ರಹಿಸುವನು.

ಇತ್ತ ಈಶ್ವರನ ಪಾರ್ಶ್ವದಲ್ಲಿ ವೀರಭದ್ರ ಭದ್ರಕಾಳಿಯರು ನಿಷ್ಠೆಯಿಂದ ನಿಂತಿದ್ದರು. ಅವರನ್ನು ಪರಮೇಶ್ವರನು ಕೃಪೆಯಿಂದ ನೋಡಿ ಹತ್ತಿರಕ್ಕೆ ಕರೆದು ತಲೆದಡವಿ ವೀರಾಗ್ರಣಿಯೆ, ನೀನು ಕಾಳಗದಲ್ಲಿ ಬಹಳವಾಗಿ ಬಳಲಿರಬೇಕು. ಇದೇ ಇಲ್ಲಿ ಅಲ್ಲಿ ಗಾಯಗಳಾಗಿವೆಯಲ್ಲಾ! ಹೆಚ್ಚು ತುರುಸಿನ ಕಾಳಗ ನಡೆದಂತಿದೆ. ಈ ಗಾಯಗಳು ಬಹುಶಃ ಆ ವಿಷ್ಣುವಿನಿಂದಾಗಿರಬೇಕು. ಇವನ್ನೆಲ್ಲ ತಕ್ಕ ಚಿಕಿತ್ಸೆಯಿಂದ ಮಾಣಿಸಿಕೋ! ಅಮ್ಮಾ, ಭದ್ರೆ! ನಗುತ್ತ ನೀನೂ ಯುದ್ಧಭೂಮಿಗೆ ಹೋಗಿದ್ದೆಯಾ? ಓಹೋ! ಇದೊಂದು ಹೊಸ ಹಾದಿ ನಿನ್ನದು! ಹೊಸ ಆದರ್ಶ ನಿನ್ನದು! ವೀರಭದ್ರನ ಯಜ್ಞ ನಿರೋಧ ಕ್ರಾಂತಿಗೆ ನಿನ್ನದೂ ಸೇವೆ ಸಲ್ಲಿಸಿದಂತಾಯಿತು. ಜಗತ್ತಿನಲ್ಲಿ ಸಾಂಸ್ಕೃತಿಕ ಕ್ರಾಂತಿ ಪಥದಲ್ಲಿ ನೀನು ಪ್ರಪ್ರಥಮ ಆದರ್ಶ ವೀರಮಹಿಳೆ ಎಂದು ಕೀರ್ತಿಯನ್ನು ಗಳಿಸು. ನಿನ್ನ ಒಡೆಯನೊಡನೆ ಜಗತ್ತು ನಿನ್ನನ್ನು ಆರಾಧಿಸಲಿ; ಆದರಿಸಲಿ.

ಓ ತಾಯಿ, ನಿನ್ನ ಪತಿದೇವನ ಈ ಯಜ್ಞ ನಿರೋಧ ಆಂದೋಳನ ಪ್ರಗತಿಪರ ಕ್ರಾಂತಿ; ಪ್ರಥಮ ಕ್ರಾಂತಿ. ಆರಾಧನೆಯ ಮಟ್ಟವನ್ನು ಮೇಲಕ್ಕೆತ್ತುವ ಆಂದೋಳನ. ಅಹಿಂಸೆ ಕರುಣೆಗಳನ್ನು ಪ್ರೋತ್ಸಾಹಿಸುವ ಪ್ರಗತಿಪರ ಕ್ರಾಂತಿ; ಉನ್ನತಗೊಳಿಸುವ ಕ್ರಾಂತಿ. ನೈತಿಕ ಮೂಲ್ಯಗಳನ್ನು ಗುರುತಿಸಲು ಅನುವಾಗುವ ಆಂದೋಳನ.

ಯಜ್ಞದ ನೆಪದಲ್ಲಿ ದ್ವೇಷ ಅಸೂಯೆ ಅಹಂಕಾರಗಳನ್ನು ಪ್ರಾಣಿವಧೆಯನ್ನು ಪಡಿ ಪದಾರ್ಥಗಳ ಸಂಹಾರವನ್ನು ಸಾಧಿಸುವವರಿಗೆ ತಕ್ಕ ಶಿಕ್ಷೆಯಿದು. ಅಶಾಂತಿ ವಾತಾವರಣವನ್ನು ಕಲ್ಪಿಸುವ ದಕ್ಷನಂಥವರನ್ನು ದಮನಿಸಿದ ಶ್ರೇಷ್ಠ ಸಾಮರ್ಥ್ಯ ನಿನ್ನ ಪತಿದೇವನದು; ಆತನ ಆ ಪಥದಲ್ಲಿ ಹೆಜ್ಜೆ ಹಾಕಿದ ಆತನು ಹೊರುವ ಭಾರಕ್ಕೆ ಭುಜವನ್ನು ಕೊಟ್ಟು ನಿಲ್ಲುವ ನಿನ್ನ ಆದರ್ಶ ಚಿಕ್ಕದೇನಲ್ಲ. ಇಬ್ಬರೂ ಆದರ್ಶ ದಂಪತಿಗಳು. ನಿಮ್ಮ ಈ ಸೇವೆಯಿಂದ ತುಂಬಾ ಸಂತೋಷವಾಗಿದೆ. ನೀವಿಬ್ಬರೂ ಬರೀ ಶಕ್ತಿವಂತರೇ ಅಲ್ಲ; ಭಕ್ತಿವಂತರೂ ಅಹುದು.

ಓ ಅಚ್ಚಾಳು ವೀರಭದ್ರ! ಇಂದಿನಿಂದ ನೀನು ಈ ಗಣರಿಗೆಲ್ಲ ಒಡೆಯನಾಗು. ಇವರ ಬೆಂಬಲ ನಿನಗೆ ಮುಂದೆಂದಿಗೂ ಇರಲಿ. ನಿನ್ನ ಯಜ್ಞ ನಿರೋಧ ಕ್ರಾಂತಿ. ಅವ್ಯಾಹತವಾಗಿ ಸಾಗಿ ಬರಲಿ. ನಿನ್ನ ಈ ಉದ್ದೇಶವನ್ನು ಎತ್ತಿ ಹಿಡಿಯುವವರು ಬೆಳೆದು ಬರಲಿ; ಪರಂಪರೆಯಾಗಿ ಕಾಲ ಕಾಲಕ್ಕೆ ಹೆಚ್ಚುತ್ತ ಬರಲಿ. ಅಲ್ಲದೆ ನಿನ್ನ ಈ ದಕ್ಷಯಾಗದ ಧ್ವಂಸ ಸ್ಮಾರಕವಾಗಿ ಭೂಲೋಕದ ಮಠಮಾನ್ಯಗಳಲ್ಲಿ ಅಗ್ನಿಕುಂಡಗಳನ್ನು ಕಾಷ್ಠಗಳಿಂದ ತಯಾರಿಸಿ ಅಗ್ನಿಯನ್ನು ಪ್ರವೇಶಿಸುವ ಅಗ್ನಿಯನ್ನು ತೊತ್ತುಳಿದು ಲೀಲಾಜಾಲವಾಗಿ ದಾಟುವ ಸಂಪ್ರದಾಯ ಸಾಗಿ ಬರಲಿ. ಪುರವಂತರು ನಿನ್ನ ವೀರಶ್ರೀಯ ಘೋಷವನ್ನು ಸಾರ್ವಜನಿಕರಲ್ಲಿ ಮಾಡುತ್ತಿರಲಿ. ನಿಮಗೆ ಎಲ್ಲ ಬಗೆಯಿಂದ ಲೇಸಾಗಲಿ. ಎಲ್ಲದರಲ್ಲಿ ಗೆಲವಾಗಲಿ.

ಬಳಿಕ ಶಿವನು ಎದುರಿಗಿದ್ದ ಓಲಗದಲ್ಲಿ ಕೈಮುಗಿದು ನಿಂತಿದ್ದ ರುದ್ರಗಣ-ಶಿವಗಣರನ್ನು ಕೃಪಾದೃಷ್ಟಿಯಿಂದ ನೋಡಿ ಓ ಗಣರೇ ನಿಮ್ಮ ಸೇವೆ ಬರೀ ನಮ್ಮದು ಮಾತ್ರವಲ್ಲ; ಇಡೀ ಪ್ರಪಂಚಕ್ಕೆ ಸಲ್ಲುವಂತಹದು. ದುಷ್ಪರ ಕಾಟ ಒಬ್ಬರಿಗೆ ಮೀಸಲಾಗುವುದಿಲ್ಲ. ಅದು ಬೆಳೆಯುತ್ತ ಸಾರ್ವಜನಿಕವಾಗಿ ಮುಂದುವರಿಯುತ್ತದೆ. ಒಂದೆಡೆಯಲ್ಲಿ ಅವಕಾಶ ದೊರೆತರೆ ಅವರು ಆ ಬಳಿಕ ಎಲ್ಲೆಲ್ಲಿಯೂ ತಮ್ಮ ದುಷ್ಟಶಕ್ತಿಯನ್ನು ಬಳಸಿಕೊಳ್ಳುತ್ತಾರೆ. ಲೋಕ ಕಂಟಕರಾಗುತ್ತಾರೆ. ಇಂತಹ ಯಜ್ಞಗಳಿಂದ ಯಾರಿಗೂ ಹಿತವಿಲ್ಲ. ಇದನ್ನು ತಿಳಿದು ನೀವೆಲ್ಲರೂ ಆಜ್ಞೆಯನ್ನು ಉಲ್ಲಂಘಿಸದೆ ಒಗ್ಗಟ್ಟಿನಿಂದ ವೀರಭದ್ರನ ಮುಂದಾಳುತನದಲ್ಲಿ ಹೋಗಿ ಹೋರಾಡಿ

ಗೆಲವನ್ನು ತಂದುದು ತುಂಬಾ ಮಹತ್ವಪೂರ್ಣ ತ್ಯಾಗ! ಮಹತ್ವ ಪೂರ್ಣವಾದ ಸೇವೆ! ನಿಮ್ಮ ಹೆಸರುಗಳು ಚಾರಿತ್ರಿಕವಾಗಿ ಶಾಶ್ವತವಾಗಲಿ. ನಿಮ್ಮ ಈ ಕ್ರಾಂತಿ ಸೇವೆ ಮುಂದಕ್ಕೂ ಸಾಗಿಬರಲಿ. ನಿಮ್ಮೆಲ್ಲರ ಈ ನೆರವು ನಮಗಾದ ಸತೀವಿಯೋಗ ವ್ಯಥೆಯನ್ನು ಮರೆಸಿದೆ. ನಿಮ್ಮೆಲ್ಲರಿಗೂ ಶಾಶ್ವತ ಸುಖವೊದಗಲಿ. ನೀವೆಲ್ಲರೂ ಹೀಗೆಯೇ ಶಕ್ತಿ ಸಂಪನ್ನರಾಗಿ ಬಾಳುವಂತಾಗಲಿ.

ಹೀಗೆ ಹರನು ಹರುಷದಿಂದ ಹೃದಯಾರೆ ಎಲ್ಲರನ್ನು ಹರಸುತ್ತಿರುವಾಗ ದಕ್ಷಬ್ರಹ್ಮನು ತನ್ನ ಸತಿಯೊಡನೆ ಕಣ್ಣೀರು ಸುರಿಸುತ್ತಾ ಬರುವನು. ಚರಣಕ್ಕೆ ಎರಗುವನು. ಸರ್ವಾತ್ಮ ಭಾವದಿಂದ ಶರಣಾಗುವನು. ತಾನು ಮಾಡಿದ ತಪ್ಪನ್ನು ಕ್ಷಮಿಸಲು ವಿನಯ ಶಾಲಿಯಾಗಿ ವಿಜ್ಞಾಪಿಸಿಕೊಳ್ಳುವನು. ಶಿವ ಮಹಿಮೆಯನ್ನು ಸ್ತುತಿಸುವನು.

ದಕ್ಷನ ಹೃದಯ ಪರಿವರ್ತನವಾದುದನ್ನು ಕಂಡು ಶಿವನಿಗೆ ಸಂತಸವಾಯಿತು. ಅಯ್ಯಾ ದಕ್ಷನೇ, ಹೃದಯ ಪರಿವರ್ತನವೇ ನಮ್ಮ ಮೂಲ ಗುರಿ. ನಿನ್ನಂತೆ ನಮಗೆ ಅಹಂಕಾರವಿಲ್ಲ; ಹರಣಕ್ಕೆ ಮುನಿಸಿಲ್ಲ. ಅಲ್ಲದೆ ನಿನ್ನನ್ನು ಅವಮಾನಿಸಬೇಕೆಂಬ ಉದ್ದೇಶವೂ ನಮಗಿರಲಿಲ್ಲ. ನೀನು ಬಂದು ಹೋದುದನ್ನೇ ನಾವು ಕಾಣೆವು. ನೀನು ಯಜ್ಞ ಮಾಡಿದ್ದರೂ ನಮಗೆ ಯಾವ ಅಸಮಾಧಾನವಿಲ್ಲ. ಆದರೆ ಸಾಕ್ಷಾತ್ ನಿನ್ನ ಮಗಳೇ ನಿನ್ನ ಮೇಲಿನ ಮಮತೆಯಿಂದ ತಂದೆಯೆಂಬ ಅಭಿಮಾನದಿಂದ ಬಂದರೆ ಬಾ ಎನ್ನದೆ, ಹೇಳಿದುದನ್ನು ಕೇಳಿದೆ. ಅವಳ ಪ್ರಾಣಾಹುತಿಗೆ ಕಾರಣವಾದುದು ತಂದೆತನಕ್ಕೆ ಒಪ್ಪುವ ಮಾತಲ್ಲ. ನಿನ್ನ ಆರಾಧನೆಗೆ ಸಲ್ಲುವ ಕಾರ್ಯವಲ್ಲ. ಪ್ರಾಣಾಹುತಿಯವರೆಗೂ ಮುಂದುವರೆದ ಬಳಿಕ ನಿನ್ನ ಮೇಲೆ ಕೈ ಮಾಡಬೇಕಾಯಿತು. ಇಂತಹ ಕಠಿಣ ಶಿಕ್ಷೆಗೆ ನಿನ್ನ ಅರ್ಥವಿಲ್ಲದ ಮೊಂಡತನವೇ ಕಾರಣವಲ್ಲದೆ ಬೇರಿಲ್ಲ. ಚಾರಿತ್ರಕ ಪತನಕ್ಕಿಂತ ಬೇರಿಲ್ಲ ಪಾಶವೀಯತೆ! ಚಿತ್ತ ಶುದ್ಧಿ ಚಾರಿತ್ರ ಶುದ್ಧಿಗಳಿದ್ದರೆ ಇಂತಹ ದುರ್ಘಟನೆಗಳಿಗೆ ಅವಕಾಶವಿರುವುದಿಲ್ಲ. ಪ್ರಜಾಪತಿಗಳೆನಿಸಿದ ನಿಮ್ಮಂತಹ ಹಿರಿಯರೇ ಹೊಲಬು ದಪ್ಪಿದ್ದರೆ ಉಳಿದವರ ಪಾಡೇನು? ನಿನ್ನ ಮನೆಯ ಮುಂದಿನ ಪುನೀತ ಪ್ರಾಂಗಣದಲ್ಲಿ ಇಂತಹ ಗರ್ಹ್ಯವಾದ ಘಟನೆ, ಹೇಯವಾದ ಹತ್ಯಾಕಾಂಡ ನಡೆಯಬೇಕಾಗಿತ್ತೇನು? ನಿನ್ನಂತಹ ವೃದ್ಧರಿಗೆ ಇಂತಹ ದುರ್ಬುದ್ಧಿ ಹುಟ್ಟಿದರೆ ತರುಣರ ಮಾತೇನು? ಇದೊಂದು ದೈವಲೋಕದ ದೌರ್ಭಾಗ್ಯ. ದೇವಲೋಕದ ಹೆಸರಿಗೆ ಕಲಂಕ. ದೇವತೆಗಳಿಗೆಲ್ಲ ಕಳೆದುಕೊಳ್ಳಬಾರದ ಕಲಂಕ. ನಿನ್ನ ತಂದೆ ಬ್ರಹ್ಮನಿಗೂ ಬುದ್ಧಿಯಿಲ್ಲದೆ ಹೋಯಿತಲ್ಲಾ ಎಂಬುದೇ ಯೋಚನೀಯ ವಿಷಯ. ವಿಶ್ವಪಾಲಕನಾದ ವಿಷ್ಣುವಿಗೇಕೆ ಈ ದುರಭಿಮಾನ ಹುಟ್ಟಿತೋ? ಇದಕ್ಕೆಲ್ಲ ನೀನೇ ತಾನೆ ಕಾರಣಕರ್ತನು. ಒಬ್ಬ ವ್ಯಕ್ತಿ ಮಾಡುವ ತಪ್ಪು ಹೇಗೆ ಉಳಿದವರನ್ನೂ ಬಳಸಿಕೊಂಡು ಬರುತ್ತದೆಯೆಂಬುದಕ್ಕೆ ನೀನೇ ಸೃಷ್ಟಿಗೆ ಸತ್ಯಸಾಕ್ಷಿಯಾಗಿದೆ. 'ಒಬ್ಬರಿಗೆ ಬಯಸಿದ್ದು ತನಗಾಗುವುದು' ಎಂಬ ನಾಣ್ಣುಡಿಗೆ ನೀನೇ ನಿದರ್ಶನ; ನಿನ್ನ ಈ ಯಥಾರ್ಥವಲ್ಲದ ಯಜ್ಞವೇ ಪ್ರಮಾಣ. ನಿನ್ನ ಈ ದುರ್ಘಟನ ದೇವಲೋಕ ರುದ್ರಲೋಕಗಳಿಗೆ ಮಾತ್ರ ಸೀಮಿತವಾಗಿ ನಿಲ್ಲುವುದಿಲ್ಲ. ಅಲ್ಲದೆ ಈ ಕಾಲಕ್ಕೆ ಮಾತ್ರ ಸೀಮಿತವಲ್ಲ. ನಿನ್ನ ಈ ಪ್ರತಿಕ್ರಿಯೆಯಿಂದ ನೀನು ಪಡೆದ ಪ್ರಾಪ್ತಿಯೇನು? ತಳೆದ ತೃಪ್ತಿಯೇನು? ನಿನ್ನ ದೌಷ್ಟ್ಯ ಪ್ರಯತ್ನದ ಪ್ರಭಾವಕ್ಕೆ ಒಳಗಾಗಿ ನಿನ್ನನ್ನು ಪ್ರೋತ್ಸಾಹಿಸಿದವರು ಯಾವ ಭಾಗ್ಯವನ್ನು ಬರಮಾಡಿಕೊಂಡರು? ಅನುಚಿತ ಪಥದಿಂದ ಅಧಿಕಾರ ಅಭಿಮಾನಗಳನ್ನು ಬಯಸಿದರೆ ಬರುವವೇನು? ಒಂದು ವೇಳೆ ಬಂದರೂ ಬಾಳುವವೇನು? ಇದರಿಂದ ಇಂದ್ರೋಪೇಂದ್ರ ಬ್ರಹ್ಮರು ಒಂದು ಹೊಸ ಪಾಠವನ್ನು ಕಲಿತಂತಾಯಿತಲ್ಲವೆ?

ನನ್ನ ದಿಟವಾದ-ಭಕ್ತ ದಧೀಚಿ. ಆತನ ಭವ್ಯ ಭಕ್ತಿ ಸಾಗರ ವೀಚಿಗಳು ವಿಶ್ವವನ್ನೆ ವ್ಯಾಪಿಸಿವೆ. ಆತನ ದಿವ್ಯ ಧೃತಿಯ ದ್ಯುತಿ ದ್ಯಾವಾ ಪೃಥಿವಿಗಳನ್ನೇ ಬೆಳಗಿದೆ. ಅಂಥವನು ಹೇಳಿದ ಹಿತೋಕ್ತಿಗಳೂ ಸಹ ನಿನ್ನ ಹೃದಯಕ್ಕೆ ಬರಲಿಲ್ಲ. ನಿನ್ನ ಕಠಿಣ ಮನಸ್ಸು ಹದಗೊಳ್ಳಲಿಲ್ಲ. ನಿನ್ನ ದರ್ಪಗ್ರಂಥಿ ಸಡಿಲವಾಗಲಿಲ್ಲ. ಆತನು ಸಿಡಿಮಿಡಿಗೊಂಡು ಯಾಗ ಶಾಲೆಯಿಂದ ಎದ್ದು ಹೋದಾಗ ನಡೆದ ಕೊರತೆಯ ಸನ್ನಿವೇಶವೂ ನಿನ್ನ ಲಕ್ಷ್ಯಕ್ಕೆ ಬರಲಿಲ್ಲ. 'ವಿನಾಶ ಕಾಲೇ ವಿಪರೀತ ಬುದ್ಧಿ' ಎಂಬುದು ದಿಟ ತಾನೆ?

ಹೋಗಲಿ ಬಿಡು; ದುಷ್ಟಯುಗವೊಂದು ದೂರಾದಂತಾಯಿತು. ಮದಮತ್ಸರಗಳ ಮನ್ವಂತರ ಮುಗಿದಂತಾಯಿತು. ಬಹುಜನಕ್ಕೆ ಬುದ್ಧಿ ಬಂದಂತಾಯಿತು. ಯಾಜ್ಞಿಕ ಕ್ರಾಂತಿಯಿಂದ ಒಂದು ನವ ಪ್ರಜ್ಞೆ ಪ್ರಾದುರ್ಭವಿಸುವಂತಾಯಿತು. ಹಿಂಸಾಚಾರ-ಮಾಂಸಾಹಾರ ಉಚಿತವಲ್ಲವೆಂಬುದನ್ನು ಅರಿಯುವಂತಾಯಿತು. ವಯಸ್ಸಿನಿಂದ ಹಿರಿಯರಾದರೇನು? ಮನಸ್ಸಿನಿಂದ ಹಿರಿಯರಾಗಬೇಕು; ಮಹಾಜ್ಞಾನ-ಮಂಗಳ ಕ್ರಿಯೆಗಳಿಂದ ಹಿರಿಯರಾಗಬೇಕೆಂಬ ಪಾಠ ಪ್ರಪಂಚಕ್ಕೆ ಗೊತ್ತಾಗುವಂತಾಯಿತು. ಒಂದು ಕೇಡು ಇನ್ನೊಂದು ಲೇಸಿಗೆ ಹೊಲಬು; ನವಕ್ರಾಂತಿಗೆ ನೆಲೆ.

ತಲೆ ಬಡಿಯದೆ ತಗ್ಗುವ ಬಗ್ಗುವ ಪ್ರವೃತ್ತಿ ಸಾಮಾನ್ಯವಾಗಿ ಇರುವುದಿಲ್ಲ. ಸ್ವಪ್ರತಿಷ್ಠೆ ಸ್ವಾಭಾವಿಕವಾಗಿ ಬಂದ ದುರ್ಗುಣ. ಅದು ಮೇರೆ ಮೀರಿದರೆ ಅದರ ದುಷ್ಫಲಕ್ಕೂ ಮೇರೆ ಇರುವುದಿಲ್ಲ ಎಂಬುದಕ್ಕೆ ಇದೊಂದು ನಿಸ್ಸಂದೇಹ ವಾದ ನಿದರ್ಶನ.

ಕತ್ತಲೆಯ ಹಿಂದೆ ಬೆಳಕು, ಬೆಳಕಿನ ಹಿಂದೆ ಕತ್ತಲು. ಇದು ಪ್ರಕೃತಿ ನಿಯತಿ. ಹೀಗಿದ್ದರೂ ವಿದ್ಯೆ ವಿನಯಗಳಿದ್ದರೆ ಈ ಪ್ರಕೃತಿ ನಿಯತಿಯನ್ನು ಮೀರಬಹುದು. ಅಭಿಮಾನಕ್ಕೂ ಒಂದು ಅವಧಾನಬೇಕು; ಒಂದು ಅವಕಾಶಬೇಕು.

'ಪ್ರತ್ಯಕ್ಷವಾದರೂ ಪ್ರಮಾಣಿಸಿ ನೋಡು' ಎಂದು ಹೇಳಿದುದೇಕೆ? ಈ ಮಾತನ್ನು ನಿನ್ನಂಥವರು ಉದಾಸೀನ ಮಾಡಬೇಕೆ? ತಪ್ಪು ಕಲ್ಪನೆಗೆ ತೀವ್ರ ಮತ್ಸರಕ್ಕೆ ಬೀಳಬೇಕೆ? ಯಜ್ಞ ದ್ವೇಷ ಸಾಧನೆಗೆ ಸಾಹಿತ್ಯವಾಗಬೇಕೆ? ವಸ್ತುವಾಗಬೇಕೆ? ನೈತಿಕಪತನ ಹೇತುವಾಗಬೇಕೆ? ಭೀಕರ ಸ್ವರೂಪದ ಬೀಡಾಗಬೇಕೆ? ಪ್ರಳಯ ಪ್ರವಾಹವಾಗಿ ಹರಿಯಬೇಕೆ? ಪವಿತ್ರ ವಾತಾವರಣವನ್ನು ಹುಟ್ಟಿಸುವ ಸಾಧನ, ಅಪವಿತ್ರ ವಾತಾವರಣವನ್ನು ಹುಟ್ಟಿಸುವಂತೆ ಮಾಡುವುದು ನ್ಯಾಯವೆ? ವೈಯಕ್ತಿಕ ಪ್ರತಿಷ್ಠೆಗಾಗಿ ಸಾಮೂಹಿಕ ಕಷ್ಟನಷ್ಟಗಳಿಗೆ ಎಡೆಯನ್ನು ತಂದೊಡ್ಡುವುದು ಸರಿಯೆ?

ದಕ್ಷನೆ, ನೀನು ವೃದ್ಧ ಪ್ರಜಾಪತಿ. ನಿಜಕ್ಕೂ ನೀನು ದೊಡ್ಡವನು. ನಿನ್ನಿಂದ ಪ್ರಕೃತಿ ರೂಪಿತಳಾಗಿದ್ದಾಳೆ. ಸಾಲದ್ದಕ್ಕೆ ಎಲ್ಲ ದೇವತೆಗಳೂ ನಿನ್ನ ಅಳಿಯಂದಿರು. ನಿನ್ನ ಹಿರಿಯತನಕ್ಕೆ ಕೊರತೆಯಿರಲಿಲ್ಲ. ನೀನಾಗಿಯೇ ಬಯಸಬೇಕಾಗಿರಲಿಲ್ಲ. ಅದು ತನ್ನಿಂದ ತಾನೆ ಸ್ವಾಭಾವಿಕವಾಗಿತ್ತು; ಸಹಜವಾಗಿತ್ತು. ಅದನ್ನು ಬಯಸಿ ಪಡೆಯ ತಿಳಿಸುವುದು ಸರಿಯಲ್ಲ; ಕ್ರಮವಲ್ಲ. ಮಾವನೆಂದು ನಿನ್ನ ಮಾತನ್ನು ಮೀರದೆ ಎಲ್ಲ ದೇವತೆಗಳು ನಿನ ಯಜ್ಞಕ್ಕೆ ಬಂದಿರಬೇಕು. ಮನೆ ದೀಪವೆಂದು ಮುದ್ದಿಟ್ಟರೆ ಸುಡದಿಹುದೇ?

ಜನ ಸೇರಿದಷ್ಟು ನಿನ್ನ ಮನ ಉಕ್ಕಿ ಹೋಯಿತು. ಸೊಕ್ಕಿ ನಿಂತಿತು. ಭಾವೀ ಚಿಂತನವಿಲ್ಲದಾಯಿತು. ಕೆಟ್ಟುದಕ್ಕೆ ಪ್ರೋತ್ಸಾಹ ಹೆಚ್ಚು ಪ್ರಪಂಚದಲ್ಲಿ! ಒಂದು ಚಿಕ್ಕ ಭೂಮಿಕೆಯಲ್ಲಿ ಆರಂಭವಾದ ನಿನ್ನ ಮನದ ವಿಕಲ್ಪ ಕಾರ್ಯರಂಗದಲ್ಲಿ ಕ್ರಮ ಕ್ರಮವಾಗಿ ವಿಸ್ತಾರವಾಯಿತು. ಕಾರ್ಯವಿಸ್ತಾರವಾದಂತೆ ಬುದ್ಧಿ ಕ್ಷಿಪ್ತವಾಯಿತು; ಮೂಢವಾಯಿತು. ಮಾಡಬಾರದನ್ನು ಮಾಡ ಹಚ್ಚಿತು. ಆಗಬಾರದೆಲ್ಲ ಆಗಿಹೋಯಿತು. ಮಗಳ ಮರಣವಾಯಿತು; ಮಾನ ಮತ್ತೂ ಹಾಳಾಯಿತು. ಅವಾಸ್ತವವಾದ ಮೃಗ ಮರೀಚಿಕೆಯ ಬೆನ್ನು ಹತ್ತಿದರೆ ಆಗುವ ಫಲವೇನು? ಬಾಯಾರಿಕೆ ನೀಗುವುದೆ? ಬಟ್ಟೆದಪ್ಪಿ ನಡೆಯಬೇಕಾಗುವುದಲ್ಲವೆ? ಬಳಲಿಕೆ ಮತ್ತಷ್ಟೂ ಇನ್ನಷ್ಟೂ ಹೆಚ್ಚಿ ಧ್ಯೇಯ ದೂರವಾಗುವುದಲ್ಲವೆ? ಅಕ್ರಮ ಚಿಕ್ಕದಾದರೂ ಅದರ ಫಲ ಚಿಕ್ಕದಲ್ಲ. ಅದು ಚಾರಿತ್ರವನ್ನು ನಿರ್ಮಾಣ ಮಾಡುವುದಿಲ್ಲ. ಪ್ರತಿಯಾಗಿ ಹಾಳುಮಾಡುತ್ತದೆ.

ವ್ಯಕ್ತಿ ದೊಡ್ಡವನು ನಿಜ. ಆದರೆ ವ್ಯಕ್ತಿಗಿಂತ ದೊಡ್ಡದು ಸಮಾಜ ಎಂಬುದನ್ನು ಮರೆಯಬಾರದು. ವೈಯಕ್ತಿಕ ಸ್ವಾರ್ಥಕ್ಕಾಗಿ ಸಮಾಜವನ್ನು ಉಪಯೋಗಿಸಿಕೊಳ್ಳಬಾರದು. ಯಾವಾಗಲೂ ಸ್ವಾರ್ಥವನ್ನು ಬಿಟ್ಟು ಸಾಮಾಜಿಕ ಸಮಸ್ಯೆಗಳನ್ನು ಗಮನಿಸಬೇಕು. ತಂದೆಯಾದವನು ಮಕ್ಕಳ ವಿಷಯದಲ್ಲಿ ಸ್ವಾರ್ಥವನ್ನು ಸ್ವಾಭಿಮಾನವನ್ನು ತ್ಯಜಿಸುವುದಿಲ್ಲವೆ?

ನೀನು ಹಿಡಿದ ಹಾದಿ ಹಸನಾಗಿರಲಿಲ್ಲ. ಫಲ ನಿರ್ಮಲವಾಗಿರಲಿಲ್ಲ. ಇದರಿಂದಾಗಿ ನೀನು ಹೆಜ್ಜೆ ಹೆಜ್ಜೆಗೆ ತಪ್ಪಿದೆ. ಮಾತು ಮಾತಿಗೆ ತಪ್ಪಿದೆ. ಎಲ್ಲದಕ್ಕೂ ಒಂದು ಸೀಮೆಯಿದೆಯಲ್ಲವೆ?

ಹಣ ಮದ. ಜನ ಮದಗಳಗಳ ಜತೆಗೆ ಮನದ ಮದ ಸೇರಿದರೆ ಆಗುವ ಅನರ್ಥ ಅಷ್ಟಿಷ್ಟಲ್ಲ. ಜತೆಗೆ ಸಾಂಪ್ರದಾಯಿಕ ಕಟುತ್ವ ಬೆನ್ನು ಬಿದ್ದರೆ ಪತನ ತಪ್ಪಿದ್ದಲ್ಲ. ಇದ್ದ ಬುದ್ಧಿ ಬಯಲಾಗುತ್ತದೆ. ಭ್ರಾಂತಿಗೀಡಾಗುತ್ತದೆ. ಶಾಂತಿಗೆ ವಂಚಿತವಾಗುತ್ತದೆ. ಮೂಢ ಜಡವ್ರತ ಯಾವಾಗಲೂ ಲೇಸನ್ನುಂಟು ಮಾಡದು.

ಪ್ರಜಾಪತಿಯೆ, ಯಾವಾಗಲೂ ಅಹಂಕಾರಕ್ಕೆ ಅವಧಾನ ಬೇಕು. ಮನಕ್ಕೆ ಅನುಭವ ಬೇಕು. ಭಾವಕ್ಕೆ ಸಹುರಸವಿದ್ದಾಗ ಬೇಕು. ಇವಿಲ್ಲದೆ ಚಿತ್ತ ಶುದ್ಧಿಯಾಗದು. ಶುದ್ಧ ಬುದ್ಧಿ ವೃದ್ಧಿಯಾಗದು. ಜೀವನ ವಿಕಾಸ ಕನ್ನಡಿಯೊಳಗಿನ ಗಂಟು. ಸದ್ಗುಣ ಎಲ್ಲಿದ್ದರೂ ಅದಕ್ಕೆ ಬೆಲೆಯಿದೆ. ದುರ್ಗುಣ ದುರಂಕಾರ ಎಲ್ಲಿದ್ದರೂ ಯಾವ ಸ್ವರೂಪದಲ್ಲಿದ್ದರೂ ಅದಕ್ಕೆ ಕೊಲೆಯಿದೆ; ಎಂದಿಗೂ ತಪ್ಪದು.

ಮಾಡುವವನು ಮುಖ್ಯವಲ್ಲ; ಮಾಡುವ ಕೆಲಸ ಮುಖ್ಯವಲ್ಲ. ಮಾಡುವ ಮನಸ್ಸು ಮುಖ್ಯ. ಮನಸ್ಸು ಒಳ್ಳೆಯದಾದರೆ ಮಾಡುವ ಕೆಲಸ ಒಳ್ಳೆಯದಾಗುತ್ತದೆ; ಮಾಡುವವನು ಒಳ್ಳೆಯವನಾಗುತ್ತಾನೆ. ಫಲಿತಾಂಶವೂ ಒಳ್ಳೆಯದಾಗುತ್ತದೆ. ತಿಳಿಯಿತೇ ದಕ್ಷನೆ?

ದಕ್ಷ, ಬ್ರಹ್ಮ, ಪ್ರಜಾಪತಿ, ಇವೆಲ್ಲವೂ ನಿನಗಿರುವ ಹೆಸರುಗಳು. ಆದರೇನು? ಹೆಸರಿಗೆ ತಕ್ಕ ಹೃದಯವಿಲ್ಲ; ಹೊಲಬಿಲ್ಲ. ಹೆಸರಿನಿಂದೇನು ಬಂತು ಹೆಚ್ಚುಗಾರಿಕೆ? ಅವೆಲ್ಲ ನಿನಗೆ ರೂಢಿ ನಾಮಗಳಾದವಲ್ಲದೆ ಅನ್ವರ್ಥ ನಾಮಗಳಾಗಲಿಲ್ಲ; ಸಾರ್ಥ ಮತ್ತು ಸಮರ್ಥನಾಮಗಳಾಗಲಿಲ್ಲ. ಯೌಗಿಕಗಳೆನಿಸಲಿಲ್ಲ. ನೀನು ಬಾಳಿನಲ್ಲಿ ಗಳಿಸಿದ್ದೇನು? ಬಳಗವನ್ನೇನು? ಬಂಧು-ಬಳಗ ಎಷ್ಟಿದ್ದರೇನು? ಈಗ ನಿನಗೆ ಯಾರು ಆದರು? ಕೌರವರು ಎಷ್ಟು ಜನರಿದ್ದರೇನು? ನವನಂದರ ಪಾಡೇನಾಯಿತು? ಬಂಧು-ಬಳಗ ಬಹಳವಿದೆಯೆಂದು ಬಟ್ಟೆದಪ್ಪಿ

ನಡೆಯಬಾರದು. ಅವಿನಯದಿಂದ ವರ್ತಿಸಬಾರದು. ಹಗೆತನ ಎಂದಿಗೂ ಒಳಿತಲ್ಲ. ಹಳಿಯುವುದು ಯಾರಿಗೂ ಲೇಸಲ್ಲ.

ನೀನು ಯಾವ ಸತ್ಯವನ್ನು ಕಾಣಲು ಹೆಣಗಿದೆ? ಯಾವ ಶಿವವನ್ನು ಪಡೆದೆ? ಪ್ರತಿಯಾಗಿ ಅವನ್ನೇ ಹೋಮದಲ್ಲಿ ಹವನ ಮಾಡಿದೆಯಲ್ಲವೆ? ಕಾರ್ಯ ಒಳ್ಳೆಯದಾದರೇನು? ಕಾರಣ ಒಳ್ಳೆಯದಾಗಿರಬೇಡವೇನು? ನಾನೇ ಬಲವಂತ ಎಂದು ಭಾವಿಸುವುದು ತಪ್ಪು. ಎಲ್ಲರೂ ನನ್ನನ್ನೇ ಗೌರವಿಸಬೇಕೆಂದು ಬಯಸುವುದು ಸಹಜವಲ್ಲ. ಬಾಹ್ಯ ಗೌರವವನ್ನು ಬಯಸಿ ಆತ್ಮ ಗೌರವವನ್ನು ಕಳೆದುಕೊಳ್ಳಬಾರದು. ಒಣ ಗೌರವದ ಬೆನ್ನು ಬಿದ್ದವನು ಬಿಸಿಲು ಕುದುರೆಯ ಬೆನ್ನು ಬಿದ್ದಂತೆ!

ಬಿಸಿಯಾದವನು ತಂಪನ್ನು ತಂದುಕೊಳ್ಳಬೇಕು. ಅಹಂಕಾರಿಗೆ ಅಜ್ಞಾನಿಗೆ ಅನುಭವ ಅದೆಂದಿಗೂ ಅಳವಡದು. ಅನುವರಿವ ಪ್ರಜ್ಞೆಯಿರದು; ಹಿರಿದು-ಕಿರಿದು ಎಂಬ ಭೇದ ಬುದ್ಧಿ ತೊಲಗದು. ತಾಮಸಾ ಹಂಕಾರದಲ್ಲಿ ಕಲ್ಲಾಗಿರುತ್ತಾನೆ. ರಾಜಸಾಹಂಕಾರದಲ್ಲಿ ಬೆಂಕಿಯಂತೆ ಬಿಸಿಯಾಗುತ್ತಾನೆ; ಗಾಳಿಯಂತೆ ಹರಿದಾಡುತ್ತಾನೆ.

ಬೆಂಕಿಯ ಬಳಿ ಯಾವುದಿದ್ದರೂ ಬದುಕದು. ಯಾವುದಿಲ್ಲದಿದ್ದರೆ ಬೆಂಕಿಯೂ ಬಾಳದು. ಉರಿವ ದ್ವೇಷಾಗ್ನಿಗೆ ಚಂಚಲತೆಯ ಗಾಳಿ ಬೀಸಿದರೆ ಗತಿಯೇನು? ಹಮ್ಮಿನ ಕೊರಡನ್ನು ಹಾಕಿದರೆ ಆರುವದೇನು? ದ್ವೇಷ ಆಧ್ಯಾತ್ಮಿಕವನ್ನು ಸುಟ್ಟು ಹಾಕುವ ದಳ್ಳುರಿ. ಉಚಿತಜ್ಞತೆ ಉಪಶಾಂತಿ ವಿನಯಾದಿಗಳನ್ನು ತೂರುವ ಬಿರುಗಾಳಿ.

ಉರಿಯಿರಬೇಕು. ಒಲೆಯ ಉರಿಯಾಗಿರಬೇಕು. ಮನೆ ಹತ್ತಿ ಉರಿಯಬಾರದು; ಧರೆ ಹತ್ತಿ ಉರಿಯಬಾರದು. ಒಡಲುರಿ ಒಡಲೊಳಗಿರಲಿ; ಅದೂ ಕಣ್ಣೀರಬಾರದು. ಕೈಗಿಳಿಯಬಾರದು. ಕೃತಿಗೆ ಇದ್ದದ್ದೂ ಬರಬಾರದು. ಅದೂ ವಿನಾಶಕವಾಗಿ ಬರಬಾರದು. ವಿಧಾಯಕ ರೀತಿಯಲ್ಲಿ ಬಂದರೆ ಲೇಸು. ಹೋರಾಟದ ಹೋಮ ಕುಂಡಕ್ಕೆ ಬರಬಾರದು. ಬಂದರೆ ಆಗುವುದು ನಿನಗಾದ ಈ ದುರ್ಗತಿ! ಸಾಲದ್ದಕ್ಕೆ ಹವ್ಯ ಕವ್ಯಗಳೆಲ್ಲ ಹಾಳಾಗುತ್ತವೆ. ಶೋಕರಸದ ಕಾವ್ಯ ಹುಟ್ಟುತ್ತದೆ. ನಿಂದ್ಯ ನಾಮಮುಂಟಾಗುತ್ತದೆ.

ತಾಳ್ಮೆ ಬಾಳ್ಮೆಗೆ ಆಧಾರ. ಬದುಕಿಗೆ ಬಲ. ಒಳ್ಮೆಗೆ ಜೀವಾಳ. ಅಷ್ಟೇ ಅಲ್ಲ; ಅದೊಂದು ಸತ್ಕೃತ್ಯ ರತ್ನಗರ್ಭ; ಸಚ್ಚೇತನ. ಅದಕ್ಕೆ ಎಚ್ಚರಿಕೆಯೊಂದು ಆಸರಾದರೆ ತೀರಿತು. ಅದಕ್ಕಿಂತ ಬೇರಿಲ್ಲ ಸ್ವರ್ಗ; ಬೇರಿಲ್ಲ ಸನ್ಮಾನ. ಅದಕ್ಕಿಂತ ಬೇರಿಲ್ಲ ಸಮಾಧಾನ. ಬೇರಿಲ್ಲ ನಿಧಿ ನಿಧಾನ.

ಪೂಜಕನಾಗಿ ಪೂಜ್ಯನಾಗಬೇಕು. ಸಾಧಕನಾಗಿದ್ದು ಸಿದ್ಧನೆನಿಸಬೇಕು. ಇನ್ನೊಬ್ಬರನ್ನು ತಾನು ಗೌರವಿಸುವುದೇ ತನ್ನ ಗೌರವ. ಇದನರಿತವನಿಗಿಲ್ಲ ಅದೆಂದಿಗೂ ರೌರವ.

ಹಿರಿಯ ನಿಲವು ಹಿರಿತನದಲ್ಲಿಲ್ಲ. ವಾಸ್ತವವಾಗಿ ಅದು ಕಿರಿತನದಲ್ಲಿದೆ. ಅಥವಾ ಸಮದರ್ಶನದಲ್ಲಿದೆ. ಸಸ್ನೇಹ ಜೀವನದಲ್ಲಿದೆ. ಈ ಘಟನೆಯಿಂದ ನಿನಗೀ ಅನುಭವ ಆಗಿರಬೇಕು.

ಮುಮ್ಮೊದಲು ತಮ್ಮಿಂದ ತಾವೇ ತಿಳಿಯುವವರು ಜಾಣರು; ದಕ್ಷರು. ಅದಿಲ್ಲದೆ ಬೇರೊಬ್ಬರು ಹೇಳಿದ ನುಡಿಯಲ್ಲಿ ಆ ಬೆಳಗನ್ನು ಕಾಣುವವರು ಮಧ್ಯಮರು. ಹೇಳಿದರೂ ಕೇಳದೆ ಮನಕ್ಕೆ ಬಂದಂತೆ ಮಾಡಿ ಕೇಡಿಗೆ ಒಳಗಾದ ಬಳಿಕ ಅರಿಯುವವರು ಅಧಮರು; ಅದಕ್ಷರು. ಅಂಥವರು ಅಪಾರ ನಷ್ಟಕ್ಕೆ ಕಷ್ಟಕ್ಕೆ ಗುರಿಯಾಗುತ್ತಾರೆ. ದುಡುಕಿ ಮಾಡುವುದು ಎಂದಿಗೂ ಲೇಸಲ್ಲ; ಯಾವ ದೊಡ್ಡಸ್ತಿಕೆಯಲ್ಲ.

ಹೋರಾಟ ತರದಿಂದ ಹಿರಿಯತನವನ್ನು ಬಯಸಬಾರದು. ಒಂದು ವೇಳೆ ಅದು ಬಂದರೂ ಬಂಧುರವಲ್ಲ. ಅದರಿಂದ ಹಗೆತನದ ಹೊಗೆ ಆಡದಿರುವುದಿಲ್ಲ. ಕಣ್ಣಿಗೆ ಆವರಿಸದೆ ಇರುವುದಿಲ್ಲ. ಕೆಳಗಿಳಿಸದೆ ಬಿಡುವುದಿಲ್ಲ. ಕೇಡಿಗೆಳಸದೆ ನಿಲ್ಲುವುದಿಲ್ಲ. ಅದರಿಂದಾಗಿ ಅವರ ಪಿಪಾಸೆಗೆ ಒಳಗಾಗುವುದು ಒಳಿತಲ್ಲ. ಅಳಿಮನದವರ ಕೃತ್ಯವದು. ದ್ವೇಷ ಈರ್ಷೆ ಅಸೂಯೆಗಳು ಅದೆಂದಿಗೂ ದೊಡ್ಡಸ್ತಿಕೆಯನ್ನು ತಾರವು. ಮೃಗ ಜೀವನದ ನಾಂದಿಯದು. ಮೃಗದ ದ್ವೇಷ ವೈಯುಕ್ತಿಕವಾಗಿ ಕೆಲಸ ಮಾಡುತ್ತದೆ. ಆದರೆ ಮಾನವನ ದ್ವೇಷ ಸಾಮಾಜಿಕವಾಗಿ ಹರಡುತ್ತದೆ; ಸಾಮಾಜಿಕ ರೋಗವಾಗಿ ಪರಿಣಮಿಸುತ್ತದೆ. ದಕ್ಷ, ನಿನ್ನ ದ್ವೇಷ ನಿನ್ನವರನ್ನೆಲ್ಲ ಆವರಿಸಿತಲ್ಲವೆ? ಪ್ರಳಯಾಗ್ನಿಯಂತೆ ದೇವಲೋಕವನ್ನೆ ಆವರಿಸಿ ಕಬಳಿಸಿತಲ್ಲವೆ? ಸರ್ವನಾಶಕ್ಕೆ ಕಾರಣವಾಯಿತಲ್ಲವೆ? ಪತಿಯೆನಿಸಿದವನು ಪಶುವಾಗಬೇಕಾಯಿತು.

ನಿನ್ನಿಂದ ಲೋಕ ಒಳ್ಳೆಯ ಪಾಠವನ್ನು ಕಲಿಯುವಂತಾಯಿತು. ಗೌರವಕ್ಕಾಗಿ ಬಾಯ್ನೀರು ಬಿಡಬಾರದೆಂಬ, ಅದಕ್ಕಾಗಿ ದ್ವೇಷಾಸೂಯೆಗಳನ್ನ ತಾಳಬಾರದೆಂಬ, ಮದಮತ್ಸರಗಳಿಂದ ಕೂಡಿ ಮಂಗಳ ಕಾರ್ಯವನ್ನು ಕೂಡ ಮಾಡಬಾರದೆಂಬ,

ತನಗೆ ಅವಮಾನವಾದರೂ ತಾನು ಮತ್ತೊಬ್ಬರನ್ನು ಅವಮಾನಿಸಲು ಹೆಣಗಬಾರದೆಂಬ, ಮೇಲಾದ ಜನ್ಮವನ್ನು ಹಾಳಾದ ಹೀನಾಯ ಕಾರ್ಯಕ್ಕೆ ಉಪಯೋಗಿಸಬಾರದೆಂಬ, ತಾನು ಕೆಟ್ಟರೂ ತನ್ನವರನ್ನೆಲ್ಲ ಕೆಡಸಬಾರದೆಂಬ, ಒಬ್ಬ ವ್ಯಕ್ತಿಯಿಂದ ಇಡೀ ಸಮಾಜ ಹೇಗೆ ಕೆಡಬಲ್ಲುದು-ಕೆಡುಕು ದಾರಿ ಹಿಡಿಯಬಲ್ಲುದೆಂಬ, ಮನ್ನಣೆಯನ್ನು ಬಯಸುವವನು ಎಂತಹ ಅನ್ಯಾಯವನ್ನಾದರೂ ಮಾಡಬಲ್ಲನೆಂಬ, ಮತ್ತೆ ಅನೇಕರನ್ನು ತಪ್ಪು ದಾರಿಗೆ ಎಳೆಯಬಲ್ಲನೆಂಬ, ಮಾನವೀಯತೆಯನ್ನೇ ಕಳೆದುಕೊಳ್ಳಬಲ್ಲನೆಂಬ ಉತ್ತಮ ಪಾಠವನ್ನು ಕಲಿತಂತಾಯಿತು. ನೀನು ದಾರಿತಪ್ಪಿ, ಲೋಕಕ್ಕೆ ದಕ್ಷತೆಯ ಸಂದೇಶವನ್ನು ಕೊಟ್ಟ ಆದರ್ಶ ಮಾತ್ರ ನಿನ್ನದಾಗಿದೆ. ಊದಿನ ಕಡ್ಡಿಯಂತೆ ಲೋಕಕ್ಕೆ ಒಳ್ಳೆಯ ವಾಸನೆಯನ್ನು ಬೀರಲು ಕಾರಣನಾದೆಯೆಂಬುದೆ ಕೊಂಚ ಸಮಾಧಾನಕ್ಕೆ ಕಾರಣ. ಇದರಿಂದಾಗಿ ಓ ದಕ್ಷಬ್ರಹ್ಮನೆ, ಇನ್ನಾದರೂ ನೆಮ್ಮದಿಯಿಂದ ಬಾಳು; ತಾಳ್ಮೆಯನ್ನು ತಾಳು. ತಲೆ ಬಡಿದ ಬಳಿಕ ಬುದ್ಧಿ ಬರುವುದು ಸಹಜ ತಾನೆ? ವೀರೇಶನೊಡನೆ ವಿಶ್ವದಲ್ಲಿ ಪೂಜ್ಯತೆಯನ್ನು ಪಡೆ.

ಓ ದಕ್ಷ ಪ್ರಜಾಪತಿಯೆ, ನಿನ್ನದೊಂದು ಅಪರಿಹಾರ್ಯ ಕರ್ಮವಿದ್ದಿತು. ಅದರ ಕೈಚಳಕದಿಂದ ಇಷ್ಟೆಲ್ಲ ಆಯಿತು, ಅದನ್ನು ಇನ್ನು ನೆನೆದು ಸುಖವಿಲ್ಲ. 'ಯದ್ಭವಿತವ್ಯಂ ತದ್ಭವತ್ಯೇವ' ಆದರೆ ಆಗಬಾರದ್ದು ಆಗಿ ಹೋಯಿತು. ಆಗ ಬೇಕಾದುದು ಆಗಿದ್ದರೆ ಆ ಮಾತೇ ಬೇರಾಗಿತ್ತು. ಆಗಬಾರದ್ದು ಆಗಬೇಕಾಗಿದ್ದಿತೇನೊ? ಅದಕ್ಕಾಗಿಯೆ ದಕ್ಷನೂ ದಾರಿ ತಪ್ಪಿ ನಡೆಯಬೇಕಾಯಿತು. 'ದಾರಿ ತಪ್ಪಿದರೆ ಮಾರಿ' ಎಂಬ ಸಂದೇಶ ನಿನ್ನಿಂದ ಲೋಕಕ್ಕೆ ಗೊತ್ತಾಗುವಂತಾಯಿತು. ಮುಂದೆ ನಿನ್ನ ನಾಮವು ನಾಮವಾಗಿಯೇ ಉಳಿಯದೆ ರೂಪು ಕ್ರಿಯೆಗಳಲ್ಲಿ ರೂಪುಗೊಳ್ಳಲಿ. ಶುಭವನ್ನು ಶೀಘ್ರದಲ್ಲಿ ಮಾಡಬೇಕು. ಅಶುಭವನ್ನು ನಿಧಾನವಾಗಿ ಯೋಚಿಸಬೇಕು. ತಿಳಿಯಿತೆ? ಮುಂದಿನ ನಿನ್ನ ದಾರಿ ಮಂಗಳಕರವಾಗಲಿ. ಕಾರ್ಯದಕ್ಷತೆ ಕೈಗೂಡಲಿ.

ವಿಷ್ಣು-ವೀರಭದ್ರ

ವಿಷ್ಣು ವೈಕುಂಠಕ್ಕೇನೊ ಬಂದನು. ಆದರೆ ಆತನ ಮನಸ್ಸು ವೈಕುಂಠದಲ್ಲಿರಲಿಲ್ಲ. ನಿಷ್ಕಂಟಕದಲ್ಲಿರಲಿಲ್ಲ. ತಲೆಯೆತ್ತಿ ತಿರುಗುವಂತಿರಲಿಲ್ಲ. ಏನು ಮಾಡಲು ಯಾರೊಡನೆ ಮಾತಾಡಲು ಮನಸ್ಸಿರಲಿಲ್ಲ. ಬಾಳೆಲ್ಲ ಬೇಸರವಾಗಿತ್ತು. ಬದುಕಿನಲ್ಲಿ ಯಾವ ಲೇಸು ಕಾಣುತ್ತಿರಲಿಲ್ಲ. ಯಾಕಾದರೆ ದಕ್ಷನಲ್ಲಿಗೆ ಹೋದೆನೋ? ಯಜ್ಞಾಧ್ಯಕ್ಷತೆ ವಹಿಸಿದೆನೋ? ಮಾವನೆಂಬ ಮಮತೆ ಎಲ್ಲಿಗೆ ತಂದಿಕ್ಕಿತು! ಎಲ್ಲಿಲ್ಲದ ಸೋಲು; ಎಂದಿಗಿಲ್ಲದ ಅವಮಾನ. ಅಬ್ಬಾ! ಆ ವೀರೇಶನ ಪರಾಕ್ರಮಕ್ಕೆ ಸೀಮೆಯಿದೆಯೆ? ಅದೇನು ಆ ಅಲುಪ್ತ ಶಕ್ತಿ? ಅದೆನಿತು ಆ ಅನಂತ ಧೃತಿ? ನಿಜಕ್ಕೂ ಆತನು ಅನಂತ ಶಕ್ತಿ ಧಾಮ. ಅಲುಪ್ತ ಶೌರ್ಯ ಸಾರ್ವಭೌಮ. ಅವನ ಮುಂದೆ ನನ್ನಂಥವರು ಏತಕ್ಕೂ ಬಾರದಾಯಿತಲ್ಲಾ! ನನ್ನ ಆಯುಧಗಳ ಆಟ ನಡೆಯದಾಯಿತಲ್ಲಾ!! ಇಂದಿಗೆ ತ್ರಿವಿಕ್ರಮತನ ತಲೆ ಕೆಳಗಾಯಿತು. ಉಳಿದವರ ಮಾತೇನು?

ಜಗತ್ತನ್ನೆ ಮೋಹಗೊಳಿಸುವ ನಾನು ಈಗ ನಾನೇ ಮೋಹಕ್ಕೊಳಗಾದೆ. ಅಜ್ಞಾನದಿಂದ ಅಲ್ಲದ ಸಲ್ಲದ ಕೆಲಸಕ್ಕೆ ಒಪ್ಪಿಕೊಂಡೆನು. ಶಿವನೇ ಯಜ್ಞಪತಿಯೆಂಬ ಋಗ್ವೇದ ವಾಣಿಯನ್ನು ಮರೆತುಬಿಟ್ಟೆನು. ಹೃದಯದಲ್ಲಿಯೇ ಇರುವ ಶಿವನನ್ನು ಮರೆತೆನು. ಹಿಂದೊಮ್ಮೆ ಉಂಟಾದ ಅಹಂಕಾರವನ್ನು ಮುರಿದು ಶಿವನು ನನ್ನನ್ನು ಅನುಗ್ರಹಿಸಿದ್ದನು. ಇಂದು ಅಜ್ಞಾನ ಅಹಂಕಾರಗಳೊಡನೆ ಅಕಾರ್ಯವನ್ನೂ ಮಾಡಿ ಈ ಗತಿಗಿಳಿಯಬೇಕಾಯಿತು. ಅಪಕೀರ್ತಿಯನ್ನು ಪಡೆಯಬೇಕಾಯಿತಲ್ಲವೆ ವೀರಭದ್ರದೇವನ ಕೋಪಕ್ಕೆ ಗುರಿಯಾಗಬೇಕಾಯಿತು.

ಶ್ರೀ ವೀರಭದ್ರನು ಸಂಪೂರ್ಣ ಶಿವಭಕ್ತನು; ಶಿವನಿಷ್ಠನು. ಶಿವನನ್ನು ಸನ್ಮಾನಿಸದಿದ್ದರೆ ವೀರಭದ್ರನು ಎಂದಿಗೂ ಸಹಿಸನು; ಸಂಹರಿಸದೆ ಬಿಡನು. ತಾಪತ್ರಯಗಳು ತಪ್ಪವು. ಶತ್ರು ಪೀಡೆಯುಂಟಾಗದೆ ಇರದು. ಶಕ್ತಿ ಕುಂದಿ ಶುಭವು ನಂದಿ ಹೋಗದಿರದು. ನನ್ನ ಬಾಳಿನ ಕೃಷ್ಣ ಪಕ್ಷವು ಕಳೆಯಬೇಕಾದರೆ ಆತನನ್ನು ಆರಾಧಿಸಿ ಆತನ ಅನುಗ್ರಹವನ್ನು ಪಡೆಯಲೇಬೇಕು. ಇಲ್ಲವಾದರೆ ಬಾಳಿಗೆ ಬೆಳಕಿಲ್ಲ.

"ಸಂಪೂಜಿತೇ ವೀರಭದ್ರೇ ಸರ್ವದುಃಖಂ ವಿಲೀಯತೇ ।
ಸಂಪತ್ಯತೇ ಸುಖಂ ಸರ್ವಂ ಪಶ್ಚಾನ್ಮುಕ್ತಿರವಾಪ್ಯತೇ ॥"

ನಿರ್ಭಯವಾದ ನಿಷ್ಕಂಟಕವಾದ ಸುಖಕರವಾದ ಜೀವನ ಬೇಕಾದರೆ ವೀರೇಶನನ್ನು ಆರಾಧಿಸಲೇಬೇಕು. ದಕ್ಷ ಬ್ರಹ್ಮನು ಮಾಡಿದಂತಹ ಕರ್ಮ ಯಜ್ಞದಿಂದ ಯಾವ ಪ್ರಯೋಜನವಿಲ್ಲ. ತಪೋ ಯಜ್ಞವನ್ನು ಮಾಡಿ ತಾತ್ತ್ವಿಕತೆಯನ್ನು ತಳೆಯಬೇಕು.

"ಕರ್ಮಯಜ್ಞ ಸಹಸ್ರೇಭ್ಯಸ್ತಪೋ ಯಜ್ಞೋ ವಿಶಿಷ್ಯತೇ ।
ತಪೋಯಜ್ಞ ಸಹಸ್ರೇಭ್ಯೋಜಪಯಜ್ಞೋ ವಿಶಿಷ್ಯತೇ ॥
ಧ್ಯಾನಯಜ್ಞಾತ್ಪರಂ ನಾಸ್ತಿ ಧ್ಯಾನಂ ಜ್ಞಾನಸ್ಯ ಸಾಧನಂ ।
ಯತಸ್ಸಮರಸಂ ಸ್ವೇಷ್ಟಂ ಯೋಗೀ ಧ್ಯಾನೇನ ಪಶ್ಯತಿ ॥" – ಶಿವಪುರಾಣ

ಕರ್ಮ ಯಜ್ಞಕ್ಕೂ ತಪೋ ಯಜ್ಞಕ್ಕೂ ಬಹುದೂರ ಅಂತರ! ಅದರಲ್ಲಿಯೂ ಜಪಯಜ್ಞ, ಧ್ಯಾನಯಜ್ಞಗಳು ಹೆಚ್ಚು ಹಿರಿದಾದವು. ಈ ಯಜ್ಞಗಳೇ ವೀರಭದ್ರದೇವನಿಗೆ ಪ್ರಿಯವಾದವುಗಳು. ಜಪಧ್ಯಾನಯುಕ್ತವಾದ ತಪೋಯಜ್ಞವನ್ನು ನಾನೇ ಪ್ರಾರಂಭಿಸಿ ವೀರಭದ್ರನನ್ನು ಸಾಕ್ಷಾತ್ಕರಿಸಿಕೊಂಡು ಸಮರಸ ಮಾಡಿಕೊಳ್ಳುತ್ತೇನೆ. ಆ ಬಳಿಕ ಯಾವ ಭಯವಿಲ್ಲ. ಯಾವ ಬಾಧೆಬಾರದು. ಯಾವ ಅಜ್ಞಾನ ಆವರಿಸದು. ಅಹಂಕಾರ ಅಂಕುರಿಸದು. ವಿಚಾರಶೀಲರಿಗೆ ಇದಕ್ಕಿಂತ ಹೆಚ್ಚಿನ ಪ್ರಾಯಶ್ಚಿತ್ತವಿಲ್ಲ; ಹೆಚ್ಚಿನ ಶುದ್ಧಿ ಸಾಧನವಿಲ್ಲ.

"ಧ್ಯಾನಯಜ್ಞರತಸ್ಯಾಸ್ಯ ಸದಾ ಸನ್ನಿಹಿತಶ್ಶಿವಃ ।
ನಾಸ್ತಿ ವಿಜ್ಞಾನಿನಾಂ ಅಂಚಿತ್ಪ್ರಾಯಶ್ಚಿತ್ತಾದಿ ಶೋಧನಂ ॥" –ಶಿವಪುರಾಣ

ಧ್ಯಾನಯಜ್ಞ ನಿರತನ ಬಳಿಯಲ್ಲಿ ಬಗೆಯಲ್ಲಿ ಶಿವನು ಸದಾ ಸನ್ನಿಹಿತನಾಗಿರುತ್ತಾನೆ. ಕಾರಣ, ವಿಜ್ಞಾನಶೀಲರಿಗೆ ಬೇರೆ ಪ್ರಾಯಶ್ಚಿತ್ತಾದಿಗಳು ಬೇಕಿಲ್ಲ. ಧ್ಯಾನಯೋಗದ ಮುಂದೆ ಎಂತಹ ದುರಿತವಿದ್ದರೂ ದೂರಾಗಿ ಹೋಗುತ್ತದೆ. ಶಿವತ್ವ ಸಹಜವಾಗಿ ಸಮನಿಸುತ್ತದೆ. ಶಿವತ್ವ ಪ್ರಾಪ್ತಿಗೆ ಶಿವಧ್ಯಾನವೇ ಶ್ರೇಷ್ಠ ತಪಸ್ಸು. ಅದರಿಂದಲೇ ಎಲ್ಲ ಶ್ರೇಯಸ್ಸು ಎಂದು ಚೆನ್ನಾಗಿ ಮನವರಿಕೆ ಮಾಡಿಕೊಂಡು ಸಾಸಿರ ತಾವರೆಗಳನ್ನು ನಿತ್ಯ ವೀರೇಶನ ಚರಣಕರ್ಪಿಸುವ ವ್ರತದೊಡನೆ ತಪಸ್ಸನ್ನಾಚರಿಸಿ ಕೊನೆಯಲ್ಲಿ ಕಡಿಮೆ ಬಿದ್ದ ಒಂದು ತಾವರೆಗಾಗಿ ತನ್ನ ಕಣ್ಣನ್ನು ಕಿತ್ತು ವೀರಭದ್ರನ ಚರಣದಲ್ಲಿಟ್ಟು ಸಾಕ್ಷಾತ್ಕಾರಗೊಳಿಸಿಕೊಂಡು ಮುಂದೆಂದಿಗೂ ತನ್ನ ಪ್ರಾಣಕ್ಕೆ ಯಾವ ಭಯವಿಲ್ಲದಂತೆ ವೀರಭದ್ರಸ್ವಾಮಿಯಿಂದ ವರವನ್ನು ಪಡೆದು ಸರ್ವ ದುಃಖಗಳಿಂದ ದೂರಾಗುವನು; ಸರ್ವ ಸುಖಗಳಿಂದ ಕೂಡಿಕೊಂಡು ತನ್ನ ರಕ್ಷಣ ಕಾರ್ಯದಲ್ಲಿ ನಿರಾತಂಕವಾಗಿ ನಿಶ್ಚಿಂತವಾಗಿ ತೊಡಗಿರುವನು.

ವಿಷ್ಣುವಿನ ಒಂದು ಕಣ್ಣು ತನ್ನ ಅಡಿಯಲ್ಲಿರುವುದರಿಂದ ವೀರಭದ್ರನು ಅಂದಿನಿಂದ ಕಣ್ಣಡಿಕನೆನಿಸಿದನು. ಬರುಬರುತ್ತ ಕನ್ನಡಿಗನೆಂದು ಕರೆದರು. ಕನ್ನಡದ ಮೂಲ ಪುರುಷ ವೀರಭದ್ರ ದೇವನೆಂಬುದನ್ನು ಇಲ್ಲಿ ಸ್ಮರಿಸದೆ ಬಿಡುವಂತಿಲ್ಲ. ಈ ವಿಷಯವಾಗಿ ಈ ಮೊದಲು ಒಂದು ಬರಹವನ್ನು ಬರೆಯೋಣವಾಗಿದೆ. ಅದನ್ನೇ ಇಲ್ಲಿ ಎತ್ತಿ ಉದ್ಧರಿಸೋಣವಾಗುತ್ತದೆ.

ಕಣ್ಣಡಿಕ–ಕನ್ನಡಿಗ

ಕಣ್ಣಡಿಕನೆಂದರೆ ವೀರಭದ್ರ. ಕಣ್ಣಡಿಕರೆಂದರೆ ವೀರಭದ್ರನ ವಂಶಜರು; ವೀರಶೈವರು.

ಕಣ್ಣನ್ನು ಅಡಿಯಲ್ಲಿ ಮುಡಿದಾತನು ಕಣ್ಣಡಿಕನು. ಹರಿಯ ನಯನವನ್ನು ಚರಣದಲ್ಲಿ ಧರಿಸಿದಾತನು ವೀರಭದ್ರನು. ದಕ್ಷನ ಯಜ್ಞಧ್ವಂಸ ಸಮಯದಲ್ಲಿ ಭಯಸಂತ್ರಸ್ತನಾದ ಹರಿಯು ವೀರಭದ್ರ ಸ್ವಾಮಿಯನ್ನು ಒಲಿಸಲು ನಿತ್ಯ ಸಾವಿರ ತಾವರೆಗಳಿಂದ ಆರಾಧಿಸುವ ವ್ರತಸ್ಥನಾಗುವನು. ಒಮ್ಮೆ ಒಂದು ತಾವರೆ ಕಮ್ಮಿಯಾಗುವುದು. ಎಲ್ಲಿ ಹುಡುಕಿದರೂ ಸಿಗದಾಗುವುದು. ಆಗ ವ್ರತ ಕೆಡುವುದೆಂದು ತನ್ನ ಕಣ್ಣನ್ನೇ ಕಮಲವನ್ನಾಗಿಸಿ ಆತನ ಶ್ರೀ ಚರಣಕ್ಕೆ ಸಮರ್ಪಿಸುವನು. ಅದನ್ನು ಶ್ರೀ ವೀರಭದ್ರನು ತನ್ನ ಚರಣಾಂಗುಷ್ಠದಲ್ಲಿ ಭಕ್ತನ ಭಕ್ತಿಯ ಕುರುಹಿಗಾಗಿ ಧರಿಸಿಕೊಂಡಿರುವನು. ಅದರಿಂದಾಗಿ ಅಂದಿನಿಂದ ಆತನು ಕಣ್ಣಡಿಕನೆಂದು ಹೆಸರಾದನು.

ಆತನ ಭಾಷೆಯೂ ಕನ್ನಡ. ಕನ್ನಡ ನುಡಿಯ ಉತ್ಪಾದಕನು ವೀರಭದ್ರನು. ಆತನು ಆದಿ ಕನ್ನಡಿಗನು. ಆತನ ಅನುಯಾಯಿಗಳು ಕನ್ನಡಿಗರು.

ವೀರಭದ್ರನಿಗೆ 'ವೀರಶಿವ' ಎಂದು ಮತ್ತೊಂದು ಹೆಸರು. ಭದ್ರ ಪದವು ಶಿವ ಪದದ ಪರ್ಯಾಯ ಪದವು. 'ಭದ್ರಂ ಶಿವಂ ಮಂಗಲಂ' ಎಂದಿದೆ ಅಮರ ಕೋಶ. ಆ ವೀರಶಿವನ ಆರಾಧಕರೇ ವೀರಶೈವರು.

ಕಣ್ಣಡಿಕ–ಕನ್ನಡಿಗ ಈ ಎರಡು ನುಡಿಗಳು ಹೆಚ್ಚು ಹಳೆವಾತುಗಳು. ಕಣ್ಣಡಿಕ ಇತಿಹಾಸ ಬಹು ಪುರಾತನದ್ದು; ದಕ್ಷಯುಗದ್ದು.

ವಿಷ್ಣು ವೀರಶಿವನಿಗೆ ತನ್ನ ನಯನ ಕಮಲವನ್ನು ಸಮರ್ಪಿಸಿದ ಕಥೆ ಪುರಾಣದಲ್ಲಿ ಪ್ರಸಿದ್ಧವಾಗಿದೆ: ಅಲ್ಲದೆ,

"ಹೊಳೆವ ಜಡೆಯ ಮೇಲೆ ಎಳೆವೆಳೆದಿಂಗಳು;
ಫಣಿ ಮಣಿ ಕರ್ಣ ಕುಂಡಲವ ನೋಡವ್ವ!
ರುಂಡ ಮಾಲೆಯ ಕೊರಳವನ ಕಂಡರೆ ಒಮ್ಮೆ ಬರಹೇಳಿರವ್ವ!
ಗೋವಿಂದನ ನಯನ ಉಂಗುಟದ ಮೇಲಿಪ್ಪುದು
ಚನ್ನಮಲ್ಲಿಕಾರ್ಜುನ ದೇವನ ಚನ್ನಕುರುಹವ್ವ!"

ಮಹಾದೇವಿಯಕ್ಕನ ಈ ಹೇಳಿಕೆಯು ನಮ್ಮ ಅಭಿಪ್ರಾಯವನ್ನೇ ಎತ್ತಿ ಸಮರ್ಥಿಸಿದೆ. ರುಂಡಮಾಲೆಯ ಕೊರಳವ ವೀರಭದ್ರನಲ್ಲದೆ ಮತ್ತಾರು? ಆತನ ಪಾದ ಉಂಗುಟದ ಮೇಲೆ ಗೋವಿಂದನ ನಯನವಿದೆಯೆಂದು ಹೇಳಿದ್ದಾಳೆ. ಅಂತೆಯೇ ವೀರಭದ್ರನು ಕಣ್ಣಡಿಕನು ಅಲ್ಲದೆ 'ಚನ್ನಮಲ್ಲ' ಪದವು 'ಭದ್ರವೀರ' ಎಂಬ ಹೆಸರನ್ನು ಸೂಚಿಸುತ್ತದೆ. 'ಮಲ್ಲಯ್ಯ' ಎಂಬುದು ವೀರಭದ್ರ ಪದಸೂಚಕವಾಗಿದೆ.

"ಒಂದು ಲಿಂಗ ಸ್ವಲೀಲೆಯೇ ಸಹಸ್ರ ಚಿದ್ವಿಲಾಸವಾಗಿ
ಕಣ್ಣು ಅಡಿಯಲ್ಲಿ ಧರಿಸಿದ ಕಣ್ಣಡಿಕರು;
ಹರಿನೇತ್ರ ಕಮಲಧರ ಪಾದ ಕಣ್ಣಡಿಕರೇ ಮಣಿಪಾದವಾಚ್ಯರು.
....ಕಣ್ಮಣಿ ಧರಿಸಿದ ಮಣಿಪಾದ ಪಟ್ಟ ವರ್ಧನರು;
ಪಾದ ಪಟ್ಟಾಭಿಷೇಕ ವರ್ಧನರು."

–ಅನಾದಿ ವೀರಶೈವ ಸಂಗ್ರಹ, ಪು. ೮೮–೮೯.

ಈ ಕೃತಿಯು ವೀರಭದ್ರನ ಮತ್ತು ಆತನ ಅನುಯಾಯಿಗಳ ಕಣ್ಣಡಿಕ ತನವನ್ನು ಉಗ್ಗಡಿಸಿದೆ.

"ಎರಡು ಕಣ್ಣುಳ್ಳರೆ ಚತುರ್ಭುಜನೆಂಬೆನು.
ಮೂರು ಕಣ್ಣುಳ್ಳರೆ ಮಹೇಶ್ವರನೆಂಬೆನು.
ಮೈಯೆಲ್ಲ ಕಣ್ಣಾದರೆ ಸದಾಶಿವನೆಂಬೆನು.
ಗುಹೇಶ್ವರ, ನಿಮ್ಮ ಶರಣಂಗೆ ಅಂಗಾಲ ಕಣ್ಣು ಮೂಡಿದರೆ
ನಿರುಪಮ ಮಹಿಮ ಅಲ್ಲಯ್ಯನೆಂಬೆನು."

ಈ ವಚನದಿಂದ ಅಲ್ಲಯ್ಯನು ಅರ್ವಾಚೀನ ಕಣ್ಣಡಿಕನು ಎಂಬುದು ವೆಗ್ಗಳವಾಗುತ್ತದೆ. ಯಾಗ ಕೋಲಾಹಲ ವೀರಭದ್ರನಿಂದ ಮೊದಲ್ಗೊಂಡು ಮಾಯಾ ಕೋಲಾಹಲ ಅಲ್ಲಮಾ ಪ್ರಭುವಿನವರೆಗೂ ಅಂಗಾಲ ಕಣ್ಣುಳ್ಳ ಕಣ್ಣಡಿಕರು. ಇದು ಕಣ್ಣಡಿಕರು ಬೆಳೆದು ಬಂದ ಬಳಗ.

ಈ ವಿಷಯುವಾಗಿ ಮೈಸೂರಿನ ಪ್ರಸಿದ್ಧ ವೈದ್ಯರಾದ ಡಾ॥ ಎಂ. ಅಣ್ಣಾಜಪ್ಪನವರು ಮಾಡರ್ನ ಫಾರ್ಮಸಿ ಅವರು 'ಅನಾದಿ ವೀರಶೈವ ಸಂಗ್ರಹ' ಗ್ರಂಥದ ಮುನ್ನುಡಿಯಲ್ಲಿ ಹೀಗೆ ನುಡಿದಿದ್ದಾರೆ:

"ವೀರಶೈವರು ಕಣ್ಣಡಿಕರು ಮತ್ತು ಅವರ 'ಅವರ ಸನಾತನತ್ವ ಒಂದು ಲಿಂಗ ಸ್ವಲೀಲೆಯೇ ಸಹಸ್ರ ಚಿದ್ವಿಲಾಸವಾಗಿ ಕಣ್ಣು ಅಡಿಯಲ್ಲಿ ಧರಿಸಿದ ಕಣ್ಣಡಿಕರು ಮಣಿಪಾದವಾಚ್ಯರು" (ಪುಟ ೪೯).

ಈ 'ಕಣ್ಣಡಿಕರು' ಎಂಬ ಪದದಿಂದ ಕನ್ನಡಿಗರು ಎಂಬುದೂ, ಇದರ ಭಾಷೆಗೆ 'ಕನ್ನಡ' ಎಂಬುದೂ ಹೆಸರು ಬಂದಂತೆ ತೋರುತ್ತದೆ. ಕನ್ನಡವು ವೀರಶೈವರ ಬಳಕೆಯ ಮುಖ್ಯ ಭಾಷೆ. ತೆಲುಗು ದೇಶದಲ್ಲಿ ತೆಲಗು ಭಾಷೆಯು ಹೆಚ್ಚು ಪ್ರಚಾರವಾದಾಗ್ಯೂ ಅಲ್ಲಿನ ವೀರಶೈವರು ಒಂದೆರಡಾದರೂ ಕನ್ನಡ ಹಾಡುಗಳನ್ನು ಕಲಿತಿರಬೇಕೆಂದು ಅವಶ್ಯಕತೆಯ ಆಕಾಂಕ್ಷೆಯುಳ್ಳವರು (ಶಿವಾನುಭವ *IV* ೨-೩) ಶಿವಪೂಜೆ ಮಾಡುವಾಗ ಕನ್ನಡ ಭಾಷೆಯ ಮಂಗಳಾರತಿ ಒಂದನ್ನಾದರೂ ಹೇಳುತ್ತಾರೆಂದು ತಿಳಿದಿದೆ. ಫಾದರ್ ರಾಸ್‌ರವರು, (*The Rev. H. Heras S.J.M.A.*) "*Karnataka and Mohenjo Daro*" ಎಂಬ ಲೇಖನವನ್ನು (*The Karnataka Historical Review IV-1 and 2 numbers*) ಬರೆಯುತ್ತಾ

"The people of Karnataka are apparently reffected to in one of the real inscriptions of Mohenjo Daro as one of the ancient tribes of the land. The sign used to mention them in this (Here is a sign like triangle) It means "eye" Therefore in the proto Dravidian language of Mohenjo Daro it will read "kan" "eye" "to sec"

The small sign placed above it is the determinative of personality.... 26 We finally complete the sign by ending two stokes in each side which are the determinatives of collectively.... the complete sign will read Kananir "people who have eyes" (ಕಣ್ಣುಳ್ಳವರು) *This evidently refers number of people called so. The ancient word Kannadigas by which the people of Modern Karnataka are mentioned seems to be but a Sanskrit modification of Kananir."*

ಈಗಿನ ಕರ್ನಾಟಕ ಜನರಿಗಾಗಿ ಉಪಯೋಗಿಸುವ ಕನ್ನಡಿಗರು ಎಂಬ ಶಬ್ದವು 'ಕನನಿರ್' ಎಂಬುದರ ಸಂಸ್ಕೃತ [ತಿದ್ದಿದ] ರೂಪವಾಗಿ ತೋರುತ್ತದೆ.

ಇದರಿಂದ 'ಕನ್ನಡಿಗರು' ಎಂಬುದು ಹಳೆಯ ಶಬ್ದವೆಂದು ತೋರುತ್ತದೆ. ಇದು ಕಣ್ಣಡಿಗರು ಎಂದು ಬದಲಾಯಿಸಲ್ಪಡುವುದಕ್ಕೆ ಬಹಳ ವ್ಯತ್ಯಾಸವೇನೂ ಇಲ್ಲ. ಮೊಹಂಜೋದಾರೋ ಪಟ್ಟಣದಲ್ಲಿ ಕಣ್ಣಡಿಕರು ಇದ್ದರೇ ಎಂಬುದನ್ನು ಶೋಧಕರು ಸೂಕ್ಷ್ಮ ದೃಷ್ಟಿಯಿಂದ ಶೋಧಿಸಬೇಕಾಗಿದೆ. ಲಿಂಗವಂತರು ಪೂಜೆ ಮಾಡುವಂತಹ ಲಿಂಗಗಳು ಮೊಹಂಜೋದಾರೋ ಪಟ್ಟಣದಲ್ಲಿ ಸಿಕ್ಕಿರುವುದಾಗಿ ಡಾ॥ ಮಾರ್ಷಲ್‌ರವರು ಬರೆದಿರುತ್ತಾರೆ.

'ಕಣ್ಣಡಿಕ' ಶಬ್ದದಿಂದ ಕನ್ನಡಿಗ ಆಗಬಹುದಾಗಿದೆ. ಇದಕ್ಕೆ ಮೂಲ ವೀರಭದ್ರನೇ ಎಂದು ಸಿದ್ಧವಾಗುತ್ತದೆ. ವೀರಭದ್ರನು ಕಣ್ಣಡಿಕನೆಂದು ಹೆಸರಾಗಲು ವಿಷ್ಣುವೇ ಮೂಲ ಕಾರಣನು. ಇವನು ವೀರಭದ್ರನ ಉಪಾಸಕನಾಗಿ ತನ್ನ ಕಣ್ಣನ್ನು ಕಿತ್ತು ಚರಣಕ್ಕೆ ಅರ್ಪಿಸಿದ್ದರೆ ಈ ಹೆಸರು ಬರಲು ಕಾರಣವಿರಲಿಲ್ಲ.

ವಿಷ್ಣುವಿನ ಈ ಭಕ್ತಿಗೆ ಈ ಸಮರ್ಪಣ ಭಾವಕ್ಕೆ ಒಲಿದ ವೀರಭದ್ರ ಸ್ವಾಮಿಯು ಈ ವಿಷ್ಣುವನ್ನು ಅನುಗ್ರಹಿಸುವನು. ಇನ್ನು ನಿನ್ನ ಪ್ರಾಣಕ್ಕೆ ಭಯವಿಲ್ಲೆಂದು ಅಭಯವೀಯುವನು.

ಕೈಲಾಸದಿಂದ ಕನ್ನಡನಾಡಿಗೆ ಬಂದು ನೆಲೆನಿಂತನು ವೀರಭದ್ರನು. ಕನ್ನಡದ ಮುಖ್ಯ ಮತ್ತು ಮೂಲ ಅಧಿದೇವತೆಯಾಗಿರುವನು ವೀರಭದ್ರನು. ಕನ್ನಡ ನಾಡಿನಾದ್ಯಂತ ಆತನ ಬಹು ಪುರಾತನ ದೇವಾಲಯುಗಳಿವೆ. ಆತನ ದೇವಮಂದಿರಗಳಿಲ್ಲದ ಪುಣ್ಯಕ್ಷೇತ್ರಗಳಿಲ್ಲ; ಪುಣ್ಯಾರಣ್ಯಗಳಿಲ್ಲ; ಪಟ್ಟಣಪಳ್ಳಿಗಳಿಲ್ಲ. ತಿರುಪತಿ, ಗದುಗಿನ ವೀರನಾರಾಯುಣ, ಕೂಡಲಸಂಗವು, ಕರಕ್ಕಾಳ, ಪಂಡರಪುರದ ಪಾಂಡುರಂಗ ಮುಂತಾದ ಮುಖ್ಯ ಮುಖ್ಯ ದೇವಸ್ಥಾನಗಳೂ ಸಹ ವೀರಭದ್ರನವೆ ಎಂದು ಹೇಳುತ್ತಿರುವುದು ಹೆಮ್ಮೆಯ ವಿಷಯ. ರುದ್ರಪುತ್ರನಾದ ಮಾರುತಿಗೆ ವೀರಭದ್ರನೆ; ಲಿಂಗ ದೀಕ್ಷೆಯನ್ನು ಮಾಡಿದನೆಂದು ಸ್ಕಾಂದ ಪುರಾಣದಲ್ಲಿ ಹಮ್ಮಿರ ಕಾವ್ಯದಲ್ಲಿ ಹೇಳಲಾಗಿದೆ. ವೀರಭದ್ರನ ಭಕ್ತರು ವಿಶೇಷವಾಗಿದ್ದಾರೆ. ಕನ್ನಡನಾಡಿನಲ್ಲಿಯೇ ಅಲ್ಲದೆ ತೆಲಗು ತಮಿಳು ಮುಂತಾದ ಪ್ರದೇಶಗಳಲ್ಲಿಯೂ ಭಕ್ತರಿದ್ದಾರೆ; ದೇವಸ್ಥಾನಗಳಿವೆ.

ವ್ಯಾಳಾಸುರ ಸಂಹಾರ

ವ್ಯಾಳಾಸುರನು ಯಾರು? ಎಲ್ಲಿಯವನು? ತಂದೆ ತಾಯಿ ಯಾರು? ಇವು ಯಾವೂ ತಿಳಿದು ಬರುವುದಿಲ್ಲ. ಈ ಕಥನ ಹುಬ್ಬಳ್ಳಿಯ ಬಸವೇಶ್ವರ ಪುಸ್ತಕ ಭಂಡಾರದಿಂದ ಶ್ರೀ ಬಸವಣ್ಣೆಪ್ಪ ಗುರುಲಿಂಗಪ್ಪ ಸಂಕೇಶ್ವರ ಇವರು ಬೆಳಕಿಗೆ ತಂದ "ಶ್ರೀ ವೀರಭದ್ರ ದೇವರ ವಡಬುಗಳು" ಎಂಬ ಕಿರು ಹೊತ್ತಗೆಯ ಮೊದಲಿನ ಪುಟದಲ್ಲಿಯೇ ಅಚ್ಚಾಗಿದೆ. ಅದು ಹೀಗಿದೆ:

"ವೀರಭದ್ರ ದೇವರು ವ್ಯಾಳಾಸುರನೆಂಬ ರಕ್ಕಸನ ಸಂಹಾರಗೈದ ಪರಿಯಂ ಪೇಳ್ವೆ- ಎಂತೆಂದೊಡೆ. ವ್ಯಾಳಾಸುರನು ಬ್ರಹ್ಮನ ವರದಿಂದ ಸಕಲ ಲೋಕಗಳಿಗೆ ಮೃತ್ಯುಸ್ವರೂಪನಾಗಿ ನಿಂತಿರುವುದನ್ನು ಶ್ರೀ ಶಂಕರನಿಗೆ ಮುನಿಗಳು ಸಿದ್ಧರು ಸಾಧ್ಯರು ವಿದ್ಯಾಪರರು ಗರುಡರು ಗಂಧರ್ವರು ಕಿನ್ನರರು ಕಿಂಪುರುಷರು-ಮೂವತ್ತು ಮೂರು ಕೋಟಿ ದೇವತೆಗಳು ಶಶಿಧರನಿಗೆ ಮೊರೆಯಿಡಲಾಗಿ ಗಂಗಾಧರನು ಪ್ರಸನ್ನನಾಗಿ ನಿಮ್ಮಿಷ್ಟವೇನೆಂದು ಬೆಸಗೊಳ್ಳಲು ಸಕಲ ಗಣರು ಇಂತೆಂದರು: ವ್ಯಾಳಾಸುರನೆಂಬ ರಕ್ಕಸಾಧಿಪನು ಇಂದ್ರನ ಕವಚನ ವಜ್ರವನ್ನು, ಅಗ್ನಿಯ ನಾಲಗೆಯನ್ನು, ಯಮನ ದಂಡವನ್ನು, ನಿರುತಿಯ ಹಲ್ಲನ್ನು ವರುಣನ ಪ್ರಾಣವನ್ನು, ವಾಯುವಿನ ಗದೆಯನ್ನು, ಕುಬೇರನ ಖಡ್ಗವನ್ನು, ಈಶಾನ್ಯನ ತ್ರಿಶೂಲವನ್ನು ಕುಂಠಿತಮಾಡಿರುವನಲ್ಲದೆ ಅವುಗಳನ್ನು ಕಸಿದುಕೊಂಡಿರುವನು; ಎಂದು ಹೇಳಲು

ಇದನ್ನು ಚಂದ್ರಶೇಖರನು ಕೇಳಿ, ಹೂಂಕರಿಸುತ್ತಾ ಭದ್ರಕಾಳೀರಮಣನನ್ನು ಕರೆದು ನೀನು ಹೋಗಿ ದುಷ್ಟನಾದ ವ್ಯಾಳನನ್ನು ಕೊಂದು ಸಕಲ ಜಗತ್ತಿನ ಉದ್ಧಾರ ಮಾಡಿ ಬರುವುದಾಗಿ ಹೇಳಿದನು. ಶರಭಾವತಾರಿಯಾದ ಶ್ರೀ ವೀರಭದ್ರನು ಕೋssಲಲ ಎಂದು ವೀರಕೇಕೆಯ ಹೊಡಿಯಲಾಗಿ ನಕ್ಷತ್ರಗಳು ಉದುರಿದವು; ಸೂರ್ಯಚಂದ್ರಮರು ದಿಕ್ಕು ತಿಳಿಯದೆ ಪಲಾಯನ ಮಾಡಿದರು. ಬ್ರಹ್ಮಾಂಡವು ನಡುಗಿತು. ಸಮುದ್ರವು ಧ್ರುವಲೋಕ ಪರಿಯಂತ ಹಾರಿತು.

ಇದನ್ನು ಕಂಡು ವ್ಯಾಳಾಸುರನ ಎದೆಯು ನಡುಗಿತು. ಎಡಗಣ್ಣು ಹಾರಿತು. ಆದರೂ ಧೈರ್ಯಗುಂದದೆ ಸಿಂಹದ ಗವಿಗೆ ಎರಳೆಯ ಮರಿಯು ಬರುವಂತೆ ಆ ಬೂದಿ ಬಡಕನ ಮಗನಾದ ವೀರಭದ್ರನು ಬರುವನು. ಎಲ್ಲರ ಶಕ್ತಿಯನ್ನು ಕುಂಠಿತ ಮಾಡಿದ ಈ ಬಹಾದ್ದುರನ ಮುಂದೆ ಬರುವನೆ? ತೋಳನ ಬಾಯಿಗೆ ಸಿಲುಕಿದ ಕುರಿಯಂತೆ ಅವನ ಬಾಳುವೆ ಆಗವುದು.

ಇಷ್ಟೆಂದು ನಿಂತಿರುವಷ್ಟರಲ್ಲಿ ವೀರೇಶನು ವ್ಯಾಳನ ರಟ್ಟೆ ಹಿಡಿಯಲು ವ್ಯಾಳನು ಇವನ ರಟ್ಟೆ ಹಿಡಿದು ಗುದ್ದಿದನು. ಮರಳಿ ಗುದ್ದುವಷ್ಟರಲ್ಲಿ ಅವನಿಗೆ ವೀರೇಶನು ಗುದ್ದಿದನು.

ಈ ಪ್ರಕಾರ ಅಷ್ಟ ಮಿಶತಿ ದಿವಸ ಯುದ್ಧ ಮಾಡಲಾಗಿ ವ್ಯಾಳನು ಮಾಯಾ ಯುದ್ಧ ಸುರುವು ಮಾಡಿದನು:

ಆಗ ವ್ಯಾಳನು ಮೇರು ರೂಪವನ್ನು ಧರಿಸಿದನು; ಅದಕ್ಕೆ ವೀರಭದ್ರನು ಬಂಜಾ ಮಾರುತನಾದನು; ಮತ್ತು ವೀರೇಶನು ವಜ್ರನಾದನು. ವ್ಯಾಳನು ಸಮುದ್ರನಾದನು; ಶರಭನು ಅಗಸ್ತ್ಯನಾದನು. ವ್ಯಾಳನು ಸಿಂಹನಾದನು; ಆಗ ವೀರಭದ್ರನು ಶರಭನಾಗಿ ಸಿಂಹವನ್ನು ಕೊಂದನು.

ಅದನ್ನು ನೋಡುತ್ತಿದ್ದ ದೇವತೆಗಳು ಆಕಾಶದಿಂದ ಪುಷ್ಪವೃಷ್ಟಿಯ ಮಾಡಿದರು. ಗಂಧರ್ವ ಸ್ತ್ರೀಯರು ನರ್ತನ ಮಾಡಿದರು. ಕಿನ್ನರರು ಗಾಯನ ಮಾಡಿದರು.

ಭದ್ರಕಾಳಿಯ ಅಪ್ಪಣೆಯ ಮೇರೆಗೆ ಮೂವತ್ತು ಮೂರು ಕೋಟಿ ದೇವತೆಗಳು ಹರುಷದಿಂದ ಬಂದು ಹೂವಿನ ಹಾರಗಳನ್ನು ಹಾಕಲು, ಭದ್ರಕಾಳಿಯು ಬಂದು ಸೇಸಿಯ ಇಟ್ಟು ಆರತಿ ಬೆಳಗಿದಳು. ಸಕಲ ದೇವಗಣಗಳು ಚಾಂಗು ಬಲ ಎಂದು ಜಯಘೋಷ ಮಾಡಿದರು.

ಶರಭ ಸಾಳ್ವಾವತಾರ

ಶರಭಾವತಾರ ಎಂಬುದೆ ಹೆಸರಾದ ವಿಚಾರ. ಶರಭ-ಸಾಳ್ವಾವತಾರ ಎಂದು ಶಿವಪುರಾಣದ ಆರನೆಯ ಆಶ್ವಾಸದಲ್ಲಿ ಉಲ್ಲಿಖಿತವಾಗಿದೆ.

ಶರಭವೆಂದರೆ ಎಂಟು ಕಾಲುಗಳುಳ್ಳ ಮೃಗ; ಸಿಂಹವನ್ನು ಸಂಹರಿಸುವ ಹೆಚ್ಚಿನ ಬಲವುಳ್ಳ ಮೃಗ. ಸಾಳ್ವವೆಂಬ ಹೆಸರಿನ ಒಂದು ಪಕ್ಷಿ. ಇದಕ್ಕೆ ಎರಡು ಅಥವಾ ನಾಲ್ಕು ಮುಖಗಳಿರುತ್ತವೆ. ಹಕ್ಕಿಗಳಲ್ಲೆಲ್ಲ ಶ್ರೇಷ್ಠ ಶಕ್ತಿಯುಳ್ಳ ಹಕ್ಕಿ, ಗಂಡಭೇರುಂಡ ಎಂದೂ ಹೇಳುವರು. ಮೃಗ-ಪಕ್ಷಿ ಎರಡೂ ಸೇರಿ ಒಂದು ಅವತಾರ. ಇದುವೇ ಸರಿಯೆಂದು ತೋರುತ್ತದೆ. ವಿಷ್ಣುವು ನರ ಮತ್ತು ಸಿಂಹ ಈ ಎರಡೊಂದಾದ ಅವತಾರವನ್ನು ತೊಟ್ಟ ಬಳಿಕ ಇದಕ್ಕೆ ತಕ್ಕ ಶರಭ-ಸಾಳ್ವ ಈ ಎರಡೊಂದಾದ ಅವತಾರ ತಾಳುವದು ಉಚಿತವೆನಿಸುತ್ತದೆ. ಆ ಚರಿತ್ರ ಹೀಗಿದೆ:

ಚತುರ್ಮುಖ ಬ್ರಹ್ಮನ ಮಗ ಕಸ್ಯಪಬ್ರಹ್ಮ. ಆತನ ಪತ್ನಿ ದಿತಿ, ಅವಳ ಒಡಲಲ್ಲಿ ಹುಟ್ಟಿದವರು ಹಿರಣ್ಯಾಕ್ಷ, ಹಿರಣ್ಯಕಸ್ಯಪ ಎಂಬ ಇಬ್ಬರು ಗಂಡುಮಕ್ಕಳು. ಇವರಿಬ್ಬರೂ ಬ್ರಹ್ಮನನ್ನು ಕುರಿತು ನಿಡುಗಾಲ ತಪಸ್ಸು ಮಾಡುವರು. ಅಮೌಘ ವರವನ್ನು ಪಡೆವರು. ಮೂರು ಲೋಕ ಕಂಟಕರಾಗುವರು. ಆಗ ವಿಷ್ಣು ವರಾಹಾವತಾರವನ್ನು ತೊಟ್ಟು ಬಂದು ಹಿರಣ್ಯಾಕ್ಷನನ್ನು ಹಣಿದು ಕೊಲ್ಲುವನು. ತನ್ನ ಅಣ್ಣನನ್ನು ಕೊಂದುದಕ್ಕಾಗಿ ಹಿರಣ್ಯಕಸ್ಯಪುನಿಗೆ ಎಲ್ಲಿಲ್ಲದ ಸಿಟ್ಟು ಬರುವುದು. ವಿಷ್ಣುವನ್ನು ಸಂಹರಿಸಲು ಸಂಕಲ್ಪಿಸುವನು. ತಪಸ್ಸನ್ನು ಮಾಡಿ ತಕ್ಕ ಶಕ್ತಿಯನ್ನು ಸಂಪಾದಿಸುವನು. ಪಂಚಭೂತಗಳಲ್ಲಿ ಎಲ್ಲಿಯೂ ಮರಣವಾಗದಂತೆ ಅಷ್ಟ ದಿಕ್ಕುಗಳಲ್ಲಿ ಹಗಲು ಇರುಳುಗಳಲ್ಲಿ ಅಸ್ತ್ರಶಸ್ತ್ರಗಳಿಂದ ಮರಣವಾಗದಂತೆ ವರವನ್ನು ಪಡೆಯುವನು. ಸಾವಿಲ್ಲದವನಾಗಿ ಸ್ವರ್ಗ ಮರ್ತ್ಯ ಪಾತಾಳಗಳನ್ನು ಜಯಿಸಿ ವಿಷ್ಣುವನ್ನು ಸಂಹರಿಸಲು ವೈಕುಂಠಕ್ಕೆ ತೆರಳುವನು. ಕೈಯಲ್ಲಿ ದಂಡವಿಡಿದು ದಂಡೆತ್ತಿ ಹೋಗುವನು. ಈ ಸಂಗತಿ ತಿಳಿದೊಡನೆ ವಿಷ್ಣು ಭಯಗ್ರಸ್ತನಾಗುವನು. ಬುದ್ದಿಗೆ ಏನೊಂದು ಹೊಳೆಯದಂತಾದನು. ದಿಕ್ಕು ತೋಚದಂತಾಗುವುದು. ಹಿರಣ್ಯಕಸ್ಯಪುವಿನ ಹಸ್ತದಲ್ಲಿ ಸಾಯುವುದಕ್ಕಿಂತ ಬೇರೆ ಅವಮಾನ ಇಲ್ಲೆಂದು ಭಾವಿಸಿ ಓಡಿಹೋಗಿ ಅಡಗಿಕೊಳ್ಳುವನು. ಹಿರಣ್ಯ ಕಸ್ಯಪನು ಏಳು ಕಡಲಗಳನ್ನು ಹದಿನಾಲ್ಕು ಲೋಕಗಳನ್ನು ಬೆದಕಿ (ಹುಡುಕಿ)ದರೂ ಸಿಕ್ಕದಾದನು. ಇದರಿಂದಾಗಿ ವಿಷ್ಣುವು ಬಹುಶಃ ಸತ್ತುಹೋಗಿರಬೇಕೆಂದು ಬಗೆದು ಮರಳಿ ತನ್ನ ಶೋಣಿತಪುರಕ್ಕೆ ಬಂದು ಸುಖವಾಗಿರುವನು.

ಕಾಲ ಕಳೆದ ಬಳಿಕ ಹಿರಣ್ಯ ಕಸ್ಯಪುವಿಗೆ ಮಕ್ಕಳಾಗುವರು. ಅವರಲ್ಲಿ ಪ್ರಹ್ಲಾದನೊಬ್ಬನು; ಹಿರಿಯವನು. ವಿಷ್ಣು ಭಕ್ತಿಯುಳ್ಳವನಾಗುವನು. ತಂದೆ ಬೇಡೆಂದು ಹೇಳಿದರೂ ಕೇಳದಾದನು. ನಿಮ್ಮ ದೊಡ್ಡಪ್ಪನನ್ನು ಕೊಂದು ವಂಶನಾಶಕನೂ ವಿರೋಧಿಯೂ ಆಗಿದ್ದಾನೆ. ಅಂಥವನನ್ನು ನೀನು ಆರಾಧಿಸುವುದು ಉಚಿತವಲ್ಲ; ಎಂದು ಮುಂತಾಗಿ ಸಕಾರಣವಾಗಿ ಹೇಳಿದರೂ ಕೇಳದಿರುವ ಮಗನಿಗೆ ಅನೇಕ ಹಿಂಸೆಗಳನ್ನು ಕೊಡುವನು. ಆಗ ಪ್ರಹ್ಲಾದನು ವಿಷ್ಣುವನ್ನು ಮೊರೆಯಿಡುವನು. ವಿಷ್ಣು ತನ್ನ ಭಕ್ತನನ್ನು ರಕ್ಷಿಸಲು ಕಂಬದಿಂದ ನರಸಿಂಹಾವತಾರಿಯಾಗಿ ಬಂದು ಹಿರಣ್ಯ ಕಸ್ಯಪುವನ್ನು ಹಿಡಿದು ತನ್ನ ತೊಡೆಯ ಮೇಲೆ ತನ್ನ ಉಗುರುಗಳಿಂದ ಹಲ್ಲುಗಳಿಂದ ಪರಚಿ ಕರ್ಚಿ ಕೊಲ್ಲುವನು. ನರ ರಕ್ತವನ್ನು ಕುಡಿದು ಉನ್ಮತ್ತನಾಗುವನು. ಕ್ರೋಧಾತಿರೇಕದಿಂದ ದೇವಮಾನವರನ್ನು ಹಿಂಸಿಸಹತ್ತುವನು. ಸಿಂಹ ಸ್ವಭಾವಕ್ಕೆ ಬಲಿಯಾಗುವನು. ಲೋಕಕಂಟಕನಾಗುವನು.

ಹಲವರು ಹೋಗಿ ಶಿವನಿಗೆ ಮೊರೆಯಿಡುವರು. ಶಿವನು ವೀರಭದ್ರನನ್ನು ಕರೆಯಿಸಿ ಶರಭ ಸಾಳ್ವಾವತಾರಿಯಾಗಿ ಹೋಗಿ ನರಕಂಟಕನಾದ ನರಸಿಂಹನನ್ನು ಶಾಂತಗೊಳಿಸೆಂದು ಆಜ್ಞಾಪಿಸುವನು. ಆ ಕೂಡಲೆ ವೀರೇಶನು ಶರಭ ಸಾಳ್ವಾವತಾರವನ್ನು ತೊಡಗುವನು. ನೆಲಮುಗಿಲುಗಳನ್ನು ಅಂದುವ ಹಿರಿದಾಕಾರ ತಾಳುವನು. ನಾಲ್ಕು ಮೊಗ, ಎರಡು ಅಡಿ, ಬಲವಾದ ಎರಡು ರೆಕ್ಕೆ, ವಜ್ರದಂತಹ ಕೊರಳು, ಕಿಡಿಗಳನ್ನು ಕಾರುವ ಕಣ್ಣು, ಪ್ರಕಾಶಿಸುವ ಶರೀರದಿಂದ ರೌದ್ರಾಕಾರವಾಗುವನು. ಗಂಡಭೇರುಂಡ ಪಕ್ಷಿ ಮತ್ತು ಎಂಟು ಕಾಲುಳ್ಳ ಶರಭ ಮೃಗ ಈ ಉಭಯ ಸಮ್ಮಿಳಿತ ಅವತಾರವನ್ನು ತಾಳುವನು. ನರಸಿಂಹನಿರುವಲ್ಲಿಗೆ ಬಂದು ನಿಲ್ಲುವಷ್ಟರಲ್ಲಿ ಆತನ ಸೊಕ್ಕು ಸಡಿಲಾಗುವುದು. ಶರಭ ಸಾಳ್ವನನ್ನು ನೋಡಿದೊಡನೆ ನರಸಿಂಹನ ಮದ ಮುರಿಯುವುದು. ಶರಭ ಸಾಳ್ವಾವತಾರಿಯಾದ ವೀರಭದ್ರನ ಆರ್ಭಟಕ್ಕೆ ಒಂದೇ ಒಂದು ಹೊಡೆತಕ್ಕೆ ನರಸಿಂಹನಿಗೆ ಆರು ಮೂರಾಗಿ ಭಯವಿನಯವುಂಟಾಗುವುದು. ಶಾಂತಿ ಸಮನಿಸುವುದು. ಹೇಳಿದಂತೆ ಕೇಳುವುದಾಗಿ ಮಾತು ಕೊಟ್ಟು ಜತೆಗೆ ಹೋಗಿ ಪರಮೇಶನಿಗೆ ಶರಣಾಗುವನು.

ಶರಭ ಸಾಳ್ವಾವತಾರ ಚರಿತ್ರ ಪವಿತ್ರವಾದುದು ಇದನ್ನು ಓದಿದವರಿಗೆ–ಕೇಳಿದವರಿಗೆ ಅಂಜಿಕೆ ಅಪಮೃತ್ಯುಗಳುಂಟಾಗುವುದಿಲ್ಲ. ಶತ್ರು ಪೀಡೆಯಿಲ್ಲ. ಪಿಡುಗು ಭೂಕಂಪಾದಿಗಳ ಬಾಧೆಯಿಲ್ಲ. ಪಾಪ–ತಾಪಗಳಿಲ್ಲ ರಾಗದ್ವೇಷಗಳಿಲ್ಲ.

ಶರಭಾವತಾರವನ್ನು ಕುರಿತು ಕನ್ನಡದಲ್ಲಿ ಒಂದೆರಡು ವಡಬುಗಳುಂಟು ಅವನ್ನಿಲ್ಲಿ ಉದಾಹರಿಸಲಾಗುತ್ತದೆ:

೧. ಶರಭಾವತಾರದ ಪರಿಯಂ ಪೇಳ್ವೆ, ಹಿರಣ್ಯ ಕಸ್ಯಪನ ಸಂಹಾರಕ್ಕಾಗಿ ನರಸಿಂಹನವತಾರಿ ಶ್ರೀ ವಿಷ್ಣುವಿಗೆ ಅಹಂಕಾರ ಬರಲು, ಶ್ರೀಹರಿಯು ಲೋಕಕ್ಕೆ ಬಾಧೆ ಕೊಡಲಾಗಿ ಶಂಕರನು ಶ್ರೀ ವೀರೇಶನನ್ನು ಕರೆದು, ನೀನು ಹೋಗಿ ಲೋಕಕಂಟಕನಾದ ನರಸಿಂಹನನ್ನು ಕೊಂದು ಲೋಕ ಬಾಧೆಯನ್ನು ಪರಿಹರಿಸು ಎಂದು ವೀರೇಶನಿಗೆ ಪೇಳಲಾಗಿ ವೀರಭದ್ರನು ಶರಭಾವತಾರ ಧರಿಸಿ, ನರಸಿಂಹನ ಬಳಿಗೆ ಬಂದು ಎಲೋ ನರಹರಿಯೆ ನೀನು ಸಾಕ್ಷಾತ್ ಲಕ್ಷ್ಮೀಪತಿ, ನಿನ್ನನ್ನು ನೀನು ಮರೆತಿರುವೆ, ನನ್ನ ಬುದ್ಧಿಯ ಮಾತನ್ನು ಕೇಳು, ಇಲ್ಲವಾದರೆ ನಿನ್ನನ್ನು ಗುದ್ದಿ ತರುವದಾಗಿ ಕೈಲಾಸಪತಿಯು ಅಪ್ಪಣೆ ಕೊಟ್ಟಿರುವನು. ಉತ್ತರ ಕೊಡು ಎಂದು ಗದ್ದರಿಸಲಾಗಿ ನರಸಿಂಹನು ಅದನ್ನು ಲೆಕ್ಕಿಸದೆ ತನ್ನ ಮುನ್ನಿನ ಕೃತಿಯನ್ನು ಮಾಡಲಾಗಿ, ವೀರಭದ್ರನು ಶರಭಾವತಾರದಿಂದ ಅವನ ಟೊಂಕವು ಮುರಿಯುವ ಹಾಗೆ ಒದಿಯಲಾಗಿ ವಿಷ್ಣುವಿಗೆ ಜ್ಞಾಪಕವಾಗಿ ಕ್ಷಮೆ ಬೇಡಲಾಗಿ ಶಿವಲೋಕಕ್ಕೆ ಕರೆದೊಯ್ದನು. ಶಂಕರನು ಕಂಡು ವೀರೇಶನ ಹರಸಿ ಹೂವಿನ ಮಳೆಗರೆದನು.

೨. ಆಽಹಾಽಽರೆ ವೀರಾ, ಆಽಹಾಽಽರೆ ಶರಭಾ! ಶರಭಾವತಾರಿಯಾದ ವೀರಭದ್ರನ ಶಕ್ತಿಯಂ ಪೇಳ್ವೆ, ಹಿರಣ್ಯ ಕಸ್ಯಪನು ಅರಣ್ಯವಾಸಿಗಳಾದ ಮುನಿಗಳಿಗೆ ಮರಣಸಮ ದುಃಖ ಕೊಡುತ್ತಿರಲು, ಕರುಣ ನಿಧಿ–ಮರಣ ವರ್ಜಿತ–ಶರಣ ರಕ್ಷಕ ಶಂಕರನಿಗೆ ಮರೆಯಿಡಲಾಗಿ ಆಗಲಾ ಶಶಿಧರನು, ವಿಷ್ಣುವಿನ ಕರೆದು ನೀನು ಬೇಗ ಹೋಗಿ ಯೋಗಿವರ್ಯರನ್ನು ರಕ್ಷಿಸು, ಸಾಗರ ಮಿಧ್ಯದಲ್ಲಿರುವ ಕಸ್ಯಪನ ಕೊಂದು ಬೇಗ ಬಾ ಎಂದು ಕಳುಹಲು ಭುಜಗಶಯನನು ನರಸಿಂಹನಾಗಿ ಕಶ್ಯಪನಕೊಂದು ಅವನ ರಕ್ತಕುಡಿದು ಮದೋನ್ಮತ್ತನಾಗಿ ಮೂಜಗ ಪಾಲಿಪ ದೇವತೆಗಳಿಗೆ ತ್ರಾಸು ಕೊಡಲು, ನಾಗಭೂಪಣನು ವೀರಭದ್ರನಿಗೆ ಅಪ್ಪಣೆ ಮಾಡಲು ದಕ್ಷರಿಪುವು ಇಕ್ಷು ಭೌಪನಿಗೆ ತಂದೆಯಾದ ಕುಕ್ಷಿಯೊಳ್ ಬ್ರಹ್ಮನನ್ನು ಧರಿಸಿದ ಎಲೋ ಪಕ್ಷಿವಾಹನನೆ ಕೇಳು, ಮೋಕ್ಷದಾಯಕನಾದ ಜಗದ್ರಕ್ಷಕನು ನಿನಗೆ ಬುದ್ಧಿ ಹೇಳಿ ಕರೆತಾರೆಂದು ಹೇಳಿರುವನು; ಬಂದರೆ ಒಳಿತು, ಇಲ್ಲವಾದರೆ ಶರಭಾವತಾರವ ಧರಿಸಿ ನಿನ್ನನ್ನು ಕೊಂದು ನಿನ್ನ ಚರ್ಮ ಸುಲಿದು ಶಂಕನಿಗೆ ಹಾಸನಿಕ್ಕೆ ಕೊಡುವೆನೆಂದು ನರಹರಿಯನ್ನು ಕೊಂದನು; ಕಡೆ ಕಡೆ!

೩. ವೀರಭದ್ರದೇವರ ಪ್ರತಾಪವನ್ನು ಆದಯ್ಯ ಶರಣನು ತನ್ನೊಂದು ವಚನದಲ್ಲಿ ಹೀಗೆ ಹೊಗಳಿದ್ದಾನೆ. ಅದನ್ನು ವಡಬವನ್ನಾಗಿ ನುಡಿಯುವರು.

ಶ್ರೀರಾಚೋಟಿ ವೀರಭದ್ರ ದೇವರ ಪ್ರತಾಪವೆಂತೆಂದೊಡೆ: ಪಾತಾಳದಿಂ ಕೆಳಗೆ ಪಾದ, ಸುರಲೋಕದಿಂ ಮೇಲೆ ಉತ್ತಮಾಂಗ; ಬ್ರಹ್ಮಾಂಡವೆ ಮುಕುಟ, ಗಗನವೆ ಮುಖ, ಸೂರ್ಯಚಂದ್ರಾರ್ಕಗಳೆ ನೇತ್ರಗಳು, ದಶದಿಕ್ಕುಗಳೆ ಬಾಹುಗಳು, ಮಹದಾಕಾಶವೆ ಶರೀರ, ತರುಗಳೆ ತನುರುಹ, ಶೂನ್ಯವೆ ಕರಸ್ಥಲಲಿಂಗ ನಕ್ಷತ್ರವೆ ಪುಷ್ಪ, ನಿತ್ಯವೆ ಪೂಜೆ, ಮೇಘವೆ ಜಡೆ, ಬೆಳದಿಂಗಳೆ ವಿಭೂತಿ, ಪರ್ವತಗಳೆ ರುದ್ರಾಕ್ಷಿ, ಪಂಚಬ್ರಹ್ಮವೆ ಪಂಚಾಕ್ಷರ, ತತ್ತ್ವಗಳೆ ಜಪಮಾಲೆ, ಮೇರುವೆ ದಂಡ, ಸಮುದ್ರವೆ ಕಮಂಡಲು.... ಉರಸ್ಥಲ, ಶಿಕ್ಷನೇ (?) ಕಟಿಸೂತ್ರ, ಜಗವೆ ಕಂಥಾ, ಅನಂತತೆಯೆ ಕೌಪೀನ, ತ್ರಿಗುಣವೊಂದಾದುದೆ ಕರ್ಪುರ, ಚತುರ್ಯುಗವೆ ಗಮನ, ಮಿಂಚೆ ಅಂಗರುಚಿ, ಸಿಡಿಲೆ ಧ್ವನಿ ವೇದಾಗಮವೆ ವಾಕ್ಯ, ಜ್ಞಾನಮುದ್ರೆಯೆ ಉಪದೇಶ, ಪೃಥ್ವಿಯೇ ಸಿಂಹಾಸನ, ದಿನರಾತ್ರಿಯೆ ಅರಮನೆ, ಶಿವಜ್ಞಾನವೆ ಐಶ್ವರ್ಯ, ನಿರಾಳವೆ ತೃಪ್ತಿ –ಇಂತು ಚೈತನ್ಯ ಜಂಗಮಕ್ಕೆ ನಾನು ನಮೋ ನಮೋ ಎನುತಿದ್ದೆನಯ್ಯಾ ಸೌರಾಷ್ಟ್ರ ಸೋಮೇಶ್ವರಾ, ಕಡೆ ಕಡೆಯೆಂದಾ!

ವೀರಭದ್ರದೇವನ ವಿರಾಡ್ರೂಪ ವರ್ಣನೆಯಿದು. ಅಥವಾ ಶರಭ ಸಾಳ್ವಾವತಾರದ ವಿಶ್ವರೂಪವಿದು. ಚೈತನ್ಯ ಜಂಗಮನೆಂದೆನಿಸಿರುವನು. ಇದು ಆತನ ವಿಶ್ವಜೀವನದ ನಿದರ್ಶನ. ಇದು ಸತ್ಯ ನಿರೂಪಣ.

ನರಸಿಂಹಾವತಾರದಂತೆ ಶರಭಸಾಳ್ವಾವತಾರವೂ ವಿಚಿತ್ರವಾದ ಅವತಾರ; ವಿಶಿಷ್ಟವಾದ ಅವತಾರ. ಮೃಗ ಪಕ್ಷಿಸಮನ್ವಯದ ಅವತಾರ. ಸಿಂಹಕ್ಕಿಂತಲೂ ಶ್ರೇಷ್ಠವಾದ ಮೃಗ ಶರಭಿ. ಅತ್ಯದ್ಭುತ ವೀರಮೃಗ. ನರನಿಗಿಂತ ಮಿಗಿಲಾದುದು ಸಾಳ್ವಪಕ್ಷಿ ಅಥವಾ ಗಂಡಭೇರುಂಡ. ಆ ಶರಭಸಾಳ್ವಾವತಾರ ಬರದಿದ್ದರೆ ನರಸಿಂಹನಿಂದಾಗುವ ನರಕ ನರಲೋಕಕ್ಕೆ ತಪ್ಪುತ್ತಿರಲಿಲ್ಲ. ಲೋಕ ಕಲ್ಯಾಣಕ್ಕಾಗಿ ವೀರೇಶನು ಯಾವ ಜನ್ಮದಲ್ಲಾದರೂ ಬರಲು ಸಂಸಿದ್ಧ ಲೋಕಕಲ್ಯಾಣಕ್ಕಾಗಿಯೇ ಆತನ ಜನ್ಮ; ಆತನ ಜೀವನ.

ಗಂಡಭೇರುಂಡದಂತೆ ಆತನ ಜೀವನಕ್ಕೆ ಎರಡು ಮುಖಗಳಿವೆ. ಒಂದು ವೀರತನ; ಇನ್ನೊಂದು ಭದ್ರತನ. ವೀರತನಕ್ಕೆ ಶರಭ ಸಾಕ್ಷಿ; ಭದ್ರತನಕ್ಕೆ ಗಂಡಭೇರುಂಡ ಅಥವಾ ಸಾಳ್ವ ಸಾಕ್ಷಿ.

ಶರಭ ಸಾಳ್ವಾವತಾರದ ನೆನಹನ್ನು ವೀರಶೈವರು ಕೈಬಿಡದೆ ಸ್ಮಾರಕವಾದ ದೇವಸ್ಥಾನಗಳಲ್ಲಿ ಶರಭವನ್ನು ಭೇರುಂಡವನ್ನು ಚಿತ್ರಿಸುತ್ತ ಬಂದಿದ್ದಾರೆ.

ಉತ್ತಮರಾದ ವೀರರಿಗೂ ಕವಿಗಳಿಗೂ 'ಶರಭ ಭೇರುಂಡ' ಎಂದು ಪ್ರಶಸ್ತಿಗಳನ್ನು ಕೊಡುವ ಮೂಲಕ ನೆನಹನ್ನು ಉಳಿಸಿಕೊಂಡು ಬಂದಿದ್ದಾರೆ. ನಮ್ಮೀ ಅಭಿಪ್ರಾಯವನ್ನು ಶ್ರೀ ಟಿ.ಎನ್. ಮಲ್ಲಪ್ಪನವರು ತಮ್ಮ 'ವೀರಶೈವ ಉಗಮ ಮತ್ತು ಪ್ರಗತಿ' ಎಂಬ ಗ್ರಂಥದಲ್ಲಿ ಹೀಗೆ ಪ್ರಸ್ತಾಪಿಸಿ ಎತ್ತಿ ಹಿಡಿದಿದ್ದಾರೆ: ಅದಿದು;

ವೀರಶೈವವೂ, ಭೇರುಂಡವೂ

ಬಹು ಹಿಂದಿನಿಂದಲೂ ಉಲ್ಲೇಖಿಸಲ್ಪಡುತ್ತಿರುವ 'ಭೇರುಂಡ ಪಕ್ಷಿಗೂ ವೀರಶೈವಕ್ಕೂ ಸಂಬಂಧವಿರುವಂತಿದೆ. ಇದು ಸಂಶೋಧನಾರ್ಹವಾದ ವಿಷಯವು. ಕೆಳದಿಯ ದೇವಸ್ಥಾನದಲ್ಲಿರುವ ಶಿವಲಿಂಗವನ್ನು ಈಗ ಬ್ರಾಹ್ಮಣರು ಪೂಜಿಸುತ್ತಾರೆ. ಆದರೆ ಅಲ್ಲಿಯೇ ಇರುವ ವೀರಭದ್ರ ದೇವರನ್ನು ವೀರಶೈವ ಪೂಜಾರಿಗಳು ಪೂಜಿಸುತ್ತಾರೆ. ಈ ವೀರಭದ್ರ ದೇವರ ಗರ್ಭಗುಡಿಯು ಮುಂದಿನ ಮೇಲ್ಛಾವಣಿಯಲ್ಲಿ ಒಂದು ಸುಂದರವಾದ ಭೇರುಂಡ ಪಕ್ಷಿಯ ವಿಗ್ರಹವಿದೆ. ಹೀಗೆಯೇ ವೀರಶೈವ ದಂಡನಾಯಕನಾದ ವಿರುಪಣ್ಣನು ಕಟ್ಟಿಸಿದ ಲೇಪಾಕ್ಷಿ ದೇವಾಲಯದ ಪಕ್ಕದಲ್ಲಿರುವ ದೊಡ್ಡ ಪ್ರತಿಮೆಯ ಬಸವನ ಕೊರಳಲ್ಲಿ ಭೇರುಂಡ ಪಕ್ಷಿಯ ಆಕಾರದ ಪದಕವು ಕೆತ್ತಲ್ಪಟ್ಟಿದೆ. ಬಳ್ಳಿಗಾವಿಯ ಪ್ರಸಿದ್ಧ ವೀರಶೈವ ಕ್ಷೇತ್ರ, ಅಲ್ಲಿ ಒಂದು ಭೇರುಂಡ ಪಕ್ಷಿಯಿರುವ ಕಂಬವಿದೆ... ಮೈಸೂರಿಗೆ ರಾಜ್ಯಲಾಭವಾಗುವಂತೆ ಸಹಾಯ ಮಾಡಿದ ಜಂಗಮನ ಇಚ್ಛೆಯಂತೆ ಅವರು ಕಾವಿಯ ಪತಾಕೆಯನ್ನು ರಾಜ ಚಿಹ್ನೆಯಾಗಿ ಉಪಯೋಗಿಸಲಾರಂಭಿಸಿದುದು ಚಾರಿತ್ರಿಕ ವಿಷಯ. ಇದರಲ್ಲಿ ಭೇರುಂಡ ಪಕ್ಷಿಯ ಚಿತ್ರವಿದೆ. ವೀರಶೈವ ಕವಿಗಳಲ್ಲಿ ಪ್ರಸಿದ್ಧವಾದ ರಾಘವಾಂಕನಿಗೆ "ಉಭಯ ಕವಿ ಶರಭಭೇರುಂಡ" ಎಂದು ಬಿರುದಿದೆ. ಕ್ರಿ.ಶ. ೧೨೨೬ರ ಬೆಣಕಲ್ಲು ನಂ. ೩೪೩ನೇ ಶಾಸನದಲ್ಲಿ "ಸರಸ್ವತೀ ಲಲಾಟ ಪಟ್ಟರುಂ, ಸಮವಾದಿ ಶರಭ ಭೇರುಂಡರುಂ" ಎಂದು ಗುರುವಿನ ವರ್ಣನೆಯಿದೆ. ಹೀಗೆ ವೀರಶೈವಕ್ಕೆ ವೀರಪದವೂ, ಭೇರುಂಡ ಚಿಹ್ನೆಯೂ ಬಹು ಪುರಾತನ ಕಾಲದಿಂದ ಉಂದ ಸಂಬಂಧವೆಂದು ತೋರುವುದು.

ವೀರಭದ್ರನ–ವೀರ ಪ್ರವಾಹ

ವೀರಗಣರ ರಾಜ್ಯಪಾಲಕರ ವೀರಗಣಂಗಳ ವೀರಮುಖರ ಪುರವೆಂತಿಗಿಯವರ ಮುಖಾಂತರ ವೀರಭದ್ರನ ವೀರ ಪ್ರವಾಹ ಈ ಜಗತ್ತಿನಲ್ಲಿ ಅಂದಿನಿಂದ ಅವಿಚ್ಛಿನ್ನವಾಗಿ ಹರಿದು ಬಂದಿದೆ. ಆತನ ಆ ವೀರಕ್ರಾಂತಿಯ ಶಕ್ತಿ ಪಾತ್ರಗಳಾಗಿ ನಿಂತಿವೆ. ಶಾಂತಿ ಸೇನೆಯಾಗಿ ಯಾಗ ನಿರೋಧಕರಾಗಿ ವೀರಶ್ರೀಯ ಉದ್ಘೋಷಕರಾಗಿ ಪ್ರಕಾಶಿಸಿದ್ದಾರೆ. ವೀರಭದ್ರನ ಅನುಯಾಯಿಗಳು ಆತನ ಅನಂತರವೂ ಆತನ ಆ ಪ್ರಚಂಡ ಕ್ರಾಂತಿಯನ್ನು ಮುಂದುವರಿಸಿದರು. ಆತನ ಆ ಕಾರ್ಯನಿರ್ವಹಣೆಯಲ್ಲಿ ಕಂಕಣಬದ್ಧರಾದರು. ನಿರ್ವಹಣೆಯ ಪಥದಲ್ಲಿ ಅವರ ಪ್ರಾಣಗಳು ತೃಣಪ್ರಾಯವಾದವು. ಹರಣಗಳಿಗಾಗಿ ಹಿಂಜರಿಯದೆ ಲೋಭಿಸದೆ ಕರ್ತವ್ಯಪರರಾದರು. ಆ ಮೂಲ ಪುರುಷನಾದ ವೀರಭದ್ರನ ಸತ್ಯಸಂಕಲ್ಪವನ್ನು ನೆರವೇರಿಸಲು ಪೂರ್ಣ ಪರಿಶ್ರಮಿಸಿದರು. ಎದುರಾಳಿಗಳ ಅಪಪ್ರಚಾರಕ್ಕೆ ಜಂಕದಾದರು, ದುರ್ನಾಮಗಳಿಂದ ಕರೆದರೂ ದೂರಿದರೂ ಲೆಕ್ಕಿಸದಾದರು. ರಕ್ಕಸರೆಂದು ಬೈದರೂ ಬಿಡದಾದರು. ಆ ವೀರಭದ್ರನ ವಿಶೇಷಾನುಗ್ರಹದಿಂದ ಅವರುಗಳಲ್ಲಿ ಅಪ್ರತಿಮ ಪರಾಕ್ರಮ ಪ್ರಾದುರ್ಭವಿಸುತ್ತಿತ್ತು.

ವೀರಭದ್ರನ ಯಜ್ಞವಿರೋಧ ತತ್ತ್ವವು ಅನೇಕರಿಗೆ ಅತ್ಯಂತ ತೃಪ್ತಿಯನ್ನು ತಂದಿತು. ಯಜ್ಞನಿರೋಧವೆ ವಿಶ್ವಶಾಂತಿಯ ತಳಹದಿಯೆಂದು ಕಂಡುಕೊಂಡರು. ಯಜ್ಞಯಾಗಗಳಿಂದ ಪಡಿ ಪದಾರ್ಥಗಳು ನಷ್ಟವಾಗುತ್ತವೆಯೆಂದು ನಿರ್ಧರಿಸಿಕೊಂಡರು. ಕುಡಿತ ಕೊಲೆ ಕಳವುಗಳು ಹೆಚ್ಚುತ್ತವೆಯೆಂದು ತಿಳಿದುಕೊಂಡರು. ಜೀವಕೋಟಿಗೆ ಲೇಸ ಬಯಸುವ ಸತ್ಕಾರ್ಯಗಳು ಯಜ್ಞ ಯಾಗಾದಿಗಳಲ್ಲ; ಪ್ರತಿಯಾಗಿ ಕರ್ಮ ಕೋಟಲೆಗಳನ್ನು ಹೆಚ್ಚಿಸುವ ಜಾಡ್ಯಗಳೆಂದು ಅರಿತುಕೊಂಡರು. ಶಾಂತಿಗೆ ಭಂಗಕಾರಿಗಳೆಂದು ಭಾವಿಸಿದರು. ದೇವರಾಧನೆಗೆ ಬದಲು ದ್ವೇಷಾರಾಧನೆಯು ಇವುಗಳಿಂದ ನಡೆಯುತ್ತಿದೆ ಯೆಂಬುದು ನಿರ್ದಿಷ್ಟವಾಯಿತು. ಸಮಾಜವಾದಕ್ಕಿಂತ ಸ್ವಾರ್ಥವೆ ಇವುಗಳ ಗುರಿಯಾಗಿ ನಿಂತುದು ನಿದರ್ಶನಕ್ಕೆ ಬಂದಿತು. ಧರ್ಮವು ಕರ್ಮದಲ್ಲಿ ಪರ್ಯವಸಾನಗೊಳ್ಳುವಿಕೆ ಕಣ್ಣು ಮುಂದೆ ಕಟ್ಟಿದಂತಾಯಿತು.

ಈ ದಿಸೆಯಲ್ಲಿ ವೀರಭದ್ರನ ಕ್ರಾಂತಿಯು ಹೆಚ್ಚು ಜನರ ಹೃದಯಗಳನ್ನು ಆಕರ್ಷಿಸಿತು; ಏಕೀಕರಿಸಿತು. ಸತ್ಯವೂ ಶಿವವೂ ಆದ ವಿಚಾರದತ್ತ ಆಚಾರದತ್ತ ಆಸಕ್ತಿ ಅಧಿಕವಾಯಿತು. ಅಂತಃಪ್ರಜ್ಞೆ ಪ್ರಬುದ್ಧವಾಯಿತು. ಅಂತಃಶಕ್ತಿ ಆವಿರ್ಭವಿಸಿತು. ಮಾನವ ಕುಲಕ್ಕೆ ಇನ್ನೂ ಹೆಚ್ಚಿನ ಕಷ್ಟ ನಷ್ಟಗಳನ್ನು ತಂದೊಡ್ಡಬಲ್ಲ ಯಜ್ಞ ಯಾಗಾದಿ ಕರ್ಮಗಳನ್ನು ಕಡೆಗಾಣಿಸಲು ವೀರೇಶನ ವರ್ಗಕ್ಕೆ ಸೇರಬೇಕೆಂಬ ವಿವೇಕವುಂಟಾಯಿತು. ನಿರೋಧ ಕಾರ್ಯ ರೂಪ ಕ್ರಾಂತಿಯನ್ನು ನಡೆಯಿಸಬೇಕೆಂದು ನೀತಿ ನ್ಯಾಯಗಳಿಂದ ಯಜ್ಞಗಳನ್ನು ಹೃದಯ ವಿನಯಗಳಿಲ್ಲದ ಯಾಗಗಳನ್ನು ನಿಗ್ರಹಿಸಬೇಕೆಂದು ಇದುವೆ ಮಾನವೀಯ ಧ್ಯೇಯವೆಂದು ತೋರಿ ಬಂದಿತು. ದಕ್ಷ ಬ್ರಹ್ಮನ ಯಜ್ಞ ಘಟನೆ ಧರ್ಮಿಗಳ ಧೀರರ ದೃಷ್ಟಿಗಳನ್ನು ತೆರೆಯಿಸಿತು. ಇದನ್ನು ವಿರೋಧಿಸಿ ನಿರೋಧಿಸಿದ ವೀರಭದ್ರನು ವಿಶ್ವಾದರ್ಶ ವಿಭೂತಿಯಾಗಿ ವಿಭಾಸಿಸಿದನು. ಯಜ್ಞವಿರೋಧ ಕ್ರಾಂತಿಯ ಪ್ರಧಾನ ಚಾಲಕ ಶಕ್ತಿಯಾದನು; ಪ್ರಥಮ ವ್ಯಕ್ತಿಯಾಗಿ ಪ್ರಕಾಶಿಸಿದನು. ಇದರಿಂದಾಗಿ ಆತನ ಅನುಯಾಯಿಗಳು ಅವನ ಕಾಲದಲ್ಲಿ ಮತ್ತು ಅವನ ಅನಂತರ ಕಾಲದಲ್ಲಿ ತಯಾರಾದರು. ವೀರ ಗಣತಂತ್ರವು ಏರ್ಪಟ್ಟಿತು. ವೀರಗಣ ರುದ್ರಗಣರ ಒಕ್ಕೂಟವಾಯಿತು. ವಿಶ್ವ ಕಲ್ಯಾಣಕ್ಕಾಗಿ ಯಜ್ಞ ನಿರೋಧ ಚಳವಳಿಯಲ್ಲಿ ಧುಮ್ಮಿಕ್ಕಿದರು. ತಂತಮ್ಮ ಪ್ರಾಣ ಪ್ರೇಮವನ್ನು ತ್ಯಾಗ ಮಾಡಿದರು. ಎದುರಾಳಿಗಳ ದುಷ್ಪ್ರಚಾರಕ್ಕೆ ವಿರೂಪಾಕಾರ ರಚನೆಗೆ ಈಡಾದರು. ಶಕ್ತಿ ಸಾಹಸ ಅವರದಾಯಿತು; ಯುಕ್ತಿ ಸಾಧನೆ ಯಾಜ್ಞಕರದಾಯಿತು. ಮಣಿಹಗಳ ಮೂಲಕ ಅವರು ತಮ್ಮ ಕಾರ್ಯಗಳನ್ನು ಸಾಧಿಸಿದರು; ಬರೆಹಗಳ ಮೂಲಕ ಯಾಜ್ಞಿಕರು ಅವರನ್ನು ತೆಗಳಿ ತಮ್ಮವರನ್ನು ಹೊಗಳಿ ತಮ್ಮ ಕಾರ್ಯ ಸಾಧನೆಯನ್ನು ಮಾಡಿದರು.

ರಾವಣಾದಿಗಳು ವೀರಭದ್ರನ ಪಂಥವನ್ನು ಹಿಡಿದರು. ಯಜ್ಞ ವಿರೋಧ ಕ್ರಾಂತಿಯನ್ನು ಸಾಧಿಸಿದರು. ಹೀಗೆ ಸಾಧಿಸಿದವರೆಲ್ಲರನ್ನೂ ಅಸುರರೆಂದು ರಾಕ್ಷಸರೆಂದು ಕರೆದರು. ರಾವಣನು ನಿಜವಾಗಿ ಪೌಲಸ್ತ್ಯಬ್ರಹ್ಮನು ದಕ್ಷಬ್ರಹ್ಮನ ವಂಶದವನು. ಯಜ್ಞ ಯಾಗಗಳನ್ನು ಮಾಡದವರನ್ನು ಮತ್ತು ವಿರೋಧಿಸಿದವರನ್ನು ಆರ್ಯರು ಅಸುರ ವರ್ಗಕ್ಕೆ ಸೇರಿಸಿದರು. ವಿಕಾರ ರೂಪಗಳಿಂದ ವರ್ಣಿಸಿದರು. ಸತ್ಯವನು ಅಸತ್ಯವನ್ನಾಗಿಸಿದರು; ಅಸತ್ಯವನ್ನು ಸತ್ಯವನ್ನಾಗಿಸಿದರು.

ರಾವಣಾದಿಗಳು ರಾಕ್ಷಸರಲ್ಲ; ಮಾಹೇಶ್ವರರು. ಶಿವೋಪಾಸಕರು. ಶಿವನಿಂದ ಆತ್ಮಲಿಂಗವನ್ನು ಪಡೆದವರು. ಲಿಂಗಧಾರಿಗಳು.

"ಅಜೋಹರಿಸ್ಸಹಸ್ರಾಕ್ಷೋ ರಾಮೋ ಬಾಣಾಸುರಸ್ತಥಾ ।
ರಾವಣೋ ಭೀಮಸೇನಶ್ಚ ಸಪ್ತ ಮಾಹೇಶ್ವರಾ ಸ್ಮೃತಾಃ ॥"

– ಸ್ಕಾಂದ ಪುರಾಣ

ಹರಿರ್ಮಯೋ ಗುಹಶ್ಚೈವ ರಾಮೋ ಬಾಣಾಸುರಸ್ತಥಾ ।
ರಾವಣೋಭೀಮಸೇನಶ್ಚ ಸಪ್ತ ಮಾಹೇಶ್ವರಾ ಸ್ಮೃತಾಃ ॥"

– ಭಾರತದ ಆದಿ ಪರ್ವ

ಈ ಎರಡು ಪ್ರಮಾಣಗಳಲ್ಲಿ ಎರಡು ಹೆಸರು ಮಾತ್ರ ಬೇರೆಯಾಗಿವೆ. ಅಜ, ಸಹಸ್ರಾಕ್ಷರ ಬದಲಾಗಿ ಮಯ, ಗುಹರ ನಾಮ ನಿರ್ದೇಶ ಭಾರತದಲ್ಲಿದೆ.

ವಚನೋಪನಿಷತ್ ಗ್ರಂಥದ ೨೫೨ನೆಯ ಪುಟದಲ್ಲಿ ಶ್ರೀ ಟಿ.ಎನ್. ಮಲ್ಲಪ್ಪನವರು "ಉಗ್ರ ಪಂಥದ ಲಿಂಗಧಾರೀ ಅಸುರ ವಿರೋಧಿಗಳು" ಎಂಬ ತಲೆಬರೆಹದ ಕೆಳಗೆ ಹೀಗೆ ವಿವರಿಸಿದ್ದಾರೆ:

ಛಾಂದೋಗ್ಯ ಉಪನಿಷತ್ತಿನಲ್ಲಿ "ಅಯಜಮಾನ ಮಾಹುರಾಸುರಃ" ಎಂದರೆ ಯಜ್ಞ ಮಾಡದಿರುವವನನ್ನು ಅಸುರನು ಎನ್ನುತ್ತಾರೆ –ಎಂದು ಹೇಳಿದೆ. ....ಸುರರು ಅದಿತಿಯ ಮಕ್ಕಳು; ಅಸುರರು ಅವಳ ಸಹೋದರಿ ದಿತಿಯ ಮಕ್ಕಳು. ರಾವಣಾಸುರನು ಪೌಲಸ್ತ್ಯ ಬ್ರಹ್ಮನ ವಂಶದವನು. ಅವನು ಹೋದ ಕಡೆಯಲ್ಲೆಲ್ಲ ಲಿಂಗವನ್ನು ಬಯ್ಯುತ್ತಿದ್ದನೆಂದು ರಾಮಾಯಣದಲ್ಲಿ ಹೇಳಿದೆ:

ಪುರತ್ರಯಾವಾಸಾ ದೈತೇಯಾ ಲಿಂಗಧಾರಕಾಃ ।
ಅಜಿತಾ ಶಂಭುನಾ ಪೂರ್ವಂ ಮುಕ್ತಲಿಂಗ ವಿದೂಷಿತಾಃ ॥

ಪದ್ಮ ಪುರಾಣದ ಪಾತಾಳ ಖಂಡದ ೧೩೪ನೆಯ ಶ್ಲೋಕದಲ್ಲಿ "ಧಾರಯಂತಿ ತಥಾ ಲಿಂಗಂ ರಾಕ್ಷಸಾಃ ಕೇಚಿದುತ್ತಮಾಃ ।" ಎಂದು ಹೇಳಿರುವುದು. ರಾಕ್ಷಸರು ಲಿಂಗಧಾರಿಗಳಿದ್ದರೆಂಬುದನ್ನು ಸಮರ್ಥಿಸುತ್ತದೆ. ರಾಕ್ಷಸರು ಯಜ್ಞ ಧ್ವಂಸಿಗಳೆಂದು ರಾಮಾಯಣ ಮೊದಲಾದ ಗ್ರಂಥಗಳಿಂದ ತಿಳಿದು ಬರುವುದು...."

ಮತ್ತೊಂದೆಡೆಯಲ್ಲಿ ಅವರು ಹೀಗೆ ಹೇಳಿದ್ದಾರೆ:

"ನಗರಗಳಲ್ಲಿ ವಾಸ ಮಾಡುತ್ತ ಉತ್ತಮ ನಾಗರಿಕತೆಯಿಂದ ಕೂಡಿದ ಮೊಹೆಂಜೊದಾರೋ–ಹರಪ್ಪ ಜನರ ಪ್ರಶಾಂತ ಜೀವನ ಸಾಗರವನ್ನು ಕದಡಿದುದು–ಪಶುಪಾಲನೆಗಾಗಿ ದೇಶ ದೇಶಗಳಲ್ಲಿ ಅಲೆಯುತ್ತಿದ್ದ ಬಲಿಷ್ಠ ಜನಾಂಗವಾದ ಆರ್ಯರ ಆಕ್ರಮಣವೆಂಬ ಚಂಡಮಾರುತ. ಇದರಿಂದ ಮೊದಲೇನೋ ವಿದ್ವೇಷ ವಿಷವು ಹುಟ್ಟಿತು. ಎದುರಾಳಿಗಳ ಎದೆಯ ಮೇಲಿದ್ದ ಲಿಂಗವನ್ನು ನೋಡಿ ಆರ್ಯರು, ಅವರನ್ನು 'ಕಲ್ಲು ಕಟ್ಟಿದವರು' ಎನ್ನುವುದಕ್ಕಿಂತ ಮುಂದೆ ಹೋಗಿ 'ಶಿಶ್ನದೇವಾಃ' ಎಂದು ಕರೆದರು. ಆದರೆ ಈ ವಿದ್ವೇಷ ಬಹುಕಾಲ ನಿಲ್ಲಲಿಲ್ಲ. ಆರ್ಯ ದ್ರಾವಿಡ ಸಂಸ್ಕೃತಿಯ ಮಿಲನವಾಗಿ ಹಾಲು–ಜೇನು ಸೇರಿದಂತೆ ಸುಸ್ವಾದಾಮೃತವು ಹುಟ್ಟಿತು. ಹೀಗಾಗಲು ಮೊದಲನೆಯ ಕಾರಣ, ಆರ್ಯರಲ್ಲಿದ್ದ ಗುಣಗ್ರಹಣ ಗುಣ; ಎರಡನೆಯ ಕಾರಣ, ಆರ್ಯರಲ್ಲಿಯೇ ಒಂದು ಪಂಗಡದ ಜನರು ಯಜ್ಞ ಯಾಗಾದಿಗಳಲ್ಲಿ ಆಗುತ್ತಿದ್ದ, ನಿರ್ದಯ ನೀತಿರಹಿತ ಕ್ರಿಯೆಗಳಿಂದ ಬೇಸರಪಟ್ಟವರಾಗಿ ಮೊಹೆಂಜೋದಾರೋ ಜನರಾದ ದ್ರಾವಿಡರನ್ನು ಸೇರಿಕೊಂಡುದು."

ಸೌಮ್ಯ ಪಂಥದ ವ್ರಾತ್ಯ ವಿರೋಧಿಗಳು.

ಯಜ್ಞ ಧ್ವಂಸ ಕಾರ್ಯವನ್ನು ಮಾಡುವ ಅಸುರರಂತೆ ಉಗ್ರ ಪಕ್ಷದವರಾಗಿರದೆ ಯಜ್ಞ ಕಾರ್ಯವನ್ನು ಮಾಡಲೊಪ್ಪದ ಸೌಮ್ಯ ಪಕ್ಷದವರಾದ ಆರ್ಯರು ಯಜ್ಞವನ್ನು ಮಾಡಲು ಅಧಿಕಾರವನ್ನು ಕೊಡುವ ಯಜ್ಞೋಪವೀತವನ್ನು ಧರಿಸಲು ಬಸವೇಶ್ವರನಂತೆ ನಿರಾಕರಿಸಿದರು. ಇವರೇ ವ್ರಾತ್ಯರು. ಮನುಸ್ಮೃತಿಯಲ್ಲಿ 'ಸಾವಿತ್ರೀ ಪತಿತಾವ್ರಾತ್ಯಾಭವಂತ್ಯಾರ್ಯ ವಿಗರ್ಹಿತಾಃ' ಎಂದು ಹೇಳಿರುವುದು ಇದನ್ನು ಸಮರ್ಥಿಸುತ್ತದೆ. ಈ ವ್ರಾತ್ಯರು ಪ್ರಬಲಿಸಿ, ಅಥರ್ವಣ ವೇದದ ಕಾಲಕ್ಕೆ ರಾಜ ಪೂಜಿತರಾದರು. ಜ್ಞಾನಿಯಾದ ವ್ರಾತ್ಯನು ರಾಜನ ಮನೆಗೆ ಅತಿಥಿಯಾಗಿ ಬಂದರೆ, ಆತನನ್ನು ರಾಜನು ತನಗಿಂತ ದೊಡ್ಡವನಂತೆ ಗೌರವಿಸಬೇಕೆಂದೂ, ಗೃಹಸ್ಥನು ಅತಿಥಿಯಾಗಿ ಬಂದ ವ್ರಾತ್ಯನ ಅಪ್ಪಣೆಯಿಲ್ಲದೆ ಯಜ್ಞವನ್ನು ಮಾಡಬಾರದೆಂದೂ ಅಥರ್ವಣ ವೇದದಲ್ಲಿ ಹೇಳಿದೆ."

ಈ ವಿವರಣೆಯಿಂದ ದೈತ್ಯರು (ಅಂದರೆ ದಿತಿಯ ಮಕ್ಕಳು) ವ್ರಾತ್ಯರು (ಯಜ್ಞ–ಯಜ್ಞೋಪವೀತಗಳನ್ನು ಬಿಟ್ಟವರು) ಎಲ್ಲರೂ ವೀರಭದ್ರನ ಅನುಯಾಯಿಗಳು; ಅಧ್ವರ ವಿದ್ವೇಷಿಗಳು. ವೀರಶೈವರು. ಇವರೆಲ್ಲರೂ ಧೀರೋದಾತ್ತರು ಧೀರೋದ್ಧತರು ಆಗಿದ್ದರು.

ಶ್ರೀ ವೀರಭದ್ರನ ಆ ಶಕ್ತಿಯು ಅಂದಿನಿಂದ ಇಂದಿನವರೆಗೂ ಜಗತ್ತಿನಲ್ಲಿ ಹರಿದು ಬಂದಿದೆ; ವೀರಗಣರ ರೂಪದಲ್ಲಿ ವೀರಕ್ರಾಂತಿಯನ್ನು ಮುಂದುವರಿಸಿದೆ.

ಈಗಲೂ ಯಜ್ಞಗಳನ್ನು ಒಪ್ಪದ ಯಜ್ಞೋಪವೀತಗಳನ್ನು ಧರಿಸದ ವ್ರಾತ್ಯರಿರುವರು. ವೀರ ಹಲಗೆಯವರು ಇರುವರು. ಇವರು ವೀರಭದ್ರಸ್ವಾಮಿಯ ಮೂರ್ತಿಯಿರುವ ಹಲಗೆಯನ್ನು ಧರಿಸುವರು. ಇವರನ್ನು ವೀರಗಣರೆಂದು ರುದ್ರಗಣರೆಂದು ಹೇಳುವುದುಂಟು. ಅಲ್ಲದೆ ಪುರವಂತಿಗೆಯವರು ಅಂದರೆ ವೀರಭದ್ರನ ವಡಬುಗಳನ್ನು ಉಗ್ಗಡಿಸುವವರು ಇರುವರು. ಇವರ ಮೈಯಲ್ಲಿ ವೀರಾವೇಶ ಬಂದಾಗ ತಲೆಯ ಮೇಲೆ ತೆಂಗಿನಕಾಯಿಗಳನ್ನು ಒಡೆಯುವರು. ಇವರು ಖಡ್ಗಧಾರಿಗಳಾಗಿ ಶುಚಿರ್ಭೂತರಾಗಿ ವೀರಭದ್ರನ ವೀರಕಥನಗಳನ್ನು ಹೇಳುವರು. ವಡಬುಗಳನ್ನು ಹೇಳುವುದೇ ಒಂದು ವಿಶಿಷ್ಟವಾದ ಕಲೆ.

ಕಾಶಿ ಕಟ್ಟುವವರು ವೀರಮುಖದವರು ಇರುತ್ತಾರೆ. ಇವರು ಧೀರ ಶಾಂತರಾಗಿರುತ್ತಾರೆ. ಇವರೆಲ್ಲರೂ ವೀರಭದ್ರನ ವೀರತೆಯನ್ನು ಒಂದಿಲ್ಲ ಒಂದು ಬಗೆಯಲ್ಲಿ ಬಿತ್ತರಿಸುವವರು.

ವೀರಶೈವರಲ್ಲಿ ಮದುವೆಗೆ ಮೊದಲು 'ಗುಗ್ಗಳ ಸೇವೆ'ಯನ್ನು ಮಾಡುತ್ತಾರೆ. ಇದು ವೀರಭದ್ರನ ದಕ್ಷ ಯಜ್ಞದಲ್ಲಿನ ರೀತಿಯ ಕುರುಹು; ಯಾಗಧ್ವಂಸ ಪ್ರತೀಕ. ಶಿವಾರಾಧನ ಸಂಕೇತವೂ ಆಗಿದೆ. ವೀರಗಣರಿಲ್ಲದೆ ಈ ಕಾರ್ಯ ಕೊನೆಸಾಗದು. ಸಶ್ತ್ರಧಾರಿಗಳಾಗಿ ವೀರಗಣರು ವೀರವಾಣಿಗಳೊಡನೆ ಧೀರೋದ್ಧತರಾಗಿ ಆರ್ಭಟಿಸುತ್ತಾರೆ. ವೀರೇಶನ ಪ್ರತಾಪಗಳನ್ನು ಸಾಟುತ್ತಾರೆ. ವೀರ ಲೀಲೆಯಲ್ಲಿ ಸುಳಿಯುತ್ತಾರೆ. ವೀರ ನಾಟ್ಯವನ್ನು ಮಾಡುತ್ತಾರೆ. ವೀರಾವೇಶದಿಂದ ತುಂಬುತ್ತಾರೆ. ವೀರರಸಭರಿತರಾಗುತ್ತಾರೆ. ಕೆನ್ನೆ ಕತ್ತುಗಳಲ್ಲಿ ಶಸ್ತ್ರಗಳನ್ನು ಧರಿಸಿ (ಇರಿದು) ಅದ್ಭುತ ರೌದ್ರ ರಸವನ್ನು ಬೀರುತ್ತಾರೆ. ಮುತ್ತೈದೆಯರಿಗೂ ಅಸ್ತ್ರಗಳನ್ನು ಕೆನ್ನೆಗಳಲ್ಲಿ ಚುಚ್ಚುತ್ತಾರೆ. ವೀರ ಮಾತೆಯರನ್ನಾಗಿಸುತ್ತಾರೆ. ಆಗಿನ ಆ ಶಸ್ತ್ರಧಾರಣದಿಂದ ಯಾರಿಗೂ ಯಾವ ಬಗೆಯ ಅಪಾಯವಾಗುವುದಿಲ್ಲ. ವೀರಭದ್ರನ ನೆನಹಿನ ಬಲವದು; ವೀರಭದ್ರನ ಕೃಪೆಯದು.

ಗುಗ್ಗಳ ಸೇವೆಯಲ್ಲಿ ಹೆಚ್ಚಾಗಿ ಹೆಣ್ಣುಮಕ್ಕಳು ಭಾಗವಹಿಸುತ್ತಾರೆ. ಮಡಿಕೆಗಳಲ್ಲಿ ಅಗ್ನಿಯನ್ನು ಪುಟಮಾಡಿ ನೆತ್ತಿಯಲ್ಲಿ ಹೊತ್ತಿರುತ್ತಾರೆ. ಹಲವರು ಆರತಿಗಳನ್ನು ಹಸ್ತಗಳಲ್ಲಿ ಹಿಡಿದಿರುತ್ತಾರೆ. ಇವೆಲ್ಲವೂ ವೀರಭದ್ರನ –ಭದ್ರಕಾಳಿಯ ವೀರ ತೇಜಸ್ಸಿನ ಕುರುಹುಗಳಾಗಿ ಬೆಳಗುತ್ತಿರುತ್ತವೆ. ವೀರಭದ್ರನ ಜ್ಯೋತಿರ್ಮಯತೆಯನ್ನು ಸೂಚಿಸುತ್ತಿರುತ್ತವೆ. ವೀರಭದ್ರನು ವೀರತೇಜಸ್ವಿಯಾಗಿ ಬೆಳಗಿದವನು. ಜ್ಯೋತಿರ್ಮಂಡಲವನ್ನು ಜಯಿಸಿದ ವೀರ. ವೀರ ತೇಜಸ್ಸಿನಲ್ಲಿಯೇ ಭದ್ರತೆಯನ್ನು ತುಂಬಿ ತೋರಿದ ವಿಲಕ್ಷಣ ವೀರ. ವೀರತನದಷ್ಟೇ ವಿನಮ್ರತೆಯಿಂದ ಬಾಳಿ ಬದುಕಿದ ಜೀವ. ಆತನು ಜಗತ್ತಿಗೆ ಒಂದು ಹೊಸ ಬೆಳಕನ್ನು ಅನುಗ್ರಹಿಸಿದ. ತಾನು ಬೆಳಕೇ ಆಗಿ ಬೆಳಗಿದ. ಚಿರಂತನವಾಗಿ ಮಹಂತನಾಗಿ ಬದುಕಿದ ತನ್ನ ವೀರ ಪ್ರವಾಹವನ್ನು ಅನೇಕ ವ್ಯಕ್ತಿಗಳಲ್ಲಿ ಇಂದಿಗೂ ಹರಿಸುತ್ತಿದ್ದಾನೆ; ಮುಂದಕ್ಕೂ ಹರಿಸುತ್ತಾನೆ. ರುದ್ರನನ್ನು ಬಿಟ್ಟರೆ ವೀರಕ್ರಾಂತಿಗೆ ಆತನೇ ಆದಿ ಪುರುಷ. ಭದ್ರತೆಯನ್ನು ತಂದ ಮಹಾಪುರುಷ. ವೀರತೆ ಮತ್ತು ಭದ್ರತೆಗಳಿಲ್ಲದವನು ಮಾನವನಲ್ಲ, ದೇವ ಮೊದಲೇ ಅಲ್ಲ ಎಂದು ತನ್ನ ನಡೆಯಿಂದ ಸಾರಿದ. ಇವೆರಡಿಲ್ಲದವನು ಜಡ ಜೀವಿ; ಜಗಕ್ಕೆ ಭಾರವಾದ ಜಂತು. ಪರಾವಲಂಬಿ. ಪರೋಪ ಜೀವಿ.

ವೀರಭದ್ರನ ಹೆಸರು ಗೂಢವಾಗಿ ನಿಲ್ಲಲಿಲ್ಲ. ಗ್ರಂಥಗಳೆಂಬ ಗುಹೆಗಳಲ್ಲಿ ಮರೆಯಾಗಿಲ್ಲ. ಎಲ್ಲರ ವೀರವಾಣಿಗಳಲ್ಲಿ ನೆಲಸಿದ. ಧೀರಶಾಂತರ ಹೃದಯಗಳಲ್ಲಿ ನೆಲಸಿದ. ಮೊತ್ತ ಮೊದಲು ದೇಶ ದೇಶಗಳಲ್ಲಿ ದೇವ ಮಂದಿರಗಳನ್ನು ರಚಿಸಿಕೊಂಡು ಅವುಗಳಲ್ಲಿ ಮೂರ್ತಿವಂತನಾಗಿ ನೆಲಸಿದ. ಆತನ ಹೆಸರನ್ನು ಹೇಳಿದರೆ ಸಾಕು ಹೇಳುವವರಿಗೆ ಎಲ್ಲಿಲ್ಲದ ವೀರತನ ಬಂದು ಮೈದುಂಬುತ್ತದೆ. ಎದುರಾಳಿಗಳು ಹತವೀರ್ಯರಾಗುತ್ತಾರೆ. ಆತನು ವಿರೋಧಿಗಳಿಗೆ ವೀರ; ಭಾವುಕರಿಗೆ ಭದ್ರ. ಆರಾಧಕರಿಗೆ ಆರಾಧ್ಯ.

"ವೀರಶೈವ ಉಗಮ ಮತ್ತು ಪ್ರಗತಿ" ಗ್ರಂಥದಲ್ಲಿ ಶ್ರೀ ಟಿ.ಎನ್. ಮಲ್ಲಪ್ಪನವರು ಹೀಗೆ ಹೇಳಿದ್ದಾರೆ:

"ಆಂಧ್ರದೇಶದ ೧೩ನೆಯ ಶತಮಾನದ ಶಾಸನವೊಂದರಲ್ಲಿ ಚೋಳ ದೇಶದಿಂದ ಬಂದ ಜಟಾಧಾರಿಗಳಾದ, ಹತ್ತುಜನ "ವೀರಭದ್ರ"ರೆಂಬ ಗ್ರಾಮ ರಕ್ಷಕರು ಗ್ರಾಮ ರಕ್ಷಣೆಗಾಗಿ ಪ್ರಾಣವನ್ನು ಕೊಡಲು ಸಿದ್ಧರಾಗಿದ್ದರೆಂದೂ, ಅದಕ್ಕಾಗಿ ತಲೆಯನ್ನು ಕಡಿದುಕೊಳ್ಳುವುದಕ್ಕೂ ಹೊಟ್ಟೆಯನ್ನು ಬಗೆದುಕೊಳ್ಳುವುದಕ್ಕೂ ಹಿಂಜರಿಯುತ್ತಿರಲಿಲ್ಲವೆಂದೂ ಹೇಳಿದೆ. ಇದು ಒಂದು ತರದ ಸತ್ಯಾಗ್ರಹವೆನ್ನಬಹುದು. ಧರ್ಮಪರಿಪಾಲನೆಗಾಗಿ ಪ್ರಾಣ ಬಿಡಲು ಸಿದ್ಧರಾದವರನ್ನು "ವೀರಭದ್ರ"ರೆಂದು ಕರೆಯುವ ಸಂಪ್ರದಾಯವು ವೀರಭದ್ರನ ವೀರಪ್ರವಾಹಕ್ಕೆ ಈ ಮಾತುಗಳೂ ಪೋಷಕವಾಗಿವೆ.

ಶ್ರೀ ವೀರಭದ್ರಾಷ್ಟೋತ್ತರ ಶತನಾಮಾವಳಿ

ಓಂ ಶ್ರೀ ವೀರಭದ್ರಾಯನಮಃ
ಓಂ ಮಹಾಶೂರಾಯನಮಃ
ಓಂ ರೌದ್ರಾಯನಮಃ
ಓಂ ರುದ್ರಾವತಾರಾಯನಮಃ
ಓಂ ಶ್ಯಾಮಾಂಗಾಯನಮಃ
ಓಂ ಉಗ್ರದಂಷ್ಟ್ರಾಯನಮಃ
ಓಂ ಭೀಮನೇತ್ರಾಯನಮಃ
ಓಂ ಜಿತೇಂದ್ರಿಯಾಯನಮಃ
ಓಂ ಊರ್ಧ್ವಕೇಶಾಯನಮಃ
ಓಂ ಭೂತನಾಥಾಯನಮಃ
ಓಂ ಖಡ್ಗಹಸ್ತಾಯನಮಃ
ಓಂ ತ್ರಿವಿಕ್ರಮಾಯನಮಃ
ಓಂ ವಿಶ್ವವ್ಯಾಪಿನೇನಮಃ
ಓಂ ವಿಷ್ಣು ನಾಥಾಯನಮಃ
ಓಂ ವಿಷ್ಣು ಚಕ್ರವಿಭಂಜನಾಯನಮಃ
ಓಂ ಭದ್ರಕಾಳೀ ಪತಯೇ ನಮಃ
ಓಂ ಭದ್ರಾಯನಮಃ
ಓಂ ಭದ್ರಾಕ್ಷಾಭರಣಾನ್ವಿತಾಯನಮಃ
ಓಂ ಭಾನುದಂತಿಭಿದೇನಮಃ

ಓಂ ಉಗ್ರಾಯನಮಃ
ಓಂ ಭಗವತೇನಮಃ
ಓಂ ಭಾವಗೋಚರಾಯನಮಃ
ಓಂ ಚಂಡಮೂರ್ತಯೇನಮಃ
ಓಂ ಚತುರ್ಬಾಹುಚತುರಾಯನಮಃ
ಓಂ ಚಂದ್ರಶೇಖರಾಯನಮಃ
ಓಂ ಸತ್ಯಪ್ರತಿಜ್ಞಾಯನಮಃ
ಓಂ ಸರ್ವಾತ್ಮನೇನಮಃ
ಓಂ ಸರ್ವಸಾಕ್ಷಿಣೇನಮಃ
ಓಂ ನಿರಾಮಯಾಯನಮಃ
ಓಂ ನಿತ್ಯಾಯನಮಃ
ಓಂ ನಿರ್ಧೂತ ಪಾಪೌಘಾಯನಮಃ
ಓಂ ನಿರ್ವಿಕಲ್ಪಾಯನಮಃ
ಓಂ ನಿರಂಜನಾಯನಮಃ
ಓಂ ಭಾರತೀನಾಸಿಕಾಚ್ಛೇದಾಯ ನಮಃ
ಓಂ ಭವರೋಗ ಮಹಾಭಿಷಜೇನಮಃ
ಓಂ ಭಕ್ತೈಕ ರಕ್ಷಾಯನಮಃ
ಓಂ ಬಲವತೇನಮಃ
ಓಂ ಭಸ್ಮೋದ್ಧೂಲಿತವಿಗ್ರಹಾಯ ನಮಃ

ಓಂ ದಕ್ಷಾರಯೇನಮಃ
ಓಂ ಧರ್ಮಮೂರ್ತಯೇನಮಃ
ಓಂ ದೈತ್ಯ ಸಂಘ ಭಯಂಕರಾಯನಮಃ
ಓಂ ಪಾತ್ರಹಸ್ತಾಯನಮಃ
ಓಂ ಪಾವಕಾಕ್ಷಾಯನಮಃ
ಓಂ ಪದ್ಮಾಕ್ಷಾದಿ ನಮಸ್ಕೃತಾಯನಮಃ
ಓಂ ಮುಖಾಂತಕಾಯನಮಃ
ಓಂ ಮಹಾಭಯನಿವಾರಣಾಯನಮಃ
ಓಂ ಮಹಾವೀರಗಣಾಧ್ಯಕ್ಷಾಯನಮಃ
ಓಂ ಮಹಾಘೋರನೃಸಿಂಹಜಿತೇನಮಃ
ಓಂ ನಿಶ್ವಾಸ ಮಾರುತೋದ್ಧೂತ ಕುಲಪರ್ವತ ಸಂಚಯಾಯನಮಃ
ಓಂ ದಂತ ನಿಷ್ಪೇಶಣಾರಾವಮುಖರೀ ಕೃತದಿಕ್ತಟಾಯನಮಃ
ಓಂ ಪಾವಸಂಘಟ್ಟನೋದ್ಭ್ರಾಂತಶೇಷ ಶೀರ್ಷ ಸಹಸ್ರಕಾಯನಮಃ
ಓಂ ಭಾನುಕೋಟಿ ಪ್ರಭಾ ಭಾಸ್ವನ್ಮಣಿ ಕುಂಡಲ ಮಂಡಿತಾಯನಮಃ
ಓಂ ಶೇಷಭೂಷಿತಾಯನಮಃ
ಓಂ ಚರ್ಮ ವಾಸಸೇನಮಃ
ಓಂ ಚಾರುಹಸ್ತಾಯ ಜ್ವಲತ್ತನವೇ ನಮಃ
ಓಂ ಉಪೇಂದ್ರೇಂದ್ರಯಮಾದೀನಾಂ ದೇವಾನಾಮಂಗತಕ್ಷಕಾಯನಮಃ
ಓಂ ಪಟ್ಟ ಸಪ್ರಾಸ ಪರಶುಗಧಾ ದ್ಯಾಯುಧ ಶೋಭಿತಾಯನಮಃ
ಓಂ ಬ್ರಹ್ಮಾದಿದೇವದುಷ್ಪ್ರೇಕ್ಷ್ಯಪ್ರಭಾ ಶುಂಭತ್ಕಿರೀಟ ಧೃತೇನಮಃ
ಓಂ ಕೂಷ್ಮಾಂಡಗ್ರಹ ಭೇತಾಳಮಾರೀ ಗಣವಿಭಂಜನಾಯನಮಃ
ಓಂ ಕ್ರೀಡಾಕಂದುಕಿತಾಜಾಂಡಭಾಂಡ ಕೋಟೀ ವಿರಾಜಿತಾಯನಮಃ
ಓಂ ಶರಣಾಗತ ವೈಕುಂಠಬ್ರಹ್ಮೇಂದ್ರಾಮರ ರಕ್ಷಕಾಯನಮಃ
ಓಂ ಯೋಗೀಂದ್ರ ಹೃತ್ಪಯೋಜಾತ ಮಹಾಭಾಸ್ಕರ ಮಂಡಲಾಯನಮಃ
ಓಂ ಸರ್ವದೇವ ಶಿರೋರತ್ನ ಸಂಘೃಷ್ಟ ಮಣಿ ಪಾದುಕಾಯನಮಃ
ಓಂ ಗ್ರೈವೇಯ ಹಾರಕೇಯೂರ ಕಾಂಚೀಕಟಕ ಭೂಷಿತಾಯನಮಃ
ಓಂ ವಾಗತೀತಾಯನಮಃ
ಓಂ ದಕ್ಷಹರಾಯನಮಃ
ಓಂ ವಹ್ನಿಜಿಹ್ವಾನಿಕೃಂತನಾಯನಮಃ
ಓಂ ಸಹಸ್ರಭಾಹವೇನಮಃ
ಓಂ ಸರ್ವಜ್ಞಾಯನಮಃ
ಓಂ ಸಚ್ಚಿದಾನಂದ ವಿಗ್ರಹಾಯನಮಃ
ಓಂ ಭಯಾಪಹಾಯನಮಃ
ಓಂ ಭಕ್ತಲೋಕಾರಾತಿ ತೀಕ್ಷ್ಣ-ವಿಲೋಚನಾಯನಮಃ
ಓಂ ಕಾರುಣ್ಯಾಕ್ಷಾಯನಮಃ
ಓಂ ಗಣಾಧ್ಯಕ್ಷಾಯನಮಃ
ಓಂ ಗರ್ವಿತಾಸುರದರ್ಪಹೃತೇನಮಃ
ಓಂ ಸಂಪತ್ಕರಾಯನಮಃ
ಓಂ ಸದಾನಂದಾಯನಮಃ

ಓಂ ಸರ್ವಾಭೀಷ್ಟ ಫಲಪ್ರದಾಯನಮಃ
ಓಂ ನೂಪುರಾಲಂಕೃತಪದಾಯನಮಃ
ಓಂ ವ್ಯಾಲಯುಜ್ಞೋಪವೀತಕಾಯ ನಮಃ
ಓಂ ಭಗನೇತ್ರ ಹರಾಯನಮಃ
ಓಂ ದೀರ್ಘ ಬಾಹವೇನಮಃ
ಓಂ ಬಂಧವಿಮೋಚಕಾಯನಮಃ
ಓಂ ತೇಜೋಮಯಾಯನಮಃ
ಓಂ ಕವಚಿನೇನಮಃ
ಓಂ ಭೃಗುಶ್ಮಶ್ರುವಿಲುಂಪಕಾಯ ನಮಃ
ಓಂ ಯಜ್ಞಪುರುಷ ಶೀರ್ಷಘ್ನಾಯ ನಮಃ
ಓಂ ಯಜ್ಞಾರಣ್ಯದ ವಾನಲಾಯ ನಮಃ
ಓಂ ಭಕ್ತೈಕ ವತ್ಸಲಾಯನಮಃ
ಓಂ ಭಗವತೇ ನಮಃ
ಓಂ ಸುಲಭಾಯನಮಃ
ಓಂ ಶಾಶ್ವತಾಯನಮಃ
ಓಂ ನಿಧಯೇನಮಃ
ಓಂ ಸರ್ವಸಿದ್ಧಿಕರಾಯನಮಃ
ಓಂ ದಾಂತಾಯನಮಃ
ಓಂ ಸಕಲಾಗಮಶೋಭಿತಾಯನಮಃ
ಓಂ ಭುಕ್ತಿ ಮುಕ್ತಿ ಪ್ರದಾಯನಮಃ
ಓಂ ಸರ್ವವ್ಯಾಧಿನಿವಾರಕಾಯನಮಃ
ಓಂ ದೇವಾಯನಮಃ
ಓಂ ಅಕಾಲ ಮೃತ್ಯು ಸಂಹರ್ತ್ರೇ ನಮಃ

ಓಂ ಗ್ರಹಾಕರ್ಷಣ ನಿರ್ಬಂಧಮಾರ- ಣೋಚ್ಚಾಟನಪ್ರಿಯಾಯನಮಃ
ಓಂ ಪರತಂತ್ರವಿನಿರ್ಬಂಧಾಯನಮಃ
ಓಂ ಪರಮಾತ್ಮನೇನಮಃ
ಓಂ ಪರಾತ್ಪರಾಯನಮಃ
ಓಂ ಸ್ವಮಂತ್ರಯಂತ್ರ ತಂತ್ರೌಘ ಪರಿಪಾಲನ ತತ್ಪರಾಯನಮಃ
ಓಂ ಶ್ರೀ ವೀರಭದ್ರಾಯನಮಃ

ಇತಿಶ್ರೀ ವೀರಭದ್ರಾಷ್ಟೋತ್ತರ
ಶತನಾಮಾವಲಿ ಸಂಪೂರ್ಣಂ

ಶ್ರೀ ವೀರಭದ್ರ ಸ್ತೋತ್ರ

ಜಯ ವೀರಭದ್ರಾ । ಕರುಣಾ ಸಮುದ್ರ ॥
ಜಯ ಜಯತು ಮಂಗಳವು ಪರಶಿವನ ಪುತ್ರ ॥ಪ॥

ವರ ವೀರಶೈವ ಧರ್ಮದ ಮೂಲ ಪ್ರಭುವೆ ।
ಪರಶಿವನ ಕೋಪಾಗ್ನಿಯಿಂದ ಉದಿಸಿರುವೆ ॥
ದುರುಳ ದಕ್ಷನ ಶಿರವ ಚಂಡಾಡಿಸಿರುವೆ
ಭರದಿ ನಿನ್ನಯ ಭಕ್ತರನು ಪಾಲಿಸಿರುವೆ ॥೧॥
ಜಯವೀರಭದ್ರಾ ॥

ಕಿಡಿಗಣ್ಣು ಫಣೆಯೊಳಗೆ ಧರಿಸಿ ನೀ ಮೆರೆದೆ ।
ವಡಬಾಗ್ನಿಯಂತೆ ವೈರಿಗಳ ಸದೆ ಬಡಿದೆ ॥
ಕಡುಕೋಪದಿಂದ ಮೂಜಗವ ನಡುಗಿಸಿದೆ ।
ಒಡೆಯ ಶಿವನನು ಭಜಿಪ ಭಕ್ತರನು ಪೊರೆದೆ ॥೨॥
ಜಯವೀರಭದ್ರಾ ॥

ಶರಣು ಜನರಕ್ಷಕನೆ ಮೊರೆ ಹೊಕ್ಕ ನಾನು ॥
ನಿರುತ ನಿನ್ನನು ನಂಬಿದವರ ಪೊರೆ ನೀನು ॥
ಗುರಿಕಾಣೆ ಕರುಣಿಸೈ ಸುಜ್ಞಾನ ಭಾನು ।
ಗುರುವೆ ಶ್ರೀ ವೀರೇಶ ಗುರಿ ತೋರು ನೀನು ॥೩॥
ಜಯವೀರಭದ್ರಾ ॥

– ಸಿ.ಎಂ. ವೀರಣ್ಣ, ವಿಜಯಪುರ

ಶ್ರೀ ವೀರಭದ್ರಸ್ವಾಮಿ ಮಂಗಳ

ಜಯ ಮಂಗಳಂ ನಿತ್ಯ ಶುಭ ಮಂಗಳಂ ॥
ಜಯ ಜಯತು ಶ್ರೀ ವಿಜಯ ವೀರೇಶಗೆ ॥ಪ॥

ಮಂಗಳಂ ಕಿಡಿಗಣ್ಣ ರುದ್ರಾವತಾರನಿಗೆ ।
ಮಂಗಳಂ ಭದ್ರಕಾಳೀಶ್ವರನಿಗೆ ।
ಮಂಗಳಂ ಮಂಗಳಂ ದಕ್ಷ ಸಂಹಾರನಿಗೆ ।
ಮಂಗಳಂ ಶ್ರೀ ವೀರಭದ್ರೇಶಗೆ ॥ಜಯಮಂಗಳಂ ॥
ನಿತ್ಯ ಶುಭ ಮಂಗಳಂ ॥೧॥

ಶರಭಾವತಾರನಿಗೆ ಶರ್ವಾಣಿಯಾತ್ಮಜತೆ ।
ಶರಣ ಜನಪ್ರೀತನಿಗೆ ಶಕ್ತಿಯುತಗೆ ॥
ಶರಧಿ ಗಂಭೀರನಿಗೆ ಶಂಕರಾಪ್ರಾಣನಿಗೆ ।
ಶರಣಾಗತತ್ರಾಣ ಬಿರುದಾಂಕಗೆ ॥ ಜಯಮಂಗಳಂ ನಿತ್ಯ
ಶುಭ ಮಂಗಳಂ ॥೨॥

ಶ್ರೀ ಸ್ವರ್ಣರಜತಗಿರಿ ರಾಜನ ಕುಮಾರನಿಗೆ ।
ಭಾವಜನ ಚಲುವಿನಲಿ ಪೋಲುವನಿಗೆ ॥
ತಾವರೆಯ ಸಖನ ಶತಕೋಟಿ ಪ್ರಕಾಶನಿಗೆ !
ದೇವರಿಗೆ ದೇವರೆಂದೆನಿಸುವನಿಗೆ । ಜಯಮಂಗಳಂ ನಿತ್ಯ
ಶುಭ ಮಂಗಳಂ ॥೩॥

ಸುಜನ ರಕ್ಷಕನಿಗೆ ಸುಜ್ಞಾನ ಮಯನಿಗೆ ॥
ಕುಜನ ಗುಣ ಸಂಹರಗೆ ಕುಶಲ ಮತಿಗೆ ॥
ಗಜ ಮುಖನ ಅನುಜನಿಗೆ ಘನ ಕೃಪಾಸಾಗರಗೆ ।
ವಿಜಯಕರ ಕೀರ್ತಿ ವಿಖ್ಯಾತಯುತಗೆ ॥ ಜಯಮಂಗಳಂ ನಿತ್ಯ
ಶುಭ ಮಂಗಳಂ ॥೪॥

ಪರಶಿವನ ಫಾಲಲೋಚನದೊಳುದ್ಭವಿಸಿದಗೆ ।
ಮಿರುಗುವ ಲಲಾಟಾಕ್ಷ ಉಳ್ಳವನಿಗೆ ॥
ಕರಗಳಲಿ ಖಡ್ಗಧನುಶರಗಳನು ಧರಿಸಿದಗೆ ।
ವರಸಮಯವಾರ್ಧಿ ವಡಬಾನಲಂಗೆ ॥ ಜಯಮಂಗಳಂ ನಿತ್ಯ
ಶುಭ ಮಂಗಳಂ ॥೫॥

– ಸಂಗ್ರಹ